ಭಾನುವಾರ, ಮೇ 19, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 139 | ಪುಟ 20

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ಲೇ ಆಫ್‌ಗೆ ಆರ್‌ಸಿಬಿ
ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಸಿಎಸ್‌ಕೆ ತಂಡವನ್ನು ಮಣಿಸಿ ಆರ್‌ಸಿಬಿ ಪ್ಲೇ ಆಫ್‌ಗೆ ಪ್ರವೇಶಿಸಿತು



ಕೊಲೆ ಆರೋಪಿಗಳ ಎನ್‌ಕೌಂಟರ್‌ಗೆ ಆಗ್ರಹ 5

ಬರದಿಂದ ಕಂಗೆಟ್ಟದ್ದವರ ಮೇಲೆ ಮತ್ತೊಂದು ಬರೆ

ಕೊಡಗು, ಹಾಸನದಲ್ಲಿ ಭಾರಿ ಮಳೆ 4

ಬಿತ್ತನೆ ಮಾಡದ ರೈತರಿಗಿಲ್ಲ ಪರಿಹಾರ! 4

ಗ್ರಾಮ ಪಂಚಾಯಿತಿಗಳಲ್ಲಿ ಕರ ಸಂಗ್ರಹ ನಿರಾಶಾದಾಯಕ

ತೆರಿಗೆ ವಸೂಲಿಗೆ 'ಬರ'

• ಸೂರ್ಯನಾರಾಯಣ ವಿ.

ಚಾಮರಾಜನಗರ: 'ಪ್ರತಿ ವರ್ಷ ಆಸ್ತಿ ತೆರಿಗೆ ಕಟ್ಟೋದು ಮಾಲೀಕರ ಜವಾಬ್ದಾರಿ. ಆದರೆ, ಸ್ವಯಂಪ್ರೇರಿತ ರಾಗಿ ಕಟ್ಟೋರು ಕಡಿಮೆ. ನೆಪ ಹುಡುಕುವವರು, ಜಾಣ ಮರೆವು ತೋರುವವರೇ ಹೆಚ್ಚು. ಇ-ಸ್ವತ್ತು, ಖಾತೆ ಬದಲಾವಣೆ, ಕೃಷಿ ಸಾಲ ಸೇರಿದಂತೆ ಸರ್ಕಾರದ ಸೌಲಭ್ಯಗಳು, ಪ್ರಮಾಣ ಪತ್ರ ಪಡೆಯಲು ಆಸ್ತಿ ತೆರಿಗೆ ಕಟ್ಟಿರಲೇ ಬೇಕೆಂಬ ಕಾರಣಕ್ಕೇ ಹೆಚ್ಚಿನವರು ಕಟ್ಟುತ್ತಾರೆ. ಆದರೆ, ಹಳೆ ಬಾಕಿ ಕಟ್ಟೋದೇ ಇಲ್ಲ!'

ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯೊಬ್ಬರು, ಆಸ್ತಿ ತೆರಿಗೆ ಪಾವತಿ ಕುರಿತು ಜನರ ಮನಸ್ಥಿತಿಯ ಬಗ್ಗೆ ಹೀಗೆ ಕನ್ನಡಿ ಹಿಡಿಯುತ್ತಾರೆ.

'ಈ ಬಾರಿ ಬರಗಾಲ ಎಂದು ತೆರಿಗೆ ವಸೂಲಿಯ ಗುರಿ ಸಾಧನೆಯಾಗಿಲ್ಲ. ಬರಗಾಲದಿಂದ ತೀರಾ ಬಡವರಿಗೆ ಸಮಸ್ಯೆಯಾಗಬಹುದು. ಆದರೆ ಬಹುತೇಕರಿಗೆ ಸಮಸ್ಯೆ ಇಲ್ಲ. ಹಳ್ಳಿಗಳಲ್ಲಿ ತೆರಿಗೆ ಹೆಚ್ಚಿರುವುದಿಲ್ಲ. ವಾಣಿಜ್ಯ ಉದ್ದೇಶದ ಆಸ್ತಿಗಳನ್ನು ಬಿಟ್ಟು ಉಳಿದ ಆಸ್ತಿ ತೆರಿಗೆ ₹500ಕ್ಕಿಂತ ಹೆಚ್ಚಾಗುವುದಿಲ್ಲ. ತಿಂಗಳಿಗೆ ಮೊಬೈಲ್ ಇಂಟರ್‌ನೆಟ್‌ಗೆ ₹200ರಿಂದ ₹500ರ ವರೆಗೂ ಖರ್ಚು ಮಾಡುವಾಗ, ಕೆಲವು ನೂರು ರೂಪಾಯಿ ತೆರಿಗೆ ಕಟ್ಟಲು ಕಷ್ಟವೇ' ಎಂಬುದು ಅವರ ಪ್ರಶ್ನೆ.

ಚಾಮರಾಜನಗರ ಜಿಲ್ಲೆಯಲ್ಲಿ 130 ಗ್ರಾಮ ಪಂಚಾಯಿತಿಗಳಿವೆ. 2023-24ನೇ ಸಾಲಿಗೆ ₹18.06 ಕೋಟಿ ತೆರಿಗೆ ಸಂಗ್ರಹ ಗುರಿಯಿತ್ತು. ಆದರೆ, ₹6.89 ಕೋಟಿ ಮಾತ್ರ ವಸೂಲಾಗಿದೆ. ಶೇಕಡವಾರು ಸಾಧನೆ 38.16. ಕಳೆದ ವರ್ಷದ ಬಾಕಿ ಸೇರಿದಂತೆ ಇನ್ನೂ ₹48 ಸಂಗ್ರಹಕ್ಕೆ ಬಾಕಿ ಇದೆ. ವರ್ಷದಿಂದ ವರ್ಷಕ್ಕೆ ಹಿಂಬಾಕಿ ಮೊತ್ತ ಹಿಗ್ಗುತ್ತಲೇ ಇದೆ.ನಿರೀಕ್ಷಿತ ಗುರಿ ಸಾಧನೆಯಾಗದೆ, ಪಂಚಾಯಿತಿಗಳು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕೆಂಬ ಪಂಚಾಯತ್ ರಾಜ್ ವ್ಯವಸ್ಥೆಯ ಆಶಯಕ್ಕೂ ಹಿನ್ನಡೆ ಉಂಟಾಗಿದೆ.

6ನೇ ಪುಟ ನೋಡಿ

ಒಳನೋಟ

ಅಂಕಿ ಅಂಶ

5,949
ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳು

₹1,459.33 ಕೋಟಿ
2023-24ನೇ ಸಾಲಿನ ತೆರಿಗೆ ಸಂಗ್ರಹ ಗುರಿ

₹767.30 ಕೋಟಿ
ಆರ್ಥಿಕ ವರ್ಷಾಂತ್ಯಕ್ಕೆ ವಸೂಲಾದ ತೆರಿಗೆ

52.58
ಶೇಕಡಾವಾರು ಪ್ರಮಾಣ

10 ಜಿಲ್ಲೆಗಳಲ್ಲಿ ತೆರಿಗೆ ಸಂಗ್ರಹ ಅರ್ಧಕ್ಕಿಂತ ಹೆಚ್ಚು



ಎಐ ಚಿತ್ರ: ಕಣಕಾಲಮಠ

2,207 ಗ್ರಾಮಗಳಲ್ಲಿ ನೀರಿನ ಕೊರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 2,207 ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗಿದ್ದು, 548 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ನೀರಿನ ಸಮಸ್ಯೆ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, '1,659 ಗ್ರಾಮಗಳಲ್ಲಿ 2,098 ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಆಧಾರದಲ್ಲಿ ಪಡೆದುಕೊಂಡು ಕುಡಿಯುವ ನೀರು ಒದಗಿಸಲಾಗುತ್ತಿದೆ' ಎಂದು ಮಾಹಿತಿ ನೀಡಿದ್ದಾರೆ.

5ನೇ ಪುಟ ನೋಡಿ

ಬಿಭವ್ ಕುಮಾರ್ ಬಂಧನ

ನವದೆಹಲಿ (ಪಿಟಿಐ): ಎಎಪಿ ಸಂಸದೆ ಸ್ವಾತಿ ಮಾಲಿವಾಲ್ ಅವರ ಮೇಲಿನ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಸಹಾಯಕ ಬಿಭವ್ ಕುಮಾರ್ ಅವರನ್ನು ಪೊಲೀಸರು ಶನಿವಾರ ಬಂಧಿಸಿದರು.

ಮುಖ್ಯಮಂತ್ರಿಯವರ ನಿವಾಸಕ್ಕೆ ಬಂದಿದ್ದ ಬಿಭವ್ ಅವರನ್ನು ಅಲ್ಲಿಯೇ ಬಂಧಿಸಲಾಯಿತು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಬಿಭವ್ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಪೊಲೀಸರು, ಹೆಚ್ಚಿನ ವಿಚಾರಣೆಗಾಗಿ 7 ದಿನಗಳ ಅವಧಿಗೆ ಕಸ್ಟಡಿಗೆ ನೀಡುವಂತೆ ಕೋರಿದರು. ನ್ಯಾಯಾಧೀಶರು ಬಿಭವ್ ಅವರನ್ನು ಐದು ದಿನಗಳವರೆಗೆ ಪೊಲೀಸ್ ವಶಕ್ಕೆ ಒಪ್ಪಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಯವರ ನಿವಾಸದಲ್ಲಿನ ಭದ್ರತಾ ಸಿಬ್ಬಂದಿ ಸೇರಿದಂತೆ 10 ಜನರ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

> **ದೆಹಲಿ ಪೊಲೀಸರು ನಿಷ್ಪಕ್ಷಪಾತವಾಗಿ ಇದ್ದರೆ, ಬಿಭವ್ ನೀಡಿದ್ದ ದೂರನ್ನು ಆಧರಿಸಿ ಎಫ್‌ಐಆರ್ ದಾಖಲಿಸಬೇಕು**
> **ಆತಿಶಿ,** ದೆಹಲಿ ಸಚಿವೆ

ಬಿಭವ್ ಅವರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡುವಂತೆ ಕೋರಿ ಅವರ ಪರ ವಕೀಲರು ದೆಹಲಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಅದರ ವಿಚಾರಣೆಗೂ 20 ನಿಮಿಷ ಮುನ್ನವೇ ಅವರ ಬಂಧನವಾಗಿತ್ತು. ಹೀಗಾಗಿ ಕೋರ್ಟ್ ಈ ಅರ್ಜಿಯನ್ನು ನಿರುಪಯುಕ್ತ ಎಂದು ಹೇಳಿ, ವಿಲೇವಾರಿ ಮಾಡಿತು.

ತನಿಖೆಗೆ ಸಹಕರಿಸಲು ಸಿದ್ಧ: ಇದಕ್ಕೂ ಮುನ್ನ ಬಿಭವ್ ಕುಮಾರ್, 'ನಾನು ತನಿಖೆಗೆ ಸಹಕರಿಸಲು ಸಿದ್ಧ. ಆದರೆ ಮಾಲಿವಾಲ್ ವಿರುದ್ಧ ನಾನು ನೀಡಿದ್ದ ದೂರನ್ನೂ ಪರಿಗಣಿಸಬೇಕು' ಎಂದು ಪೊಲೀಸರಿಗೆ ಪತ್ರ ಬರೆದಿದ್ದರು.

ಈ ಕುರಿತು ಶುಕ್ರವಾರವೇ ಪೊಲೀಸರಿಗೆ ದೂರು ನೀಡಿದ್ದ ಬಿಭವ್, 'ಮೇ 13ರಂದು ಮಾಲಿವಾಲ್ ಅವರು ಮುಖ್ಯಮಂತ್ರಿ ನಿವಾಸವನ್ನು ಅನಧಿಕೃತವಾಗಿ ಪ್ರವೇಶಿಸಿದ್ದಲ್ಲದೇ, ಅಲ್ಲಿನ ಭದ್ರತಾ ವ್ಯವಸ್ಥೆಯನ್ನು ಉಲ್ಲಂಘಿಸಿ, ಗದ್ದಲ ಸೃಷ್ಟಿಸಿದರು. ಅದನ್ನು ತಡೆಯಲು ಯತ್ನಿಸಿದಾಗ ನಿಂದಿಸಿದರು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದರು.

ಇನ್ನಷ್ಟು ಸುದ್ದಿಗಳು 9

ಮೌನ ಮುರಿದ ದೇವೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪ ಎದುರಿಸಿ, ವಿದೇಶದಲ್ಲಿ ತಲೆ ಮರೆಸಿಕೊಂಡಿರುವ ಸಂಸದ ಪ್ರಜ್ವಲ್ ರೇವಣ್ಣ ಬಗ್ಗೆ, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರು 22 ದಿನಗಳ ಬಳಿಕ ಮೊದಲ ಬಾರಿಗೆ ಮೌನ ಮುರಿದಿದ್ದಾರೆ.

ತಮ್ಮ ಮೊಮ್ಮಗ ಪ್ರಜ್ವಲ್ ಹಾಗೂ ಮಗ ಎಚ್.ಡಿ. ರೇವಣ್ಣ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪ ಎದುರಾದ ಬಳಿಕ ದೇವೇಗೌಡರು ಮೌನಕ್ಕೆ ಶರಣಾಗಿದ್ದರು. ತಮ್ಮ ಜನ್ಮದಿನದಂದು ಮಾತನಾಡಿದ ಗೌಡರು, 'ಪ್ರಜ್ವಲ್ ತಪ್ಪು ಎಸಗಿದ್ದು ಸಾಬೀತಾದರೆ ಕಾನೂನು ಪ್ರಕಾರ ಶಿಕ್ಷೆ ವಿಧಿಸಲಿ. ಎಲ್ಲದರ ಬಗ್ಗೆ ತನಿಖೆ ನಡೆದು ಸಂತ್ರಸ್ತ ಮಹಿಳೆಯರಿಗೆ ನ್ಯಾಯ ಸಿಗಲಿ ಎಂದು ಪ್ರತಿಕ್ರಿಯಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, 'ಪ್ರಜ್ವಲ್ ನಡೆಸಿರುವ ಹೀನ ಕೃತ್ಯದ ನೈತಿಕ ಹೊಣೆ ಹೊತ್ತು ಅವರ ಕುಟುಂಬದವರೆಲ್ಲರೂ ರಾಜೀನಾಮೆ ನೀಡಬೇಕಿತ್ತು. ರಾಜ್ಯದ ಜನರ ಕ್ಷಮೆ ಯಾಚಿಸಬೇಕಿತ್ತು' ಎಂದಿದ್ದಾರೆ.

ಇನ್ನಷ್ಟು ಸುದ್ದಿಗಳು 5

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಬಿಎಂಟಿಸಿ: ಅಪಘಾತ ನಿಯಂತ್ರಣಕ್ಕೆ ಕ್ರಮ • ರಸ್ತೆ ಸುರಕ್ಷತೆ ಕುರಿತು ಪರಿಣತರಿಂದ ತರಬೇತಿ

ಬಸ್ ಚಾಲಕರಿಗೆ 'ಸಂಚಾರ ನಿಯಮ' ಪಾಠ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಬಿಎಂಟಿಸಿ ಬಸ್‌ಗಳ ಕೆಲ ಚಾಲಕರ ನಿರ್ಲಕ್ಷ್ಯ ಹಾಗೂ ಅತೀ ವೇಗದ ಚಾಲನೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಅಪಘಾತಗಳು ಸಂಭವಿಸುತ್ತಿದ್ದು, ಪಾದಚಾರಿಗಳು ಹಾಗೂ ದ್ವಿಚಕ್ರ ವಾಹನ ಸವಾರರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಇಂಥ ಅಪಘಾತಗಳನ್ನು ನಿಯಂತ್ರಿಸಲು ಮುಂದಾಗಿರುವ ಸಂಚಾರ ಪೊಲೀಸರು, ಬಿಎಂಟಿಸಿ ಚಾಲಕರಿಗೆ ಸಂಚಾರ ನಿಯಮಗಳ ಪಾಠ ಮಾಡುತ್ತಿದ್ದಾರೆ.

ಬಿಎಂಟಿಸಿ ಚಾಲಕರನ್ನು ಸಂಚಾರ ನಿರ್ವಹಣೆ ಕೇಂದ್ರಕ್ಕೆ (ಟಿಎಂಸಿ) ಆಹ್ವಾನಿಸುತ್ತಿರುವ ಪೊಲೀಸರು, ಪರಿಣತರಿಂದ ತರಬೇತಿ ಕೊಡಿಸುತ್ತಿದ್ದಾರೆ. ಸಂಚಾರ ನಿಯಮ ಪಾಲನೆ, ರಸ್ತೆ ಸುರಕ್ಷತೆ, ಅಪಘಾತಕ್ಕೆ ಕಾರಣಗಳು, ಅಪಘಾತ ಸಂಭವಿಸದಂತೆ ಚಾಲನೆ ಮಾಡುವುದು ಹೇಗೆ? ಎಂಬಿತ್ಯಾದಿ ವಿಷಯಗಳ ಬಗ್ಗೆ ವಿಡಿಯೊ ಪ್ರಾತ್ಯಕ್ಷಿಕೆ ಸಮೇತ ಚಾಲಕರಿಗೆ ತರಬೇತಿ ನೀಡಲಾಗುತ್ತಿದೆ. ಪ್ರತಿದಿನ 50 ಚಾಲಕರು ತರಬೇತಿಗೆ ಹಾಜರಾಗುತ್ತಿದ್ದಾರೆ. ಇದುವರೆಗೂ ಸುಮಾರು 6 ಸಾವಿರ ಚಾಲಕರು ತರಬೇತಿ ಪಡೆದುಕೊಂಡಿದ್ದಾರೆ.

'ಬಿಎಂಟಿಸಿ ಚಾಲಕರು, ಅತೀ ವೇಗದಲ್ಲಿ ಬಸ್ ಚಲಾಯಿಸುತ್ತಾರೆ. ಇದರಿಂದ ಅಪಘಾತಗಳು ಸಂಭವಿಸುತ್ತಿವೆ. ಪಾದಚಾರಿಗಳು ಹಾಗೂ ದ್ವಿಚಕ್ರ ವಾಹನಗಳ ಸವಾರರು ಹೆಚ್ಚಿನ ಸಂಖ್ಯೆಯಲ್ಲಿ ಮೃತಪಡುತ್ತಿದ್ದಾರೆ. ಹಲವು ಅಪಘಾತಗಳಿಗೆ ಬಿಎಂಟಿಸಿ ಚಾಲಕರು ಕಾರಣವೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಬಿಎಂಟಿಸಿ ಬಸ್‌ಗಳಿಂದ ಸಂಭವಿಸಿದ್ದ ಅಪಘಾತಗಳ ಬಗ್ಗೆ ಸಮಗ್ರ ತನಿಖೆ ನಡೆಸಲಾಗಿತ್ತು. ಚಾಲಕರು, ಸಂಚಾರ ನಿಯಮ ಉಲ್ಲಂಘನೆ ಮಾಡಿದ್ದರಿಂದ ಅಪಘಾತಗಳಾಗಿರುವುದು ಗಮನಕ್ಕೆ ಬಂದಿತ್ತು. ಈ ಬಗ್ಗೆ ಬಿಎಂಟಿಸಿ ಹಿರಿಯ ಅಧಿಕಾರಿಗಳಿಗೂ ಮಾಹಿತಿ ನೀಡಲಾಗಿತ್ತು. ಇದಾದ ನಂತರವೇ, ಚಾಲಕರಿಗೆ ತರಬೇತಿ ನೀಡುವ ಕೆಲಸ ಆರಂಭಿಸಲಾಗಿದೆ' ಎಂದು ಹೇಳಿದರು.

ಅಪಘಾತದ ವಿಡಿಯೊ ಪ್ರದರ್ಶನ: 'ಬಿಎಂಟಿಸಿ ಬಸ್‌ಗಳಿಂದ ಸಂಭವಿಸಿದ್ದ ಕೆಲ ಅಪಘಾತಗಳ ದೃಶ್ಯಗಳು, ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಅಂಥ ದೃಶ್ಯಗಳನ್ನು ಒಟ್ಟುಗೂಡಿಸಿ ವಿಡಿಯೊ ಸಿದ್ಧಪಡಿಸಲಾಗಿದ್ದು, ಇದನ್ನೇ ಚಾಲಕರಿಗೆ ತೋರಿಸಲಾಗುತ್ತಿದೆ. ಅಪಘಾತಕ್ಕೆ ಕಾರಣವಾದ ಅಂಶಗಳನ್ನು ಮನದಟ್ಟು ಮಾಡಿಕೊಡಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ವೃದ್ಧರು, ಮಹಿಳೆಯರು, ಮಕ್ಕಳು ರಸ್ತೆ ದಾಟುವ ಸಂದರ್ಭದಲ್ಲಿ ಎಚ್ಚರಿಕೆ ವಹಿಸುವಂತೆ ಚಾಲಕರಿಗೆ ತಿಳಿಸಲಾಗುತ್ತಿದೆ. ಸಂಚಾರ ನಿಯಮಗಳ ಪಾಲನೆ, ರಸ್ತೆ ಸುರಕ್ಷತಾ ಕ್ರಮಗಳ ಜಾರಿ, ಸಾರ್ವಜನಿಕರ ಬಗ್ಗೆ ಕಾಳಜಿ ಹಾಗೂ ಇತರೆ ವಿಷಯಗಳನ್ನು ಚಾಲಕರಿಗೆ ತಿಳಿಸಲಾಗುತ್ತಿದೆ' ಎಂದರು.

ಮೃತಪಟ್ಟವರ ಕುಟುಂಬದವರ ಯಾತನೆ: 'ಬಿಎಂಟಿಸಿ ಬಸ್‌ಗಳಿಂದ ಸಂಭವಿಸಿದ್ದ ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಗಳ ಕುಟುಂಬಸ್ಥರ ಜೀವನದ ಬಗ್ಗೆ ಚಾಲಕರಿಗೆ ತಿಳಿಸಲಾಗುತ್ತಿದೆ. ವ್ಯಕ್ತಿ ಮೃತಪಟ್ಟ ನಂತರ, ಕುಟುಂಬದವರು ಅನುಭವಿಸಿದ ಸಂಕಟಗಳು ಹಾಗೂ ಇತರೆ ಸಮಸ್ಯೆಗಳನ್ನು ಪುರಾವೆಗಳ ಸಮೇತ ತೋರಿಸಲಾಗುತ್ತಿದೆ. ಇದು ಚಾಲಕರ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತಿದೆ. 'ಅಪಘಾತ ಉಂಟಾಗದಂತೆ ಬಸ್ ಚಲಾಯಿಸುವೆ' ಎಂಬುದಾಗಿ ಚಾಲಕರು ಪ್ರತಿಜ್ಞೆ ಸಹ ಮಾಡುತ್ತಿದ್ದಾರೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ನಗರದಲ್ಲಿ ನಿತ್ಯವೂ ಲಕ್ಷಾಂತರ ಸಂಖ್ಯೆಯಲ್ಲಿ ವಾಹನಗಳು ಸಂಚರಿಸುತ್ತವೆ. ಸಾರ್ವಜನಿಕರನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕರೆದೊಯ್ಯಲು ಬಿಎಂಟಿಸಿ ಬಸ್‌ಗಳ ಪಾತ್ರ ದೊಡ್ಡದಿದೆ. ಇತರೆ ವಾಹನಗಳ ಜೊತೆ ಪೈಪೋಟಿಗೆ ಇಳಿಯದೇ ಪ್ರಯಾಣಿಕರನ್ನು ಸುರಕ್ಷಿತವಾಗಿ ಕರೆದೊಯ್ಯುವಂತೆ ಚಾಲಕರಿಗೆ ತಿಳಿಸಲಾಗುತ್ತಿದೆ. ಜೊತೆಗೆ, ಅಪಘಾತಗಳು ಸಂಭವಿಸಿದ ಸಂದರ್ಭದಲ್ಲಿ ಗಾಯಾಳುಗಳನ್ನು ತ್ವರಿತವಾಗಿ ಆಸ್ಪತ್ರೆಗೆ ದಾಖಲಿಸುವಂತೆಯೂ ತಿಳಿವಳಿಕೆ ಮೂಡಿಸಲಾಗುತ್ತಿದೆ' ಎಂದರು.



ಸಂಚಾರ ನಿರ್ವಹಣೆ ಕೇಂದ್ರದಲ್ಲಿ (ಟಿಎಂಸಿ) ಆಯೋಜಿಸಿದ್ದ ತರಬೇತಿಯಲ್ಲಿ ಪಾಲ್ಗೊಂಡಿದ್ದ ಬಿಎಂಟಿಸಿ ಚಾಲಕರಿಗೆ ಸಂಚಾರ ಪೊಲೀಸ್ ಸಿಬ್ಬಂದಿ ಪಾಠ ಮಾಡಿದರು

'ಸಂಚಾರ ನಿಯಮಗಳ ಅರಿವು; ಚಾಲಕರ ಪ್ರತಿಜ್ಞೆ'

'ಬಹುಪಾಲು ಚಾಲಕರಿಗೆ ಸಂಚಾರ ನಿಯಮಗಳ ಅರಿವು ಇರಲಿಲ್ಲ. ಸಿಗ್ನಲ್ ಜಂಪ್, ಮೊಬೈಲ್‌ನಲ್ಲಿ ಮಾತನಾಡುತ್ತ ಚಾಲನೆ ಹಾಗೂ ಇತರೆ ನಿಯಮಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉಲ್ಲಂಘನೆ ಮಾಡುತ್ತಿದ್ದರು. ಪೊಲೀಸರು ತರಬೇತಿ ನೀಡಿದ ನಂತರ, ನಿಯಮ ಉಲ್ಲಂಘನೆ ಪ್ರಮಾಣ ಕಡಿಮೆಯಾಗಿದೆ' ಎಂದು ಬಿಎಂಟಿಸಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ತರಬೇತಿ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಅಪಘಾತಗಳ ವಿಡಿಯೊ ಸಮೇತ ಪೊಲೀಸರು ವಿವರಣೆ ನೀಡುತ್ತಿದ್ದಾರೆ. ಇದು ಚಾಲಕರ ಮನಸ್ಸಿಗೆ ತಟ್ಟುತ್ತಿದೆ. ಅಪಘಾತದಲ್ಲಿ ಮೃತಪಟ್ಟವರ ಮನೆಯ ಪರಿಸ್ಥಿತಿ ಬಗ್ಗೆ ತಿಳಿದು ಚಾಲಕರು ಮರುಕಪಡುತ್ತಿದ್ದಾರೆ. 'ಸಂಚಾರ ನಿಯಮ ಉಲ್ಲಂಘಿಸುವುದಿಲ್ಲ. ಅಪಘಾತಕ್ಕೆ ಆಸ್ಪದ ನೀಡುವುದಿಲ್ಲ' ಎಂಬುದಾಗಿ ಚಾಲಕರು ಪ್ರತಿಜ್ಞೆ ಸ್ವೀಕರಿಸುತ್ತಿದ್ದಾರೆ. ಹೀಗಾಗಿ, ಇತ್ತೀಚಿನ ದಿನಗಳಲ್ಲಿ ಅಪಘಾತಗಳು ಕಡಿಮೆಯಾಗುತ್ತಿವೆ' ಎಂದರು.

ಬಿಎಂಟಿಸಿ ಬಸ್‌ಗಳಿಂದ ಸಂಭವಿಸಿದ್ದ ಅಪಘಾತಗಳ ವಿವರ

ವರ್ಷ	ಅಪಘಾತಗಳು	ಸಾವು	ಗಾಯಾಳು
2023	145	37	103
2024 (ಜನವರಿ–ಏಪ್ರಿಲ್‌ವರೆಗೆ)	58	13	53

ಮುಖ್ಯಾಂಶಗಳು

- ಸಂಚಾರ ನಿರ್ವಹಣೆ ಕೇಂದ್ರದಲ್ಲಿ ತರಬೇತಿ
- ನಿತ್ಯವೂ 50 ಚಾಲಕರು ಹಾಜರು
- ಇನ್‌ಸ್ಪೆಕ್ಟರ್ ಹಾಗೂ ಪರಿಣತರಿಂದ ಪ್ರಾತ್ಯಕ್ಷಿಕೆ

755 ಬಿಎಂಟಿಸಿ ಎ.ಸಿ ವೋಲ್ವೊ ಬಸ್‌ಗಳು

6,202 ಎ.ಸಿ ರಹಿತ ಸಾಮಾನ್ಯ ಬಸ್‌ಗಳು

13,000 ಬಿಎಂಟಿಸಿ ಸಿಬ್ಬಂದಿ ಸಂಖ್ಯೆ



ಚಾಲಕರಿಗೆ ತರಬೇತಿ ನೀಡುತ್ತಿರುವ ಕಾರಣ ಬಿಎಂಟಿಸಿ ಬಸ್‌ಗಳಿಂದ ಸಂಭವಿಸುತ್ತಿದ್ದ ಅಪಘಾತಗಳ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದೆ

ಎಂ.ಎನ್. ಅನುಚೇತ್, ಜಂಟಿ ಪೊಲೀಸ್ ಕಮಿಷನರ್ (ಸಂಚಾರ)

ಪ್ರಧಾನಿಗೆ ಮಾಹಿತಿ ಕೊರತೆ: ಉಪಮುಖ್ಯಮಂತ್ರಿ ಡಿಕೆಶಿ

ಬೆಂಗಳೂರು: 'ರಾಜ್ಯದಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಿರುವ ಶಕ್ತಿ ಯೋಜನೆಯ ಕುರಿತು ಪ್ರಧಾನಿ ನರೇಂದ್ರ ಮೋದಿಯವರಿಗೆ ಮಾಹಿತಿ ಕೊರತೆ ಇದೆ. ಆ ಕಾರಣದಿಂದಾಗಿಯೇ ಅವರು ಯೋಜನೆಯನ್ನು ಟೀಕಿಸಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಶಕ್ತಿ ಯೋಜನೆಯಿಂದ ವಾಯು ಮಾಲಿನ್ಯ ಹೆಚ್ಚುತ್ತಿದೆ ಮತ್ತು ನಮ್ಮ ಮೆಟ್ರೊಗೆ ನಷ್ಟವಾಗಿದೆ ಎಂಬ ಪ್ರಧಾನಿಯವರ ಟೀಕೆಯನ್ನು ನೋಡಿ ನನಗೆ ಆಘಾತವಾಯಿತು' ಎಂದರು.

'ನಮ್ಮ ಮೆಟ್ರೊ ಒಂದು ವರ್ಷದಲ್ಲಿ ₹ 130 ಕೋಟಿ ಲಾಭ ಗಳಿಸಿದೆ. ನಮ್ಮ ಮೆಟ್ರೊ ಬೆಂಗಳೂರು ನಗರಕ್ಕೆ ಸೀಮಿತ. ಆದರೆ, ಶಕ್ತಿ ಯೋಜನೆ ರಾಜ್ಯಾದ್ಯಂತ ಜಾರಿಯಲ್ಲಿದೆ. ನಿತ್ಯ 60 ಲಕ್ಷ ಮಹಿಳೆಯರು ಯೋಜನೆಯ ಲಾಭ ಪಡೆಯುತ್ತಿದ್ದಾರೆ' ಎಂದರು.

'ದೇಶದ ಹಲವು ರಾಜ್ಯಗಳು ಶಕ್ತಿ ಯೋಜನೆಯ ಕುರಿತು ಆಸಕ್ತಿ ತೋರಿವೆ. ಅಲ್ಲಿನ ಅಧಿಕಾರಿಗಳು ರಾಜ್ಯ ಸರ್ಕಾರವನ್ನು ಸಂಪರ್ಕಿಸಿ ಮಾಹಿತಿ ಪಡೆದಿವೆ. ಮೆಟ್ರೊ ರೈಲು ಯೋಜನೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಜಂಟಿ ಸಹಭಾಗಿತ್ವದಲ್ಲಿ ಅನುಷ್ಠಾನಕ್ಕೆ ಬಂದಿರುವುದು. ಈ ಕುರಿತು ಪ್ರಧಾನಿಯವರಿಗೆ ಯಾರೂ ಸರಿಯಾದ ಮಾಹಿತಿ ನೀಡಿದಂತಿಲ್ಲ' ಎಂದು ಹೇಳಿದರು.



ಮೋದಿ ಮತ್ತೆ ಪ್ರಧಾನಿ: ದೇವೇಗೌಡ ಆಶಯ

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿಯವರೇ ನೀವು ಮೂರನೇ ಬಾರಿಗೆ ಪ್ರಧಾನಿಯಾಗಿ ರಾಷ್ಟ್ರವನ್ನು ಮುನ್ನಡೆಸುವುದನ್ನು ಎದುರು ನೋಡುತ್ತಿದ್ದೇನೆ'

ಇದು 92ನೇ ವರ್ಷಕ್ಕೆ ಕಾಲಿಟ್ಟ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಅವರು ತಮಗೆ ಶುಭ ಹಾರೈಸಿದ ಪ್ರಧಾನಿ ಮೋದಿ ಅವರಿಗೆ ನೀಡಿದ ಪ್ರತಿಕ್ರಿಯೆ.

'ದೇವೇಗೌಡಜೀ ತಾವು ರಾಷ್ಟ್ರಕ್ಕೆ ಸಲ್ಲಿಸಿದ ಸೇವೆಗಾಗಿ ರಾಜಕೀಯ ವಲಯದಲ್ಲಿ ಗೌರವ ಪಡೆದಿದ್ದೀರಿ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯಲ್ಲಿ ನಿಮ್ಮ ಒಲವು ಗಮನಾರ್ಹವಾಗಿದೆ. ನಿಮಗೆ ದೀರ್ಘ ಹಾಗೂ ಆರೋಗ್ಯಕರ ಜೀವನ ದೊರೆಯಲಿ ಪ್ರಾರ್ಥಿಸುವೆ' ಎಂದು ಪ್ರಧಾನಿ 'ಎಕ್ಸ್' ಮೂಲಕ ಶುಭ ಕೋರಿದ್ದರು. 'ನನ್ನ ಜನ್ಮದಿನಕ್ಕೆ ಶುಭ ಕೋರಿದ್ದಕ್ಕಾಗಿ ಧನ್ಯವಾದಗಳು. ನಿಮ್ಮ ಉದಾರವಾದ ಮಾತುಗಳು ನನಗೆ ಸಾಂತ್ವನ ನೀಡಿವೆ' ಎಂದು ದೇವೇಗೌಡ ಪ್ರತಿಕ್ರಿಯಿಸಿದ್ದಾರೆ.



ಪಂದ್ಯ ವೀಕ್ಷಣ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಚೆನ್ನೈ ಸೂಪರ್ ಕಿಂಗ್ಸ್ ಕ್ರಿಕೆಟ್ ಪಂದ್ಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವೀಕ್ಷಿಸಿದರು. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಗೃಹ ಸಚಿವ ಜಿ. ಪರಮೇಶ್ವರ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ವಿಧಾನಪರಿಷತ್ ಸದಸ್ಯ ಪ್ರಕಾಶ್ ರಾಥೋಡ್ ಉಪಸ್ಥಿತರಿದ್ದರು

ಹೆಚ್ಚುವರಿ ಹಣ ವಸೂಲಿ ಆರೋಪ: ಬಿಡಿಎ ನಿವೇಶನದಾರರ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ರಸ್ತೆ ಪುನಶ್ಚೇತನ ಸೇರಿ ವಿವಿಧ ಅಭಿವೃದ್ಧಿ ಕಾರ್ಯಗಳ ಹೆಸರಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಹೆಚ್ಚುವರಿ ಶುಲ್ಕ ವಸೂಲಿ ಮಾಡುತ್ತಿದೆ ಎಂದು ಆರೋಪಿಸಿರುವ ಎನ್‌ಪಿಕೆಎಲ್ ಫೋರಂನ ಪದಾಧಿಕಾರಿಗಳು, ತಕ್ಷಣವೇ ಶುಲ್ಕ ವಸೂಲಿ ಕೈಬಿಡುವಂತೆ ಮನವಿ ಮಾಡಿದ್ದಾರೆ.

ಹೆಚ್ಚುವರಿ ಶುಲ್ಕ ವಸೂಲಿ ಕೈಬಿಡುವಂತೆ ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸರ್ಕಾರದ ಮುಖ್ಯ ಕಾರ್ಯದರ್ಶಿ, ಬಿಡಿಎ ಆಯುಕ್ತರಿಗೆ ಮನವಿ ಸಲ್ಲಿಸಿದ್ದಾರೆ.

'ಕುಡಿಯುವ ನೀರು, ಮರುಬಳಕೆಯ ನೀರು ಮತ್ತು ಯುಜಿಡಿ ವ್ಯವಸ್ಥೆಗೆ ₹30 ಸಾವಿರ ಶುಲ್ಕವನ್ನು ಪ್ರಾಧಿಕಾರ ಈಗಲೇ ತೆಗೆದುಕೊಳ್ಳುತ್ತಿದೆ. ಆದರೆ, ಮನೆ ನಿರ್ಮಿಸುವವರಿಗೆ ಯುಜಿಡಿ ಮತ್ತು ನೀರಿನ ಸೌಲಭ್ಯವನ್ನು ಹೊಸ ಮನೆಗೆ ವಾಸಕ್ಕೆ ಬಂದ ನಂತರವೇ ಕೊಡುವುದಾಗಿ ಪ್ರಾಧಿಕಾರ ಹೇಳಿದೆ. ಮನೆ ಕಟ್ಟಲು ಕನಿಷ್ಠವೆಂದರೂ ಒಂದರಿಂದ ಒಂದೂವರೆ ವರ್ಷ ಬೇಕಿದೆ. ಬಳಸಲು ಸಾಧ್ಯವೇ ಇಲ್ಲದ ಯುಜಿಡಿ ಹಾಗೂ ನೀರಿನ ಶುಲ್ಕವನ್ನು ಈಗಲೇ ಏಕೆ ಪಾವತಿಸಬೇಕು' ಎಂದು ಫೋರಂ ಅಧ್ಯಕ್ಷ ಎಂ.ಇ.ಚನ್ನಬಸವರಾಜ ಪ್ರಶ್ನಿಸಿದ್ದಾರೆ.

'ರಸ್ತೆಯನ್ನು ಅಗೆದು ಹಾಳು ಮಾಡುವುದನ್ನು ತಪ್ಪಿಸಲು ಪ್ರತಿಯೊಂದು ನಿವೇಶನಗಳಿಗೂ ನೆಲದಡಿ ವಿದ್ಯುತ್ ಕೇಬಲ್, ನೀರಿನ ಪೈಪ್, ಒಳಚರಂಡಿ ಸಂಪರ್ಕಗಳನ್ನು ಒದಗಿಸುವ ಕಾಮಗಾರಿ ಮಾಡಲಾಗಿದೆ. ಇದರಿಂದ ಕಟ್ಟಡ ನಿರ್ಮಿಸುವವರು ಮೂಲ ಸೌಕರ್ಯಗಳ ಸಂಪರ್ಕಕ್ಕೆ ರಸ್ತೆ ಅಗೆಯುವ ಅವಶ್ಯಕತೆ ಇಲ್ಲ. ಆದರೆ, ಈ ನಡುವೆ ರಸ್ತೆ ಪುನಶ್ಚೇತನಕ್ಕೆ ಎಂದು ಹೆಚ್ಚುವರಿಯಾಗಿ ಹಣ ವಸೂಲಿ ಮಾಡುತ್ತಿರುವುದು ಖಂಡನಾರ್ಹ' ಎಂದು ಹೇಳಿದರು.

ಪ್ರಯಾಣಿಕರ ಬಟ್ಟೆಯಲ್ಲಿತ್ತು ₹1.96 ಕೋಟಿ ಮೌಲ್ಯದ 3 ಕೆ.ಜಿ ಚಿನ್ನ!

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ದುಬೈನಿಂದ ಬಂದಿದ್ದ ನಾಲ್ವರು ತಮ್ಮ ಪ್ಯಾಂಟ್, ಟಿ-ಶರ್ಟ್‌ಗಳಲ್ಲಿ ಬಚ್ಚಿಟ್ಟುಕೊಂಡು ತಂದಿದ್ದ ₹1.96 ಕೋಟಿ ಮೌಲ್ಯದ 2.814 ಕೆ.ಜಿ ಚಿನ್ನವನ್ನು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಮಹಿಳೆ ಸೇರಿದಂತೆ ನಾಲ್ವರು ಪ್ರಯಾಣಿಕರನ್ನು ಬಂಧಿಸಲಾಗಿದೆ. ಈ ವರ್ಷದಲ್ಲಿ ಇಷ್ಟು ದೊಡ್ಡ ಪ್ರಮಾಣದ ಚಿನ್ನ ಸಿಕ್ಕ ಮೊದಲ ಪ್ರಕರಣ ಇದಾಗಿದೆ ಎಂದು ಕಸ್ಟಮ್ಸ್ ಮೂಲಗಳು ತಿಳಿಸಿವೆ.

ದುಬೈನಿಂದ ಶುಕ್ರವಾರ ರಾತ್ರಿ ಬಂದಿಳಿದ ಮೂವರು ಪುರುಷರು ಮತ್ತು ಒಬ್ಬ ಮಹಿಳೆ ತಮ್ಮ ಉಡುಪಿನಲ್ಲಿ ಚಿನ್ನದ ಪುಡಿಯನ್ನು ಲೇಪಿಸಿಕೊಂಡಿರುವುದನ್ನು ಕಸ್ಟಮ್ಸ್ ಅಧಿಕಾರಿಗಳು ತಪಾಸಣೆ ವೇಳೆ ಪತ್ತೆ ಹಚ್ಚಿದರು.

ನಾಲ್ವರು ಪ್ರಯಾಣಿಕರು ಅಪರಾಧ ಹಿನ್ನೆಲೆ ಹೊಂದಿದ್ದರು. ಇದರಿಂದ ಅನುಮಾನಗೊಂಡ ಕಸ್ಟಮ್ಸ್ ಸಿಬ್ಬಂದಿ ತಪಾಸಣೆ ನಡೆಸಿದರು. ಅವರ ಅನುಮಾನ ಹುಸಿಯಾಗಲಿಲ್ಲ. ಪ್ರಯಾಣಿಕರು ಧರಿಸಿದ್ದ ಜಿನ್ಸ್ ಮತ್ತು ಟಿ-ಶರ್ಟ್ ಪರಿಶೀಲಿಸಿದಾಗ ಬಟ್ಟೆಗಳಿಗೆ ಒಳ ಭಾಗದಲ್ಲಿ ಚಿನ್ನವನ್ನು ಲೇಪಿಸಲಾಗಿತ್ತು. ಎಲ್ಲವನ್ನೂ ಒಟ್ಟುಗೂಡಿಸಿದಾಗ 2.814 ಕೆ.ಜಿ ಚಿನ್ನ ಸಿಕ್ಕಿದೆ.



ಪ್ರಯಾಣಿಕರು ತೊಟ್ಟಿದ್ದ ಜೀನ್ಸ್‌ನಲ್ಲಿ ಅಂಟಿಸಿರುವ ಚಿನ್ನದ ಪುಡಿ

ಠಾಣಾ ಜಮೀನು ಮಂಜೂರು ಮಾಡಲು ಲಂಚ

ಕಾನ್‌ಸ್ಟೆಬಲ್ ಬಂಧನ, ಪಿಎಸ್‌ಐ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪರಾಧ ಪ್ರಕರಣವೊಂದರ ಆರೋಪಿಗಳಿಗೆ ಠಾಣಾ ಜಾಮೀನು ಮಂಜೂರು ಮಾಡಲು ₹ 5,000 ಲಂಚ ಪಡೆದ ಬ್ಯಾಡರಹಳ್ಳಿ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ನಿಂಗರಾಜೇಗೌಡ ಅವರನ್ನು ಲೋಕಾಯುಕ್ತ ಪೊಲೀಸರು ಶನಿವಾರ ಬಂಧಿಸಿದ್ದಾರೆ. ₹ 50,000 ಲಂಚಕ್ಕೆ ಬೇಡಿಕೆ ಇಟ್ಟಿದ್ದ ಪಿಎಸ್‌ಐ ಶಿವರಾಜ್ ತಲೆಮರೆಸಿಕೊಂಡಿದ್ದಾರೆ.

ಬ್ಯಾಡರಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಕರಿಓಬನಹಳ್ಳಿಯ ನಿವೇಶನವೊಂದರಲ್ಲಿ ಏಪ್ರಿಲ್ 7ರಂದು ಗಲಾಟೆ ನಡೆದಿತ್ತು. ಕಾರ್ಮಿಕರ ಮೇಲೆ ಹಲ್ಲೆ ನಡೆಸಿ, ಜೀವ ಬೆದರಿಕೆ ಒಡ್ಡಿದ್ದ ಆರೋಪದಡಿ ಜಯರಾಮ್, ಹರೀಶ್, ಸತೀಶ್ ಮತ್ತು ಇತರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿತ್ತು.

ಪ್ರಕರಣದ ಮೂರನೇ ಆರೋಪಿಯಾಗಿರುವ ಸತೀಶ್ ತನ್ನನ್ನು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡುವಂತೆ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ (ಪಿಎಸ್‌ಐ) ಮತ್ತು ಹೆಡ್ ಕಾನ್‌ಸ್ಟೆಬಲ್ ಬಳಿ ಮನವಿ ಮಾಡಿದ್ದರು. ಠಾಣಾ ಜಾಮೀನು ಮಂಜೂರು ಮಾಡಲು ಪಿಎಸ್‌ಐಗೆ ₹ 50,000 ಮತ್ತು ಹೆಡ್ ಕಾನ್‌ಸ್ಟೆಬಲ್‌ಗೆ ₹ 5,000 ಲಂಚ ಕೊಡುವಂತೆ ಇಬ್ಬರೂ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಸತೀಶ್, ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ಘಟಕ–2ಕ್ಕೆ ದೂರು ಸಲ್ಲಿಸಿದ್ದರು.

ಆರೋಪಿಗಳ ಸೂಚನೆಯಂತೆ ದೂರುದಾರರು ಶನಿವಾರ ಸಂಜೆ ಲಂಚದ ಹಣದೊಂದಿಗೆ ಬ್ಯಾಡರಹಳ್ಳಿ ಪೊಲೀಸ್ ಠಾಣೆಗೆ ಹೋಗಿದ್ದರು. ಹೆಡ್ ಕಾನ್‌ಸ್ಟೆಬಲ್ ನಿಂಗರಾಜೇಗೌಡ ₹ 5,000 ಪಡೆದುಕೊಂಡರು. ತಕ್ಷಣ ದಾಳಿಮಾಡಿದ ಲೋಕಾಯುಕ್ತ ಪೊಲೀಸರು ಅವರನ್ನು ಬಂಧಿಸಿದರು.

ಠಾಣೆಗೆ ಬಾರದ ಪಿಎಸ್‌ಐ: ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆಗಾಗಿ ಸ್ಥಳಕ್ಕೆ ತೆರಳುವ ಕೆಲವು ನಿಮಿಷಗಳ ಮೊದಲು ಶಿವರಾಜ್ ಪೊಲೀಸ್ ಠಾಣೆಯಿಂದ ಹೊರ ಹೋಗಿದ್ದರು. ನಿಂಗರಾಜೇಗೌಡ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿರುವ ಮಾಹಿತಿ ತಿಳಿದು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ತಲೆಮರೆಸಿಕೊಂಡಿದ್ದಾರೆ. ಪರಾರಿಯಾಗಿರುವ ಪಿಎಸ್‌ಐ ಪತ್ತೆಗೆ ಲೋಕಾಯುಕ್ತ ಪೊಲೀಸರು ಶೋಧ ಮುಂದುವರಿಸಿದ್ದಾರೆ ಎಂದು ತನಿಖಾ ಸಂಸ್ಥೆಯ ಮೂಲಗಳು ತಿಳಿಸಿವೆ.

ಡಿವೈಎಸ್‌ಪಿ ಸತೀಶ್ ಎಂ.ಎಚ್. ಮಾರ್ಗದರ್ಶನದಲ್ಲಿ ಇನ್‌ಸ್ಪೆಕ್ಟರ್ ಕೇಶವಮೂರ್ತಿ ಎನ್.ಎನ್. ಮತ್ತು ತಂಡ ಈ ಕಾರ್ಯಾಚರಣೆ ನಡೆಸಿದೆ.

ಗ್ರಾಮ ಲೆಕ್ಕಿಗನ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಜಮೀನಿನ ಖಾತೆ ಬದಲಾವಣೆಗೆ ₹ 10,000 ಲಂಚ ಪಡೆದ ನೆಲಮಂಗಲ ತಾಲ್ಲೂಕಿನ ಕಸಬಾ ಹೋಬಳಿಯ ಮೈಲನಹಳ್ಳಿ ಕಂದಾಯ ವೃತ್ತದ ಗ್ರಾಮ ಲೆಕ್ಕಾಧಿಕಾರಿ ಎಸ್‌.ಶಿವಕುಮಾರ್ ಅವರನ್ನು ಲೋಕಾಯುಕ್ತದ ಬೆಂಗಳೂರು ಗ್ರಾಮಾಂತರ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ನಗರದ ಉಲ್ಲಾಳದ ಜ್ಞಾನಭಾರತಿ ಬಡಾವಣೆಯ ರೇವಣ್ಣ ಅವರ ಮಕ್ಕಳು ತಂದೆಯ ಉಯಿಲಿನ ಅನುಸಾರ ಜಮೀನಿನ ಖಾತೆ ಬದಲಾವಣೆಗೆ ಕೋರಿ ಅರ್ಜಿ ಸಲ್ಲಿಸಿದ್ದರು. ಖಾತೆ ಬದಲಾವಣೆ ಪ್ರಕ್ರಿಯೆ ಪೂರ್ಣಗೊಳಿಸಲು ₹ 25,000 ಲಂಚ ನೀಡುವಂತೆ ಗ್ರಾಮ ಲೆಕ್ಕಾಧಿಕಾರಿ ಬೇಡಿಕೆ ಇಟ್ಟಿದ್ದರು. ಈ ಕುರಿತು ರೇವಣ್ಣ ಅವರ ಮಗ ಮಂಜುನಾಥ್ ಲೋಕಾಯುಕ್ತದ ಬೆಂಗಳೂರು ಗ್ರಾಮಾಂತರ ಪೊಲೀಸ್ ಘಟಕಕ್ಕೆ ದೂರು ನೀಡಿದ್ದರು.

₹ 5,000 ಲಂಚದ ಹಣವನ್ನು ಫೋನ್ ಪೇ ಮೂಲಕ ಪಡೆದಿದ್ದ ಆರೋಪಿ, ಎರಡನೇ ಕಂತಿನ ₹ 5,000 ನಗದನ್ನು ನೆಲಮಂಗಲ ಪಟ್ಟಣದಲ್ಲಿರುವ ತನ್ನ ಖಾಸಗಿ ಕಚೇರಿಗೆ ತಲುಪಿಸುವಂತೆ ಸೂಚಿಸಿದ್ದರು. ಶನಿವಾರ ಮಧ್ಯಾಹ್ನ ಅಲ್ಲಿಗೆ ತೆರಳಿದ ಮಂಜುನಾಥ್ ಲಂಚದ ಹಣ ನೀಡಿದರು. ತಕ್ಷಣ ದಾಳಿಮಾಡಿದ ಲೋಕಾಯುಕ್ತ ಪೊಲೀಸರು, ಆರೋಪಿಯನ್ನು ಬಂಧಿಸಿದರು ಎಂದು ಲೋಕಾಯುಕ್ತದ ಅಧಿಕಾರಿಗಳು ತಿಳಿಸಿದ್ದಾರೆ. ಲೋಕಾಯುಕ್ತದ ಬೆಂಗಳೂರು ಗ್ರಾಮಾಂತರ ಎಸ್‌ಪಿ ಪವನ್ ನೆಜ್ಜೂರು ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇನ್‌ಸ್ಪೆಕ್ಟರ್ ಎಸ್. ನಂದಕುಮಾರ್ ಮತ್ತು ಸಿಬ್ಬಂದಿ ಇದ್ದರು.

ಸಂಬಳ ಕೊಟ್ಟು ಕಳ್ಳತನಕ್ಕೆ ಇಟ್ಟುಕೊಂಡಿದ್ದ!

ಪ್ರಜಾವಾಣಿ ವಾರ್ತೆ

ಕೊರಟಗೆರೆ: ಬೆಂಗಳೂರಿನ ಬಸವೇಶ್ವರ ನಗರದ ವೆಂಕಟೇಶ್ ಎಂಬಾತ ತಿಂಗಳಿಗೆ ₹20 ಸಾವಿರ ಸಂಬಳ ಕೊಟ್ಟು ಕಳ್ಳತನಕ್ಕೆ ವ್ಯಕ್ತಿಯೊಬ್ಬನನ್ನು ಇಟ್ಟುಕೊಂಡಿದ್ದ!

ಕೊರಟಗೆರೆ ತಾಲ್ಲೂಕಿನ ವಿವಿಧೆಡೆ ಕೊಳವೆಬಾವಿ ಕೇಬಲ್ ಕಳ್ಳತನ ಮಾಡುತ್ತಿದ್ದ ಮೂವರನ್ನು ಪೊಲೀಸರು ಬೆಂಗಳೂರಿನಲ್ಲಿ ಬಂಧಿಸಿದಾಗ ಈ ವಿಷಯ ಗೊತ್ತಾಗಿದೆ.

ಬೆಂಗಳೂರು ಬಸವೇಶ್ವರ ನಗರ ನಿವಾಸಿಗಳಾದ ವೆಂಕಟೇಶ, ರಾಘವೇಂದ್ರ, ವಿನೇಶ್ ಪಾಟೀಲ ಎಂಬುವರನ್ನು ಕೊರಟಗೆರೆ ಪೊಲೀಸರು ಬಂಧಿಸಿದ್ದಾರೆ.

ಪ್ರಮುಖ ಆರೋಪಿ ವೆಂಕಟೇಶ, ಪ್ರತಿ ತಿಂಗಳು ₹20 ಸಾವಿರ ಸಂಬಳ ಕೊಟ್ಟು ರಾಘವೇಂದ್ರ ಎಂಬಾತನನ್ನು ಕಳ್ಳತನ ಮಾಡುವ ಕೆಲಸಕ್ಕೆ ಇಟ್ಟುಕೊಂಡಿದ್ದ. ಕದ್ದ ವಸ್ತುಗಳನ್ನು ವಿನೇಶ್ ಪಾಟೀಲ ಖರೀದಿ ಮಾಡಿ ಮಾರಾಟ ಮಾಡುತ್ತಿದ್ದ ಎಂದು ತನಿಖೆ ವೇಳೆ ಆರೋಪಿಗಳು ಬಾಯ್ಬಿಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳು ಐದಾರು ತಿಂಗಳಿನಿಂದ ತಾಲ್ಲೂಕಿನ ಹಲವು ಭಾಗಗಳಲ್ಲಿ ರೈತರ ಕೊಳವೆ ಬಾವಿಗೆ ಹಾಕಲಾಗಿದ್ದ ಕೇಬಲ್‌ಗಳನ್ನು ಕಳ್ಳತನ ಮಾಡುತ್ತಿದ್ದರು.

ಈ ಬಗ್ಗೆ ಕೊರಟಗೆರೆ ಪೊಲೀಸ್ ಠಾಣೆಯಲ್ಲಿ ಸಾಕಷ್ಟು ಪ್ರಕರಣ ದಾಖಲಾಗಿದ್ದವು. ಒಂದು ತಿಂಗಳಲ್ಲಿ ಐದಾರು ಕೇಬಲ್ ಕಳ್ಳತನ ಪ್ರಕರಣ ದಾಖಲಾಗುತ್ತಿರುವುದು ಪೊಲೀಸರಿಗೆ ತಲೆನೋವಾಗಿ ಪರಿಣಮಿಸಿತ್ತು.

ವಡ್ಡಗೆರೆ ಸಮೀಪದ ಕೊಳವೆಬಾವಿಯೊಂದರಲ್ಲಿ ಈಚೆಗೆ ಕೇಬಲ್ ಕಳ್ಳತನ ಮಾಡುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಇದರ ಜಾಡು ಹಿಡಿದ ಸಿಪಿಐ ಆರ್‌.ಪಿ. ಅನಿಲ್, ಪಿಎಸ್‌ಐ ಬಿ.ಮಂಜುನಾಥ ಹಾಗೂ ಸಿಬ್ಬಂದಿ ಬೆಂಗಳೂರಿನ ಕಾಮಾಕ್ಷಿ ಪಾಳ್ಯದಲ್ಲಿ ಆರೋಪಿಗಳನ್ನು ಮಾಲು ಸಮೇತ ವಶಕ್ಕೆ ಪಡೆದಿದ್ದಾರೆ. ಕಳ್ಳತನಕ್ಕೆ ಬಳಸುತ್ತಿದ್ದ ಕಾರನ್ನು ವಶಪಡಿಸಿಕೊಳ್ಳಲಾಗಿದೆ.

ಕೆಲಸದಿಂದ ತೆಗೆಸಿದ್ದಕ್ಕೆ ಹತ್ಯೆ

ಬೆಂಗಳೂರು: ಯಲಹಂಕ ನ್ಯೂ ಟೌನ್ ಬಳಿಯ ಡೇರಿ ವೃತ್ತದಲ್ಲಿ ನಡೆದಿದ್ದ ಗಜೇಂದ್ರ ಸೌದ್ (32) ಕೊಲೆ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು, ಕೃತ್ಯ ಎಸಗಿರುವ ಆರೋಪಿ ಸಂತೋಷ್ ಪತ್ತೆಗಾಗಿ ವಿಶೇಷ ತಂಡ ರಚಿಸಿದ್ದಾರೆ.

'ನೇಪಾಳದ ಗಜೇಂದ್ರ, ಚಿಕ್ಕ ಬೊಮ್ಮಸಂದ್ರ ಬಳಿಯ ಹೋಟೆಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದರು. ಇದೇ ಹೋಟೆಲ್‌ನಲ್ಲಿ ಸಂತೋಷ್ ಕೆಲಸಕ್ಕಿದ್ದ. ಆತನೇ ಗಜೇಂದ್ರ ಅವರನ್ನು ಶುಕ್ರವಾರ ರಾತ್ರಿ ಕೊಲೆ ಮಾಡಿ ಪರಾರಿ ಆಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಡೇರಿ ವೃತ್ತದಲ್ಲಿ ಮೃತದೇಹವಿದ್ದ ಬಗ್ಗೆ ಸ್ಥಳೀಯರು ಶುಕ್ರವಾರ ರಾತ್ರಿ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ, ಮೃತದೇಹದ ಗುರುತು ಪತ್ತೆಯಾಗಿರಲಿಲ್ಲ. ಮೃತ ದೇಹದ ಫೋಟೊ ಆಧರಿಸಿ ತನಿಖೆ ಮುಂದುವರಿಸಲಾಗಿತ್ತು. ಗಜೇಂದ್ರ ಅವರ ಪತ್ನಿ ಶನಿವಾರ ಠಾಣೆಗೆ ಬಂದು, 'ಸಂತೋಷ್ ಎಂಬಾತನೇ ಕೊಲೆ ಮಾಡಿದ್ದಾನೆ' ಎಂಬುದಾಗಿ ದೂರು ನೀಡಿದ್ದಾರೆ' ಎಂದು ತಿಳಿಸಿದರು.

ವಿಭಜಕದ ಮೇಲೆ ಹತ್ತಿದ ಬಸ್: 6 ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಕೆಎಸ್‌ಆರ್‌ಟಿಸಿ ಬಸ್‌ವೊಂದು ಚಾಲಕನ ನಿಯಂತ್ರಣ ತಪ್ಪಿ, ವಿಭಜಕದ ಮೇಲೆ ಹತ್ತಿದ್ದರ ಪರಿಣಾಮ ಚಾಲಕ ಹಾಗೂ ನಿರ್ವಾಹಕ ಸೇರಿ ಆರು ಮಂದಿ ಗಾಯಗೊಂಡಿದ್ದಾರೆ.

ನಗರದಲ್ಲಿ ಇಂದು

ವಚನ ಸಂಗೀತ: ಎಸ್. ಪಿನಾಕಪಾಣಿ, ಸಿದ್ಧರಾಮ ಕೇಸಾಪುರ, ಮೀನಾಕ್ಷಿ ಮೇಟಿ, ಟಿ.ಎಂ. ಜಾನಕಿ, ಗೀತಾ ಭತ್ತದ್, ಕೀಬೋರ್ಡ್: ಪುಣ್ಯೇಶ್, ತಬಲಾ: ಗುರುರಾಜ ಆಚಾರ್ಯ, ರಿದಂ ಪ್ಯಾಡ್: ಮಹೇಂದ್ರ ವರ್ಮ, ಆಯೋಜನೆ ಮತ್ತು ಸ್ಥಳ: ಬಸವ ಬಿಲ್ವ ಭಕ್ತರ ಬಳಗ, ವಿಲ್ಸನ್ ಗಾರ್ಡನ್, ಬೆಳಿಗ್ಗೆ 9

ಶಂಕರ ಜಯಂತಿ: ವೀಣಾ ವಾದನ: ರಾಮು ಹೊನ್ನವಳ್ಳಿ, 'ಗೀತಾ ಶಂಕರ' ಕುರಿತು ಪ್ರವಚನ: ಶಾಂತಾ ಗೋಪಾಲ್, ಅಮೃತ ವರ್ಷಿಣಿ, ಆಯೋಜನೆ ಮತ್ತು ಸ್ಥಳ: ಹೊಯ್ಸಳ ಕರ್ನಾಟಕ ಸಂಘದ ಸಭಾಂಗಣ, ಹೊಂಬೇಗೌಡನಗರ, ಬೆಳಿಗ್ಗೆ 9.30

ಬೆಟ್ಟಾ ಎ. ಹೇಮರಾಜು ಅವರಿಗೆ 'ಸಂಗೀತ ನಮನ': ಅತಿಥಿಗಳು: ಎಂ. ವಾಸುದೇವ ರಾವ್, ಸನ್ಮಾನಿತರು: ಎ.ವಿ. ಆನಂದ್, ಸಿ. ಚೆಲುವರಾಜು, ಎಸ್‌.ವಿ. ಗಿರಿಧರ್, ವಿ. ಪ್ರವೀಣ್, ಎನ್. ಅಮೃತ್, ಸ್ಥಳ: ಸಿದ್ಧಾರೂಢ ಆಶ್ರಮ, 4ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಚಾಮರಾಜಪೇಟೆ, ಬೆಳಿಗ್ಗೆ 9.30ರಿಂದ

ನಿಮಿಷಾಂಬಾದೇವಿ ಜಯಂತ್ಯುತ್ಸವ: ಗಣಪತಿ ಹೋಮ, ನವಗ್ರಹ ಹೋಮ, ಸುದರ್ಶನ ಹೋಮ, ಲಕ್ಷ್ಮೀನಾರಾಯಣ ಪೂಜೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸಾಂಸ್ಕೃತಿಕ ಕಾರ್ಯಕ್ರಮಗಳು: ಆರ್ಯ ಕ್ಷತ್ರಿಯ ಮಹಿಳಾ ಸಂಘ, ಮಕ್ಕಳಿಂದ, ಆಯೋಜನೆ: ಸೋಮವಂಶ ಆರ್ಯಕ್ಷತ್ರಿಯ ಸೇವಾ ಸಂಘ, ಸ್ಥಳ: ನಿಮಿಷಾಂಬಾದೇವಿ ಕಲ್ಯಾಣ ಮಂಟಪ, ರಂಗಸ್ವಾಮಿಗುಡಿ ರಸ್ತೆ, ಬೆಳಿಗ್ಗೆ 9.30ರಿಂದ

ಲಕ್ಷ್ಮಣ ಕೌಂಟೆ ಅವರ 'ಮಹಾವಿನಾಶ', ಕೌಂಡಿನ್ಯ ಅವರ 'ಬೆಳವಡಿ ಮಲ್ಲಮ್ಮ', ರಾಘವೇಂದ್ರ ಪ್ರಭು ಎಂ ಅವರ 'ಬಹುತ್ವ ಭಾರತ ಕಟ್ಟಿದವರು', ವಿ. ಗೋಪುಕುಮಾರ್ ಅವರ 'ಕಗ್ಗಕ್ಕೊಂದು ನ್ಯಾನೋ ಕತೆ', ಗೀತಾ ದೊಡ್ಮನೆ ಅವರ 'ನೀಲಿ ಶಾಯಿಯ ಕಡಲು', ಮೇದಿನಿ ಕೆಸವಿನಮನೆ ಅವರ 'ಮಿಸ್ಸಿನ ಡೈರಿ', ಪಾರ್ವತಿ ಪಿಟಗಿ ಅವರ 'ಪುನರುತ್ಥಾನ' ಪುಸ್ತಕಗಳ ಬಿಡುಗಡೆ: ಅತಿಥಿಗಳು: ಕೆ.ಎನ್. ಗಣೇಶಯ್ಯ, ಜೋಗಿ, ಸಂಧ್ಯಾರಾಣಿ, ಶಿವಕುಮಾರ್ ಮಾವಲಿ, ಆಶಯ ನುಡಿ: ವೀರಕಪುತ್ರ ಶ್ರೀನಿವಾಸ್, ಪುಸ್ತಕ ಪರಿಚಯ: ಶೋಭಾ ರಾವ್, ಅನಂತ್ ಕುಣಿಗಲ್, ಆಯೋಜನೆ: ವೀರಲೋಕ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

ಶಂಕರ ಜಯಂತಿ, ಬಸವ ಜಯಂತಿ: ಉದ್ಘಾಟನೆ: ವಿ. ರಾಣಿ ಗೋವಿಂದರಾಜು, ವಿಶಾಲ ಆರಾಧ್ಯ, ಅಧ್ಯಕ್ಷತೆ: ಶರತ್‌ಚಂದ್ರ ರಾನಡೆ, ಆಯೋಜನೆ: ವಿದ್ಯಾಗಣಪತಿ ಗಮಕ ಶಿಕ್ಷಣಾಲಯ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3.15

ವಿಶೇಷ ಪ್ರವಚನ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ಸಂಜೆ 4ರಿಂದ

ಮಧುರ ಗೆಳೆಯರ ಬಳಗದ ದಶಮಾನೋತ್ಸವ: ಅಧ್ಯಕ್ಷತೆ: ಸಿ. ಜಯಲಕ್ಷ್ಮಿ, ಅತಿಥಿಗಳು: ಹನಿಯೂರು ಚಂದ್ರೇಗೌಡ, ಮೋಹನ್ ಕುಮಾರ್ ಟಿ.ಬಿ., ಜಯರಾಮಯ್ಯ, ಕಾಕೋಳು ಶೈಲೇಶ್, ನಾಗೇಂದ್ರ ಆರ್. ಗುಂಬಳ್ಳಿ, ನಾಗರಾಜ್ ಬಸರಕೋಡ್, ಟಿ.ಆರ್. ಲೋಕೇಶ್, ಆಯೋಜನೆ: ಮಧುರ ಗೆಳೆಯರ ಬಳಗ, ಸ್ಥಳ: ಶಿವರಂಜಿನಿ ಸಭಾಂಗಣ, ಚಂದ್ರಾ ಲೇಔಟ್, ವಿಜಯನಗರ, ಸಂಜೆ 5.30

ವಾದ್ಯವೈಭವ– 2024: ಸಂಗೀತ ಕಛೇರಿ: ಮೃದಂಗ: ಟಿ.ವಿ. ಗೋಪಾಲಕೃಷ್ಣನ್, ಸ್ಯಾಕ್ಸೋಫೋನ್: ಪ್ರವೀಣ್ ಪಂಡಿತ್, ಮೃದಂಗ: ವಿಜಯ್ ನಟೇಶನ್, 'ನಾದಸಿರಿ' ಪ್ರಶಸ್ತಿ ಪುರಸ್ಕೃತರು: ಟಿ.ವಿ. ಗೋಪಾಲಕೃಷ್ಣನ್, ಅತಿಥಿ: ಮೈಸೂರು ನಾಗಮಣಿ ಶ್ರೀನಾಥ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೃಷ್ಣರಾಜೇಂದ್ರ ರಸ್ತೆ, ಸಂಜೆ 6ರಿಂದ

ಅಣ್ಣಮ್ಮ ದೇವಿಯ ವಾರ್ಷಿಕೋತ್ಸವ: ಹೂವಿನ ಪಲ್ಲಕ್ಕಿ ಉತ್ಸವದ ಮೆರವಣಿಗೆ, ಆಯೋಜನೆ ಮತ್ತು ಸ್ಥಳ: ನವಭಾರತ ಯುವಕರ ಸಂಘ, ನಂ. 487, 8ನೇ ಮುಖ್ಯರಸ್ತೆ, ಕುಮಾರಸ್ವಾಮಿ ದೇವಸ್ಥಾನ ರಸ್ತೆ, ಹನುಮಂತನಗರ, ಸಂಜೆ 6

ಕರ್ನಾಟಕ ಶಾಸ್ತ್ರೀಯ ಸಂಗೀತ: ಗಾಯನ: ಧನ್ಯ ರುದ್ರಪಟ್ಣ, ಪಿಟೀಲು: ಎಸ್. ಜನಾರ್ದನ್, ಮೃದಂಗ: ಕೆ.ಆರ್. ರಕ್ಷಿತ್ ಶರ್ಮಾ, ಖಂಜಿರ: ಜಿ.ಆರ್. ಹರೀಶ್ ಚಂದ್ರ, ಆಯೋಜನೆ: ಮಲ್ಲೇಶ್ವರಂ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್‌ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.15

ಗಾಯನ-ವ್ಯಾಖ್ಯಾನ: ಗಾಯನ: ಮಾನಸಿ ಪ್ರಸಾದ್, ಪಿಯಾನೋ: ಶಡ್ರಾಕ್ ಸೊಲೊಮನ್, ಆಯೋಜನೆ ಮತ್ತು ಸ್ಥಳ: ಶೂನ್ಯ ಸೆಂಟರ್ ಫಾರ್ ಆರ್ಟ್ಸ್‌ನ ಸಭಾಂಗಣ, ಲಾಲ್‌ಬಾಗ್ ರಸ್ತೆ, ಸಂಜೆ 6.30

ನಾಟಕೋತ್ಸವ: ಸಂಜೆ 6ಕ್ಕೆ 'ಆ ಬ್ಲಾಂಕ್ ನಿನೋ' ನಾಟಕ ಪ್ರದರ್ಶನ: ನಿರ್ದೇಶನ: ಚೇತನ್ ಎಸ್. ಗೌಡ, 7.10ಕ್ಕೆ 'ಬೂದಿ' ನಾಟಕ ಪ್ರದರ್ಶನ: ನಿರ್ದೇಶನ: ರಾಘವೇಂದ್ರ ಜೆ., 7.50ಕ್ಕೆ 'ದಬ್ಬಾಳಿಕೆ' ನಾಟಕ ಪ್ರದರ್ಶನ: ನಂದಿನಿ, ರಾತ್ರಿ 8.30ಕ್ಕೆ 'ಪ್ಯಾರ್ ಕಿಯಾ ತೊ ಡರನಾ ಕ್ಯಾ?' ನಾಟಕ ಪ್ರದರ್ಶನ: ನಿರ್ದೇಶನ: ಎಂ.ಎಸ್. ವಿನಯ್, ಆಯೋಜನೆ: ಅಭಿನಯ ತರಂಗ, ಸ್ಥಳ: ಬಾಲಾಜಿ ವಿದ್ಯಾ ನಿಕೇತನ

'ಅನವರತ' ಸಂಗೀತ ನೃತ್ಯ ರೂಪಕ: ಸಂಗೀತ: ನಾಗರಾಜ್ ರಾವ್, ರಚನೆ, ನಿರ್ದೇಶನ: ಚಿದಾನಂದ ಎಸ್., ಸಾಹಿತ್ಯ: ನಟರಾಜ್ ಶರ್ಮಾ ಅರುಣ್, ಬೆಳಕು: ಶ್ರೀಪಾದ, ಸಂಚಲನಕಾರರು: ಅರುಣ, ಸುನಿಲ್, ರಂಗಸಜ್ಜಿಕೆ: ತೇಜಸ್, ಆಯೋಜನೆ: ಬೆಂಗಳೂರು ಪ್ಲೇಯರ್ಸ್ ಥಿಯೇಟರ್ ಕಂಪನಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಪ್ರಸನ್ನ ವೆಂಕಟರಮಣಸ್ವಾಮಿ ರಥೋತ್ಸವ: ಕಲ್ಪವೃಕ್ಷವಾಹನೋತ್ಸವ, ಪೂರ್ಣಾಹುತಿ, ಧ್ವಜಾರೋಹಣ, ಡೋಲೋತ್ಸವ, ಶಾತ್ತು ಮೊರೈ, ಆಯೋಜನೆ: ಧಾರ್ಮಿಕ ದತ್ತಿ ಇಲಾಖೆ, ಸ್ಥಳ: ಪ್ರಸನ್ನ ವೆಂಕಟರಮಣ ಸ್ವಾಮಿ ದೇವಸ್ಥಾನ, ಕೋಟೆ; ಸಂಜೆ 7ರಿಂದ

'ಮಂಗಳಾಷ್ಟಕ' ಪ್ರವಚನ: ಅಂಬರೀಶಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ.
nagaradalli_indu prajavani.co.in

ಮಳೆಗಾಲಕ್ಕೆ ಸಕಲ ಮುನ್ನೆಚ್ಚರಿಕೆ: ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿಕೆ

‘ಮೇ 31ರೊಳಗೆ ಎಲ್ಲ ಚರಂಡಿ ಸ್ವಚ್ಛ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಗಾಲವನ್ನು ಎದುರಿಸಲು ಸಕಲ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮೇ 31ರ ಒಳಗೆ ಎಲ್ಲ ರಸ್ತೆಗಳ ಚರಂಡಿ ಸ್ವಚ್ಛಗೊಳ್ಳಲಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಶನಿವಾರ ತಿಳಿಸಿದರು.

ಪ್ಲಾಸ್ಟಿಕ್, ಮನೆ ಕಸಗಳೆಲ್ಲ ಚರಂಡಿ ಸೇರಿ ಮಳೆ ನೀರು ಸರಾಗವಾಗಿ ಹರಿಯಲು ಅಡ್ಡಿಯಾಗಿರುವುದನ್ನು ಸರಿಪಡಿಸಲಾಗುತ್ತಿದೆ. ಇದೇ ರೀತಿ ರಾಜಕಾಲುವೆಯಲ್ಲಿ ಕೂಡ ಘನತ್ಯಾಜ್ಯಗಳು ಅಲ್ಲಲ್ಲಿ ನಿಂತಿದ್ದು, ಅದನ್ನು ತೆರವುಗೊಳಿಸಲಾಗುತ್ತಿದೆ ಎಂದು ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಈಗಾಗಲೇ 300ಕ್ಕೂ ಅಧಿಕ ಮರಗಳನ್ನು, 800ಕ್ಕೂ ಅಧಿಕ ರೆಂಬೆ-ಕೊಂಬೆಗಳನ್ನು ತೆರವುಗೊಳಿಸಲಾಗಿದೆ. ಎಲ್ಲಿಯಾದರೂ ಅಪಾಯಕಾರಿ ಸ್ಥಿತಿಯಲ್ಲಿ ಮರ ಇರುವ ಬಗ್ಗೆ ಸಾರ್ವಜನಿಕರು ಸಹಾಯವಾಣಿಗೆ ಮಾಹಿತಿ ನೀಡಿದರೆ ತಕ್ಷಣ ತೆರವುಗೊಳಿಸಲಾಗುವುದು ಎಂದು ಹೇಳಿದರು.

‘ಜಲಮಂಡಳಿ, ಬೆಸ್ಕಾಂ ಜೊತೆಗೆ ಸಮನ್ವಯ ಸಾಧಿಸಿ ತಂಡ ರಚಿಸಲಾಗಿದೆ. ನೀರು ನಿಲ್ಲುವ, ಮನೆಗಳಿಗೆ ನೀರು ನುಗ್ಗುವ ಪ್ರದೇಶಗಳಲ್ಲಿ ಶಾಶ್ವತವಾಗಿ ಪರಿಹಾರ ಕೈಗೊಳ್ಳಲು ಸಾಧ್ಯವಾಗದ ಕಡೆಗಳಲ್ಲಿ ಮೋಟರ್ ಪಂಪ್ ಅಳವಡಿಸಿ, ಪೈಪ್ ಮೂಲಕ ನೀರು ಹೊರ ಹಾಕಲು ಕ್ರಮ ಕೈಗೊಳ್ಳಲಾಗಿದೆ. ಜನರು ಯಾವುದೇ ರೀತಿಯಲ್ಲಿ ಭಯಪಡುವ ಅಗತ್ಯವಿಲ್ಲ’ ಎಂದು ವಿವರಿಸಿದರು.

ಕೊಳವೆಬಾವಿ: ಅಂತರ್ಜಲ ಮಟ್ಟ ಕುಸಿತದಿಂದ ಅಗತ್ಯ ಇರುವ ಕಡೆಗೆ ಕೊಳವೆಬಾವಿ ಕೊರೆಯಲು ಕ್ರಮ ಕೈಗೊಳ್ಳಲಾಗಿತ್ತು. ಮುಂಗಾರುಪೂರ್ವ ಮಳೆ ಬಿದ್ದಿದ್ದರೂ ಅಂತರ್ಜಲ ಹೆಚ್ಚಾಗಿಲ್ಲ. ಹಾಗಾಗಿ ಮೇ 31ರ ವರೆಗೂ ಅಗತ್ಯ ಬಿದ್ದಲ್ಲಿ, ಕೊಳವೆಬಾವಿ ಕೊರೆಯುವ ಕೆಲಸಗಳು ಮುಂದುವರಿಯಲಿದೆ. ಬಳಿಕ ಸ್ಥಗಿತಗೊಳಿಸಲಾಗುವುದು ಎಂದರು.

‘ತೆರಿಗೆ ಪಾವತಿಸಿ’

‘ಪ್ರತಿ ವರ್ಷ ಏಪ್ರಿಲ್ ಒಳಗೆ ಬಡ್ಡಿರಹಿತವಾಗಿ ತೆರಿಗೆ ಪಾವತಿಸಬಹುದಿತ್ತು. ಒಂದು ತಿಂಗಳು ಹೆಚ್ಚುವರಿಯಾಗಿ ಅವಕಾಶ ನೀಡಲಾಗುತ್ತಿತ್ತು. ಆದರೆ, ಈ ವರ್ಷ ಜುಲೈ ಅಂತ್ಯದವರೆಗೆ ಬಡ್ಡಿರಹಿತವಾಗಿ ತೆರಿಗೆ ಪಾವತಿಗೆ ಅವಕಾಶ ನೀಡಿರುವುದರಿಂದ ಜನರು ನಿಧಾನಗತಿಯಲ್ಲಿ ಪಾವತಿಸುತ್ತಿದ್ದಾರೆ. ಜುಲೈ ಅಂತ್ಯದವರೆಗೆ ಕಾಯದೇ ಮೊದಲೇ ಪಾವತಿಸಬೇಕು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮನವಿ ಮಾಡಿದರು.

‘ತೆರಿಗೆ ನೀತಿಗೆ ಸರ್ಕಾರವು ತಿದ್ದುಪಡಿ ಮಾಡಿರುವುದರಿಂದ ತೆರಿಗೆ ವಸೂಲಿಗೆ ಕಠಿಣ ಕ್ರಮ ವಹಿಸಲು ನಮಗೆ ಅವಕಾಶ ಸಿಕ್ಕಿದೆ. ಹಲವು ವರ್ಷಗಳಿಂದ ಕಂದಾಯ ಕಟ್ಟದವರಿಂದ ವಸೂಲಿ ಮಾಡಲಾಗುತ್ತಿದೆ. ಈ ಬಾರಿ ತೆರಿಗೆ ಸಂಗ್ರಹ ಹೆಚ್ಚಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ನಗರದ ರಾಜಾಜಿನಗರದಲ್ಲಿ ಮಳೆಯಲ್ಲೇ ಸಾಗಿದ ಜನರು ಪ್ರಜಾವಾಣಿ ಚಿತ್ರ

ನಗರದಲ್ಲಿ ಉತ್ತಮ ಮಳೆ

ಬೆಂಗಳೂರು: ನಗರದ ವಿವಿಧೆಡೆ ಶನಿವಾರ ಗುಡುಗು, ಮಿಂಚು ಸಹಿತ ಉತ್ತಮ ಮಳೆಯಾಯಿತು. ಅಲ್ಲಲ್ಲಿ ತಡರಾತ್ರಿವರೆಗೂ ಮಳೆ ಸುರಿಯಿತು.

ಬೆಳಿಗ್ಗಿನಿಂದಲೇ ಮೋಡ ಕವಿದ ವಾತಾವರಣವಿತ್ತು. ಮಧ್ಯಾಹ್ನದ ಬಳಿಕ ನಗರದ ಹೊರವಲಯಗಳಲ್ಲಿ ಮಳೆ ಸುರಿಯಿತು. ಸಂಜೆಯಾಗುತ್ತಿದ್ದಂತೆ ನಗರದ ವಿವಿಧ ಪ್ರದೇಶಗಳಲ್ಲಿ ಗುಡುಗು, ಮಿಂಚಿನೊಂದಿಗೆ ಮಳೆ ಸುರಿಯಿತು. 1 ಸೆಂ.ಮೀ ನಿಂದ 4.5 ಸೆಂ.ಮೀ.ವರೆಗೆ ಮಳೆ ದಾಖಲಾಗಿದೆ.

ಹೆಬ್ಬಾಳ ಮೇಲ್ಸೇತುವೆ ಬಳಿ ಮಳೆ ನೀರು ನಿಂತು ಸಂಚಾರ ವ್ಯತ್ಯಯವಾಗಿತ್ತು. ಸಂಜಯನಗರ ಮುಖ್ಯರಸ್ತೆ ಮರದ ಕೊಂಬೆ ಬಿದ್ದು, ನಾಗಶೆಟ್ಟಿಹಳ್ಳಿ ಕಡೆಗೆ ತೆರಳುವ ವಾಹನ ಸವಾರರು ಪರದಾಡಿದರು. ಹೆಬ್ಬಾಳ ಜಂಕ್ಷನ್ ಹಾಗೂ ಬಿನ್ನಿಮಿಲ್ ರಸ್ತೆ ಬಳಿ ನೀರು ನಿಂತಿತ್ತು.

ವಿವಿಧೆಡೆ ಚರಂಡಿ ಸಮಸ್ಯೆಯಿಂದಾಗಿ ರಸ್ತೆಗಳಲ್ಲಿಯೇ ನೀರು ಹರಿಯಿತು. ವಾಹನಗಳು ನೀರಿನಲ್ಲಿ ಚಲಾಯಿಸಲು ತೊಂದರೆ ಅನುಭವಿಸಿದವು. ಛತ್ರಿ, ರೈನ್‌ಕೋಟ್ ಬಿಟ್ಟು ಬಂದಿದ್ದವರು ಮಳೆ ಸಮಯದಲ್ಲಿ ಅಂಗಡಿ, ಬಸ್‌ನಿಲ್ದಾಣಗಳನ್ನು ಆಶ್ರಯಿಸಿದರು. ಕೆಲವರು ಒದ್ದೆಯಾಗಿಕೊಂಡೇ ಸಾಗಿದರು.

ಮಳೆ ಪ್ರಮಾಣ: ನಂದಿನಿ ಬಡಾವಣೆಯಲ್ಲಿ 4.5 ಸೆಂ.ಮೀ., ಮಾರಪ್ಪನಪಾಳ್ಯ 3.6 ಸೆಂ.ಮೀ., ನಾಗಪುರ 3.1, ಪೀಣ್ಯ ಇಂಡಸ್ಟ್ರಿ 2.8 ಸೆಂ.ಮೀ., ಯಲಹಂಕ 2.7 ಸೆಂ.ಮೀ., ಬಾಗಲಗುಂಟೆ 2.4 ಸೆಂ.ಮೀ., ಶೆಟ್ಟಿಹಳ್ಳಿ 2.2 ಸೆಂ.ಮೀ., ಕೊಟ್ಟಿಗೆಪಾಳ್ಯ 1.8 ಸೆಂ.ಮೀ., ರಾಜಾಜಿನಗರ 1.6 ಸೆಂ.ಮೀ., ಚೊಕ್ಕಸಂದ್ರ 1.5 ಸೆಂ.ಮೀ., ಕಾಟನ್‌ಪೇಟೆ 1.3, ರಾಜಮಹಲ್ ಗುಟ್ಟಹಳ್ಳಿ 1.2, ಚಾಮರಾಜಪೇಟೆಯಲ್ಲಿ 1.2 ಸೆಂ.ಮೀ. ಮಳೆ ದಾಖಲಾಗಿದೆ.

ನೀತಿಸಂಹಿತೆ ಸಡಿಲಿಸಿದ ಚುನಾವಣಾ ಆಯೋಗ

ಟೆಂಡರ್ ಪ್ರಕ್ರಿಯೆ, ಸಭೆಗಳಿಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮೂಲ ಸೌಕರ್ಯ, ಅಭಿವೃದ್ಧಿ ಕಾಮಗಾರಿಗಳು, ಸರಕು ಮತ್ತು ಸೇವೆಗಳ ಖರೀದಿಗೆ ಟೆಂಡರ್ ಪ್ರಕ್ರಿಯೆ ನಡೆಸಲು ಚುನಾವಣಾ ನೀತಿಸಂಹಿತೆಯಿಂದ ವಿನಾಯಿತಿ ನೀಡಿ ಕೇಂದ್ರ ಚುನಾವಣಾ ಆಯೋಗ ಆದೇಶ ಹೊರಡಿಸಿದೆ.

ಮುಖ್ಯಮಂತ್ರಿ ಹಾಗೂ ಸಚಿವರು ಬರ ಪರಿಹಾರ ಮತ್ತು ಪ್ರವಾಹ ನಿಯಂತ್ರಣಕ್ಕೆ ಸಂಬಂಧಿಸಿದ ಸಭೆಗಳನ್ನು ನಡೆಸುವುದಕ್ಕೂ ಆಯೋಗ ಸಮ್ಮತಿ ನೀಡಿದೆ. ನಿಗಮ, ಮಂಡಳಿಗಳು, ಸಮಿತಿಗಳು, ಸ್ಥಳೀಯ ಸಂಸ್ಥೆಗಳಲ್ಲಿ ಸಭೆಗಳನ್ನು ನಡೆಸುವುದಕ್ಕೂ ಒಪ್ಪಿಗೆ ಸೂಚಿಸಿದೆ.

ರಾಜ್ಯದಲ್ಲಿ ಲೋಕಸಭಾ ಚುನಾವಣೆಯ ಮತದಾನ ಪೂರ್ಣಗೊಂಡಿರುವುದರಿಂದ ಅಭಿವೃದ್ಧಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ನಡೆಸುವುದು, ಮುಖ್ಯಮಂತ್ರಿ ಹಾಗೂ ಸಚಿವರು ವಿಪತ್ತು ಪರಿಹಾರಕ್ಕೆ ಸಂಬಂಧಿಸಿದ ಸಭೆಗಳನ್ನು ನಡೆಸುವುದು, ನಿಗಮ, ಮಂಡಳಿ, ಸ್ಥಳೀಯ ಸಂಸ್ಥೆಗಳಲ್ಲಿ ಸಭೆಗಳನ್ನು ನಡೆಸುವುದಕ್ಕೆ ನೀತಿ ಸಂಹಿತೆಯಿಂದ ವಿನಾಯಿತಿ ನೀಡುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯ ಪರಿಶೀಲನಾ ಸಮಿತಿಯು ಮೇ 8ರಂದು ಕೇಂದ್ರ ಚುನಾವಣಾ ಆಯೋಗಕ್ಕೆ ಶಿಫಾರಸು ಮಾಡಿತ್ತು.

ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅವರಿಗೆ ಗುರುವಾರ ಪತ್ರ ಬರೆದಿರುವ ಆಯೋಗವು, ‘ಈ ವಿಚಾರಗಳಲ್ಲಿ ಯಾರಿಗೂ ರಾಜಕೀಯ ಲಾಭಕ್ಕೆ ಅವಕಾಶವಿಲ್ಲದಂತೆ ನಿರ್ಣಯ ತೆಗೆದುಕೊಳ್ಳಲು ನೀತಿಸಂಹಿತೆಯಿಂದ ವಿನಾಯಿತಿ ನೀಡಲು ಅಭ್ಯಂತರವಿಲ್ಲ’ ಎಂದು ತಿಳಿಸಿದೆ.

ಕೇಂದ್ರ ಚುನಾವಣಾ ಆಯೋಗವು ವಿಧಿಸಿರುವ ಷರತ್ತಿನಂತೆ ಟೆಂಡರ್ ಆಹ್ವಾನಿಸುವುದು, ಟೆಂಡರ್‌ಗಳ ಮೌಲ್ಯಮಾಪನ, ಟೆಂಡರ್ ಅಂತಿಮಗೊಳಿಸುವುದು ಹಾಗೂ ಕಾರ್ಯಾದೇಶ ನೀಡುವ ಕೆಲಸಗಳನ್ನು ಮಾಡಬಹುದು ಎಂದು ಮುಖ್ಯ ಕಾರ್ಯದರ್ಶಿ ಶುಕ್ರವಾರ ಸುತ್ತೋಲೆ ಹೊರಡಿಸಿದ್ದಾರೆ.

ಬರ ಪರಿಹಾರ ಹಾಗೂ ಪ್ರವಾಹ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಮತ್ತು ಸಚಿವರು ಚುನಾವಣಾ ಆಯೋಗದ ಷರತ್ತಿನ ವ್ಯಾಪ್ತಿಯಲ್ಲಿ ಸಭೆ ನಡೆಸುವುದಕ್ಕೆ ಅವಕಾಶ ಕಲ್ಪಿಸಿ ಸುತ್ತೋಲೆ ಹೊರಡಿಸಲಾಗಿದೆ. ಮತ್ತೊಂದು ಸುತ್ತೋಲೆ ಹೊರಡಿಸಿರುವ ಮುಖ್ಯ ಕಾರ್ಯದರ್ಶಿ, ನಿಗಮ, ಮಂಡಳಿ, ಸಮಿತಿ, ಸ್ಥಳೀಯ ಸಂಸ್ಥೆಗಳು ಮತ್ತು ಇತರ ಶಾಸನಾತ್ಮಕ ಸಂಸ್ಥೆಗಳಲ್ಲಿ ಶಾಸನಬದ್ಧ ಸಭೆಗಳನ್ನು ಆಯೋಗದ ಷರತ್ತಿನ ವ್ಯಾಪ್ತಿಯಲ್ಲಿ ನಡೆಸಬಹುದು ಎಂದು ಸೂಚಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಸಿ.ಎಲ್. ಮರಿಗೌಡ ಮಾತನಾಡಿದರು. ಬ್ಯಾಂಕ್‌ನ ಉಪಾಧ್ಯಕ್ಷ ಅರವಿಂದ್ ಬಿ., ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿನೋದ ಶಿವರಾಮಯ್ಯ ಹಾಗೂ ನಿರ್ದೇಶಕರು ಪಾಲ್ಗೊಂಡಿದ್ದರು

ಜನತಾ ಕೋ-ಆಪರೇಟಿವ್ ಬ್ಯಾಂಕ್‌ಗೆ ₹12.83 ಕೋಟಿ ಲಾಭ

ಬೆಂಗಳೂರು: ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ 2023–24ನೇ ಆರ್ಥಿಕ ವರ್ಷದಲ್ಲಿ ₹ 12.83 ಕೋಟಿ ಲಾಭಗಳಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬ್ಯಾಂಕಿನ ಅಧ್ಯಕ್ಷ ಸಿ.ಎಲ್. ಮರಿಗೌಡ, ‘ಕೋವಿಡ್ ಹಾಗೂ ಇತರ ಕಾರಣಗಳಿಂದ ಬ್ಯಾಂಕ್ ಕಳೆದ ಮೂರು ವರ್ಷಗಳಿಂದ ₹ 8.34 ಕೋಟಿ ಕ್ರೋಡೀಕೃತ ನಷ್ಟ ಅನುಭವಿಸಿತ್ತು. ಈಗ ಲಾಭಕ್ಕೆ ಹೊರಳುವ ಮೂಲಕ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಂಡಿದೆ. ಹಿಂದಿನ ಸಾಲಿಗೆ ಹೋಲಿಸಿದರೆ ಆರ್ಥಿಕ ಪ್ರಗತಿಯು ಶೇ 253ರಷ್ಟಾಗಿದೆ. 2022–23ರಲ್ಲಿ ಶೇ 6.49ರಷ್ಟಿದ್ದ ನಿವ್ವಳ ಅನುತ್ಪಾದಕ ಸಾಲದ ಪ್ರಮಾಣ, 2023–24ನೇ ಸಾಲಿನ ಅಂತ್ಯಕ್ಕೆ ಶೇ 1.71ಕ್ಕೆ ಇಳಿಕೆಯಾಗಿದೆ. ಇದರಿಂದ ಬ್ಯಾಂಕಿನ ಆರ್ಥಿಕ ಸ್ಥಿತಿ ಸದೃಢಗೊಳ್ಳಲಿದೆ’ ಎಂದು ತಿಳಿಸಿದರು.

‘ಅನಗತ್ಯ ಬಡ್ಡಿ ಹೊರೆಯನ್ನು ಕಡಿತಗೊಳಿಸುವುದು, ಅನಗತ್ಯ ಖರ್ಚುಗಳಿಗೆ ಕಡಿವಾಣ ಹಾಕುವುದು ಸೇರಿ ವಿವಿಧ ಕ್ರಮಗಳ ಮೂಲಕ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಸಾಧ್ಯವಾಗಿದೆ. ಬ್ಯಾಂಕ್ 24,089 ಸದಸ್ಯರನ್ನು ಹೊಂದಿದ್ದು, ₹ 33 ಕೋಟಿ ಷೇರು ಬಂಡವಾಳವನ್ನು ಹೊಂದಿದೆ. 3,597 ಸದಸ್ಯರು ಸಾಲ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದಾರೆ’ ಎಂದು ಹೇಳಿದರು.

‘ಕಳೆದ ಮಾರ್ಚ್ ಅಂತ್ಯಕ್ಕೆ ಬ್ಯಾಂಕ್ ₹445.43 ಕೋಟಿ ಸಾಲ ವಿತರಿಸಿದ್ದು, ಆದ್ಯತಾ ವಲಯಕ್ಕೆ ₹157.35 ಕೋಟಿ ಸಾಲ ನೀಡಲಾಗಿದೆ. ಇದರಲ್ಲಿ ಎಂಎಸ್‌ಎಂಇ ವಲಯಕ್ಕೆ ₹ 130.72 ಕೋಟಿ, ಹಿಂದುಳಿದ ವರ್ಗಗಳಿಗೆ ₹16.72 ಕೋಟಿ ಸಾಲ ನೀಡಲಾಗಿದೆ. ಬ್ಯಾಂಕ್ ಒಟ್ಟಾರೆ ₹742.55 ಕೋಟಿಗಳ ಠೇವಣಿ ಸಂಗ್ರಹಿಸಿದ್ದು, ಗರಿಷ್ಠ ಶೇ 7.10 ಬಡ್ಡಿ (ಹಿರಿಯ ನಾಗರಿಕರಿಗೆ ಶೇ 7.60) ನೀಡಲಾಗುತ್ತಿದೆ. ಸಾಲಗಳ ಮೇಲೆ ಕನಿಷ್ಠ ಶೇ 8 ಬಡ್ಡಿ ವಿಧಿಸುತ್ತಿದ್ದು, ಸಾಲದ ಉದ್ದೇಶಗಳಿಗೆ ಅನುಗುಣವಾಗಿ ಸಾಲದ ಬಡ್ಡಿದರವು ಬದಲಾಗುತ್ತದೆ. 2020ರಲ್ಲಿ ₹89.39 ಕೋಟಿಯಿದ್ದ ಬ್ಯಾಂಕ್‌ನ ಸ್ವಂತ ಬಂಡವಾಳ, ಈಗ ₹147.68 ಕೋಟಿಗೆ ಏರಿಕೆಯಾಗಿದೆ’ ಎಂದು ವಿವರಿಸಿದರು.

ವಿದ್ಯಾರ್ಥಿ ಸಹಾಯ ನಿಧಿಗೆ ಅರ್ಜಿ ಆಹ್ವಾನ

ಬೆಂಗಳೂರು: ಜೆ.ಪಿ.ನಗರ ಬ್ರಾಹ್ಮಣ ಸಭಾವು 2024ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ 90ಕ್ಕಿಂತ ಹೆಚ್ಚು ಅಂಕ ಪಡೆದ ಸಮುದಾಯದ ವಿದ್ಯಾರ್ಥಿಗಳಿಂದ ‘ವಿದ್ಯಾರ್ಥಿ ಸಹಾಯ ನಿಧಿ’ಗೆ ಅರ್ಜಿ ಆಹ್ವಾನಿಸಿದೆ.

ವಿದ್ಯಾರ್ಥಿಗಳು ದೃಢೀಕರಿಸಿದ ಅಂಕಪಟ್ಟಿ, ಭಾವಚಿತ್ರ, ಆಧಾರ್ ಕಾರ್ಡ್, ವಾರ್ಷಿಕ ಆದಾಯ ಪತ್ರ, ವಾಸವಿರುವ ವಿಳಾಸ, ಸಂಪರ್ಕ ಸಂಖ್ಯೆ ಸಹಿತ ಅರ್ಜಿಯ ಪ್ರತಿಯನ್ನು ಇದೇ 30ರೊಳಗೆ ಎಂ.ಎಸ್. ರಾಮಪ್ರಸಾದ್, ಖಜಾಂಚಿ, ಜೆ.ಪಿ.ನಗರ ಬ್ರಾಹ್ಮಣ ಸಭಾ, 1298, 20ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜೆ.ಪಿ.ನಗರ 2ನೇ ಹಂತ, ಬೆಂಗಳೂರು–560078 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ: 9448617964



ಕೆ.ಆರ್.ಪುರದಲ್ಲಿ ಶ್ರೀಕೋಟೆ ವೆಂಕಟರಮಣಸ್ವಾಮಿ ಬ್ರಹ್ಮರಥೋತ್ಸವ ನೆರವೇರಿತು

ಇಂದಿನಿಂದ ಕರಗ

ಪ್ರಜಾವಾಣಿ ವಾರ್ತೆ

ಯಲಹಂಕ: ವಹ್ನಿಕುಲ ಕ್ಷತ್ರಿಯ ಆರಾಧ್ಯದೇವಿ ಮಹೇಶ್ವರಮ್ಮ ಅವರ ಹೂವಿನ ಕರಗ ಮಹೋತ್ಸವದ ಪ್ರಯುಕ್ತ ದೇವರುಗಳ ಉತ್ಸವ ಸೇರಿ ವಿವಿಧ ಕಾರ್ಯಕ್ರಮಗಳನ್ನು ಮೇ 19ರಿಂದ 24ರ ವರೆಗೆ ಏರ್ಪಡಿಸಲಾಗಿದೆ ಎಂದು ಕರ್ನಾಟಕ ರಾಜ್ಯ ತಿಗಳರ(ವಹ್ನಿಕುಲ ಕ್ಷತ್ರಿಯರ)ಸಂಘದ ರಾಜ್ಯ ಘಟಕದ ಅಧ್ಯಕ್ಷ ಮು.ಕೃಷ್ಣಮೂರ್ತಿ ತಿಳಿಸಿದ್ದಾರೆ.

‘ಬಂಡಾಯ ಶಮನ’

ಬೆಂಗಳೂರು: ವಿಧಾನ ಪರಿಷತ್ತಿನ ವಿವಿಧ ಕ್ಷೇತ್ರಗಳಲ್ಲಿನ ಬಂಡಾಯ ಶಮನಗೊಳ್ಳಲಿದೆ ಎನ್ನುವ ವಿಶ್ವಾಸವನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವ್ಯಕ್ತಪಡಿಸಿದರು. ದಕ್ಷಿಣ ಶಿಕ್ಷಕರ ಕ್ಷೇತ್ರ, ಈಶಾನ್ಯ ಪದವೀಧರ ಕ್ಷೇತ್ರಗಳ ಸಮಸ್ಯೆ ಬಗೆಹರಿಸಲಾಗಿದೆ ಎಂದು ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ಈಶಾನ್ಯ ಪದವೀಧರ ಕ್ಷೇತ್ರದಲ್ಲಿ ಸುರೇಶ್ ಸಜ್ಜನ್ ಹಾಗೂ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ನಿಂಗರಾಜ್ ನಾಮಪತ್ರ ಹಿಂಪಡೆಯಲು ಒಪ್ಪಿದ್ದಾರೆ. ನೈರುತ್ಯ ಪದವೀಧರ ಕ್ಷೇತ್ರದ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಲಾಗುತ್ತಿದೆ ಎಂದರು.

ವಿಧಾನ ಪರಿಷತ್‌ನ ಆರು ಕ್ಷೇತ್ರಗಳಿಗೆ ನಡೆಯುತ್ತಿರುವ ಚುನಾವಣೆಗೆ ಉಸ್ತುವಾರಿಗಳನ್ನು ನೇಮಿಸಲಾಗಿದೆ ಎಂದರು.



ನಗರದ ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಇಸ್ರೊ ಮಾಜಿ ನಿರ್ದೇಶಕ ಶ್ರೀಹರಿ ಶಾಸ್ತ್ರಿ ಅವರನ್ನು ಸನ್ಮಾನಿಸಲಾಯಿತು. ಗೋಕುಲ ಶಿಕ್ಷಣಸಂಸ್ಥೆ, ನಿರ್ದೇಶಕ ಬಿ.ಎಸ್. ರಾಮಪ್ರಸಾದ್, ಉಪಾಧ್ಯಕ್ಷ ಎಂ.ಆರ್. ಸೀತಾರಾಮ್, ವಿಜ್ಞಾನಿ ವಿ.ಕೆ. ಅತ್ರೆ, ಮುಖ್ಯ ಹಣಕಾಸು ಅಧಿಕಾರಿ ಜಿ. ರಾಮಚಂದ್ರ, ಉಪಪ್ರಾಂಶುಪಾಲ ಪ್ರದೀಪ್ ದೀಕ್ಷಿತ್ ಭಾಗವಹಿಸಿದ್ದರು

ಪ್ರತ್ಯೇಕ ಅವಘಡ 6 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಬೆಳಗಾವಿ/ಗದಗ: ಶನಿವಾರ ನಡೆದ ಪ್ರತ್ಯೇಕ ಅವಘಡಗಳಲ್ಲಿ ಆರು ಮಂದಿ ಮೃತಪಟ್ಟಿದ್ದಾರೆ. ಗದಗ ಜಿಲ್ಲೆಯಲ್ಲಿ ರಥದ ಚಕ್ರಕ್ಕೆ ಸಿಲುಕಿ ಇಬ್ಬರು ಮೃತಪಟ್ಟಿದ್ದರೆ, ಕೊಲ್ಲಾಪುರ ಜಿಲ್ಲೆಯ ಬಸ್ತವಾಡೆ ಬಳಿ ನದಿಯಲ್ಲಿ ಮುಳುಗಿ ಬೆಳಗಾವಿ ಜಿಲ್ಲೆಯ ಇಬ್ಬರು ಸೇರಿ ನಾಲ್ವರು ಸತ್ತಿದ್ದಾರೆ.

ರೋಣ ವರದಿ (ಗದಗ ಜಿಲ್ಲೆ): ಇಲ್ಲಿನ ವೀರಭದ್ರೇಶ್ವರ ಜಾತ್ರಾ ಮಹೋತ್ಸವದಲ್ಲಿ ಶನಿವಾರ ರಥದ ಚಕ್ರಕ್ಕೆ ಸಿಲುಕಿ ಇಬ್ಬರು ಮೃತಪಟ್ಟಿದ್ದಾರೆ. ರೋಣ ನಿವಾಸಿ ಮಲ್ಲನಗೌಡ ಬಸವಂತಗೌಡ ಲಿಂಗನಗೌಡ್ರ (51) ಎಂಬುವರು ಮೃತಪಟ್ಟಿದ್ದು, ಇನ್ನೊಬ್ಬರ ಗುರುತು ಪತ್ತೆಯಾಗಿಲ್ಲ. ‘ಜಾತ್ರೆಗೆ ನಿರೀಕ್ಷೆಗೂ ಮೀರಿ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು. ರಥ ಸಾಗುವಾಗ ಅದರ ಚಕ್ರಕ್ಕೆ ಸಿಲುಕಿ ಇಬ್ಬರೂ ಮೃತಪಟ್ಟರು. ಅವರ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ’ ಎಂದು ರೋಣ ಠಾಣೆ ಪೊಲೀಸರು ತಿಳಿಸಿದ್ದಾರೆ.

ನಾಲ್ವರ ಸಾವು (ಬೆಳಗಾವಿ ವರದಿ): ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಕಾಗಲ್ ತಾಲ್ಲೂಕಿನ ಬಸ್ತವಾಡೆ ಬಳಿ ಶುಕ್ರವಾರ ವೇದಗಂಗಾ ನದಿಯಲ್ಲಿ ಮುಳುಗಿ ನಾಲ್ವರು ಮೃತಪಟ್ಟಿದ್ದಾರೆ.

‘ಕೊಲ್ಹಾಪುರದ ಜಿತೇಂದ್ರ ವಿಲಾಸ ಲೋಕರೆ (36), ಸವಿತಾ ಅಮರ ಕಾಂಬಳೆ (27), ಅಥಣಿಯ ರೇಷ್ಮಾ ದಿಲೀಪ ಯಳಮಲ್ಲೆ (34) ಮತ್ತು ಹರ್ಷ ದಿಲೀಪ ಯಳಮಲ್ಲೆ (17) ಮೃತರು. ಜಾತ್ರೆಗೆ ಬಂದಿದ್ದ ನಾಲ್ವರು ಈಜಲೆಂದು ವೇದಗಂಗಾ ನದಿಯಲ್ಲಿ ಇಳಿದಿದ್ದರು. ಮುಳುಗುತ್ತಿದ್ದ ಹರ್ಷ ದಿಲೀಪ ರಕ್ಷಣೆಗೆ ಮೂವರು ಮುಂದಾದಾಗ, ದುರ್ಘಟನೆ ನಡೆದಿದೆ.

ನಿಯಮಾವಳಿ ಕೃಷಿಕರಿಗೆ ಅನ್ವಯ ದೊರೆಯದ ನೆರವು • ಬರದಿಂದ ಕಂಗೆಟ್ಟಿದ್ದವರ ಮೇಲೆ ಮತ್ತೊಂದು ಬರೆ

ಬಿತ್ತನೆ ಮಾಡದ ರೈತರಿಗಿಲ್ಲ ಪರಿಹಾರ!

• ಸಿದ್ದಯ್ಯ ಹಿರೇಮಠ



ಬರ ಪರಿಹಾರ ಮೊತ್ತ ಪಾವತಿಯಾಗದ್ದರಿಂದ ದಾವಣಗೆರೆ ಜಿಲ್ಲೆಯ ಜಗಳೂರಿನ ತಹಶೀಲ್ದಾರ್ ಕಚೇರಿಯಲ್ಲಿ ನೂರಾರು ರೈತರು ಮಾಹಿತಿ ಪಡೆಯಲು ಮುಗಿಬಿದ್ದಿರುವುದು – ಪ್ರಜಾವಾಣಿ ಚಿತ್ರ/ ಡಿ.ಶ್ರೀನಿವಾಸ್

ಪ್ರಜಾವಾಣಿ ವಿಶೇಷ

ದಾವಣಗೆರೆ: ಮಳೆ ಕೊರತೆಯಿಂದಾಗಿ 'ಬರಪೀಡಿತ' ಎಂದು ಘೋಷಿಸಿದ್ದ ಪ್ರದೇಶಗಳಲ್ಲಿ ಬಿತ್ತನೆಯನ್ನೇ ಮಾಡದ ರೈತರನ್ನು ಬರ ಪರಿಹಾರದ ಫಲಾನುಭವಿಗಳ ಪಟ್ಟಿಯಿಂದ ಹೊರಗಿಡಲಾಗಿದ್ದು, ಬರದಿಂದ ತತ್ತರಿಸಿದ್ದ ರೈತರ ಗಾಯದ ಮೇಲೆ ಮತ್ತೊಂದು ಬರೆ ಎಳೆದಂತಾಗಿದೆ.

ಕಳೆದ ವರ್ಷದ ಮುಂಗಾರು ಹಂಗಾಮಿನಲ್ಲಿ ವಾಡಿಕೆಯಷ್ಟು ಮಳೆ ಸುರಿಯದೇ ಬರ ಆವರಿಸಿದ್ದ ಕಡೆ ಬೆಳೆ ನಷ್ಟ ಅನುಭವಿಸಿದ್ದ ರೈತರ ಖಾತೆಗೆ ಮೇ ಮೊದಲ ವಾರದಲ್ಲಿ ಸರ್ಕಾರ ಬರ ಪರಿಹಾರ ಮೊತ್ತವನ್ನು ಜಮೆ ಮಾಡಿದೆ. ಆದರೆ, ಮಳೆ ಸುರಿಯದ ಕಾರಣದಿಂದ ಬಿತ್ತನೆಯನ್ನೇ ಮಾಡದ ರಾಜ್ಯದ ಸಾವಿರಾರು ರೈತರನ್ನು ಪರಿಹಾರದ ಫಲಾನುಭವಿಗಳ ಪಟ್ಟಿಯಿಂದ ಈಗ ಹೊರಗಿಡಲಾಗಿದೆ.

ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ನಿಯಮಾವಳಿ ಪ್ರಕಾರ, ರೈತರು ಜಮೀನಿನಲ್ಲಿ ಬಿತ್ತನೆ ಮಾಡಿದ ನಂತರ ಅತಿವೃಷ್ಟಿ ಅಥವಾ ಅನಾವೃಷ್ಟಿಯಿಂದ ಬೆಳೆಹಾನಿ ಆದರೆ ಮಾತ್ರ ಪರಿಹಾರಕ್ಕೆ ಪರಿಗಣಿಸಲಾಗುತ್ತದೆ. ಈ ಸಂಬಂಧ ನಡೆಸಲಾಗುವ ಬೆಳೆ ಸಮೀಕ್ಷೆ ವೇಳೆ ಬಿತ್ತಿದ್ದನ್ನು ಖಚಿತಪಡಿಸಿಕೊಂಡು ಪರಿಹಾರಕ್ಕೆ ಆಯ್ಕೆ ಮಾಡಲಾಗುತ್ತದೆ. ಆದರೆ, ಮಳೆಯೇ ಸುರಿಯದ್ದರಿಂದ ಬಿತ್ತನೆ ಮಾಡಲು ಆಗದೇ ನಷ್ಟಕ್ಕೆ ಒಳಗಾದ ರೈತರು ಇದೀಗ ಪರಿಹಾರವೂ ದೊರೆಯದೆ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಕಳೆದ ವರ್ಷ ಹಿಂಗಾರು ಹಂಗಾಮಿನಲ್ಲೂ ಮಳೆ ಆಗದ್ದರಿಂದ ಅನೇಕ ರೈತರು ಬಿತ್ತನೆ ಮಾಡುವ ಗೋಜಿಗೆ ಹೋಗಿಲ್ಲ. ಹಿಂಗಾರು ಹಂಗಾಮಿನ ಬರ ಪರಿಹಾರ ವಿತರಣೆ ಸಂದರ್ಭವೂ ಅವರಿಗೆ ನಿಯಮಾವಳಿಗಳ ಪ್ರಕಾರ ಪರಿಹಾರ ದೊರೆಯುವ ಸಾಧ್ಯತೆಗಳು ಇಲ್ಲ.

ಇದೀಗ ರಾಜ್ಯದ ವಿವಿಧೆಡೆ ಮುಂಗಾರುಪೂರ್ವ ಮಳೆ ಆರಂಭವಾಗಿದೆ. ಬಹುತೇಕ ರೈತರು ಭೂಮಿ ಹದಗೊಳಿಸಿ ಮುಂಗಾರು ಹಂಗಾಮಿನ ಬಿತ್ತನೆಗೆ ಸಿದ್ಧತೆ ನಡೆಸಿದ್ದಾರೆ. ಬಿತ್ತನೆಬೀಜ, ರಸಗೊಬ್ಬರ ಖರೀದಿಗೆ ಹಾಗೂ ಕೃಷಿ ಕೂಲಿಕಾರರಿಗೆ ಸಂಬಳ ನೀಡಲು ಸರ್ಕಾರ ಸಂದಾಯ ಮಾಡಿರುವ ಬರ ಪರಿಹಾರದಿಂದ ರೈತರಿಗೆ ನೆರವಾಗಿದೆ. ಆದರೆ, ಪರಿಹಾರ ದೊರೆಯದ ರೈತರು ಬಿತ್ತನೆಗೆ ಹಣವಿಲ್ಲದೇ ಸಾಲಕ್ಕೆ ಕೈಚಾಚುವ ಸ್ಥಿತಿ ನಿರ್ಮಾಣವಾಗಿದೆ.

ಮಳೆಯಾಶ್ರಿತ ಪ್ರತಿ ಹೆಕ್ಟೇರ್ ಭೂಮಿಗೆ ₹ 8,500, ನೀರಾವರಿಯ ಭೂಮಿಗೆ ₹ 17,000ದಂತೆ ಪ್ರತಿ ರೈತರಿಗೆ ಗರಿಷ್ಠ ಎರಡು ಹೆಕ್ಟೇರ್‌ವರೆಗೆ ಪರಿಹಾರ ನೀಡಲಾಗಿದೆ. ಜಿಲ್ಲೆಯ ಜಗಳೂರು ತಾಲ್ಲೂಕೊಂದರಲ್ಲೇ 4,200ಕ್ಕೂ ಹೆಚ್ಚು ರೈತರಿಗೆ ತಾಂತ್ರಿಕ ಕಾರಣ ಮುಂದಿರಿಸಿ ಪರಿಹಾರದ ಹಣ ಜಮಾ ಮಾಡಲಾಗಿಲ್ಲ. ತೀವ್ರ ಗೊಂದಲಕ್ಕೆ ಒಳಗಾದ ರೈತರು ನಿತ್ಯ ತಹಶೀಲ್ದಾರ್ ಕಚೇರಿಗೆ ಎಡತಾಕುತ್ತಿದ್ದಾರೆ.

'ಬಿತ್ತನೆ ಮಾಡಿದವರಿಗೆ ಮಾತ್ರ ಪರಿಹಾರ ನೀಡಲಾಗಿದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಆದರೆ, ಕೆಲವು ಗ್ರಾಮಗಳಲ್ಲಿ ಬಿತ್ತನೆ ಮಾಡದ ರೈತರಿಗೂ ಪರಿಹಾರ ದೊರೆತಿದೆ. ಬಿತ್ತನೆ ಮಾಡದ ಬಹುತೇಕ ರೈತರು ಪರಿಹಾರಕ್ಕೆ ಅರ್ಹರಾಗಿಲ್ಲ. ಮತ್ತೆ ಬಿತ್ತನೆ ಮಾಡಲು ನಮಗೆ ಹಣಕಾಸಿನ ಸಮಸ್ಯೆ ಎದುರಾಗಿದೆ' ಎಂದು ಜಗಳೂರು ತಾಲ್ಲೂಕಿನ ಭರಮಸಮುದ್ರ, ಹಿರೇಮಲ್ಲನಹೊಳೆ, ಸೊಕ್ಕೆ ಮತ್ತಿತರ ಗ್ರಾಮಗಳ ರೈತರು 'ಪ್ರಜಾವಾಣಿ'ಗೆ ತಿಳಿಸಿದರು.




ರಾಜ್ಯದ ವಿವಿಧೆಡೆ ಕೆಲವು ಬೆಳೆಗಳನ್ನು ಮಾತ್ರ ಪರಿಹಾರಕ್ಕೆ ಪರಿಗಣಿಸಲಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ ಮೆಕ್ಕೆಜೋಳ, ರಾಗಿ ಬೆಳೆಗಳಿಗೆ ಮಾತ್ರ ಪರಿಹಾರ ನೀಡಿ, ಜೋಳ ಹಾಗೂ ಹತ್ತಿ ಬೆಳೆಯನ್ನು ಪರಿಗಣಿಸಲಾಗಿಲ್ಲ. ಇದರಿಂದ ಅನೇಕ ರೈತರಿಗೆ ಅನ್ಯಾಯವಾಗಿದೆ
ಬಿ.ಎಂ.ಸತೀಶ್ ಕೊಳೇನಹಳ್ಳಿ, ರೈತ ಮುಖಂಡ



ನಿಯಮಾವಳಿ ಪ್ರಕಾರ ಬಿತ್ತನೆ ಮಾಡಿದ ರೈತರಿಗೆ ಮಾತ್ರ ಬೆಳೆ ನಷ್ಟ ಪರಿಹಾರ ನೀಡಲಾಗುತ್ತಿದೆ. ಬಿತ್ತನೆ ಮಾಡದವರಿಗೂ ಪರಿಹಾರ ನೀಡಲು ನಿಯಮಾವಳಿ ಬದಲಾವಣೆ ಅಗತ್ಯವಿದೆ
ಶ್ರೀನಿವಾಸ್ ಚಿಂತಾಲ್, ಜಂಟಿ ನಿರ್ದೇಶಕ, ಕೃಷಿ ಇಲಾಖೆ



ಜಲಾಶಯಗಳಲ್ಲಿ ನೀರಿನ ಸಂಗ್ರಹ ಇಲ್ಲದ್ದರಿಂದ ಅನೇಕ ರೈತರಿಗೆ ಬಿತ್ತನೆ ಮಾಡದಂತೆ ಸರ್ಕಾರವೇ ಸೂಚಿಸಿತ್ತು. ಬಿತ್ತನೆ ಮಾಡದವರಿಗೆ ಪರಿಹಾರ ನೀಡದಿರುವುದು ಸರ್ಕಾರದ ಇಬ್ಬಗೆ ನೀತಿಯನ್ನು ತೋರುತ್ತದೆ
ಕುರುಬೂರು ಶಾಂತಕುಮಾರ್, ರಾಜ್ಯ ರೈತ ಸಂಘಗಳ ಒಕ್ಕೂಟದ ಅಧ್ಯಕ್ಷ



ಬರ ಹಾಗೂ ಆರ್ಥಿಕ ಸಮಸ್ಯೆಯಿಂದ ಕಳೆದ ವರ್ಷ ನಾನು ಬಿತ್ತನೆ ಮಾಡಲಿಲ್ಲ. ಇಂದಿಗೂ ನನಗೆ ಬರ ಪರಿಹಾರ ಪಾವತಿಯಾಗಿಲ್ಲ
ಸಿದ್ದಣ್ಣ ತೇಜಿ, ರೈತ, ಹುಣಸಿಕಟ್ಟಿ, ನರಗುಂದ ತಾಲ್ಲೂಕು, ಗದಗ ಜಿಲ್ಲೆ

ಆಗಸ್ಟ್ ನಂತರ ಸಮೀಕ್ಷೆ: ಮುಂಗಾರು ಹಂಗಾಮಿನಲ್ಲಿ ಅನೇಕ ರೈತರು ಬಿತ್ತನೆ ಮಾಡಿಲ್ಲ. ಇನ್ನು ಕೆಲವು ರೈತರು ಬಿತ್ತಿದ ಬೆಳೆ ಮಳೆ ಕೊರತೆಯಿಂದ ಒಣಗಿದ ಕಾರಣ ಅಳಿಸಿ ಹಾಕಿ, ಅಲ್ಪಾವಧಿ ಬೆಳೆ ಬೆಳೆಯಬೇಕೆಂದು ಮತ್ತೆ ಮಳೆಗಾಗಿ ಕಾದರೂ ಪ್ರಯೋಜನವಾಗಲಿಲ್ಲ. ಸರ್ಕಾರ ಮಳೆಯ ಅಭಾವ ಅವಲೋಕಿಸಿ ಆಗಸ್ಟ್ 19ರಿಂದ ರಾಜ್ಯದ ಅನೇಕ ತಾಲ್ಲೂಕುಗಳನ್ನು ಹಂತಹಂತವಾಗಿ 'ಬರಪೀಡಿತ' ಎಂದು ಘೋಷಿಸಿತ್ತು. ಘೋಷಣೆಯ ನಂತರವಷ್ಟೇ ಕೃಷಿ ಇಲಾಖೆಯು ಸಮೀಕ್ಷೆಗಾಗಿ ನಿಯೋಜಿಸಿದ್ದ ಖಾಸಗಿ ನಿವಾಸಿಗಳು ಜಮೀನುಗಳಿಗೆ ತೆರಳಿ ಬೆಳೆ ಸಮೀಕ್ಷೆ ನಡೆಸಿದ್ದಾರೆ.

ಆದರೆ, ಅವರು ಸಮೀಕ್ಷೆಗೆ ತೆರಳಿದಾಗ ಬೆಳೆ ಒಣಗಿಹೋಗಿ ಅಥವಾ ತೆಗೆದು ಹಾಕಿದ್ದರಿಂದ ಬಿತ್ತನೆ ಮಾಡಿದ ಕುರುಹೂ ಇರಲಿಲ್ಲ. ಅಂಥ ಜಮೀನುಗಳಲ್ಲೂ 'ಬಿತ್ತನೆ ಆಗಿಲ್ಲ' ಎಂದೇ ನಮೂದಿಸಿದ್ದರಿಂದ ಪರಿಹಾರಕ್ಕೆ ಅರ್ಹರಾಗಿದ್ದ ರೈತರೂ ವಂಚಿತರಾಗಿದ್ದಾರೆ.

'ನಾನು ಬಿತ್ತನೆಗಾಗಿ ಟ್ರ್ಯಾಕ್ಟರ್ ಮೂಲಕ 4 ಎಕರೆ ಭೂಮಿ ಹದಗೊಳಿಸಿದ್ದೆ. ಪ್ರತಿ ಎಕರೆಗೆ 4 ಲೋಡ್‌ನಂತೆ ಕೊಟ್ಟಿಗೆ ಗೊಬ್ಬರ ಖರೀದಿಸಿ ಭೂಮಿಗೆ ಹಾಕಿದೆ. ಇದಕ್ಕಾಗಿ ₹40,000 ಖರ್ಚಾಗಿತ್ತು. ಮಳೆಯೇ ಸುರಿಯದ್ದರಿಂದ ಬಿತ್ತನೆ ಮಾಡಲಿಲ್ಲ. ಬಿತ್ತನೆ ಮಾಡಿದವರಿಗೆ ಮಾತ್ರವಲ್ಲ ನನಗೂ ನಷ್ಟವಾಗಿದೆ. ಸರ್ಕಾರ ನಮ್ಮಂಥ ರೈತರನ್ನು ಪರಿಹಾರದಿಂದ ಹೊರಗಿಟ್ಟಿದ್ದು ನ್ಯಾಯಯುತವೇ' ಎಂದು ಜಗಳೂರು ಗೊಲ್ಲರಹಟ್ಟಿ ಗ್ರಾಮದ ರೈತ ಹರೀಶ್ ರೆಡ್ಡಿ ಪ್ರಶ್ನಿಸಿದರು.

ಬೆಳೆ ಸಮೀಕ್ಷೆಯಿಂದ ಮಾಹಿತಿ: 'ಜಮೀನು ಹೊಂದಿರುವ ಎಲ್ಲ ರೈತರೂ ಬಿತ್ತನೆ ಮಾಡುವುದಿಲ್ಲ. ಕೆಲವರು ಕೃಷಿಯೇತರ ಚಟುವಟಿಕೆ ಉದ್ದೇಶಕ್ಕೆಂದೇ ಜಮೀನನ್ನು ಖಾಲಿ ಬಿಟ್ಟಿರುತ್ತಾರೆ. ಅಂಥವರಿಗೂ ಪರಿಹಾರ ಮೊತ್ತ ಪಾವತಿಯಾಗುವುದನ್ನು ತಪ್ಪಿಸಲೆಂದೇ ಸರ್ಕಾರ 2017ರಿಂದ ಪ್ರತ್ಯೇಕವಾಗಿ ಬೆಳೆ ಸಮೀಕ್ಷೆ ದತ್ತಾಂಶದ ಮೂಲಕ ಮಾಹಿತಿ ಸಂಗ್ರಹಕ್ಕೆ ಚಾಲನೆ ನೀಡಿದೆ. ಬೆಳೆ ಸಮೀಕ್ಷೆಗಾಗಿ ಪ್ರತ್ಯೇಕ ಸಾಫ್ಟ್‌ವೇರ್ ಸಿದ್ಧಪಡಿಸಲಾಗಿದೆ. ದತ್ತಾಂಶ ಮಾಹಿತಿ ಸಂಗ್ರಹಕ್ಕಾಗಿ ಸಿಬ್ಬಂದಿ ನಿಯೋಜಿಸಲಾಗುತ್ತದೆ' ಎಂದು ಕೃಷಿ ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

ಇದಕ್ಕಾಗಿ ಕೋಟ್ಯಂತರ ರೂಪಾಯಿ ಖರ್ಚು ಮಾಡಲಾಗಿದೆ. ಆದರೆ, ಇದರಲ್ಲೂ ಅನೇಕ ನ್ಯೂನತೆಗಳಿವೆ. ಲೋಪದೋಷ ಸರಿಪಡಿಸಿದಲ್ಲಿ ಅರ್ಹ ಫಲಾನುಭವಿಗಳೂ ಪರಿಹಾರದಿಂದ ವಂಚಿತರಾಗದಂತೆ ತಡೆಯಬಹುದಾಗಿದೆ. ಕೃಷಿ ಇಲಾಖೆ ನಿಯೋಜಿಸಿದ ಸಿಬ್ಬಂದಿ ಪ್ರತಿ ಜಮೀನಿಗೆ ಭೇಟಿ ನೀಡಿ ಸಮೀಕ್ಷೆ ನಡೆಸಬೇಕಿದೆ. ಬದಲಿಗೆ, ಜಿಪಿಎಸ್ ಆಧರಿತ ಸಮೀಕ್ಷೆಗಳು ನಡೆದಲ್ಲಿ ಖಚಿತ ಮಾಹಿತಿ ದೊರೆಯಲಿದೆ ಎಂಬುದು ರೈತರ ಸಲಹೆಯಾಗಿದೆ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸುವುದು ಕಡ್ಡಾಯ. ಆಧಾರ್/ಪ್ಯಾನ್ ಹೊಂದಿಲ್ಲದ ದಾನಿಗಳು ತಾವು ನೆಲಸಿರುವ ದೇಶದಲ್ಲಿನ ತೆರಿಗೆದಾತರ ಗುರುತಿನ ಸಂಖ್ಯೆ/ಪಾಸ್‌ಪೋರ್ಟ್ ಸಂಖ್ಯೆ/ಮತದಾರರ ಗುರುತಿನ ಸಂಖ್ಯೆ/ಚಾಲನಾ ಪರವಾನಗಿ ಸಂಖ್ಯೆ ಇದರಲ್ಲಿ ಯಾವುದಾದರೂ ಒಂದನ್ನು ನೀಡುವುದು ಕಡ್ಡಾಯ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023-24ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ '**ಶೈಕ್ಷಣಿಕ ನೆರವಿಗೆ ಅರ್ಜಿ**' ಎಂದು ಬರೆಯಬೇಕು.

'ಪ್ರಜಾವಾಣಿ'ಗೆ ಧನ್ಯವಾದ



'ಪ್ರಜಾವಾಣಿ' ನೀಡಿದ ವಿದ್ಯಾರ್ಥಿವೇತನ ನನಗೆ ತುಂಬಾ ಉಪಯುಕ್ತವಾಯಿತು. ಅಗತ್ಯ ಪುಸ್ತಕ, ಬಸ್‌ಪಾಸ್‌ಗೆ ಈ ಹಣವನ್ನು ಬಳಸಿಕೊಂಡೆ. ಕಷ್ಟಕಾಲದಲ್ಲಿ ನೆರವಾದ ಪತ್ರಿಕೆಗೆ ತುಂಬು ಹೃದಯದ ಧನ್ಯವಾದಗಳು
ನಿಖಿಲ್ ಕುಮಾರ್, ಕೊಯ್ಯೂರು, ದಕ್ಷಿಣ ಕನ್ನಡ

ಕೃಷಿಕಾರ್ಯ ಚುರುಕು: ದಾವಣಗೆರೆ, ಕಲಬುರಗಿ ಸೇರಿ ವಿವಿಧೆಡೆ ವರ್ಷಧಾರೆ

ಕೊಡಗು, ಹಾಸನದಲ್ಲಿ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಭಾಗದ ಕೊಡಗು ಹಾಗೂ ಹಾಸನ ಜಿಲ್ಲೆಯಲ್ಲಿ ಶನಿವಾರ ಭಾರಿ ಮಳೆ ಸುರಿದಿದೆ. ಮೈಸೂರು, ಚಾಮರಾಜನಗರದಲ್ಲಿ ಸಾಧಾರಣ ಮಳೆಯಾಗಿದೆ.

ಶುಕ್ರವಾರ ರಾತ್ರಿ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿ 11 ಸೆಂ.ಮೀ, ತುರುವೇಕೆರೆ ತಾಲ್ಲೂಕಿನ ದಬ್ಬೇಘಟ್ಟ ಹೋಬಳಿಯಲ್ಲಿ 9.6 ಸೆಂ.ಮೀ ಮಳೆಯಾಗಿದೆ.

ಕೊಡಗು ಜಿಲ್ಲೆಯ ಕುಶಾಲನಗರ ತಾಲ್ಲೂಕಿನ ವಾಲ್ನೂರು ತ್ಯಾಗತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 7 ಸೆಂ.ಮೀ, ಹಾಸನ ಜಿಲ್ಲೆಯ ಚನ್ನರಾಯಪಟ್ಟಣದಲ್ಲಿ 6.8 ಸೆಂ.ಮೀ, ಹೊಳೆನರಸೀಪುರದಲ್ಲಿ 6.1 ಸೆಂ.ಮೀ, ನುಗ್ಗೇಹಳ್ಳಿಯಲ್ಲಿ 5.2 ಸೆಂ.ಮೀ, ಶ್ರವಣಬೆಳಗೊಳದಲ್ಲಿ 5 ಸೆಂ.ಮೀ ಹಾಗೂ ಕೇರಳ ಗಡಿ ಭಾಗ ಕುಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 4 ಸೆಂ.ಮೀ ಮಳೆಯಾಗಿದೆ.

ಮಡಿಕೇರಿ ನಗರದಲ್ಲಿ ಎರಡೂವರೆ ಗಂಟೆ ನಿರಂತರವಾಗಿ ಮಳೆ ಸುರಿಯಿತು. ಪೊನ್ನಂಪೇಟೆ ಸೇರಿದಂತೆ ತಾಲ್ಲೂಕಿನ ಕಿರುಗೂರು, ಮತ್ತೂರು, ನಲ್ಲೂರು



ಮಡಿಕೇರಿಯಲ್ಲಿ ಶನಿವಾರ ಸುರಿದ ಭಾರಿ ಮಳೆಗೆ ರಸ್ತೆಯಲ್ಲಿ ತುಂಬಿ ಹರಿಯುತ್ತಿದ್ದ ನೀರಿನ ಮಧ್ಯೆ ಆಟೊವೊಂದು ಸಂಚರಿಸಿತು – ಪ್ರಜಾವಾಣಿ ಚಿತ್ರ/ರಂಗಸ್ವಾಮಿ

ಕುಂದ ಭಾಗಗಳಲ್ಲೂ ಮಳೆ ಬಿರುಸಿನಿಂದ ಸುರಿದಿದೆ. ಮಡಿಕೇರಿ ನಗರದಲ್ಲಿ ಕನ್ನಿಕಾ ಬಡಾವಣೆಯ ಸಮೀಪದ ರಾಜಕಾಲುವೆಯ ಭಾಗಕ್ಕೆ ರಸ್ತೆಯ ಒಂದು ಬದಿಯ ಮಣ್ಣು ಕುಸಿದಿದೆ.

ಹಾಸನ ಜಿಲ್ಲೆಯ ವಿವಿಧೆಡೆ ಶನಿವಾರ ಮಧ್ಯಾಹ್ನ ಉತ್ತಮ ಮಳೆಯಾಗಿದ್ದು, ಹಾಸನ ನಗರ, ಅರಸೀಕೆರೆ, ಚನ್ನರಾಯಪಟ್ಟಣ, ಸಕಲೇಶಪುರ, ಬೇಲೂರಿನಲ್ಲಿ ಶುಕ್ರವಾರ ಸಂಜೆಯೂ ಮಳೆಯಾಗಿತ್ತು.

ಚಾಮರಾಜನಗರ ಜಿಲ್ಲಾ ಕೇಂದ್ರ, ಆಲೂರು, ಕೂಡ್ಲೂರು, ಮಾದಾಪುರ, ಹರದನಹಳ್ಳಿ, ಸಂತೇಮರಹಳ್ಳಿ ಹೋಬಳಿ, ಯಳಂದೂರು ತಾಲ್ಲೂಕು ಹಾಗೂ ಮೈಸೂರು ಸುತ್ತಮುತ್ತ ಸಾಧಾರಣ ಮಳೆಯಾಗಿದೆ.

ದಾವಣಗೆರೆ ವರದಿ: ನಗರ ಸೇರಿ, ಜಿಲ್ಲೆಯ ಕೆಲವೆಡೆ ಶನಿವಾರವೂ ಮಳೆಯಾಗಿದೆ. ಮಲೇಬೆನ್ನೂರಿನಲ್ಲಿ ಬಿರುಸಿನ ಹಾಗೂ ನ್ಯಾಮತಿ, ಚನ್ನಗಿರಿಯಲ್ಲಿ ಸ್ವಲ್ಪ ಮಳೆ ಬಿದ್ದಿದೆ. ಕೃಷಿ ಚಟುವಟಿಕೆಗಳು ಗರಿಗೆದರಿವೆ. ಶುಕ್ರವಾರ ರಾತ್ರಿ ಚನ್ನಗಿರಿ ತಾಲ್ಲೂಕಿನ ದೇವರಹಳ್ಳಿ ಹಾಗೂ ಕೆರೆಬಿಳಚಿಯಲ್ಲಿ ತಲಾ 1 ಸೆಂ.ಮೀ, ಕತ್ತಲಗೆರೆಯಲ್ಲಿ 2 ಸೆಂ.ಮೀ. ತ್ಯಾವಣಿಗೆಯಲ್ಲಿ 2.1 ಸೆಂ.ಮೀ. ಹಾಗೂ ಜೋಳದಹಾಳ್‌ನಲ್ಲಿ 4.0 ಸೆಂ.ಮೀ. ಮಳೆ ಸುರಿದಿದೆ.

ಶಿವಮೊಗ್ಗ ಜಿಲ್ಲೆಯ ಕಾರ್ಗಲ್‌ನಲ್ಲಿ ಶನಿವಾರ ಗುಡುಗು ಸಹಿತ ಮಳೆ ಸುರಿಯಿತು. ಚಿತ್ರದುರ್ಗ ಜಿಲ್ಲೆಯ ಚಿಕ್ಕಜಾಜೂರು ಸಮೀಪದ ಸಾಸಲುಹಳ್ಳ ಗ್ರಾಮದಲ್ಲಿ 20 ನಿಮಿಷಗಳವರೆಗೆ ಜೋರು ಮಳೆ ಸುರಿದಿದೆ.

ಕಲಬುರಗಿ ವರದಿ: ಕಲಬುರಗಿ ನಗರ ಸೇರಿದಂತೆ ಜಿಲ್ಲೆಯ ಚಿಂಚೋಳಿ, ಕಾಳಗಿ ತಾಲ್ಲೂಕಿನಲ್ಲಿ ಶನಿವಾರ ಕೆಲ ಹೊತ್ತು ಬಿರುಸಿನ ಮಳೆಯಾಗಿದೆ. ಚಿಂಚೋಳಿ, ಚಂದಾಪುರ ಹಾಗೂ ಹೊರವಲಯದಲ್ಲಿ ಮಳೆಯ ಆರ್ಭಟ ಜೋರಾಗಿತ್ತು.

ಕಾಳಗಿ ತಾಲ್ಲೂಕಿನ ಮಾಡಬೂಳ, ಕೋರವಾರ, ಮಂಗಲಗಿ, ಕೊಡದೂರ ಸೇರಿದಂತೆ ಇತರೆಡೆ ಅಧಿಕ ಮಳೆ ಸುರಿಯಿತು. ಸಿಡಿಲು ಬಡಿದು ಕಾಳಗಿ ಸಮೀಪದ ಭರತನೂರ ಗ್ರಾಮದಲ್ಲಿ 21 ಮೇಕೆಗಳು ಮೃತಪಟ್ಟಿವೆ.

ಚಿಕ್ಕಬಳ್ಳಾಪುರ ವರದಿ: ಜಿಲ್ಲಾ ಕೇಂದ್ರ ಹಾಗೂ ಜಿಲ್ಲೆಯ ವಿವಿಧೆಡೆ ಅರ್ಧ ತಾಸಿಗೂ ಹೆಚ್ಚು ಅವಧಿ ಮಳೆಯಾಯಿತು. ಶನಿವಾರ ಸುರಿದ ಮಳೆಯು ಜನರ ನಿರೀಕ್ಷೆ ಗರಿಗೆದರುವಂತೆ ಮಾಡಿತು.

ಚಿಕ್ಕಬಳ್ಳಾಪುರದ ಬಿ.ಬಿ ರಸ್ತೆ, ಎಂ.ಜಿ ರಸ್ತೆಯಲ್ಲಿ ಸೇರಿದಂತೆ ಪ್ರಮುಖ ರಸ್ತೆಗಳು ಮಳೆ ನೀರಿನಿಂದ ಆವೃತವಾಗಿದ್ದದ್ದು, ವ್ಯಾಪಾರ ಚಟುವಟಿಕೆ ಮೇಲೆ ಪರಿಣಾಮ ಉಂಟಾಯಿತು.

ಸಿಡಿಲು ಬಡಿದು ಇಬ್ಬರ ಸಾವು

ಶಿರಸಿ: ತಾಲ್ಲೂಕಿನ ಬನವಾಸಿಯಲ್ಲಿ ಜಯಂತಿ ಪ್ರೌಢಶಾಲೆ ಸಮೀಪ ಶನಿವಾರ ಸಂಜೆ ಕ್ರಿಕೆಟ್ ಆಡುವಾಗ, ಸಿಡಿಲು ಬಡಿದು ಸಾಜಿದ್ ಅಷ್ಫಾಕ್ ಅಲಿ ಶೇಖ್ (17) ಎಂಬ ಬಾಲಕ ಮೃತಪಟ್ಟಿದ್ದಾನೆ.

'ಸಿಡಿಲಿನ ಅಬ್ಬರಕ್ಕೆ ಹೆದರಿ ಸ್ನೇಹಿತರು ಓಡಿದರು. ಸಾಜಿದ್ ಅಲ್ಲಿಯೇ ಕುಸಿದು ಬಿದ್ದ. ಆತನನ್ನು ತಕ್ಷಣವೇ ಶಿರಸಿಯ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆತ ಮೃತಪಟ್ಟಿರುವುದನ್ನು ವೈದ್ಯರು ದೃಢಪಡಿಸಿದರು' ಎಂದು ಬನವಾಸಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಅಳ್ನಾವರ (ಧಾರವಾಡ ಜಿಲ್ಲೆ): ಸಮೀಪದ ಹೂಲಿಕೇರಿ ಕೆರೆಯಲ್ಲಿ ಮೀನು ಹಿಡಿಯಲು ಹೋಗಿದ್ದ ಸಕಿರ ಮೊಹಮ್ಮದ್ ಸಾಬ್ ಶಹಪೂರಿ (55) ಸಿಡಿಲು ಬಡಿದು ಮೃತಪಟ್ಟಿದ್ದಾರೆ.

'ಖಾನಾಪುರ ತಾಲ್ಲೂಕಿನ ಹೊಸ ಲಿಂಗನಮಠ ಗ್ರಾಮದ ಸಕಿರ ಮೊಹಮ್ಮದ್ ಅವರು ಸ್ನೇಹಿತರೊಂದಿಗೆ ಮೀನು ಹಿಡಿಯಲು ಹೋಗಿದ್ದರು. ಜೋರಾಗಿ ಮಳೆ ಸುರಿಯತೊಡಗಿದ ಕೂಡಲೇ ಸ್ನೇಹಿತರು ಮನೆಗೆ ಮರಳಿದರು. ಆದರೆ, ಕೆರೆ ಬಳಿಯೇ ಉಳಿದಿದ್ದ ಸಕಿರ ಅವರಿಗೆ ಸಿಡಿಲು ಬಡಿದಿದೆ. ಅವರಿಗೆ ಪತ್ನಿ, ಪುತ್ರ ಮತ್ತು ಇಬ್ಬರು ಪುತ್ರಿಯರು ಇದ್ದಾರೆ' ಎಂದು ಸ್ಥಳೀಯರು ತಿಳಿಸಿದ್ದಾರೆ.



ತೊಟ್ಟಿಲ ಸೇವೆ...

ಕಲಬುರಗಿಯ ಪುಟಾಣಿ ಗಲ್ಲಿಯ ನಗರೇಶ್ವರ ದೇವಸ್ಥಾನದಲ್ಲಿ ಶನಿವಾರ ಆರ್ಯ ವೈಶ್ಯ ಸಮಾಜ ವತಿಯಿಂದ ವಾಸವಿ ಜಯಂತಿ ಅಂಗವಾಗಿ ವಾಸವಿ ಮಾತೆಗೆ ತೊಟ್ಟಿಲ ಸೇವೆ ಕಾರ್ಯಕ್ರಮ ನಡೆಯಿತು

– ಪ್ರಜಾವಾಣಿ ಚಿತ್ರ

ತಾಯಿಯ ಶವದ ಜೊತೆಯಲ್ಲೇ 3–4 ದಿನ ಕಳೆದಿದ್ದ ಪುತ್ರಿ ಸಾವು

ಪ್ರಜಾವಾಣಿ ವಾರ್ತೆ

ಕುಂದಾಪುರ (ಉಡುಪಿ): ತಾಯಿಯ ಶವದೊಂದಿಗೆ ಅನ್ನ ನೀರು ಇಲ್ಲದೆ ಮೂರ್ನಾಲ್ಕು ದಿನ ಕಳೆದು ತೀವ್ರ ಅಸ್ವಸ್ಥಗೊಂಡಿದ್ದ ಬುದ್ಧಿಮಾಂದ್ಯ ಮಗಳು ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟ ಘಟನೆ ಶನಿವಾರ ಕುಂದಾಪುರ ತಾಲ್ಲೂಕಿನ ಮೂಡುಗೋಪಾಡಿಯ ದಾಸನಹಾಡಿಯಲ್ಲಿ ನಡೆದಿದೆ.

ತಾಯಿ ಜಯಂತಿ ಶೆಟ್ಟಿ (62) ಹಾಗೂ ಪುತ್ರಿ ಪ್ರಗತಿ ಶೆಟ್ಟಿ (32) ಮೃತರು.

ತೀವ್ರ ರಕ್ತದೊತ್ತಡ ಹಾಗೂ ಮಧುಮೇಹ ಕಾಯಿಲೆಯಿಂದ ಬಳಲುತ್ತಿದ್ದ ಜಯಂತಿ ಶೆಟ್ಟಿ ಅವರು, ಹುಟ್ಟಿನಿಂದಲೇ ಬುದ್ಧಿಮಾಂದ್ಯಳಾಗಿದ್ದ ಪುತ್ರಿ ಪ್ರಗತಿ ಶೆಟ್ಟಿ ಜತೆ ವಾಸವಿದ್ದರು. ಈಚೆಗೆ ಜಯಂತಿ ಶೆಟ್ಟಿ ಅವರ ಕಾಯಿಲೆ ಗಂಭೀರವಾಗಿ ಮೃತಪಟ್ಟಿದ್ದಾರೆ. ಬುದ್ಧಿಮಾಂದ್ಯ ಪುತ್ರಿ ಏನು ಮಾಡಬೇಕು ಎಂದು ತೋಚದೆ ತಾಯಿಯ ಶವದ ಜತೆಗೆ ಮೂರ್ನಾಲ್ಕು ದಿನ ಕಳೆದಿದ್ದಾರೆ.

ಹಗಲು– ರಾತ್ರಿ ನಿರಂತರವಾಗಿ ಮನೆಯಲ್ಲಿ ವಿದ್ಯುತ್ ದೀಪ ಉರಿಯುತ್ತಿರುವುದನ್ನು ಹಾಗೂ ಮನೆಯ ಸುತ್ತಲೂ ದುರ್ವಾಸನೆ ಬರುತ್ತಿರುವುದನ್ನು ಗಮನಿಸಿ ಅನುಮಾನಗೊಂಡ ಸ್ಥಳೀಯರು, ಶುಕ್ರವಾರ ಕಿಟಕಿ ತೆರೆದು ನೋಡಿದಾಗ ಜಯಂತಿ ಶೆಟ್ಟಿ ಶವ ಕೊಳೆತ ಸ್ಥಿತಿಯಲ್ಲಿತ್ತು. ಜತೆಗೆ ಮಗಳು ಪ್ರಗತಿ ಶೆಟ್ಟಿ ಕೂಡ ತೀವ್ರ ಅಸ್ವಸ್ಥಗೊಂಡಿದ್ದರು.



ಕುಂದಾಪುರ ತಾಲ್ಲೂಕಿನ ಮೂಡುಗೋಪಾಡಿ ದಾಸನಹಾಡಿಯಲ್ಲಿ ತಾಯಿಯ ಶವದೊಂದಿಗೆ 34 ದಿನ ಕಳೆದ ಬುದ್ಧಿಮಾಂದ್ಯ ಪುತ್ರಿಯನ್ನು ರಕ್ಷಣೆ ಮಾಡಿದ್ದ ಸ್ಥಳೀಯರು ಆಕೆಗೆ ಆರೈಕೆ ಮಾಡಿದ್ದರು

ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿದ ಕುಂದಾಪುರ ಠಾಣೆ ಇನ್‌ಸ್ಪೆಕ್ಟರ್ ವಿನಯ್ ಕೊರ್ಲಹಳ್ಳಿ ಹಾಗೂ ಸಿಬ್ಬಂದಿ ಸ್ಥಳೀಯರ ಸಹಕಾರದಿಂದ ಮನೆಯ ಬಾಗಿಲು ಒಡೆದು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಪ್ರಗತಿ ಶೆಟ್ಟಿ ಅವರನ್ನು ಕೋಟೇಶ್ವರದ ಆಸ್ಪತ್ರೆಗೆ ದಾಖಲಿಸಿದ್ದರು. ಪ್ರಗತಿ ಶೆಟ್ಟಿ ಶನಿವಾರ ಮೃತಪಟ್ಟಿದ್ದಾರೆ. ತಾಯಿ ಹಾಗೂ ಮಗಳ ಮೃತ ದೇಹಗಳ ಅಂತ್ಯಸಂಸ್ಕಾರ ಹೆಂಗವಳ್ಳಿಯಲ್ಲಿ ನಡೆಸಲಾಯಿತು.


ಜಯಂತಿ ಶೆಟ್ಟಿ ಸ್ನಾನ ಮಾಡಲು ಹೋಗಿದ್ದಾಗ ಕುಸಿದು ಬಿದ್ದು ಮೃತಪಟ್ಟಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಮರಣೋತ್ತರ ಪರೀಕ್ಷೆಯಿಂದ ಸಾವಿಗೆ ನಿಖರ ಕಾರಣ ತಿಳಿದು ಬರಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೂಡ್ನಾಕೂಡು, ಹನೂರುಗೆ ಶಿವರಾಮ ಕಾರಂತ ಪ್ರಶಸ್ತಿ

ಮೂಡುಬಿದಿರೆ (ದಕ್ಷಿಣ ಕನ್ನಡ): ಸಾಹಿತಿ ದಿ.ಶಿವರಾಮ ಕಾರಂತ ಅವರ ಹೆಸರಿನಲ್ಲಿ ಮೂಡುಬಿದಿರೆಯ ಶಿವರಾಮ ಕಾರಂತ ಪ್ರತಿಷ್ಠಾನ ನೀಡುವ 'ಶಿವರಾಮ ಕಾರಂತ ಪ್ರಶಸ್ತಿ'ಗೆ ಸಾಧಕರನ್ನು ಆಯ್ಕೆ ಮಾಡಲಾಗಿದೆ.



ಕೃಷ್ಣಮೂರ್ತಿ



ಕೆ.ಪಿ.ರಾವ್



ಚಿನ್ನಸ್ವಾಮಿ

ಲೇಖಕ ಬೆಂಗಳೂರಿನ ಚಿನ್ನಸ್ವಾಮಿ ಮೂಡ್ನಾಕೂಡು, ಜಾನಪದ ವಿದ್ವಾಂಸ ಮೈಸೂರಿನ ಪ್ರೊ. ಕೃಷ್ಣಮೂರ್ತಿ ಹನೂರು, ಕನ್ನಡದ ಕೀಲಿಮಣೆ ವಿನ್ಯಾಸ ಸಂಶೋಧಿಸಿ ಕನ್ನಡ ಭಾಷೆಗೆ ವಿಶಿಷ್ಟ ಕೊಡುಗೆ ನೀಡಿದ ಉಡುಪಿಯ ಕೆ.ಪಿ.ರಾವ್, ಹೆಗ್ಗೋಡಿನ ನೀನಾಸಂ ಸಂಸ್ಥೆಗೆ ಈ ವರ್ಷದ ಪ್ರಶಸ್ತಿ ನೀಡಲು ನಿರ್ಧರಿಸಲಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷೆ ಜಯಶ್ರೀ ಅಮರನಾಥ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಜಯಪ್ರಕಾಶ್ ಮಾವಿನಕುಳಿ ತಿಳಿಸಿದ್ದಾರೆ.

ಮಂಜೂರಾತಿ ಆದೇಶ ದೊರೆತು ವರ್ಷ ಕಳೆದರೂ ಮುನಿವೆಂಕಟಪ್ಪಗಿಲ್ಲ ಸೌಲಭ್ಯ

ಗಂಗಾಕಲ್ಯಾಣಕ್ಕೆ 'ತಬರ'ನಾದ ಕಲಾವಿದ!

• ಡಿ.ಎಂ.ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: ರಾಜ್ಯೋತ್ಸವ ಪ್ರಶಸ್ತಿ, ನಾಡೋಜ ಗೌರವ, ಪದ್ಮಶ್ರೀ ಪ್ರಶಸ್ತಿ... ಹೀಗೆ ರಾಜ್ಯ ಮತ್ತು ರಾಷ್ಟ್ರದಲ್ಲಿ ದೊಡ್ಡ ಗೌರವಕ್ಕೆ ಪಾತ್ರರಾಗಿರುವ ಶಿಡ್ಲಘಟ್ಟ ತಾಲ್ಲೂಕಿನ ಪಿಂಡಿಪಾಪನಹಳ್ಳಿಯ ತಮಟೆ ಕಲಾವಿದ 'ಪದ್ಮಶ್ರೀ' ಮುನಿವೆಂಕಟಪ್ಪ ಅವರಿಗೆ ಗಂಗಾ ಕಲ್ಯಾಣ ಯೋಜನೆಯಡಿ ಒಂದು ಕೊಳವೆ ಬಾವಿ ಹಾಕಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ!

2023ರಲ್ಲಿ ಮುನಿವೆಂಕಟಪ್ಪ 'ಪದ್ಮಶ್ರೀ' ಪ್ರಶಸ್ತಿಗೆ ಭಾಜನರಾದರು. ಆಗ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ಸೌಲಭ್ಯ ಕಲ್ಪಿಸುವಂತೆ ಕೋರಿ ಎರಡನೇ ಬಾರಿಗೆ ಅರ್ಜಿ ಸಲ್ಲಿಸಿದರು. 'ವಿಶೇಷ ಪ್ರಕರಣ' ಎಂದು ಪರಿಗಣಿಸಿ ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದ ನಿರ್ದೇಶಕ ಮಂಡಳಿಯ ಸಭೆಯಲ್ಲಿ ಕೊಳವೆ ಬಾವಿ ಮಂಜೂರಿಗೆ ಅನುಮೋದನೆ ದೊರೆತಿತ್ತು.



ಮುನಿವೆಂಕಟಪ್ಪ

2023ರ ಫೆಬ್ರುವರಿಯಲ್ಲಿ ಘಟಕದ ವೆಚ್ಚ ₹4.50 ಲಕ್ಷ ನಿಗದಿಪಡಿಸಿ ಮಂಜೂರಾತಿ ಆದೇಶ ಪತ್ರವನ್ನೂ ಈ ಹಿರಿಯ ಕಲಾವಿದರ ಹೆಸರಿಗೆ ನಿಗಮ ನೀಡಿತ್ತು. ಅಂದಿನಿಂದ ಕೊಳವೆಬಾವಿಗಾಗಿ ಮುನಿವೆಂಕಟಪ್ಪ ಮತ್ತು ಅವರ ಪುತ್ರ ಪ್ರಸನ್ನ ಚಿಕ್ಕಬಳ್ಳಾಪುರ ಜಿಲ್ಲಾಡಳಿತ ಭವನದ ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದ ಕಚೇರಿಗೆ ಅಲೆಯುತ್ತಲೇ ಇದ್ದಾರೆ.

'ಸೋಮವಾರ ಮತ್ತೆ ಭೇಟಿ'

ಮೇ 17ರ ನಂತರ ಬನ್ನಿ ಎಂದು ಅಧಿಕಾರಿಗಳು ಹೇಳಿದ್ದಾರೆ. ಸೋಮವಾರ (ಮೇ 20) ಕಚೇರಿಗೆ ಹೋಗುವೆ. ಅವರು ಏನು ಹೇಳುವರೊ ಆ ವಿಚಾರವನ್ನು ನಿಮಗೆ (ಪ್ರಜಾವಾಣಿ) ತಿಳಿಸುವೆ ಎಂದು ಮುನಿವೆಂಕಟಪ್ಪ ಹೇಳಿದರು.

'2019ರಲ್ಲಿಯೇ ಗಂಗಾ ಕಲ್ಯಾಣ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಿದ್ದೆವು. ಸ್ಥಳೀಯ ಶಾಸಕರೂ ಅನುಮೋದಿಸಿದ್ದರು. ಆದರೆ, ಆಗಲೂ ನಮಗೆ ಕೊಳವೆ ಬಾವಿ ಮಂಜೂರು ಆಗಿರಲಿಲ್ಲ. 'ಪದ್ಮಶ್ರೀ' ಗೌರವ ದೊರೆತ ನಂತರ ಅಂದಿನ ಸಚಿವ ಡಾ.ಕೆ.ಸುಧಾಕರ್ ಅವರನ್ನು ಭೇಟಿ ಮಾಡಿ ಈ ಬಗ್ಗೆ ತಿಳಿಸಿದೆವು. ಅವರು ಜಿಲ್ಲಾಧಿಕಾರಿ ಜೊತೆ ಮಾತನಾಡಿದರು. ಹಳೆ ಕಡತಕ್ಕೆ ಮತ್ತೆ ಮರುಜೀವ ನೀಡಿದರು' ಎಂದು ಮುನಿವೆಂಕಟಪ್ಪ ಅವರ ಪುತ್ರ ಪ್ರಸನ್ನ 'ಪ್ರಜಾವಾಣಿ'ಗೆ ತಿಳಿಸಿದರು.

ಸೋಮವಾರ (ಮೇ 20) ಅಭಿವೃದ್ಧಿ ನಿಗಮದ ಅಧಿಕಾರಿಗಳ ಸಭೆ ಕರೆಯುತ್ತೇನೆ. ಸಮಸ್ಯೆ ಏನು ಎನ್ನುವುದನ್ನು ತಿಳಿದು ಪರಿಹರಿಸುತ್ತೇನೆ
ಪಿ.ಎನ್.ರವೀಂದ್ರ, ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ

'ನಾನು ಮತ್ತು ನಮ್ಮ ತಂದೆ ನಿಗಮದ ಕಚೇರಿಗೆ ಭೇಟಿ ನೀಡಿದಾಗ ಇನ್ನೊಂದು ತಿಂಗಳು ಬಿಟ್ಟು ಬನ್ನಿ, ಹದಿನೈದು ದಿನ ಬಿಟ್ಟು ಬನ್ನಿ ಎಂದು ಹೇಳುತ್ತಲೇ ಇದ್ದಾರೆ. ವರ್ಷವಾದರೂ ಸೌಲಭ್ಯ ದೊರೆತಿಲ್ಲ. ಕೊಳವೆ ಬಾವಿ ಕೊರೆಯಲು ಯಾರೂ ಟೆಂಡರ್ ಪಡೆಯುತ್ತಿಲ್ಲ ಎಂದು ಅಧಿಕಾರಿಗಳು ಕಾರಣ ಹೇಳುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

ಸಂಕ್ಷಿಪ್ತ ಸುದ್ದಿ

ಲೋಕಾಯುಕ್ತ ದಾಳಿ: ತಲೆ ಮರೆಸಿಕೊಂಡ ಬಿಇಒ



ಹಣಮಂತ ರಾಠೋಡ

ಕಲಬುರಗಿ: ನಿವೃತ್ತ ಶಿಕ್ಷಕರೊಬ್ಬರ ಪಿಂಚಣಿ ಹಣವನ್ನು ಮಂಜೂರು ಮಾಡಲು ₹ 50 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಆಳಂದ ಬಿಇಒ ಹಣಮಂತ ರಾಠೋಡ ಪರವಾಗಿ ಹಣ ಪಡೆಯುತ್ತಿದ್ದ ಮಧ್ಯವರ್ತಿ ರಾಧಾಕೃಷ್ಣ ಎಂಬಾತನನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ. ದಾಳಿಯ ಮಾಹಿತಿ ಸಿಗುತ್ತಿದ್ದಂತೆಯೇ ಬಿಇಒ ಹಣಮಂತ ಪರಾರಿಯಾಗಿದ್ದಾರೆ.

ಬಿಇಒ ಪರವಾಗಿ ಲಂಚದ ಹಣ ಪಡೆಯುತ್ತಿದ್ದ ಸಂದರ್ಭದಲ್ಲಿ ಮಧ್ಯವರ್ತಿ, ಕಾಳಗಿ ತಾಲ್ಲೂಕಿನ ಕೋಡ್ಲಿ ತಾಂಡಾದ ಶಿಕ್ಷಕ ರಾಧಾಕೃಷ್ಣನನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದರು. ಶಿಕ್ಷಕಿಯೊಬ್ಬರ ಪಿಂಚಣಿಗೆ ಸಂಬಂಧಿಸಿದ ಕಡತಗಳಿಗೆ ಸಹಿ ಮಾಡಲು ಲಂಚ ನೀಡುವಂತೆ ಬಿಇಒ ಹಣಮಂತ ರಾಠೋಡ ಬೇಡಿಕೆ ಇಟ್ಟಿದ್ದರು. ಶಿಕ್ಷಕಿಯ ಪತಿ ಯಶವಂತ ಬಿರಾದಾರ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು. ಲೋಕಾಯುಕ್ತ ಡಿವೈಎಸ್ಪಿ ಗೀತಾ ಬೇನಹಾಳ ಹಾಗೂ ಪಿಐ ರಾಜಶೇಖರ ಹಳಿಗೋದಿ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಲಾಯಿತು.

ನಕಲು ಅಂಕಪಟ್ಟಿ: ಇಬ್ಬರು ಎಫ್‌ಡಿಎಗಳ ಬಂಧನ

ಕಲಬುರಗಿ: ವ್ಯಕ್ತಿಯೊಬ್ಬರ ಎಸ್‌ಎಸ್‌ಎಲ್‌ಸಿ ನಕಲು ಅಂಕಪಟ್ಟಿ ಪ್ರತಿಯನ್ನು ನೀಡಲು ಫೋನ್ ಪೇ ಮೂಲಕ ಲಂಚ ಪಡೆದಿದ್ದ ಪ್ರೌಢಶಿಕ್ಷಣ ಮಂಡಳಿಯ ಇಬ್ಬರು ಪ್ರಥಮದರ್ಜೆ ಸಹಾಯಕರನ್ನು ಲೋಕಾಯುಕ್ತ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಕರ್ನಾಟಕ ಪ್ರೌಢಶಾಲಾ ಶಿಕ್ಷಣ ಪರೀಕ್ಷಾ ಮಂಡಳಿಯ ಎಫ್‌ಡಿಎ ಶಿವಶಂಕರಯ್ಯ ನೇಪಾರಿ, ಜಟಂಗರಾಯ ಬಲೆಗೆ ಬಿದ್ದವರು.

2019ರಲ್ಲಿ ತೇರ್ಗಡೆ ಹೊಂದಿದ್ದ ಕಲಬುರಗಿ ನಿವಾಸಿ ಅಬ್ದುಲ್ ಖದೀರ್ ಎಂಬುವವರು ಕಳೆದು ಹೋಗಿರುವ ತಮ್ಮ ಮೂಲ ಅಂಕಪಟ್ಟಿ ಬದಲಿಗೆ, ನಕಲು ಪ್ರತಿಗಾಗಿ ಎರಡು ದಿನದ ಹಿಂದೆ ಅರ್ಜಿ ಸಲ್ಲಿಸಿದ್ದರು. ಎರಡು ದಿನಗಳಲ್ಲಿ ಅಂಕಪಟ್ಟಿ ನೀಡುವುದಾಗಿ ದೂರುದಾರರಿಗೆ ತಿಳಿಸಿದ್ದ ಶಿವಶಂಕರಯ್ಯ ನೇಪಾರಿ ಹಾಗೂ ಜಟಂಗರಾಯ ₹ 5 ಸಾವಿರ ಲಂಚ ಕೇಳಿದ್ದರು. ಅಲ್ಲದೆ ಶುಕ್ರವಾರ ಸಂಜೆ ಕರೆ ಮಾಡಿ ಫೋನ್ ಪೇ ಮುಖಾಂತರ ₹ 3 ಸಾವಿರ ಮುಂಗಡ ಪಡೆದಿದ್ದರು. ಆನಲೈನ್‌ನಲ್ಲಿ ಹಣ ಕಟ್ಟಬೇಕು ಎಂದು ಹೇಳಿ ಹಣ ಪಡೆದಿದ್ದಾರೆ.


ಅಬ್ದುಲ್ ಖದೀರ್ ಲೋಕಾಯುಕ್ತಕ್ಕೆ ಶುಕ್ರವಾರ ದೂರು ಸಲ್ಲಿಸಿದ್ದರು. ಸಾಕ್ಷ್ಯವಾಗಿ ಆಡಿಯೊ ನೀಡಿದ್ದರು. ಲೋಕಾಯುಕ್ತ ಎಸ್‌ಪಿ ಜಾನ್ ಆಂಟನಿ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಮಂಜುನಾಥ ಗಂಗಲ್, ಇನ್‌ಸ್ಪೆಕ್ಟರ್ ಅಕ್ಕಮಹಾದೇವಿ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ.

ಲಂಚ: ಸರ್ವೆಯರ್, ಸಹಾಯಕ ಬಂಧನ

ವಿಜಯಪುರ: ಜಮೀನಿನ ತತ್ಕಾಲ್ ಪೋಡಿ ಸಿದ್ಧಪಡಿಸಿಕೊಡಲು ₹47,500 ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಸರ್ವೆಯರ್ ಮಲ್ಲಪ್ಪ ಜಂಬಗಿ ಮತ್ತು ಖಾಸಗಿ ಸಹಾಯಕ ಗುರುದತ್ತ ಬಿರಾದಾರ ಎಂಬುವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಲೋಕಾಯುಕ್ತ ಎಸ್ಪಿ ಮಲ್ಲೇಶ, ಡಿಎಸ್ಪಿ ಸುರೇಶ್ ರೆಡ್ಡಿ, ಸಿಪಿಐ ಆನಂದ ಟಕ್ಕನವರ್, ಆನಂದ ದೋಣಿ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು.

ನ್ಯಾಚುರಲ್ ಐಸ್‌ಕ್ರೀಂ ಸಂಸ್ಥಾಪಕ ಕಾಮತ್ ನಿಧನ



ಮಂಗಳೂರು: ನ್ಯಾಚುರಲ್ ಐಸ್‌ಕ್ರೀಂ ಸಂಸ್ಥೆಯ ಸ್ಥಾಪಕ, ಉದ್ಯಮಿ ರಘುನಂದನ್ ಕಾಮತ್ (70) ಅವರು ಅಲ್ಪಕಾಲದ ಅನಾರೋಗ್ಯದಿಂದ ಮುಂಬೈನಲ್ಲಿ ಶುಕ್ರವಾರ ರಾತ್ರಿ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ರಘುನಂದನ್ ದಕ್ಷಿಣ ಕನ್ನಡ ಜಿಲ್ಲೆ ಮೂಲ್ಕಿಯಲ್ಲಿ ಜನಿಸಿದ್ದರು. ಚಿಕ್ಕ ವಯಸ್ಸಿನಲ್ಲಿಯೇ ಮುಂಬೈಗೆ ತೆರಳಿದ್ದ ಅವರು ಅಣ್ಣನ ರೆಸ್ಟೋರೆಂಟ್‌ನಲ್ಲಿ ಕೆಲಸ ಆರಂಭಿಸಿದ್ದರು. 1984ರಲ್ಲಿ ನ್ಯಾಚುರಲ್ ಐಸ್‌ಕ್ರೀಂ ಸಂಸ್ಥೆ ಸ್ಥಾಪಿಸಿದ್ದರು.

ಅವರ ಸಂಸ್ಥೆಯು, ಹಣ್ಣುಗಳಿಂದ ತಯಾರಿಸಿದ್ದ ಐಸ್‌ಕ್ರೀಂನ ಸ್ವಾದ ಅಲ್ಪಾವಧಿಯಲ್ಲೇ ಜನಪ್ರಿಯವಾಗಿತ್ತು. ಬೇಡಿಕೆ ಹೆಚ್ಚಿದ್ದರಿಂದ ವಿವಿಧೆಡೆ ಮಳಿಗೆ ಆರಂಭಿಸಿದರು. ಸದ್ಯ ದೇಶದಾದ್ಯಂತ 135ಕ್ಕೂ ಹೆಚ್ಚು ಮಳಿಗೆಗಳಿವೆ. ವಾರ್ಷಿಕ ಸುಮಾರು ₹400 ಕೋಟಿ ವಹಿವಾಟು ನಡೆಸುತ್ತಿದೆ.

ಪ್ರಜ್ವಲ್ ತಪ್ಪು ಸಾಬೀತಾದರೆ ಶಿಕ್ಷಿಸಲಿ: ದೇವೇಗೌಡ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪ ಎದುರಿಸುತ್ತಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ತಪ್ಪು ಮಾಡಿರುವುದು ಸಾಬೀತಾದರೆ ಕಾನೂನು ಪ್ರಕಾರ ಕ್ರಮ ಜರುಗಿಸಲಿ. ಅದಕ್ಕೆ ನಮ್ಮ ಅಭ್ಯಂತರವಿಲ್ಲ' ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರು ಹೇಳಿದರು.

92ನೇ ವರ್ಷಕ್ಕೆ ಕಾಲಿಟ್ಟ ಅವರು ಶನಿವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದರು. ಮೊಮ್ಮಗ ಪ್ರಜ್ವಲ್ ರೇವಣ್ಣ ಮತ್ತು ಮಗ ಎಚ್.ಡಿ. ರೇವಣ್ಣ ವಿರುದ್ಧದ ಆರೋಪಗಳ ಕುರಿತು ಇದೇ ಮೊದಲ ಬಾರಿಗೆ ಅವರು ಪ್ರತಿಕ್ರಿಯಿಸಿದ್ದಾರೆ.

'ಎಚ್.ಡಿ.ರೇವಣ್ಣ ವಿರುದ್ಧದ ಪ್ರಕರಣವನ್ನು ಸೃಷ್ಟಿಸಲಾಗಿದೆ. ಅದರ ಹಿಂದೆ ಯಾರಿದ್ದಾರೆ ಎಂಬುದನ್ನು ಈಗ ಮಾತನಾಡುವುದಿಲ್ಲ. ಒಂದು ಪ್ರಕರಣದಲ್ಲಿ ರೇವಣ್ಣ ಅವರಿಗೆ ನ್ಯಾಯಾಲಯವು ಜಾಮೀನು ಮಂಜೂರು ಮಾಡಿದೆ. ಮತ್ತೊಂದು ಪ್ರಕರಣದಲ್ಲಿ ಜಾಮೀನು ಅರ್ಜಿಯ ವಿಚಾರಣೆ ಪ್ರಗತಿಯಲ್ಲಿದೆ. ಈಗ ಆ ಬಗ್ಗೆ ಹೆಚ್ಚು ಮಾತನಾಡಲು ಬಯಸುವುದಿಲ್ಲ' ಎಂದು ಹೇಳಿದರು.

'ಪ್ರಜ್ವಲ್ ರೇವಣ್ಣ ವಿದೇಶಕ್ಕೆ ಹೋಗಿದ್ದಾರೆ. ಆ ಬಗ್ಗೆ ಕುಮಾರಸ್ವಾಮಿ ಪ್ರತಿಕ್ರಿಯಿಸಿದ್ದಾರೆ. ಈ ಪ್ರಕರಣದಲ್ಲಿ ಹಲವರಿದ್ದಾರೆ. ಎಲ್ಲರಿಗೂ ಶಿಕ್ಷೆ ಆಗಬೇಕು. ಸಂತ್ರಸ್ತ ಮಹಿಳೆಯರಿಗೆ ನ್ಯಾಯ ದೊರಕಬೇಕು' ಎಂದರು.

'ಈ ಪ್ರಕರಣದ ಹಿಂದೆ ಯಾರಿದ್ದಾರೆ? ಅವರ ವಿರುದ್ಧ ಏನು ಕ್ರಮ ಕೈಗೊಳ್ಳುತ್ತೇವೆ ಎಂಬುದರ ಕುರಿತು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರಾಗಿರುವ ಎಚ್.ಡಿ. ಕುಮಾರಸ್ವಾಮಿ ಮಾತನಾಡುತ್ತಾರೆ. ಅವರು ಈಗಾಗಲೇ ಮಾತನಾಡಿದ್ದಾರೆ. ಮುಂದೆಯೂ ಅವರೇ ಸ್ಪಷ್ಟ ನಿಲುವನ್ನು ಪ್ರಕಟಿಸುತ್ತಾರೆ' ಎಂದು ತಿಳಿಸಿದರು.

'ಪ್ರಜ್ವಲ್ ಪ್ರಕರಣದ ಪೆನ್ ಡ್ರೈವ್ ವಿತರಣೆ ಹಿಂದೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೈವಾಡವಿದೆ' ಎಂಬ ಬಿಜೆಪಿ ಮುಖಂಡ ದೇವರಾಜೇಗೌಡ ಆರೋಪದ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದ ದೇವೇಗೌಡ, 'ಮಾಧ್ಯಮಗಳ ಮೂಲಕ ಈ ಕುರಿತು ತಿಳಿಯಿತು. ಆ ಬಗ್ಗೆಯೂ ಕುಮಾರಸ್ವಾಮಿ ಅವರೇ ಹೇಳುತ್ತಾರೆ. ಮುಂದಿನ ನಡೆಯ ಕುರಿತು ಅವರೇ ಪ್ರಕಟಿಸುತ್ತಾರೆ' ಎಂದರು.

'ನಾನು ಲೋಕಸಭಾ ಚುನಾವಣೆಯಲ್ಲಿ ಪ್ರಚಾರ ಮಾಡಿದ್ದೇನೆ. ಜೂನ್ 4ರ ನಂತರ ನಿಮ್ಮನ್ನು ಭೇಟಿಯಾಗುವೆ' ಎಂದ ಅವರು, ತಮ್ಮ ಮನೆಯ ಬಳಿಯಿಂದ ನಿರ್ಗಮಿಸುವಂತೆ ಮಾಧ್ಯಮ ಪ್ರತಿನಿಧಿಗಳಿಗೆ ಮನವಿ ಮಾಡಿದರು.

ದೇವರಾಜೇಗೌಡ ಮಾನಸಿಕ ಅಸ್ವಸ್ಥ: ಡಿ.ಕೆ. ಶಿವಕುಮಾರ್



ಬೆಂಗಳೂರು: 'ಬಿಜೆಪಿ ಮುಖಂಡ ದೇವರಾಜೇಗೌಡ ಮಾನಸಿಕ ಅಸ್ವಸ್ಥ. ಆತನ ಆರೋಪಕ್ಕೆ ಪ್ರತಿಕ್ರಿಯಿಸುವ ಅಗತ್ಯವಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ತಲೆ ಕೆಟ್ಟವರನ್ನು ಆಸ್ಪತ್ರೆಗೆ ಸೇರಿಸಬೇಕಿದೆ. ಅಂತಹವರು ಆಡುವ ಮಾತುಗಳಿಗೆ ಮಾಧ್ಯಮಗಳು ಪ್ರಚಾರ ಕೊಡುವುದು ಸರಿಯಲ್ಲ' ಎಂದರು.

'ದೇವರಾಜೇಗೌಡನ ಜತೆ ನಾನು ಏನನ್ನೂ ಮಾತನಾಡಿಲ್ಲ. ನಾನು ಈ ರಾಜ್ಯದ ಉಪ ಮುಖ್ಯಮಂತ್ರಿ. ಸಾವಿರಾರು ಜನರು ನನ್ನನ್ನು ಭೇಟಿಮಾಡುತ್ತಾರೆ. ಅವರೆಲ್ಲರನ್ನೂ ಸ್ಕ್ಯಾನ್ ಮಾಡಿ ನೋಡಲು ಆಗುವುದಿಲ್ಲ. ನಾನು ಯಾರ ಜತೆಗೂ ತಪ್ಪು ಮಾತನಾಡಿಲ್ಲ. ಆ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ' ಎಂದರು.

'ಬೌರಿಂಗ್ ಕ್ಲಬ್‌ನ ಕೊಠಡಿ ಸಂಖ್ಯೆ 110ಕ್ಕೆ ₹5 ಕೋಟಿ ನಗದು ಕಳುಹಿಸಿದ್ದರು' ಎಂಬ ಆರೋಪಕ್ಕೆ ಪ್ರತಿಕ್ರಿಯಿಸಲು ನಿರಾಕರಿಸಿದ ಅವರು, 'ಏನಾದರೂ ಒಳ್ಳೆಯ ವಿಚಾರ ಇದ್ದರೆ ಮಾತನಾಡಿ. ರಾಜ್ಯದಲ್ಲಿ ಮಳೆ, ಬೆಳೆ, ಬರಗಾಲ ಇದರ ಬಗ್ಗೆ ಬೇಕಿದ್ದರೆ ಮಾತನಾಡಿ' ಎಂದು ಹೇಳಿದರು.

'ತಮ್ಮ ಕುಟುಂಬದ ವಿರುದ್ಧ ಪಿತೂರಿ ನಡೆಯುತ್ತಿದೆ' ಎಂಬ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಹೇಳಿಕೆ ಬಗ್ಗೆ ಕೇಳಿದಾಗ, 'ಈ ದಿನ ಗೌಡರ ಜನ್ಮದಿನ. ಅವರು ದೇವಸ್ಥಾನಕ್ಕೆ ಹೋಗಿ ಬಂದಿದ್ದಾರೆ. ಅವರಿಗೆ ದೇವರು ಒಳ್ಳೆಯ ಆರೋಗ್ಯ, ಸಂತೋಷ, ನೆಮ್ಮದಿ ಕೊಡಲಿ. ದುಃಖದಿಂದ ಹೊರಬರಲಿ ಎಂದು ಸರ್ಕಾರದ ಪರವಾಗಿ ಮತ್ತು ವೈಯಕ್ತಿಕವಾಗಿ ಶುಭ ಹಾರೈಸುತ್ತೇನೆ' ಎಂದು ಹೇಳಿದರು.

ಅಮಿತ್ ಶಾ ಆಶೀರ್ವಾದ ಇರಬಹುದು: ಪ್ರಿಯಾಂಕ್ ಖರ್ಗೆ



ಬೆಂಗಳೂರು: 'ಪ್ರಜ್ವಲ್ ರೇವಣ್ಣ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎನ್ನಲಾದ ವಿಡಿಯೊಗಳುಳ್ಳ ಪೆನ್ ಡ್ರೈವ್ ಬಹಿರಂಗಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಆಶೀರ್ವಾದ ಇರಬಹುದು' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

'ಪೆನ್ ಡ್ರೈವ್ ಪ್ರಕರಣದಲ್ಲಿ ಎಚ್.ಡಿ. ಕುಮಾರಸ್ವಾಮಿ ಹೆಸರು ಪ್ರಸ್ತಾಪಿಸಲು ಡಿ.ಕೆ. ಶಿವಕುಮಾರ್, ಪ್ರಿಯಾಂಕ್ ಖರ್ಗೆ, ಕೃಷ್ಣ ಬೈರೇಗೌಡ ಮತ್ತು ಎನ್. ಚಲುವರಾಯ ಸ್ವಾಮಿ ಆಮಿಷ ಒಡ್ಡಿದ್ದರು' ಎಂಬ ಬಿಜೆಪಿ ಮುಖಂಡ ದೇವರಾಜೇಗೌಡ ಹೇಳಿಕೆ ಕುರಿತು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಪ್ರತಿಕ್ರಿಯಿಸಿದರು.

'ದೇವರಾಜೇಗೌಡ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದವರು. ಅವರು ನೇರವಾಗಿ ಅಮಿತ್ ಶಾ ಜತೆ ಸಂಪರ್ಕ ಹೊಂದಿದ್ದರು. ಅಮಿತ್ ಶಾ ಆಶೀರ್ವಾದದಿಂದಲೇ ಎಲ್ಲವನ್ನೂ ಮಾಡುತ್ತಿದ್ದೇನೆ ಎಂದು ಹಿಂದೆ ಹೇಳಿಕೊಂಡಿದ್ದರು. ಪೆನ್ ಡ್ರೈವ್ ಬಹಿರಂಗಕ್ಕೂ ಅಮಿತ್ ಶಾ ಆಶೀರ್ವಾದ ಇದ್ದಿರಬಹುದು' ಎಂದರು.

'₹100 ಕೋಟಿ ಆಮಿಷ ಒಡ್ಡಿ, ₹5 ಕೋಟಿ ಮುಂಗಡ ನೀಡಲಾಗಿತ್ತು ಎಂದು ದೇವರಾಜೇಗೌಡ ಆರೋಪಿಸಿದ್ದಾರೆ. ಅದು ನಿಜವೇ ಆಗಿದ್ದರೆ ಅಮಿತ್ ಶಾ ಅವರಿಗೆ ಮಾಹಿತಿ ನೀಡಿ ಆದಾಯ ತೆರಿಗೆ, ಸಿಬಿಐ ಅಥವಾ ಜಾರಿ ನಿರ್ದೇಶನಾಲಯದಿಂದ ತನಿಖೆ ಮಾಡಿಸಬೇಕಿತ್ತು. ವಕೀಲರಾಗಿರುವ ಅವರು ನ್ಯಾಯಾಧೀಶರ ಮುಂದಾದರೂ ಮಾಹಿತಿ ನೀಡಬೇಕಿತ್ತು' ಎಂದು ಹೇಳಿದರು.

ರಾಜೀನಾಮೆ ನೀಡಬೇಕಿತ್ತು

'ಎಚ್.ಡಿ. ದೇವೇಗೌಡರ ಕುಟುಂಬದವರು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಅಧಿಕಾರ ಹೊಂದಿದ್ದಾರೆ. ಪ್ರಜ್ವಲ್ ರೇವಣ್ಣ ನಡೆಸಿದ ಹೀನ ಕೃತ್ಯದ ನೈತಿಕ ಹೊಣೆ ಹೊತ್ತು ಅವರ ಕುಟುಂಬದವರೆಲ್ಲರೂ ರಾಜೀನಾಮೆ ನೀಡಬೇಕಿತ್ತು. ಆತನ ಕೃತ್ಯಕ್ಕಾಗಿ ರಾಜ್ಯದ ಜನರ ಕ್ಷಮೆ ಯಾಚಿಸಬೇಕಿತ್ತು. ಆದರೆ, ಅವರಿಗೆ ಕುಟುಂಬ ಮತ್ತು ಪಕ್ಷವೇ ಮುಖ್ಯವಾಗಿದೆ' ಎಂದು ವಾಗ್ದಾಳಿ ನಡೆಸಿದರು. 'ಮಹಾನಾಯಕ, ಷಡ್ಯಂತ್ರ, ತಿಮಿಂಗಿಲ ಎಂದೆಲ್ಲ ಹೇಳಿಕೆ ನೀಡಿ ಜನರ ದಿಕ್ಕುತಪ್ಪಿಸುವ ಕೆಲಸದಲ್ಲಿ ನಿರತರಾಗಿದ್ದಾರೆ. ಇವರು ಸರಿಯಾಗಿ ಆತ್ಮಾವಲೋಕನ ಮಾಡಿಕೊಂಡು ಮನೆಯೊಳಗೆ ಒಮ್ಮೆ ಶೋಧಿಸಲಿ. ಇವರ ಮನೆಯೊಳಗೆ ಎಷ್ಟು ತಿಮಿಂಗಿಲಗಳಿವೆ ಎಂಬುದು ಗೊತ್ತಾಗುತ್ತದೆ' ಎಂದರು.

'ಆರೋಪ ಸಾಬೀತುಪಡಿಸಿದರೆ ಕ್ಷಮೆ ಯಾಚಿಸುವೆ'



ಬೆಂಗಳೂರು: 'ಪ್ರಜ್ವಲ್‌ಗೆ ಸಂಬಂಧಿಸಿದ ಪೆನ್ ಡ್ರೈವ್ ಹಂಚಿಕೆ ಪ್ರಕರಣದಲ್ಲಿ ಎಚ್.ಡಿ. ಕುಮಾರಸ್ವಾಮಿ ಹೆಸರು ಪ್ರಸ್ತಾಪಿಸಲು ಆಮಿಷ ಒಡ್ಡಿದ್ದ ಆರೋಪವನ್ನು ಬಿಜೆಪಿ ಮುಖಂಡ ದೇವರಾಜೇಗೌಡ ಸಾಬೀತುಪಡಿಸಿದರೆ ಬೇಷರತ್ ಕ್ಷಮೆ ಯಾಚಿಸಲು ಸಿದ್ಧ' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಪ್ರಕರಣದಲ್ಲಿ ನಾನು ಭಾಗಿಯಾಗಿಲ್ಲ. ಸಚಿವರಾದ ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ ಪಾತ್ರವೂ ಇಲ್ಲ. ಏಪ್ರಿಲ್ 25ರ ವೇಳೆಗೆ ಪ್ರಕರಣ ಹೊರಬಿತ್ತು. ಏಪ್ರಿಲ್ 30ರ ಬಳಿಕ ಪ್ರಕರಣದ ಕಾವು ಏರಿತು. ನನಗೆ ನನ್ನ ಇಲಾಖೆಯ ಕೆಲಸ ಮಾಡುವುದೇ ಸಾಕಷ್ಟಿದೆ. ಇಂತಹ ಪ್ರಕರಣಗಳಲ್ಲಿ ಕೈ ಹಾಕಲು ಸಮಯವಿಲ್ಲ' ಎಂದರು. 'ಈ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣ, ಕಾರ್ತಿಕ್ ಮತ್ತು ದೇವರಾಜೇಗೌಡ ಪ್ರಮುಖ ಆರೋಪಿಗಳು. ಅವರನ್ನು ತನಿಖೆಗೆ ಒಳಪಡಿಸಿದರೆ ಸತ್ಯ ಹೊರ ಬರುತ್ತದೆ. ಶಿವರಾಮೇಗೌಡ ನಮ್ಮ ಪಕ್ಷದಲ್ಲಿಲ್ಲ. ನಾನು ಅವರ ವಿರುದ್ಧ ಹೋರಾಟ ಮಾಡಿಕೊಂಡು ಬಂದವನು. ಅವರ ಜತೆ ವಿಶ್ವಾಸವಿರಬಹುದು, ಆದರೆ ರಾಜಕೀಯ ನಂಟು ಇಲ್ಲ' ಎಂದು ಹೇಳಿದರು.

'ಡಿ.ಕೆ. ಶಿವಕುಮಾರ್ ಈ ರಾಜ್ಯದ ಉಪ ಮುಖ್ಯಮಂತ್ರಿ. ಪ್ರಕರಣದ ಮಾಹಿತಿ ಕೊಡಲು ದೇವರಾಜೇಗೌಡ, ಶಿವಕುಮಾರ್ ಅವರನ್ನು ಸಂಪರ್ಕಿಸಿರಬಹುದು. ಅದನ್ನೇ ತಿರುಚಿ ಆರೋಪ ಮಾಡುವುದು ಸರಿಯಲ್ಲ' ಎಂದರು.

ಪ್ರಜ್ವಲ್ ಕರೆಸಲಿ: 'ಎಚ್.ಡಿ. ಕುಮಾರಸ್ವಾಮಿ ಅವರು ಸುಮ್ಮನೆ ಆರೋಪ ಮಾಡುವುದನ್ನು ಬಿಟ್ಟು, ಪ್ರಜ್ವಲ್ ರೇವಣ್ಣ ಅವರನ್ನು ವಿದೇಶದಿಂದ ಕರೆಸಲಿ. ವಿಶೇಷ ತನಿಖಾ ತಂಡದ (ಎಸ್‌ಐಟಿ) ಎದುರು ಶರಣಾಗಿ ತನಿಖೆಗೆ ಸಹಕರಿಸುವಂತೆ ಸೂಚಿಸಲಿ. ಆತ ಶರಣಾದರೆ ತನಿಖೆ ಮುಂದಕ್ಕೆ ಸಾಗುತ್ತದೆ. ಸತ್ಯ ಹೊರಬರಲು ಸಾಧ್ಯವಾಗುತ್ತದೆ' ಎಂದು ಚಲುವರಾಯಸ್ವಾಮಿ ಹೇಳಿದರು.

'ರೇವಣ್ಣ ವಿರುದ್ಧ ಪ್ರಕರಣ ಸೃಷ್ಟಿಸಲಾಗಿದೆ' ಎಂಬ ಎಚ್.ಡಿ. ದೇವೇಗೌಡ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಎಸ್‌ಐಟಿ ಅಧಿಕಾರಿಗಳು ತನಿಖೆ ನಡೆಸುವಾಗ ಸಿಕ್ಕ ಸಾಕ್ಷ್ಯದ ಆಧಾರದಲ್ಲಿ ರೇವಣ್ಣ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಮಹಿಳೆಯನ್ನು ಅಪಹರಣ ಮಾಡಿದ ಆರೋಪದಲ್ಲಿ ರೇವಣ್ಣ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ರೇವಣ್ಣ ಪಾತ್ರ ಇಲ್ಲದಿದ್ದರೆ ಏಕೆ ಪ್ರಕರಣ ದಾಖಲಿಸುತ್ತಿದ್ದರು' ಎಂದು ಪ್ರಶ್ನಿಸಿದರು.

ಸಿಬಿಐ ತನಿಖೆಗೆ ವಿಜಯೇಂದ್ರ ಆಗ್ರಹ



ಹಾಸನದ ಪೆನ್‌ಡ್ರೈವ್ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪೆನ್‌ಡ್ರೈವ್ ಪ್ರಕರಣ ಕುರಿತು ನಿತ್ಯವೂ ಹೊಸ ವಿಚಾರಗಳು ಬೆಳಕಿಗೆ ಬರುತ್ತಿವೆ. ಸರ್ಕಾರದ ಘಟಾನುಘಟಿಗಳ ಹೆಸರು ತಳುಕು ಹಾಕಿಕೊಳ್ಳುತ್ತಿವೆ. ಎಸ್‌ಐಟಿಯಿಂದ ಪಾರದರ್ಶಕ ತನಿಖೆ ಸಾಧ್ಯವಿಲ್ಲ. ಹಾಗಾಗಿ, ಪ್ರಜ್ವಲ್ ರೇವಣ್ಣ ಪ್ರಕರಣ ಹಾಗೂ ಪೆನ್‌ಡ್ರೈವ್ ಹಂಚಿಕೆ ಪ್ರಕರಣಗಳನ್ನು ಸಿಬಿಐ ತನಿಖೆಗೆ ವಹಿಸಬೇಕು' ಎಂದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಯಾರು ಏನೇ ಮಾಡಿದರೂ ನಡೆಯುತ್ತದೆ ಎಂಬ ಭಾವನೆ ಆರೋಪಿಗಳಲ್ಲಿದೆ. ಬಿಗಿ ಕ್ರಮ ಕೈಗೊಳ್ಳದೇ ಕೊಲೆ ಪ್ರಕರಣಗಳು ಹೆಚ್ಚಾಗಿದೆ. ಮಹಿಳೆಯರ ಸುರಕ್ಷತೆಗಾಗಿ ಬಿಜೆಪಿ ಧ್ವನಿ ಎತ್ತಿದೆ ಎಂದು ಹೇಳಿದರು.

ನೇಹಾ ಹತ್ಯೆ: ಸದ್ಯದಲ್ಲೇ ಚಾರ್ಜ್‌ಶೀಟ್ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಬ್ಬಳ್ಳಿಯ ವಿದ್ಯಾರ್ಥಿನಿ ನೇಹಾ ಹಿರೇಮಠ (23) ಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು, ಆರೋಪಿ ಫಯಾಜ್ ಬಾಬಾಸಾಹೇಬ ಖೊಂಡುನಾಯಕ್ ವಿರುದ್ಧ ನ್ಯಾಯಾಲಯಕ್ಕೆ ಸದ್ಯದಲ್ಲೇ ದೋಷಾರೋಪ ಪಟ್ಟಿ (ಚಾರ್ಜ್‌ಶೀಟ್) ಸಲ್ಲಿಸುವ ಸಾಧ್ಯತೆ ಇದೆ.

ಹುಬ್ಬಳ್ಳಿಯ ಬಿವಿಬಿ ಕಾಲೇಜು ಆವರಣದಲ್ಲಿ ನೇಹಾ ಅವರನ್ನು ಏಪ್ರಿಲ್ 18ರಂದು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿತ್ತು. ಆರೋಪಿ ಫಯಾಜ್‌ನನ್ನು ಹುಬ್ಬಳ್ಳಿ ವಿದ್ಯಾನಗರ ಪೊಲೀಸರು ಬಂಧಿಸಿದ್ದರು. ತನಿಖೆ ಜವಾಬ್ದಾರಿ ವಹಿಸಿಕೊಂಡಿದ್ದ ಸಿಐಡಿ ಅಧಿಕಾರಿಗಳು, ಆರೋಪಿ ಫಯಾಜ್‌ನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದ್ದರು.

'ನೇಹಾ ಹಿರೇಮಠ ಕೊಲೆಗೆ ಸಂಬಂಧಪಟ್ಟಂತೆ ಎಲ್ಲ ಪುರಾವೆಗಳನ್ನು ಸಂಗ್ರಹಿಸಲಾಗಿದೆ. ದೋಷಾರೋಪ ಪಟ್ಟಿ ಸಿದ್ಧಪಡಿಸುವ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಕೆಲವೇ ದಿನಗಳಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು' ಎಂದು ಸಿಐಡಿ ಎಡಿಜಿಪಿ ಬಿ.ಕೆ. ಸಿಂಗ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಹಲವರ ಹೇಳಿಕೆ ದಾಖಲು: ನೇಹಾ ಅವರ ಪೋಷಕರು, ಸಹಪಾಠಿಗಳು, ಸ್ನೇಹಿತರು, ಆರೋಪಿ ಹಾಗೂ ಆತನ ಕುಟುಂಬದವರು ಸೇರಿದಂತೆ ಹಲವರ ಹೇಳಿಕೆಯನ್ನು ಸಿಐಡಿ ಅಧಿಕಾರಿಗಳು ದಾಖಲಿಸಿಕೊಂಡಿದ್ದಾರೆ. ಜೊತೆಗೆ, ಘಟನಾ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದಿದ್ದಾರೆ. ಕೃತ್ಯಕ್ಕೆ ಸಂಬಂಧಪಟ್ಟ ಎಲ್ಲ ಸಂಗತಿಗಳನ್ನು ದೋಷಾರೋಪ ಪಟ್ಟಿ ಜೊತೆಯಲ್ಲಿ ಲಗತ್ತಿಸಲಿದ್ದಾರೆ.

ಅಂಜಲಿ ಸಹೋದರಿ ಆತ್ಮಹತ್ಯೆಗೆ ಯತ್ನ

ಹುಬ್ಬಳ್ಳಿ: ಈಚೆಗೆ ಕೊಲೆಯಾದ ನಗರದ ವೀರಾಪುರ ಓಣಿಯ ಅಂಜಲಿ ಅಂಬಿಗೇರ ಅವರ ಸಹೋದರಿ ಯಶೋದಾ ಅಂಬಿಗೇರ (16) ಶನಿವಾರ ರಾತ್ರಿ ತಮ್ಮ ನಿವಾಸದಲ್ಲಿ ಫಿನಾಯಿಲ್ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದಾರೆ.

'ತೀವ್ರ ಅಸ್ವಸ್ಥಗೊಂಡಿದ್ದ ಅವರನ್ನು ಕುಟುಂಬಸ್ಥರು ನಗರದ ಕಿಮ್ಸ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆತ್ಮಹತ್ಯೆ ಯತ್ನಕ್ಕೆ ಕಾರಣ ತಿಳಿದುಬಂದಿಲ್ಲ' ಎಂದು ಬೆಂಡಿಗೇರಿ ಠಾಣೆ ಪೊಲೀಸರು ತಿಳಿಸಿದ್ದಾರೆ.

'ಯಶೋದಾ ನಿತ್ರಾಣಗೊಂಡಿದ್ದರು. ಅವರನ್ನು ದಾಖಲಿಸಿಕೊಂಡು ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಕಿಮ್ಸ್ ನಿರ್ದೇಶಕ ಡಾ. ಎಸ್.ಎಫ್. ಕಮ್ಮಾರ ತಿಳಿಸಿದರು.

ಸಂಸದ ಡಿ.ವಿ. ಸದಾನಂದ ಗೌಡ ನೇತೃತ್ವದ ಬಿಜೆಪಿ ನಿಯೋಗ ಮನವಿ

ಗೃಹ ಇಲಾಖೆ ಉನ್ನತಾಧಿಕಾರಿಗಳ ಸಭೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹದಗೆಟ್ಟಿರುವ ಕಾನೂನು ಸುವ್ಯವಸ್ಥೆಯನ್ನು ಸರಿದಾರಿಗೆ ತರಲು ಕ್ರಮ ಕೈಗೊಳ್ಳಬೇಕು. ಗೃಹ ಇಲಾಖೆಯ ಉನ್ನತಾಧಿಕಾರಿಗಳ ಸಭೆ ಕರೆದು ಸೂಕ್ತ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಿ ಸಂಸದ ಡಿ.ವಿ. ಸದಾನಂದ ಗೌಡ ನೇತೃತ್ವದ ಬಿಜೆಪಿ ನಿಯೋಗ ರಾಜ್ಯ ಪೊಲೀಸ್ ಮುಖ್ಯಸ್ಥ ಅಲೋಕ್ ಮೋಹನ್ ಅವರಿಗೆ ಶನಿವಾರ ಮನವಿ ಪತ್ರ ಸಲ್ಲಿಸಿತು.

ಮಹಿಳೆಯರು, ಶೋಷಿತರ ಮೇಲಿನ ದೌರ್ಜನ್ಯ ಹೆಚ್ಚಾಗಿದೆ. ಕೊಲೆ, ಸುಲಿಗೆಗೆ ಕಡಿವಾಣ ಇಲ್ಲವಾಗಿದೆ. ಕರ್ನಾಟಕ 'ಅಪರಾಧಗಳ ರಾಜ್ಯ' ಎಂಬ ಕೆಟ್ಟ ಹೆಸರು ಪಡೆಯುವಂತಾಗಿದೆ. ಕರ್ನಾಟಕವು ಆರ್ಥಿಕ ಅಪರಾಧಗಳಲ್ಲಿ 9ನೇ ಸ್ಥಾನ, ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣದಲ್ಲಿ 3ನೇ ಸ್ಥಾನದಲ್ಲಿದೆ. ಮಕ್ಕಳ ಮೇಲಿನ ಅಪರಾಧಗಳ ಪ್ರಮಾಣ ಶೇ 46ರಷ್ಟು, ಹಿರಿಯ ನಾಗರಿಕರ ಮೇಲಿನ ಅಪರಾಧ ಪ್ರಕರಣಗಳು ಶೇ 86ರಷ್ಟು ಹೆಚ್ಚಳವಾಗಿರುವುದು ಆತಂಕದ ವಿಚಾರ ಎಂದು ಮನವಿ ಪತ್ರದಲ್ಲಿ ವಿವರಿಸಲಾಗಿದೆ.

ಅಪರಾಧ ಪ್ರಕರಣಗಳ ಸಂಖ್ಯೆ ಹೆಚ್ಚಳವಾದರೂ, ಕೃತ್ಯ ಎಸಗಿದವರ ವಿರುದ್ಧ ಕಠಿಣ ಕ್ರಮ ಕೈಗೊಂಡಿಲ್ಲ. ಲೋಕಸಭಾ ಚುನಾವಣಾ ಸಮಯದಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರ ಸೇರಿದಂತೆ ವಿವಿಧೆಡೆ ಸೋಲಿನ ಭೀತಿಯಿಂದ ಕಾಂಗ್ರೆಸ್ ಪೊಲೀಸರನ್ನು ಬಳಸಿಕೊಂಡಿತ್ತು. ಬಿಜೆಪಿ - ಜೆಡಿಎಸ್ ಕಾರ್ಯಕರ್ತರ ಮೇಲೆ ಹಲ್ಲೆಗಳು ನಡೆದಾಗ ಪ್ರಕರಣಗಳನ್ನೇ ದಾಖಲು ಮಾಡಿಕೊಳ್ಳಲಿಲ್ಲ. ಜೀವ ಬೆದರಿಕೆ ಹಾಕಿದರೂ ಕ್ರಮ ಕೈಗೊಳ್ಳಲಿಲ್ಲ ಎಂದು ದೂರಲಾಗಿದೆ.

ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಮಾಳವಿಕ ಅವಿನಾಶ್, ರಾಜ್ಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣಗೌಡ, ಶಾಸಕ ಸಿ.ಕೆ. ರಾಮಮೂರ್ತಿ, ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಸ್. ಹರೀಶ್ ಅವರು ನಿಯೋಗದಲ್ಲಿ ಇದ್ದರು.



ಬೆಂಗಳೂರಿನಲ್ಲಿ ಶನಿವಾರ ಸಂಸದ ಡಿ.ವಿ. ಸದಾನಂದ ಗೌಡ ನೇತೃತ್ವದ ಬಿಜೆಪಿ ನಿಯೋಗ ಹದಗೆಟ್ಟಿರುವ ಕಾನೂನು ಸುವ್ಯವಸ್ಥೆಯನ್ನು ಸರಿದಾರಿಗೆ ತರಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಪೊಲೀಸ್ ಮುಖ್ಯಸ್ಥ ಅಲೋಕ್ ಮೋಹನ್ ಅವರಿಗೆ ಮನವಿ ಸಲ್ಲಿಸಿತು

ಮುಖ್ಯಾಂಶಗಳು

- ಕಾನೂನು ಸುವ್ಯವಸ್ಥೆಯನ್ನು ಸರಿದಾರಿಗೆ ತರಲು ಮನವಿ
- 'ಅಪರಾಧ ಪ್ರಕರಣಗಳ ಸಂಖ್ಯೆ ಹೆಚ್ಚಳವಾದರೂ, ಕೃತ್ಯ ಎಸಗಿದವರ ವಿರುದ್ಧ ಕಠಿಣ ಕ್ರಮ ಕೈಗೊಂಡಿಲ್ಲ'

'ಸಿ.ಎಂ ಅಣತಿಯಂತೆ ಕೆಲಸ'

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ನಿರ್ದೇಶನದಂತೆ ರಾಜ್ಯದಲ್ಲಿ ಪೊಲೀಸರು ಕೆಲಸ ಮಾಡುತ್ತಿದ್ದಾರೆ ಎಂದು ಸಂಸದ ಡಿ.ವಿ. ಸದಾನಂದಗೌಡ ಆರೋಪಿಸಿದರು. 'ಮಹಿಳೆಯರು ವಾಯುವಿಹಾರಕ್ಕೆ ಹೋಗಲೂ ಭಯಪಡುವ ಪರಿಸ್ಥಿತಿ ಇದೆ. ಬಾಲಕಿಯನ್ನು ಹತ್ಯೆ ಮಾಡಿದವ ಓಡಿ ಹೋಗಿ ಇನ್ನೊಬ್ಬರ ಮೇಲೆ ಹಲ್ಲೆ ನಡೆಸುತ್ತಾನೆ. ಆರೋಪಿಯನ್ನು ಸಾರ್ವಜನಿಕರು ಹಿಡಿದು ಕೊಡುವಂಥ ಪರಿಸ್ಥಿತಿ ಬಂದಿದೆ. ಪೊಲೀಸರು ಆಡಳಿತ ಪಕ್ಷದ ಏಜೆಂಟರಂತೆ ಕೆಲಸ ಮಾಡುತ್ತಿದ್ದಾರೆ' ಎಂದು ದೂರಿದರು.

ಗೃಹ ಇಲಾಖೆ ನಿದ್ದೆ ಮಾಡುತ್ತಿದೆಯೇ: ಜೆಡಿಎಸ್ ಪ್ರಶ್ನೆ

ಬೆಂಗಳೂರು: ರಾಜ್ಯದಲ್ಲಿ ಅಪರಾಧ ಪ್ರಕರಣಗಳ ಹೆಚ್ಚಳ ಕುರಿತು 'ಪ್ರಜಾವಾಣಿ'ಯ ಶನಿವಾರದ ಸಂಚಿಕೆಯಲ್ಲಿ ಪ್ರಕಟವಾದ '430 ಕೊಲೆ, 198 ಅತ್ಯಾಚಾರ' ವರದಿಯನ್ನು ತನ್ನ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿರುವ ಜೆಡಿಎಸ್, 'ಗೃಹ ಇಲಾಖೆ ಕೆಲಸ ಮಾಡುತ್ತಿದೆಯಾ ಅಥವಾ ನಿದ್ದೆ ಮಾಡುತ್ತಿದೆಯಾ' ಎಂದು ಪ್ರಶ್ನಿಸಿದೆ.

'ಕಾನೂನು ಸುವ್ಯವಸ್ಥೆ ರಾಜ್ಯದಲ್ಲಿ ಸಂಪೂರ್ಣವಾಗಿ ಕುಸಿದಿದೆ. ಹಾದಿಬೀದಿಗಳಲ್ಲಿ ಕೊಲೆಗಳಾಗುತ್ತಿವೆ. ರಾಜ್ಯವು ಅತ್ಯಾಚಾರಿಗಳ ಆಡುಂಬೊಲವಾಗಿದೆ. ಬೆಂಗಳೂರು ಮಹಾನಗರದಲ್ಲಿ ಮಾದಕ ವಸ್ತುಗಳ ದಂಧೆಗೆ ಕಡಿವಾಣವೇ ಇಲ್ಲ. ಕೇವಲ 4 ತಿಂಗಳಲ್ಲಿ ಇಷ್ಟೆಲ್ಲಾ ನಡೆದಿದೆ. ಜನರಿಗೆ ಇಲ್ಲ ನೆಮ್ಮದಿಯ ಗ್ಯಾರಂಟಿ' ಎಂದು ಟೀಕಿಸಿದೆ.

ತನ್ನ 'ಎಕ್ಸ್' ಖಾತೆಯಲ್ಲಿ ಖಾಲಿ ಕುರ್ಚಿ ಚಿತ್ರ ಪ್ರಕಟಿಸಿರುವ ಬಿಜೆಪಿ, 'ಕರುನಾಡಿನ ಶಾಂತಿಗೆ ಬೆಂಕಿ ಬಿದ್ದಿದೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಮಹಿಳೆಯರು, ಹೆಣ್ಣುಮಕ್ಕಳು ನಿರ್ಭೀತಿಯಿಂದ ಓಡಾಡಲು ಗ್ಯಾರಂಟಿ ಕೊಡುವ ದಕ್ಷ ಗೃಹ ಸಚಿವರು ಬೇಕಾಗಿದ್ದಾರೆ' ಎಂದು 'ಟ್ಯಾಗ್ ಲೈನ್' ಹಾಕಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ–2: ಪರಿಷ್ಕೃತ ವೇಳಾಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ–2ರ ಪರಿಷ್ಕೃತ ವೇಳಾಪಟ್ಟಿಯನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಪ್ರಕಟಿಸಿದ್ದು, ಜೂನ್ 14ರಿಂದ 22ರವರೆಗೆ ನಡೆಯಲಿವೆ.

ಜೂನ್ 14–ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ (ಎನ್‌ಸಿಇಆರ್‌ಟಿ), ಸಂಸ್ಕೃತ, 15–ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು, ಎನ್‌ಎಸ್‌ಕ್ಯೂಎಫ್ ವಿಷಯಗಳು, 18–ಗಣಿತ, 19–ಅರ್ಥಶಾಸ್ತ್ರ, ಎಂಜಿನಿಯರಿಂಗ್ ವಿಷಯಗಳು, 20–ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ತಾನಿ, ಕರ್ನಾಟಕ ಸಂಗೀತ, 21–ದ್ವಿತೀಯ ಭಾಷೆಗಳಾದ ಇಂಗ್ಲಿಷ್, ಕನ್ನಡ, 22–ಸಮಾಜ ವಿಜ್ಞಾನ.

ನೇಹಾ, ಅಂಜಲಿ ಕೊಲೆ ಖಂಡಿಸಿ ಸ್ವಾಮೀಜಿಗಳ ನೇತೃತ್ವದಲ್ಲಿ ಪ್ರತಿಭಟನೆ

ಕೊಲೆ ಆರೋಪಿಗಳ ಎನ್‌ಕೌಂಟರ್‌ಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಅಂಜಲಿ ಅಂಬಿಗೇರ, ನೇಹಾ ಹಿರೇಮಠ ಕೊಲೆ ಖಂಡಿಸಿ ಹಾವೇರಿ ಜಿಲ್ಲೆಯ ನರಸಿಪುರ ನಿಜಶರಣ ಅಂಬಿಗರ ಚೌಡಯ್ಯ ಗುರು ಪೀಠದ ಶಾಂತಭೀಷ್ಮ ಚೌಡಯ್ಯ ಸ್ವಾಮಿಜಿ ನೇತೃತ್ವದಲ್ಲಿ ವಿವಿಧ ಸಮುದಾಯದವರು ಇಲ್ಲಿ ಶನಿವಾರ ಬೃಹತ್ ಪ್ರತಿಭಟನೆ ನಡೆಸಿದರು.

ಚನ್ನಮ್ಮ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ವಾಹನ ಸಂಚಾರ ತಡೆದರು. ಸ್ಥಳಕ್ಕೆ ಬಂದ ಜಿಲ್ಲಾಧಿಕಾರಿ ದಿವ್ಯಪ್ರಭು ಜಿ.ಆರ್.ಜೆ ಅವರಿಗೆ 'ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಬೇಕು. ಕುಟುಂಬಕ್ಕೆ ಗರಿಷ್ಠ ಮೊತ್ತದ ಪರಿಹಾರ ಕೊಡುವುದರ ಜೊತೆಗೆ ಒಬ್ಬರಿಗೆ ಸರ್ಕಾರಿ ನೌಕರಿ ನೀಡಬೇಕು. ಮನೆ ಮಂಜೂರು ಮಾಡಬೇಕು' ಎಂದು ಒತ್ತಾಯಿಸಿದರು.

ಧಾರವಾಡ ಜಿಲ್ಲೆಯ ಮನಸೂರ ರೇವಣ ಸಿದ್ದೇಶ್ವರ ಮಠದ ಬಸವರಾಜ ದೇವರು ಅವರು, 'ಆರೋಪಿಗಳಿಗೆ ಉತ್ತರ ಪ್ರದೇಶದ ಮಾದರಿಯಲ್ಲಿ ಅವರನ್ನು ಎನ್‌ಕೌಂಟರ್ ಮಾಡಬೇಕು. ಯಾವುದೇ ಕಾರಣಕ್ಕೂ ರಕ್ಷಣೆ ಮಾಡಬಾರದು' ಎಂದರು.

ಶಿರಹಟ್ಟಿಯ ಫಕೀರ ದಿಂಗಾಲೇಶ್ವರ ಸ್ವಾಮೀಜಿ, ಶಾಂತಭೀಷ್ಮ ಚೌಡಯ್ಯ ಸ್ವಾಮಿಜಿ, ಕುಂದಗೋಳದ ಅಭಿನವ ಬಸವಣ್ಣಜ್ಜನವರು ಸೇರಿದಂತೆ ವಿವಿಧ ಮಠಾಧೀಶರು ಇದ್ದರು. ಅಂಜಲಿ ಅವರ ಮನೆಗೆ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್ ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ತಮ್ಮ ಫೌಂಡೇಷನ್‌ನಿಂದ ₹2 ಲಕ್ಷ ನೆರವು ನೀಡಿದರು.



ಅಂಜಲಿ ಅಂಬಿಗೇರ, ನೇಹಾ ಹಿರೇಮಠ ಕೊಲೆ ಖಂಡಿಸಿ ಗಂಗಾಮತ ಸೇರಿ ವಿವಿಧ ಸಮುದಾಯದವರು ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ನೇತೃತ್ವದಲ್ಲಿ ಶನಿವಾರ ಹುಬ್ಬಳ್ಳಿಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು —ಪ್ರಜಾವಾಣಿ ಚಿತ್ರ

> **ಅಂಜಲಿ ಕೊಲೆ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಬೇಕು. ವಿಶೇಷ ಕೋರ್ಟ್ ಸ್ಥಾಪಿಸುವಂತೆ ಮುಖ್ಯಮಂತ್ರಿಗೆ ಮನವಿ ಮಾಡಲಾಗುವುದು**
>
> **ಸಂತೋಷ್ ಲಾಡ್,** ಜಿಲ್ಲಾ ಉಸ್ತುವಾರಿ ಸಚಿವ

ಗಿರೀಶ ವಿರುದ್ಧ ಇನ್ನೊಂದು ಪ್ರಕರಣ

ಹುಬ್ಬಳ್ಳಿ: ಇಲ್ಲಿನ ವೀರಾಪುರ ಓಣಿಯ ಅಂಜಲಿ ಅಂಬಿಗೇರ ಕೊಲೆ ಪ್ರಕರಣದ ಆರೋಪಿ ಗಿರೀಶ ಸಾವಂತ ವಿರುದ್ಧ ನಗರದ ಬೆಂಡಿಗೇರಿ ಪೊಲೀಸ್ ಠಾಣೆಯಲ್ಲಿ ಇನ್ನೊಂದು ಪ್ರಕರಣ ದಾಖಲಾಗಿದೆ.

'16 ವರ್ಷದ ನನ್ನ ಮಗಳಿಂದ ಗಿರೀಶ ₹3.30 ಲಕ್ಷ ಮೌಲ್ಯದ ಚಿನ್ನಾಭರಣ, ₹8 ಸಾವಿರ ಪಡೆದು ವಾಪಸ್ ನೀಡಿಲ್ಲ' ಎಂದು ವೀರಾಪುರ ಓಣಿಯ ವಿಜಯಲಕ್ಷ್ಮಿ ಮಡಿವಾಳರ ದೂರು ನೀಡಿದ್ದಾರೆ.

'6 ತಿಂಗಳ ಹಿಂದೆ ನನ್ನ ಮಗಳು ಟ್ಯೂಷನ್‌ಗೆ ಹೋಗುವಾಗ ಆತ ಅವಳಿಗೆ ಪರಿಚಯವಾಗಿದ್ದ. ಆಕೆಯನ್ನು ಪುಸಲಾಯಿಸಿ ಡಿಸೆಂಬರ್‌ನಲ್ಲಿ ಹಣದ ಅವಶ್ಯಕತೆ ಇದೆ ಎಂದು ಹೇಳಿ ಆಕೆಯಿಂದ ಚಿನ್ನಾಭರಣ ಮತ್ತು ಹಣ ಪಡೆದಿದ್ದ. ಅದನ್ನು ವಾಪಸ್ ಕೇಳಿದ್ದಕ್ಕೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಜೀವ ಬೆದರಿಕೆ ಹಾಕಿದ್ದ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

'ಕೋರ್ಟ್ ಕೊಡುವ ಶಿಕ್ಷೆ ಅನುಭವಿಸಲಿ'

ಹುಬ್ಬಳ್ಳಿ: 'ನ್ಯಾಯಾಲಯ ಕೊಡುವ ಶಿಕ್ಷೆಯನ್ನು ನನ್ನ ಮಗ ಅನುಭವಿಸಲಿ. ಅಂಥ ಮಗನಿಗೆ ಜಾಮೀನು ಕೊಟ್ಟು ಬಿಡಿಸಲು ಪ್ರಯತ್ನಿಸಲ್ಲ' ಎಂದು ಗಿರೀಶನ ತಾಯಿ ಸವಿತಾ ಸಾವಂತ ಹೇಳಿದರು

'ಅಂಜಲಿಯನ್ನು ಪ್ರೀತಿಸುತ್ತಿದ್ದು, ಮದುವೆಯಾಗುವುದಾಗಿ ಹೇಳಿದ್ದ. ಏಕೆ ಈ ರೀತಿ ಮಾಡಿದ್ದಾನೆ ಎಂಬುದು ಗೊತ್ತಿಲ್ಲ. 6 ತಿಂಗಳಿಂದ ನನ್ನ ಜತೆ ಇರಲಿಲ್ಲ. ಒಂದು ತಿಂಗಳಿನಿಂದ ಕರೆ ಮಾಡಿರಲಿಲ್ಲ.' ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು. 'ಹಿಂದೆ ಕಳವು ಪ್ರಕರಣದಲ್ಲಿ ಆತ ಜೈಲಿಗೆ ಹೋಗಿದ್ದ. ಹಿಂದೆಯೂ ಮಗನ ಮೇಲೆ ಒಂದು ಪ್ರಕರಣ ದಾಖಲಾಗಿತ್ತು. ಜಾಮೀನು ಕೊಟ್ಟು ಬಿಡಿಸಿದ್ದೆವು' ಎಂದರು.

ಚಾಕುವಿಗಾಗಿ ಪೊಲೀಸರ ಹುಡುಕಾಟ

ದಾವಣಗೆರೆ: ಹುಬ್ಬಳ್ಳಿಯ ಅಂಜಲಿ ಅಂಬಿಗೇರ ಹತ್ಯೆ ಆರೋಪಿ ಗಿರೀಶ ಸಾವಂತ, ಕೃತ್ಯಕ್ಕೆ ಬಳಸಿದ್ದ ಚಾಕುವಿನಿಂದಲೇ ರೈಲಿನಲ್ಲಿ ಮಹಿಳೆಗೆ ಇರಿದಿರುವ ಶಂಕೆ ವ್ಯಕ್ತವಾಗಿದೆ. ಪೊಲೀಸರು ದಾವಣಗೆರೆಯ ಮಾಯಕೊಂಡದ ಬಳಿ ಶನಿವಾರ ಚಾಕುವಿಗಾಗಿ ಹುಡುಕಾಟ ನಡೆಸಿದರು.

ಗದಗ ಜಿಲ್ಲೆ ಮುಳುಗುಂದದ ಚಿಂದಿಪೇಟೆ ಓಣಿಯ ನಿವಾಸಿ ಲಕ್ಷ್ಮಿ ಅವರಿಗೆ ಇರಿದಿದ್ದ ಆರೋಪಿ, ತಪ್ಪಿಸಿಕೊಳ್ಳಲು ರೈಲಿನಿಂದ ಜಿಗಿದಿದ್ದ. ಆತ ಬಿದ್ದಿದ್ದ ಸ್ಥಳ ಹಾಗೂ ಮಾಯಕೊಂಡದ ಆಸುಪಾಸಿನ ರೈಲ್ವೆ ಹಳಿಗಳ ಸುತ್ತಲೂ ಪೊಲೀಸರು ಚಾಕುವಿಗಾಗಿ ಹುಡುಕಾಡಿದರು.

'ಆರೋಪಿ ಅಂಜಲಿ ಕೊಲೆ ಹಾಗೂ ಮಹಿಳೆಗೆ ಇರಿಯಲು ಬಳಸಿದ್ದ ಚಾಕು ಒಂದೇ ಆಗಿರುವ ಸಾಧ್ಯತೆ ಇದೆ. ಆ ಚಾಕುವೇ ಮುಖ್ಯ ಸಾಕ್ಷ್ಯವಾಗಿದೆ. ಇದಕ್ಕಾಗಿ ರೈಲ್ವೆ ಪೊಲೀಸರು ಹಾಗೂ ಹಳಿಗಳ ನಿರ್ವಹಣೆ ಮಾಡುವ ಕೀ ಮ್ಯಾನ್‌ಗಳು ಹುಡುಕಾಟ ನಡೆಸಿದ್ದಾರೆ. ರೈಲಿನಿಂದ ಜಿಗಿಯುವ ವೇಳೆ ಆರೋಪಿ ಅದನ್ನು ಸುತ್ತಮುತ್ತ ಬಿಸಾಡಿರುವ ಸಾಧ್ಯತೆ ಇದೆ' ಎಂದು ರೈಲ್ವೆ ಪೊಲೀಸ್ ಮೂಲಗಳು ತಿಳಿಸಿವೆ.

'ಮೃತ ಅಂಜಲಿ ಅವರ ದೇಹದಲ್ಲಾಗಿರುವ ಗಾಯಕ್ಕೂ, ಲಕ್ಷ್ಮಿ ಅವರಿಗೆ ಆಗಿರುವ ಗಾಯಕ್ಕೂ ಸಾಮ್ಯತೆ ಕಂಡುಬಂದಿದೆ. ಇವೆರಡೂ ಕೃತ್ಯಗಳಿಗೂ ಆರೋಪಿ ಒಂದೇ ಆಯುಧ ಬಳಸಿರಬಹುದೆಂಬ ಅನುಮಾನ ಮೂಡಿದೆ' ಎಂದು ಹೇಳಿವೆ.

ಕೆಟ್ಟ ದೃಷ್ಟಿಯಿಂದ ನೋಡುತ್ತಿದ್ದ: 'ಮಗನಿಗೆ ತುಮಕೂರಿನ ಸಿದ್ಧಗಂಗಾ ಕಾಲೇಜಿನಲ್ಲಿ ಸೀಟು ಸಿಕ್ಕಿತ್ತು. ಆತನ ದಾಖಲಾತಿಗೆಂದು ತುಮಕೂರಿಗೆ ಹೋಗಿ ವಿಶ್ವ ಮಾನವ ಎಕ್ಸ್‌ಪ್ರೆಸ್ ರೈಲಿನಲ್ಲಿ ಪತಿ ಮಹಾಂತೇಶ ಸವಟೂರು ಅವರೊಂದಿಗೆ ಹುಬ್ಬಳ್ಳಿಗೆ ಬರುತ್ತಿದ್ದೆ. ಅರಸೀಕೆರೆಯಲ್ಲಿ ರೈಲು ಏರಿದ್ದ ಆರೋಪಿ ನಮ್ಮ ಸೀಟಿನ ಬಳಿ ಕುಳಿತ. ನನ್ನನ್ನು ಕೆಟ್ಟ ದೃಷ್ಟಿಯಿಂದ ನೋಡುತ್ತಿದ್ದ' ಎಂದು ಲಕ್ಷ್ಮಿ ರೈಲ್ವೆ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಚಿಕಿತ್ಸೆಗಾಗಿ ಒಂದೇ ಆಸ್ಪತ್ರೆಗೆ ದಾಖಲು: ಆರಂಭದಲ್ಲಿ ಲಕ್ಷ್ಮಿ ಅವರನ್ನು ಇಲ್ಲಿನ ಚಿಗಟೇರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅದಾಗಿ ಅರ್ಧಗಂಟೆಯ ನಂತರ ಗಿರೀಶನನ್ನೂ ಇದೇ ಆಸ್ಪತ್ರೆಗೆ ಚಿಕಿತ್ಸೆಗೆಂದು ಕರೆತರಲಾಗಿತ್ತು.

ಡಿಸಿಪಿ ರಾಜೀವ್ ಅಮಾನತು

ಹುಬ್ಬಳ್ಳಿ: ಅಂಜಲಿ ಅಂಬಿಗೇರ ಕೊಲೆ ಪ್ರಕರಣದಲ್ಲಿ ಕರ್ತವ್ಯ ಲೋಪ, ನಿರ್ಲಕ್ಷ್ಯ ವಹಿಸಿದ ಆರೋಪದ ಮೇಲೆ ಹುಬ್ಬಳ್ಳಿ-ಧಾರವಾಡ ಕಮಿಷನರೇಟ್‌ನ ಡಿಸಿಪಿ (ಕಾನೂನು ಮತ್ತು ಸುವ್ಯವಸ್ಥೆ) ರಾಜೀವ್.ಎಂ ಅವರನ್ನು ಅಮಾನತು ಮಾಡಿ ಶನಿವಾರ ಆದೇಶ ಹೊರಡಿಸಲಾಗಿದೆ.

2,207 ಗ್ರಾಮಗಳಲ್ಲಿ ನೀರಿನ ಕೊರತೆ

ಒಂದನೇ ಪುಟದಿಂದ

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 480 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಅನುಷ್ಠಾನಗೊಂಡಿವೆ. ಅವುಗಳ ಮೂಲಕ 6,828 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸಲಾಗುತ್ತಿದೆ. ನದಿ ಮತ್ತು ಜಲಾಶಯಗಳ ನೀರಿನ ಮೂಲ ಆಧರಿಸಿದ ಬಹುಗ್ರಾಮ ಯೋಜನೆಗಳಿಗೆ ನೀರಿನ ಕೊರತೆ ಎದುರಾಗುತ್ತದೆ. ಒಂದು ವಾರದ ಅವಧಿಯಲ್ಲಿ ಅಂತಹ 37 ಯೋಜನೆಗಳು ನೀರಿನ ಕೊರತೆಯಿಂದ ಸ್ಥಗಿತವಾಗಿವೆ. ಇದರಿಂದ 413 ಗ್ರಾಮಗಳಿಗೆ ಕುಡಿಯುವ ನೀರಿನ ಕೊರತೆ ಉದ್ಭವಿಸಿದೆ ಎಂದು ವಿವರ ನೀಡಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಕೊರತೆ ತಗ್ಗಿಸಲು ರಾಜ್ಯ ವಿಪತ್ತು ನಿರ್ವಹಣಾ ನಿಧಿಯಲ್ಲಿ ಲಭ್ಯವಿರುವ ಅನುದಾನವನ್ನು ಆದ್ಯತೆ ಮೇರೆ ಬಳಸಿಕೊಳ್ಳಲಾಗುತ್ತಿದೆ. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅನುದಾನವನ್ನೂ ಬಳಸಲಾಗುತ್ತಿದೆ. ಸಮಸ್ಯೆ ಇರುವ ಪ್ರದೇಶಗಳಲ್ಲಿ ನೀರು ಪೂರೈಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು 2024–25ನೇ ಆರ್ಥಿಕ ವರ್ಷದ ಅನುದಾನದಲ್ಲಿ ₹ 20 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ತೆರಿಗೆ ವಸೂಲಿಗೆ ‘ಬರ’

ಒಂದನೇ ಪುಟದಿಂದ

ಇದು ಚಾಮರಾಜನಗರ ಜಿಲ್ಲೆಯೊಂದರ ಕಥೆಯಲ್ಲ, ರಾಜ್ಯದ ಎಲ್ಲ ಜಿಲ್ಲೆಗಳದ್ದೂ ಇದೇ ಕಥೆ. 2023–24ನೇ ಸಾಲಿನಲ್ಲಿ ರಾಜ್ಯದ 31 ಜಿಲ್ಲೆಗಳ 5,949 ಗ್ರಾಮ ಪಂಚಾಯಿತಿಗಳಲ್ಲಿ ₹1,459.33 ಕೋಟಿ ತೆರಿಗೆ ಸಂಗ್ರಹ ಗುರಿ ಹೊಂದಲಾಗಿತ್ತು. ಆರ್ಥಿಕ ವರ್ಷಾಂತ್ಯಕ್ಕೆ ₹767.30 ಕೋಟಿ ಮಾತ್ರ ವಸೂಲಾಗಿದೆ. ಅಂದರೆ ಶೇ 52.58 ಅಷ್ಟೇ. 10 ಜಿಲ್ಲೆಗಳಲ್ಲಿ ಮಾತ್ರ ತೆರಿಗೆ ಸಂಗ್ರಹ ಅರ್ಧಕ್ಕಿಂತ ಹೆಚ್ಚಿದೆ.

‘ಗುರಿ ಸಾಧನೆಯಾಗದಿರುವುದಕ್ಕೆ ಬರಗಾಲವೇ ಕಾರಣ’ ಎಂಬುದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಮಜಾಯಿಷಿ. ಈ ವರ್ಷದ ಮಟ್ಟಿಗೆ ಇದನ್ನು ಒಪ್ಪಬಹುದಾದರೂ, ಕಾರಣ ಪೂರ್ತಿ ನಿಜವಲ್ಲ. ಬರವಿರಲಿ ಅಥವಾ ಉತ್ತಮ ಮಳೆಯಾಗಿ ಬೆಳೆ ಚೆನ್ನಾಗಿ ಬಂದರೂ ತೆರಿಗೆ ವಸೂಲಾತಿ ಗುರಿ ಮುಟ್ಟುತ್ತಿಲ್ಲ!

2023–24ನೇ ಆರ್ಥಿಕ ವರ್ಷ ಆರಂಭಕ್ಕೂ ಮುನ್ನ ವಸೂಲಾತಿಗೆ ಬಾಕಿ ಇದ್ದ ತೆರಿಗೆ ಮೊತ್ತ ₹2,101.03 ಕೋಟಿ! ಕಳೆದ ವರ್ಷದ ಬಾಕಿ ₹692.03 ಕೋಟಿ ಸೇರಿದಂತೆ, ಪಂಚಾಯಿತಿಗಳು ವಸೂಲಾತಿಗೆ ಉಳಿಸಿಕೊಂಡಿರುವ ತೆರಿಗೆ ಮೊತ್ತ ₹2,793.06 ಕೋಟಿ.

ಉತ್ತರ ಕನ್ನಡ ಜಿಲ್ಲೆ ತೆರಿಗೆ ಸಂಗ್ರಹದಲ್ಲಿ ಮೊದಲ ಸ್ಥಾನದಲ್ಲಿದ್ದರೆ, ರಾಮನಗರ ಜಿಲ್ಲೆ ಎರಡನೇ ಸ್ಥಾನ ಹಾಗೂ ದಕ್ಷಿಣ ಕನ್ನಡ ಜಿಲ್ಲೆ ಮೂರನೇ ಸ್ಥಾನದಲ್ಲಿದೆ. ರಾಜ್ಯದಲ್ಲೇ ಅತಿ ಹೆಚ್ಚು ಪಂಚಾಯಿತಿಗಳುಳ್ಳ ಬೆಳಗಾವಿ ಜಿಲ್ಲೆ ಕೊನೆಯ ಸ್ಥಾನದಲ್ಲಿದೆ. ಯಾದಗಿರಿ ಜಿಲ್ಲೆಯು ಕೊನೆಯಿಂದ ಎರಡನೇ ಸ್ಥಾನದಲ್ಲಿ, ಧಾರವಾಡ ಮೂರನೇ ಸ್ಥಾನದಲ್ಲಿದೆ.

ವಿಜಯನಗರ, ಹಾವೇರಿ, ಬೀದರ್, ಬಾಗಲಕೋಟೆ, ವಿಜಯಪುರ, ಚಿತ್ರದುರ್ಗ, ಗದಗ, ತುಮಕೂರು, ಚಿಕ್ಕಬಳ್ಳಾಪುರ, ಕಲಬುರ್ಗಿ, ಮಂಡ್ಯ, ಚಾಮರಾಜನಗರ, ದಾವಣಗೆರೆ, ಕೊಪ್ಪಳ, ಹಾಸನ, ಮೈಸೂರು ಹಾಗು ಕೋಲಾರ ಜಿಲ್ಲೆಯ ಸಾಧನೆ ಶೇ 50ರ ಒಳಗಿದೆ. ಚಿಕ್ಕಮಗಳೂರು, ಶಿವಮೊಗ್ಗ, ರಾಯಚೂರು, ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಕೊಡಗು, ಉಡುಪಿ ಹಾಗೂ ಬೆಂಗಳೂರು ಜಿಲ್ಲೆಯಲ್ಲಿ ಶೇ 50 ದಾಟಿದೆ. ಇದು ಕೊಂಚ ಸಮಾಧಾನಕರ.

ಕಾರಣಗಳೇನು?: ಬರ, ತೆರಿಗೆ ಪರಿಷ್ಕರಣೆ: ‘ಬರಗಾಲದೊಂದಿಗೆ, ಕಳೆದ ವರ್ಷ ರಾಜ್ಯದಾದ್ಯಂತ ಗ್ರಾಮೀಣ ಮಟ್ಟದ ಆಸ್ತಿ ತೆರಿಗೆ ಪರಿಷ್ಕರಿಸಿರುವುದು ಕೂಡ ವ್ಯತಿರಿಕ್ತ ಪರಿಣಾಮ ಬೀರಿದೆ’ ಎನ್ನುತ್ತಾರೆ ಅಧಿಕಾರಿಗಳು. ಪರಿಷ್ಕರಣೆಯಿಂದಾಗಿ ವಾರ್ಷಿಕ ಸಂಗ್ರಹ ಗುರಿ ಹೆಚ್ಚಾಗಿದ್ದು, ಕೆಲವು ಜಿಲ್ಲೆಗಳಲ್ಲಿ ದುಪ್ಪಟ್ಟಾಗಿದೆ.

2023–24ನೇ ಸಾಲಿನ ಆಸ್ತಿ ತೆರಿಗೆ ಸಂಗ್ರಹ, ಗುರಿ (₹ ಕೋಟಿಗಳಲ್ಲಿ)

ಜಿಲ್ಲೆ	ಗ್ರಾ.ಪಂ. ಸಂಖ್ಯೆ	ಹಿಂದಿನ ಬಾಕಿ	ವರ್ಷದ ಗುರಿ
ಬೆಳಗಾವಿ	500	164.47	115.80
ಯಾದಗಿರಿ	122	39.32	13.52
ಧಾರವಾಡ	145	31.33	27.11
ವಿಜಯನಗರ	137	36.84	16.68
ಹಾವೇರಿ	223	77.32	44.47
ಬೀದರ್	185	63.20	27.38
ಬಾಗಲಕೋಟೆ	195	49.23	33.60
ವಿಜಯಪುರ	211	79.46	37.85
ಚಿತ್ರದುರ್ಗ	189	79.96	39.45
ಗದಗ	122	35.49	16.84
ತುಮಕೂರು	330	106.14	75.45
ಚಿಕ್ಕಬಳ್ಳಾಪುರ	157	50.44	33.07
ಕಲಬುರಗಿ	261	96.94	29.80
ಮಂಡ್ಯ	233	103.94	59.79
ಚಾಮರಾಜನಗರ	130	36.83	18.06
ದಾವಣಗೆರೆ	194	40.17	26.19
ಕೊಪ್ಪಳ	153	31.35	21.41
ಹಾಸನ	264	64.12	52
ಮೈಸೂರು	256	109.84	72.70
ಕೋಲಾರ	154	61.82	46.32
ಚಿಕ್ಕಮಗಳೂರು	226	33.04	33.66
ಶಿವಮೊಗ್ಗ	262	19.92	27.63
ರಾಯಚೂರು	179	22.52	14.92
ಬಳ್ಳಾರಿ	100	12.63	10.01
ಬೆಂಗಳೂರು ಗ್ರಾ.	101	144.43	116.76
ಕೊಡಗು	103	11.52	13.25
ಉಡುಪಿ	155	8.50	32.91
ಬೆಂಗಳೂರು	84	409.10	298.09
ದಕ್ಷಿಣ ಕನ್ನಡ	223	13.25	38.04
ರಾಮನಗರ	126	63.85	51.05
ಉತ್ತರ ಕನ್ನಡ	229	4.07	15.45



ಚಿತ್ರ: ಗುರು ನಾವಳ್ಳಿ

₹2,101 ಕೋಟಿ 2022–23ರ ಅಂತ್ಯಕ್ಕೆ ಇದ್ದ ಬಾಕಿ ತೆರಿಗೆ

₹692 ಕೋಟಿ 2023–24ರ ಬಾಕಿ

₹2,793 ಕೋಟಿ ವಸೂಲು ಮಾಡಬೇಕಾದ ತೆರಿಗೆ

ಬೆಳಗಾವಿ ಜಿಲ್ಲೆಯಲ್ಲಿ ಗುರಿಯ ಮೊತ್ತ ಮೂರರಿಂದ ನಾಲ್ಕು ಪಟ್ಟು ಹೆಚ್ಚಾಗಿದೆ. ಕಳೆದ ವರ್ಷ ₹30 ಕೋಟಿ ಗುರಿಯಿತ್ತು. ಅದರಲ್ಲಿ ₹26 ಕೋಟಿಗೂ ಅಧಿಕ ಸಂಗ್ರಹಿಸಲಾಗಿದೆ. ತೆರಿಗೆ ಪರಿಷ್ಕರಣೆಯಾಗಿರುವುದರಿಂದ, ಜಿಲ್ಲೆಯ ಆಸ್ತಿ ತೆರಿಗೆ ಮೊತ್ತ ಬರೋಬ್ಬರಿ ₹115.80 ಕೋಟಿಗೆ ಏರಿದೆ!

‘ಈ ಬಾರಿ ಜಿಲ್ಲೆಯ ಎಲ್ಲ 15 ತಾಲ್ಲೂಕುಗಳಲ್ಲೂ ಬರಗಾಲ ಬಂದಿದ್ದು, ಜನರ ಕೈಯಲ್ಲಿ ದುಡ್ಡಿಲ್ಲದಿರುವುದರಿಂದ ತೆರಿಗೆ ಸಂಗ್ರಹಕ್ಕೆ ಹಿನ್ನಡೆ ಉಂಟಾಗಿದೆ’ ಎನ್ನುತ್ತಾರೆ ಅಧಿಕಾರಿಗಳು.

‘506 ಪಂಚಾಯಿತಿಗಳುಳ್ಳ ಬೆಳಗಾವಿ ಜಿಲ್ಲೆಯ ವ್ಯಾಪ್ತಿ ರಾಜ್ಯದಲ್ಲೇ ಅತಿ ದೊಡ್ಡದು. ಪ್ರಸಕ್ತ ಸಾಲಿನ ಗುರಿಯಲ್ಲಿ ₹26.5 ಕೋಟಿ ಸಂಗ್ರಹಿಸಲಾಗಿದೆ. ಶೇಕಡಾವಾರು ಲೆಕ್ಕಾಚಾರದಲ್ಲಿ ಕಡಿಮೆ. ಮೊತ್ತ ಗಮನಿಸಿದರೆ ಸಾಧನೆಯೇ. ಸೂಕ್ತ ರೀತಿಯಲ್ಲಿ ಸಂಗ್ರಹಿಸಿದ್ದೇವೆ’ ಎಂಬುದು ಜಿಪಂ ಸಿಇಒ ರಾಹುಲ್ ಶಿಂಧೆ ಅವರ ಪ್ರತಿಪಾದನೆ.

ಕಲ್ಯಾಣ ಕರ್ನಾಟಕದಲ್ಲಿ...: ಕಲ್ಯಾಣ ಕರ್ನಾಟಕ ಭಾಗದ ಬಹುತೇಕ ಜಿಲ್ಲೆಗಳಲ್ಲೂ ಬರಗಾಲದ ಜೊತೆಗೆ ತೆರಿಗೆ ಹೆಚ್ಚಳವೂ ತೆರಿಗೆ ಆದಾಯ ಕುಸಿತಕ್ಕೆ ಕಾರಣವಾಗಿದೆ. ಕಲಬುರಗಿ ಜಿಲ್ಲೆಯಲ್ಲಿ 261 ಗ್ರಾಮ ಪಂಚಾಯಿತಿಗಳಿದ್ದು, 2023-24ನೇ ಸಾಲಿಗೆ ₹29.80 ಕೋಟಿ ಗುರಿ ಪೈಕಿ ₹11.03 ಕೋಟಿ ಸಂಗ್ರಹಿಸಲಾಗಿದ್ದು, ಅಂದರೆ ಬರೀ ಶೇ 37.46ರಷ್ಟು ಗುರಿ ಸಾಧಿಸಲಾಗಿದೆ. 2022-23ನೇ ಸಾಲಿಗೆ ಹೋಲಿಸಿದರೆ, ಈ ಸಾಲಿನಲ್ಲಿ ತೆರಿಗೆಯನ್ನು ಶೇ 120ರಷ್ಟು ಹೆಚ್ಚಿಸಲಾಗಿದೆ. ತೆರಿಗೆ ಸಂಗ್ರಹ ಕುಸಿಯಲು ಇದೂ ಒಂದು ಕಾರಣ. ಕಲ್ಯಾಣ ಭಾಗದ ಇತರೆ ಜಿಲ್ಲೆಗಳಲ್ಲೂ ಇದೇ ಪರಿಸ್ಥಿತಿ.

ತಾಂತ್ರಿಕ ಸಮಸ್ಯೆ: ತಾಂತ್ರಿಕ ಸಮಸ್ಯೆಯೂ ವಸೂಲಾತಿ ಮೇಲೆ ಪ್ರಭಾವ ಬೀರುತ್ತಿದೆ. ಆನ್‌ಲೈನ್‌ನಲ್ಲೂ ತೆರಿಗೆ ಪಾವತಿಸಬಹುದು. ಆದರೆ ನೆಟ್‌ವರ್ಕ್ ಸಮಸ್ಯೆ ಕಾಡುತ್ತದೆ. ಇ-ತೆರಿಗೆ ವ್ಯವಸ್ಥೆ ಕೆಲಸ ಮಾಡದ ಸಂದರ್ಭಗಳೂ ಇವೆ.

‘ಸಿಬ್ಬಂದಿ ಕೊರತೆ ಮತ್ತು ಮನೆಗಳು ಹೆಚ್ಚಾಗಿರುವುದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೆರಿಗೆ ಸಂಗ್ರಹದ ಮೇಲೆ ಪರಿಣಾಮ ಬೀರಿದೆ. ಸಾಫ್ಟ್‌ವೇರ್ ಅಪ್‌ಡೇಟ್ ಆಗಿದ್ದರೂ ಒಟ್ಟಾರೆ ವ್ಯವಸ್ಥೆ ಅಪ್‌ಡೇಟ್ ಆಗದೇ ಇರುವುದರಿಂದ ತೆರಿಗೆ ಸಂಗ್ರಹದಲ್ಲಿ ಏರಿಳಿತ ಕಂಡುಬರುತ್ತಿದೆ’ ಎನ್ನುತ್ತಾರೆ ಸಿಬ್ಬಂದಿ.

‘ಆಸ್ತಿಗಳ ವಿವರ ಆನ್‌ಲೈನ್‌ನಲ್ಲಿ ನೋಂದಣಿಯಾಗದ ಕಡೆ ಹಳೆಯ ಪದ್ಧತಿಯಂತೆಯೇ ತೆರಿಗೆ ವಸೂಲು ಮಾಡಲಾಗುತ್ತಿದೆ. ಅವು ತಕ್ಷಣಕ್ಕೆ ಆನ್‌ಲೈನ್‌ನಲ್ಲಿ ದಾಖಲಾಗುವುದಿಲ್ಲ. ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಒಂದು ವೇಳೆ ತೆರಿಗೆ ಕಟ್ಟಿಸಿಕೊಂಡಿದ್ದರೂ, ಡಿಜಿಟಲ್ ವ್ಯವಸ್ಥೆಯಲ್ಲಿ ಬಾಕಿ ಎಂದೇ ತೋರಿಸುತ್ತದೆ’ ಎನ್ನುತ್ತಾರೆ ಅಭಿವೃದ್ಧಿ ಅಧಿಕಾರಿಗಳು.

ಬಿಲ್ ಕಲೆಕ್ಟರ್‌ಗಳ ನಿರ್ಲಕ್ಷ್ಯ: ‘ಆಸ್ತಿ ತೆರಿಗೆ ಸೇರಿದಂತೆ ವಿವಿಧ ಶುಲ್ಕಗಳನ್ನು ಸಂಗ್ರಹಿಸಲೆಂದೇ ಇರುವ ಬಿಲ್ ಕಲೆಕ್ಟರ್‌ಗಳ ನಿರ್ಲಕ್ಷ್ಯವೂ ತೆರಿಗೆ ಸಂಗ್ರಹ ನಿರೀಕ್ಷೆಯಂತೆ ಆಗದಿರಲು ಪ್ರಮುಖ ಕಾರಣ’ ಎನ್ನುತ್ತಾರೆ ಅಧಿಕಾರಿಗಳು.

‘ಸ್ಥಳೀಯರಾಗಿರುವ ಬಹುತೇಕ ಬಿಲ್ ಕಲೆಕ್ಟರ್‌ಗಳಿಗೆ ಆಸ್ತಿ ಮಾಲೀಕರ ಪರಿಚಯ, ಬಾಂಧವ್ಯ ಚೆನ್ನಾಗಿರುತ್ತದೆ. ಮನಸ್ಸು ಮಾಡಿದರೆ ಪೂರ್ಣ ತೆರಿಗೆ ಸಂಗ್ರಹಿಸಬಹುದು. ಆದರೆ, ಬಾಕಿ ಉಳಿಸಿಕೊಂಡವರ ಬೆನ್ನುಹತ್ತಿ ತೆರಿಗೆ ಸಂಗ್ರಹಿಸುವುದಿಲ್ಲ’ ಎಂಬುದು ಪಿಡಿಒಗಳ ಆರೋಪ.

‘ಬಿಲ್‌ಕಲೆಕ್ಟರ್‌ಗಳಿಗೆ ಜಿಲ್ಲಾ ಪಂಚಾಯಿತಿಗಳು ಹೊಣೆಗಾರಿಕೆ ನಿಗದಿ ಪಡಿಸಿಲ್ಲ. ತೆರಿಗೆ ವಸೂಲಿ ಗುರಿಯನ್ನೂ ನೀಡಿಲ್ಲ. ಅಧಿಕಾರಿಗಳು ಪಿಡಿಒಗಳನ್ನೇ ಉತ್ತರದಾಯಿಗಳನ್ನಾಗಿಸುತ್ತಿದ್ದಾರೆ. ಬಹುತೇಕ ಪಿಡಿಒಗಳು ಅನ್ಯಸ್ಥಳದವರು. ಸ್ಥಳೀಯರೇ ಆಗಿರುವ ಕಾರ್ಯದರ್ಶಿಗಳು, ಬಿಲ್ ಕಲೆಕ್ಟರ್‌ಗಳು, ಡಾಟಾ ಎಂಟ್ರಿ ಆಪರೇಟರ್‌ಗಳು, ಅಧ್ಯಕ್ಷರು, ಸದಸ್ಯರು ಹಾಗೂ ಪಿಡಿಒಗಳ ನಡುವೆ ಸಾಮರಸ್ಯವಿರುವುದಿಲ್ಲ. ಇದು ತೆರಿಗೆ ಸಂಗ್ರಹ ಸೇರಿದಂತೆ ಪಂಚಾಯಿತಿಯ ಒಟ್ಟಾರೆ ಕಾರ್ಯನಿರ್ವಹಣೆಯ ಮೇಲೆ ಪರಿಣಾಮ ಬೀರುತ್ತದೆ’ ಎಂಬುದು ಪಂಚಾಯಿತಿಗಳ ರಾಜಕೀಯ ಬಲ್ಲ ಹಿರಿಯ ಅಧಿಕಾರಿಗಳ ವಿಶ್ಲೇಷಣೆ.

ಆರ್ಥಿಕ ಶಿಸ್ತಿರದ ಬಿಲ್ ಕಲೆಕ್ಟರ್‌ಗಳು ಮಾಲೀಕರಿಂದ ತೆರಿಗೆ ವಸೂಲಿ ಮಾಡಿ, ದಾಖಲೆಯಲ್ಲಿ ನಮೂದಿಸದ ಸಾಧ್ಯತೆಗಳೂ ಇರುತ್ತವೆ. ಹಣ ದುರ್ಬಳಕೆ ಮಾಡಿಕೊಂಡ ಪ್ರಕರಣಗಳು ರಾಜ್ಯದಾದ್ಯಂತ ವರದಿಯಾಗುತ್ತಿರುತ್ತವೆ.

ಹೆಚ್ಚಿದ ಒತ್ತಡ: ಸಿಬ್ಬಂದಿ ಕೊರತೆಯೂ ತೆರಿಗೆ ಸಂಗ್ರಹ ಕುಸಿಯಲು ಮತ್ತೊಂದು ಕಾರಣ.

‘ದೊಡ್ಡ ಪಂಚಾಯಿತಿಗಳಲ್ಲೂ ಒಬ್ಬಿಬ್ಬರು ಬಿಲ್ ಕಲೆಕ್ಟರ್‌ಗಳೇ ಎಲ್ಲ ಶುಲ್ಕಗಳನ್ನು ಸಂಗ್ರಹಿಸಬೇಕು. ಹಿಗ್ಗಿದ ಗ್ರಾಮ ವ್ಯಾಪ್ತಿ ಮತ್ತು ಮನೆಗಳ ಹೆಚ್ಚಳಕ್ಕೆ ತಕ್ಕಂತೆ ಬಿಲ್ ಕಲೆಕ್ಟರ್‌ಗಳ ನೇಮಕವಾಗದೆ, ಹಾಲಿ ಸಿಬ್ಬಂದಿ ಮೇಲೆ ಹೆಚ್ಚು ಒತ್ತಡವಿದೆ. ಬರ, ನೆರೆ, ಕೋವಿಡ್ ಸಂದರ್ಭದಲ್ಲಿ ಜನರು ತೆರಿಗೆ ಕಟ್ಟುವುದಿಲ್ಲ’ ಎಂದು ಅಸಹಾಯಕತೆ ವ್ಯಕ್ತಪಡಿಸುತ್ತಾರೆ ಅವರು.

ಜವಾಬ್ದಾರಿ ಮರೆಯುವ ಜನ: ಬಿಲ್ ಕಲೆಕ್ಟರ್‌ಗಳು ಕೇಳಿದಾಗಲೂ ಆಸ್ತಿ ಮಾಲೀಕರು ತೆರಿಗೆ ಪಾವತಿಸದ ಸನ್ನಿವೇಶಗಳೂ ಇವೆ. ‘ಸರ್ಕಾರದ ಸೌಲಭ್ಯ ಪಡೆಯಲು ಆಸ್ತಿ ತೆರಿಗೆ ಪಾವತಿ ಕಡ್ಡಾಯವಾಗಿರುವುದರಿಂದ ಹೆಚ್ಚಿನವರು ಪಾವತಿಸುತ್ತಾರೆ. ಬಡ, ಮಧ್ಯಮ ವರ್ಗದವರು ಪಾವತಿಸಿದರೆ, ಶ್ರೀಮಂತರೇ ಹೆಚ್ಚು ಬಾಕಿ ಉಳಿಸಿಕೊಂಡಿದ್ದಾರೆ. ತಗಾದೆ ನೋಟಿಸ್ ಕೊಟ್ಟರೂ ಸ್ಪಂದಿಸುವುದಿಲ್ಲ. ಪ್ರಭಾವ ಬಳಸಿ ಪಾರಾಗಲೆತ್ನಿಸುತ್ತಾರೆ’ ಎಂಬುದು ಬಹುತೇಕ ಪಂಚಾಯಿತಿ ಮಟ್ಟದ ಅಧಿಕಾರಿಗಳ ಆರೋಪ.

‘ತೆರಿಗೆ ಪಾವತಿಯ ಬಗ್ಗೆ ಜನಜಾಗೃತಿ ಮೂಡಿಸುತ್ತಿದ್ದರೂ, ಗುರಿ ತಲುಪಲಾಗುತ್ತಿಲ್ಲ. ಈ ವರ್ಷ ಬರ ಇರುವ ಕಾರಣಕ್ಕೆ ಆಸ್ತಿ ಮಾಲೀಕರು ಪಾವತಿ ಮಾಡಿಲ್ಲ’ ಎಂಬುದು ಎಲ್ಲ ಜಿಲ್ಲೆಗಳ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರ ಹೇಳಿಕೆ.

ಅಭಿವೃದ್ಧಿಗೆ ಹೊಡೆತ: ಸಮರ್ಪಕ ತೆರಿಗೆ ಸಂಗ್ರಹವಿಲ್ಲದೆ, ಸಂಪನ್ಮೂಲ ಕ್ರೋಡೀಕರಣವಾಗದೇ ಆರ್ಥಿಕವಾಗಿ ಸ್ವಾವಲಂಬನೆಯ ಯತ್ನಕ್ಕೂ ಹಿನ್ನಡೆಯಾಗುತ್ತಿದೆ. ಅಭಿವೃದ್ಧಿ ಕೆಲಸಗಳಿಗೆ ಸರ್ಕಾರದ ಅನುದಾನವನ್ನೇ ಕಾಯಬೇಕಾಗಿದೆ. ಸಂಗ್ರಹವಾಗಿರುವ ಆಸ್ತಿ ತೆರಿಗೆಯಲ್ಲಿ ಶೇ 40ರಷ್ಟು ವೇತನಕ್ಕೆ, ಶೇ 25ರಷ್ಟು ಪರಿಶಿಷ್ಟ ಸಮುದಾಯದ ಅಭಿವೃದ್ಧಿಗೆ, ಶೇ 5ರಷ್ಟು ಅಂಗವಿಕಲರಿಗೆ ಹಾಗೂ ಉಳಿದದ್ದನ್ನು ಇನ್ನಿತರ ಅಭಿವೃದ್ಧಿ ಕೆಲಸಗಳಿಗೆ ಬಳಸಬೇಕೆಂಬ ನಿಯಮವಿದೆ.

‘ತೆರಿಗೆ ಸಂಗ್ರಹ ಕಡಿಮೆಯಾದರೆ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆಯಾಗುವುದಿಲ್ಲ. ರಾಜ್ಯ ಸರ್ಕಾರದಿಂದ 15ನೇ ಹಣಕಾಸು ಯೋಜನೆ ಅನುದಾನ ಬರುತ್ತದೆ. ವೇತನ ಪಾವತಿಗೂ ಅನುದಾನ ಬರುತ್ತದೆ’ ಎಂಬುದು ಪಂಚಾಯಿತಿ ಅಧಿಕಾರಿಗಳ ಹೇಳಿಕೆ.

ರಾಜ್ಯದ ಗ್ರಾಮ ಪಂಚಾಯಿತಿಗಳು ವಿದ್ಯುತ್ ಕಂಪನಿಗಳಿಗೆ ₹3,700 ಕೋಟಿಗೂ ಹೆಚ್ಚು ಶುಲ್ಕ ಬಾಕಿ ಇರಿಸಿಕೊಂಡಿವೆ. ರಸ್ತೆ, ಚರಂಡಿ ಸೇರಿದಂತೆ ಅಭಿವೃದ್ಧಿ ಕೆಲಸಗಳು ಅನುದಾನ ಬಂದರಷ್ಟೇ ಸಾಧ್ಯವೆಂಬ ಸನ್ನಿವೇಶವಿದೆ. ಸಣ್ಣ ದುರಸ್ತಿಗಳಿಗೂ ಕೆಲವು ಪಂಚಾಯಿತಿಯಲ್ಲಿ ಸಂಪನ್ಮೂಲವಿಲ್ಲ.

ರಾಜ್ಯದ ಅಲ್ಲಲ್ಲಿ, ತೆರಿಗೆ ಸಂಗ್ರಹದ ಗುರಿ ಸಾಧಿಸಲು ಮಾದರಿ ಪ್ರಯೋಗಗಳು ನಡೆದಿವೆ. ‘ಬಳ್ಳಾರಿ ಜಿಲ್ಲೆಯ ಗ್ರಾಮ ಪಂಚಾಯಿತಿಗಳಲ್ಲಿ ಹೆಚ್ಚು ತೆರಿಗೆ ಸಂಗ್ರಹಿಸಿದ ಬಿಲ್ ಕಲೆಕ್ಟರ್, ಪಿಡಿಒ, ನೀರುಗಂಟಿಗಳಿಗೆ ಪ್ರಶಸ್ತಿ ನೀಡಲಾಗುತ್ತದೆ. ಹೀಗಾಗಿ ಈ ಬಾರಿ ಹೆಚ್ಚು ತೆರಿಗೆ ಸಂಗ್ರಹವಾಗಿದೆ’ ಎನ್ನುತ್ತಾರೆ ಅಧಿಕಾರಿಗಳು.

‘ಐದಾರು ವರ್ಷಗಳ ಹಿಂದಿನ ಅವಧಿಗೆ ಹೋಲಿಸಿದರೆ, ಈಗ ತೆರಿಗೆ ಸಂಗ್ರಹದಲ್ಲಿ ಹೆಚ್ಚಳವಾಗಿದೆ. ಮುಂದಿನ ವರ್ಷಗಳಲ್ಲಿ ಸಾಧನೆಯ ಪ್ರಮಾಣ ಇನ್ನಷ್ಟು ಹೆಚ್ಚಳವಾಗಲಿದೆ’ ಎಂಬ ಆಶಾಭಾವನೆ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಲ್ಲಿದೆ.

ತೆರಿಗೆ ಸಂಗ್ರಹ ಹೆಚ್ಚಳಕ್ಕೆ ಶಿಫಾರಸು

ಈ ಮಧ್ಯೆ, ‘ಗ್ರಾಮ ಪಂಚಾಯಿತಿಗಳಲ್ಲಿ ತೆರಿಗೆ ಸಂಗ್ರಹ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು’ ಎಂದು ಐದನೇ ಹಣಕಾಸು ಆಯೋಗ ಶಿಫಾರಸು ಮಾಡಿದೆ.

ಗ್ರಾಮೀಣಾಭಿವೃದ್ಧಿ ಇಲಾಖೆಯ ಅಂಕಿ ಅಂಶಗಳ ಪ್ರಕಾರ, ರಾಜ್ಯದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವ 2.25 ಕೋಟಿ ಸ್ವತ್ತುಗಳ ಪೈಕಿ ಅರ್ಧದಷ್ಟು ಆಸ್ತಿಗಳು ತೆರಿಗೆ ವ್ಯಾಪ್ತಿಗೆ ಬಂದಿಲ್ಲ. ವೈಜ್ಞಾನಿಕವಾಗಿ ತೆರಿಗೆ ಸಂಗ್ರಹಿಸಲು ಸರ್ಕಾರ ಪಂಚತಂತ್ರ 2. ತಂತ್ರಾಂಶವನ್ನೂ ಅಭಿವೃದ್ಧಿ ಪಡಿಸಿದೆ.

‘ಗ್ರಾಮಗಳು ಈಗ ಹಳೆಯ ಗ್ರಾಮ ಠಾಣಾ ವ್ಯಾಪ್ತಿಯನ್ನೂ ಮೀರಿ ಅಭಿವೃದ್ಧಿ ಹೊಂದಿವೆ. ಆ ಆಸ್ತಿಗಳನ್ನೆಲ್ಲ ತೆರಿಗೆ ವ್ಯಾಪ್ತಿಗೆ ಸೇರಿಸಬೇಕು. ಅವುಗಳಿಗೂ ತೆರಿಗೆ ವಿಧಿಸಿದರೆ ಪಂಚಾಯಿತಿಗಳ ಆದಾಯ ಹೆಚ್ಚಾಗುತ್ತದೆ’ ಎಂದು ಆಯೋಗ ಅಭಿಪ್ರಾಯಪಟ್ಟಿದೆ.

ಸ್ವಾವಲಂಬನೆಯತ್ತ ಕೊಪ್ಪಳದ ದಿಟ್ಟ ಹೆಜ್ಜೆ

ಕೊಪ್ಪಳ ಜಿಲ್ಲೆಯ ಗ್ರಾಮ ಪಂಚಾಯಿತಿಗಳು ಅಭಿವೃದ್ಧಿ ಹಾಗೂ ಸಿಬ್ಬಂದಿ ವೇತನಕ್ಕೆ, ಭವಿಷ್ಯದಲ್ಲಿ ಹಣಕಾಸು ಹೊಂದಿಸಿಕೊಳ್ಳಲು ಸ್ವಾಲವಂಬನೆಯತ್ತ ದಿಟ್ಟಹೆಜ್ಜೆ ಇರಿಸಿವೆ.

ಕೊಪ್ಪಳ ತಾಲ್ಲೂಕಿನ ಲೇಬಗೇರಿ ಮತ್ತು ಕಾರಟಗಿ ತಾಲ್ಲೂಕಿನ ಬೆನ್ನೂರು ಸೇರಿದಂತೆ ಜಿಲ್ಲೆಯ 12 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕಸ ತೆರಿಗೆ ಆರಂಭಿಸಲಾಗಿದೆ. ಕಸ ವಿಲೇವಾರಿ ಮಾಡುವವರು ಪ್ರತಿ ಮನೆಯಿಂದ ಒಂದು ದಿನಕ್ಕೆ ₹1 ಸಂಗ್ರಹಿಸುತ್ತಿದ್ದಾರೆ. ಕಸದ ಆಧಾರದ ಮೇಲೆ ಹೋಟೆಲ್‌ಗಳಿಂದಲೂ ಕಸತೆರಿಗೆ ಸಂಗ್ರಹಿಸಿ, ಅದನ್ನು ಕಸ ವಿಲೇವಾರಿ ಸಿಬ್ಬಂದಿಯ ವೇತನಕ್ಕೆ ಬಳಸಲಾಗುತ್ತಿದೆ.

ಕೆಲ ತಿಂಗಳುಗಳ ಹಿಂದೆ ಜಿಲ್ಲೆಯಲ್ಲಿ ಹೊಸ ಪ್ರಯೋಗ ಆರಂಭಿಸಲಾಗಿದ್ದು, ಕಸ ಸಂಗ್ರಹದಿಂದ ದೊಡ್ಡಮಟ್ಟದಲ್ಲಿ ಆದಾಯ ಬರುತ್ತಿಲ್ಲ. ಆದ್ದರಿಂದ ಜಿಲ್ಲಾ ಪಂಚಾಯಿತಿಯೇ ಕಸ ಸಂಗ್ರಹ ಮಾಡುವವರಿಗೆ ವಾರ್ಷಿಕ ವೇತನಕ್ಕೆ ಅನುದಾನ ಮೀಸಲಿಟ್ಟಿದೆ. ಮುಂದಿನ ವರ್ಷದ ವೇಳೆಗೆ ಕಸ ಸಂಗ್ರಹದ ಹಣ ಬರುವ ಗುರಿಯನ್ನು ಜಿಲ್ಲಾ ಪಂಚಾಯಿತಿ ಹೊಂದಿದೆ.

ಸಂಗ್ರಹವಾಗುವ ಪ್ಲಾಸ್ಟಿಕ್ ಸೇರಿದಂತೆ ಇತರ ತ್ಯಾಜ್ಯವನ್ನು ಸಂಸ್ಕರಿಸಿ ಮಾರಾಟ ಮಾಡಿ ಪಡೆಯುವ ಆದಾಯವನ್ನೇ ಆಯಾ ಗ್ರಾಮ ಪಂಚಾಯಿತಿಯೇ ಬಳಸಿಕೊಳ್ಳಲು ಅವಕಾಶ ನೀಡಲಾಗಿದೆ. ಮಹಿಳೆಯರಾದರೆ ಮುತುವರ್ಜಿಯಿಂದ ಕಸ ಸಂಗ್ರಹಿಸುತ್ತಾರೆಂಬ ಕಾರಣಕ್ಕೆ ಜಿಲ್ಲೆಯ 171 ಮಹಿಳೆಯರಿಗೆ ಕಸ ವಿಲೇವಾರಿ ವಾಹನಗಳ ಚಾಲನಾ ತರಬೇತಿ ನೀಡಲಾಗಿದೆ. ಅದರಲ್ಲಿ ಕೆಲ ಮಹಿಳೆಯರು ವಾಹನ ಚಲಾಯಿಸುತ್ತಿದ್ದಾರೆ. ‘ಕಸ ಸಂಗ್ರಹದಿಂದ ಬರುವ ಆದಾಯವನ್ನೇ ವಾಹನ ಚಾಲನೆ ಸಿಬ್ಬಂದಿ, ಗ್ರಾಮ ಪಂಚಾಯಿತಿ ಅಭಿವೃದ್ಧಿಗೆ ಬಳಸಲು ಉದ್ದೇಶಿಸಲಾಗಿದೆ. ಈ ಯೋಜನೆ ಗ್ರಾ.ಪಂ.ಗಳ ಸ್ವಾವಲಂಬನೆಗೆ ಪೂರಕವಾಗಲಿದೆ’ ಎಂದು ಕೊಪ್ಪಳ ಜಿಲ್ಲಾ ಪಂಚಾಯಿತಿ ಸಿಇಒ ರಾಹುಲ್ ರತ್ನಂ ಪಾಂಡೆ ತಿಳಿಸಿದರು.

ಉತ್ತರ ಕನ್ನಡ ಮುಂಚೂಣಿಯಲ್ಲಿ

ಭೌಗೋಳಿಕವಾಗಿ ದೊಡ್ಡದಾದ, ಗುಡ್ಡಗಾಡು ಪ್ರದೇಶವುಳ್ಳ ಉತ್ತರ ಕನ್ನಡದಲ್ಲಿ 229 ಗ್ರಾಮ ಪಂಚಾಯಿತಿಗಳಿವೆ. ಪಂಚಾಯಿತಿ ಕಚೇರಿಯಿಂದ 35 ಕಿ.ಮೀ ದೂರವಿರುವ ಗ್ರಾಮಗಳೂ ಸಾಕಷ್ಟಿವೆ. ಕಚೇರಿ ಕೆಲಸಕ್ಕೆ ಬರುವವರೇ ಕಡಿಮೆ. ಭೇಟಿ ಕೊಡುವುದು ಅಧಿಕಾರಿಗಳಿಗೆ ಕಷ್ಟಕರ ಎನ್ನಿಸುವಂಥ ಸ್ಥಳಗಳೂ ಇವೆ. ಹಾಗಿದ್ದರೂ ತೆರಿಗೆ ಸಂಗ್ರಹದಲ್ಲಿ ಜಿಲ್ಲೆಯ ಗ್ರಾಮ ಪಂಚಾಯಿತಿಗಳು ಉತ್ತಮ ಸಾಧನೆ ಪ್ರದರ್ಶಿಸಿವೆ.

‘ತೆರಿಗೆ ಸಂಗ್ರಹಣೆಗೆ ಮನೆ ಭೇಟಿಯ ಬದಲು, ಜನ ಕಚೇರಿ ಕೆಲಸಕ್ಕೆ ಬಂದಾಗಲೇ ತೆರಿಗೆ ಪಾವತಿಸುವಂತೆ ತಿಳಿಸುತ್ತಿದ್ದೆವು. ಗ್ರಾಮಸಭೆಗಳಲ್ಲಿ, ಸರ್ಕಾರಿ ಕಾರ್ಯಕ್ರಮಗಳಲ್ಲೂ ಜಾಗೃತಿ ಮೂಡಿಸಲಾಗುತ್ತಿತ್ತು. ಹೀಗಾಗಿ ಜನ ತೆರಿಗೆಯನ್ನು ಸಕಾಲಕ್ಕೆ ಪಾವತಿಸಿದ್ದಾರೆ’ ಎನ್ನುತ್ತಾರೆ ಪಿಡಿಒ ಒಬ್ಬರು.

‘ತೆರಿಗೆ ಸಂಗ್ರಹದಲ್ಲಿ ಜನವರಿವರೆಗೂ ಪಂಚಾಯಿತಿಗಳು ಹಿಂದೆ ಇದ್ದವು. ಪಿಡಿಒಗಳ ಸಭೆಯಲ್ಲಿ ಕಟ್ಟುನಿಟ್ಟಿನ ಸೂಚನೆ ನೀಡಲಾಗಿತ್ತು. ವಿವಿಧ ಸಭೆ, ಚರ್ಚೆಗಳ ಸಂದರ್ಭದಲ್ಲಿಯೂ ತೆರಿಗೆ ಸಂಗ್ರಹದ ಪ್ರಗತಿಯ ಕುರಿತು ಮಾಹಿತಿ ಪಡೆಯಲಾಗುತ್ತಿತ್ತು. ಹೀಗಾಗಿ ಪಿಡಿಒ ಹಾಗೂ ಸಿಬ್ಬಂದಿ ಗಣನೀಯ ಸಾಧನೆ ಮಾಡಿದರು’ ಎಂದು ಉತ್ತರ ಕನ್ನಡ ಜಿಲ್ಲಾ ಪಂಚಾಯಿತಿ ಸಿಇಒ ಈಶ್ವರ ಕಾಂಡು ಪ್ರತಿಕ್ರಿಯಿಸಿದರು.



ಕಲಬುರಗಿ ಜಿಲ್ಲೆಯ ಭೂಪಾಲ ತೆಗನೂರ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಸಿಬ್ಬಂದಿ ತೆರಿಗೆ ಸಂಗ್ರಹ ಅಭಿಯಾನದ ಭಾಗವಾಗಿ ಮನೆಗಳಿಗೆ ಭೇಟಿ ನೀಡಿದ ನೋಟ



ಗ್ರಾಮ ಪಂಚಾಯಿತಿಗಳ ತೆರಿಗೆಯನ್ನು ವಸೂಲಿ ಮಾಡಲು ಇದೇ ಮೊದಲ ಬಾರಿಗೆ ಬ್ಯಾಂಕ್ ಜೊತೆಗೆ ಒಪ್ಪಂದ ಮಾಡಿಕೊಂಡು ಪಿಒಎಸ್ ಮಷಿನ್‌ಗಳನ್ನು ಉಪಯೋಗಿಸಲಾಗುತ್ತಿದೆ. ಇದರಿಂದಾಗಿ ಸುಮಾರು ₹ 500 ಕೋಟಿ ಹೆಚ್ಚುವರಿ ತೆರಿಗೆ ಮೊತ್ತ ಸಂಗ್ರಹವಾಗಿದೆ.

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವ

ಈ ವರ್ಷ ಬರವಿದೆ. ಜನರಲ್ಲಿ ಹಣವಿಲ್ಲ. ತೆರಿಗೆ ಪಾವತಿಸಲು ಆಸಕ್ತಿ ತೋರಿಲ್ಲ. ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದೇವೆ ವಿನಾಯಕ ಪ್ರಕಾಶ

ಧನಿಗೊಂಡ, ಅಧ್ಯಕ್ಷ, ಹಿರೆ ಹೊನ್ನಳ್ಳಿ ಗ್ರಾ.ಪಂ., ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ

ತಾಂತ್ರಿಕ ಸಮಸ್ಯೆಯಿಂದ ತೆರಿಗೆ ಸಂಗ್ರಹದಲ್ಲಿ ಏರುಪೇರಾಗಿದೆ. ಕೆಲವೆಡೆ ಸಂಪೂರ್ಣ ಸಂಗ್ರಹವಾಗಿದ್ದರೂ ಕಂಪ್ಯೂಟರ್‌ನಲ್ಲಿ ಅಪ್‌ಡೇಟ್ ಆಗುತ್ತಿಲ್ಲ.

ವಿಶ್ವನಾಥ ಬೈಲಮೂಲೆ, ಪಿಡಿಒ ಅನಂತಾಡಿ ಗ್ರಾ.ಪಂ. ದಕ್ಷಿಣ ಕನ್ನಡ

ಕೆಲವು ಪಂಚಾಯಿತಿಗಳಲ್ಲಿ ತೆರಿಗೆ ಪರಿಷ್ಕರಣೆಯಾಗಿದೆ. ಇನ್ನೂ ಕೆಲವೆಡೆ ಮಾಡಿಲ್ಲ. ಇದರಿಂದಾಗಿ ಸಂಗ್ರಹದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗಿದೆ.

ಸುರೇಶ್ ಇಟ್ನಾಳ್, ಸಿಇಒ, ಜಿಲ್ಲಾ ಪಂಚಾಯಿತಿ, ದಾವಣಗೆರೆ


ನಿರಂತರ ಅಭಿಯಾನದ ಕಾರಣ ತೆರಿಗೆ ಸಂಗ್ರಹ ಉತ್ತಮವಾಗಿದೆ. ಬರ ಇಲ್ಲದಿದ್ದರೆ ಹೆಚ್ಚು ಸಂಗ್ರಹವಾಗುತ್ತಿತ್ತು. ಬಾಕಿ ಮೊತ್ತದ ವಸೂಲಿಗೂ ಯತ್ನ ನಡೆದಿದೆ

ರಾಹುಲ್ ಶರಣಪ್ಪ ಸಂಕನೂರ, ಸಿಇಒ, ಜಿಲ್ಲಾ ಪಂಚಾಯಿತಿ, ಬಳ್ಳಾರಿ

ತೆರಿಗೆ ಪಾವತಿ ಕುರಿತು ಜಿಲ್ಲಾ ಪಂಚಾಯಿತಿಗಳು ಜಾಗೃತಿ ಅಭಿಯಾನಗಳನ್ನು ಹಮ್ಮಿಕೊಂಡರೂ ಜನರಲ್ಲಿ ದೊಡ್ಡಮಟ್ಟದಲ್ಲಿ ಅರಿವು ಮೂಡುತ್ತಿಲ್ಲ. ಅಭಿಯಾನಗಳು ಪರಿಣಾಮಕಾರಿಯಾಗಿ ನಡೆದ ಜಿಲ್ಲೆಗಳಲ್ಲಿ ತೆರಿಗೆ ವಸೂಲಾತಿಯಲ್ಲಿ ಸುಧಾರಣೆಯಾಗಿದೆ. ಆದರೆ, ಪೂರ್ಣ ಯಶಸ್ಸು ಸಿಕ್ಕಿಲ್ಲ.

ಪೂರಕ ಮಾಹಿತಿ: ಕೆ.ಜೆ.ಮರಿಯಪ್ಪ, ವಿಕ್ರಂ ಕಾಂತಿಕೆರೆ, ಬಷೀರ ಅಹ್ಮದ್ ನಗಾರಿ, ಡಿ.ಕೆ.ಬಸವರಾಜು, ಗಣಪತಿ ಹೆಗಡೆ, ಕೆ.ಎಸ್.ಗಿರೀಶ, ಸಂತೋಷ್ ಚಿನಗುಡಿ, ಪ್ರಮೋದ್ ಮತ್ತು ಜಿಲ್ಲಾ ವರದಿಗಾರರು

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 19-5-1999

● **ಸೋನಿಯಾ ಮನ ಒಲಿಕೆಗೆ ಸಾಮೂಹಿಕ ರಾಜೀನಾಮೆ**

ನವದೆಹಲಿ, ಮೇ 18 (ಯುಎನ್ಐ, ಪಿಟಿಐ)– ಸೋನಿಯಾ ಗಾಂಧಿಗೆ ಬೆಂಬಲದ ಸಂಕೇತವಾಗಿ ಹಾಗೂ ಅವರ ಮನ ಒಲಿಸಲು ಎಲ್ಲಾ ಐಎಐಸಿಸಿ ಪದಾಧಿಕಾರಿಗಳು ಹಾಗೂ ಕಾಂಗ್ರೆಸ್ ಸರ್ಕಾರಗಳು ಇರುವ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳು ಸೇರಿದಂತೆ ನೂರಾರು ಮಂದಿ ಇಂದು ತಮ್ಮ ಸ್ಥಾನಗಳಿಗೆ ಸಾಮೂಹಿಕ ರಾಜೀನಾಮೆ ನೀಡಿದರು. ಆದರೆ, ರಾತ್ರಿಯವರೆಗೆ ತಮ್ಮ ದೃಢ ನಿರ್ಧಾರಕ್ಕೇ ಗಟ್ಟಿಯಾಗಿ ಅಂಟಿಕೊಂಡಿರುವ ಸೋನಿಯಾ ಅವರು ರಾಜೀನಾಮೆ ವಾಪಸು ಪಡೆಯಲು ನಿರಾಕರಿಸಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 19-5-1974

● **ಭಾರತದಿಂದ ಮೊದಲ ಬಾರಿಗೆ ಅಣುಸಾಧನ ಸ್ಫೋಟನೆ**

ನವದೆಹಲಿ, ಮೇ 18– ಶಾಂತಿ ಉದ್ದೇಶದಿಂದ ರೂಪಿಸಿರುವ ಅಣುಸಾಧನ ಒಂದನ್ನು ಭಾರತವು ಇಂದು ಪರೀಕ್ಷಾರ್ಥವಾಗಿ ಭೂಗರ್ಭದಲ್ಲಿ ಸ್ಫೋಟಿಸಿ, ವಿಶ್ವದ ಅಣ್ವಸ್ತ್ರ ರಾಷ್ಟ್ರಗಳ ಪಂಕ್ತಿಯನ್ನು ಸೇರಿತು.

‘ಪಶ್ಚಿಮ ಭಾರತದಲ್ಲಿ’ 10ರಿಂದ 15 ಕಿಲೋಟನ್ ಸಾಮರ್ಥ್ಯದ ಅಣ್ವಸ್ತ್ರವನ್ನು ಬೆಳಿಗ್ಗೆ ಸ್ಫೋಟಿಸಲಾಯಿತೆಂದು ಅಣುಶಕ್ತಿ ಆಯೋಗದ ಅಧ್ಯಕ್ಷರು ಇಂದು ಸಂಜೆ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಆದರೆ, ಈ ಪರೀಕ್ಷೆ ಎಲ್ಲಿ ನಡೆಯಿತು ಎಂಬ ಮಾಹಿತಿಯನ್ನು ಹಂಚಿಕೊಳ್ಳಲು ಅವರು ನಿರಾಕರಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಮೇ 19, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಏಕಾದಶಿ ಗಂ. 13-51 ನಕ್ಷತ್ರ: ಹಸ್ತ ಗಂ. 27-16 ಯೋಗ: ವಜ್ರ ಗಂ. 11-24 ಕರಣ : ವಿಷ್ಟಿ ಗಂ. 13-51, ವೃಷಭ ಮಾಸದ ನೇ 06 ದಿನ, ಮಳೆನಕ್ಷತ್ರ: ಕೃತ್ತಿಕಾ 3.

ರಾಹುಕಾಲ : ಸಾಯಂಕಾಲ 04-30 - 06-00

ಸೂರ್ಯೋದಯ : 06-07 ಸೂರ್ಯಾಸ್ತ : 06-47

ಮುಸ್ಲಿಂ ದಿನಾಂಕ : 10 ಜುಲ್ಖಾಯದ್

ಅದೃಷ್ಟ ಸಂಖ್ಯೆ : 2, 8

ಮೇಷ: ನಿಮ್ಮ ವಿಶಿಷ್ಟ ರೀತಿಯ ವೃತ್ತಿ ಕೌಶಲ್ಯದ ಸೂಕ್ಷ್ಮ ವಿಚಾರಗಳನ್ನು ತಿಳಿಯಲು ಸಹೋದ್ಯೋಗಿಯೊಬ್ಬರು ಅಪೇಕ್ಷಿಸಲಿದ್ದಾರೆ. ಸಕುಟುಂಬ ಸಮೇತರಾಗಿ ಯಾವುದಾದರೂ ಶಕ್ತಿ ಪೀಠಕ್ಕೆ ಭೇಟಿ ನೀಡುವ ಯೋಚನೆ ಮಾಡಿ.

ವೃಷಭ: ಮೋಸದ ವ್ಯವಹಾರ ಹಾಗೂ ಕಾನೂನುಬಾಹಿರ ಸಂಗತಿಗಳಲ್ಲಿ ತಲೆ ಹಾಕಬೇಡಿ. ನಿಮ್ಮ ವ್ಯಾಪಾರ ವ್ಯವಹಾರಗಳು ಅಧಿಕ ವರಮಾನ ತರಲಿದೆ. ಮಕ್ಕಳ ದುಡಿಮೆಯಿಂದ ಬರುತ್ತಿರುವ ಹಣದ ಮೂಲದ ಬಗ್ಗೆ ಗಮನಹರಿಸಿ.

ಮಿಥುನ: ಊರಿನ ಅಭಿವೃದ್ಧಿಗೆ ನಿಮ್ಮಿಂದ ಅಡಿಪಾಯ ಹಾಕುವ ಕೆಲಸ ನಡೆಯಲಿದೆ. ಜಾನುವಾರುಗಳ ಆರೋಗ್ಯ ನಿರ್ವಹಣೆಗಾಗಿ ಹಣ ವಿನಿಯೋಗ ಮಾಡಲಿದ್ದೀರಿ. ಓದುವುದರಲ್ಲಿ ಹೆಚ್ಚಿನ ಆಸಕ್ತಿ ಮೂಡಲಿದೆ.

ಕರ್ಕಾಟಕ: ಸೋದರ ಮಾವನ ಸಹಾಯದಿಂದ ನಿಮ್ಮ ಕಟ್ಟಡ ನಿರ್ಮಾಣಕ್ಕೆ ಸಹಾಯವಾಗಬಹುದು. ಜಗಳ ಸರಿಪಡಿಸಲು ಹೋಗಿ ನೀವೇ ಜಗಳದಲ್ಲಿ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ ಇದೆ. ಮನೋರಂಜನೆಗಾಗಿ ಖರ್ಚು ಮಾಡುವಿರಿ.

ಸಿಂಹ: ವ್ಯಂಗ್ಯಚಿತ್ರ ಕಲಾವಿದರಿಗೆ ಮಾಸ ಪತ್ರಿಕೆಯ ಸಂಸ್ಥೆಯಿಂದ ಹೆಚ್ಚಿನ ಅವಕಾಶಗಳು ಸಿಗಲಿವೆ. ಬಾಲ್ಯದ ಮುಗ್ಧತೆಯಿಂದ ತಪ್ಪಿಸಿಕೊಂಡ ಹಲವಾರು ಅವಕಾಶಗಳನ್ನು ನೆನೆದು ಮರುಗುವಿರಿ. ಮಕ್ಕಳಿಗೆ ಓದಿನಲ್ಲಿ ಏಕಾಗ್ರತೆ ಹೆಚ್ಚಲಿದೆ.

ಕನ್ಯಾ: ಮುತ್ತು ರತ್ನಗಳ ಆಭರಣದ ಖರೀದಿ ಮಾಡುವಾಗ ನಿಮ್ಮ ಸ್ನೇಹಿತೆಯ ಅಭಿರುಚಿ ನಿಮಗೆ ಸರಿ ಎನ್ನಿಸಬಹುದು. ರಾಜಕಾರಣಿಗಳಿಗೆ ನಾಯಕತ್ವದಲ್ಲಿ ಬದಲಾವಣೆಯಾಗುವ ಸಂಭವ ಇದೆ. ವಾತ-ಪಿತ್ತಗಳ ನಿರ್ಲಕ್ಷ್ಯ ಬೇಡ.

ತುಲಾ: ಅಭಿಪ್ರಾಯ ವಿನಿಮಯಗಳಿಂದ ವಿವಿಧ ವಿಷಯಗಳಿಗೆ ಸಂಬಂಧಿಸಿ ಸೂಕ್ತ ತೀರ್ಮಾನ ಸಿಗಲಿದೆ. ಅದರಿಂದ ಮನಸ್ಸಿಗೆ ನೆಮ್ಮದಿಯಾಗಲಿದೆ. ಹಣ್ಣು-ತರಕಾರಿಗಳ ವ್ಯಾಪಾರಿಗಳಿಗೆ ಲಾಭಾಂಶ ವೃದ್ಧಿಯಾಗಲಿದೆ.

ವೃಶ್ಚಿಕ: ಮಾತನಾಡುವಾಗ ನೀವು ಬಳಸುವ ಪದಗಳಿಂದಾಗಿ ಇಂದು ಕೆಲವರು ನಿಮ್ಮ ವ್ಯಕ್ತಿತ್ವವನ್ನು ಲೆಕ್ಕ ಹಾಕುತ್ತಾರೆ. ಕೌಟುಂಬಿಕ ಸಂಬಂಧಗಳನ್ನು ಇನ್ನಷ್ಟು ಗಟ್ಟಿಗೊಳಿಸಿಕೊಳ್ಳಲು ಕಾರ್ಯ ಪ್ರವೃತ್ತರಾಗುವಿರಿ.

ಧನು: ಈ ದಿನ ನೀವು ಆಡಿದ ಮಾತುಗಳು ತಿರುಗಿ ನಿಮಗೆ ಮುಳ್ಳಾಗುವ ಸಾಧ್ಯತೆ ಇದೆ. ಇತರರಿಗೆ ಪ್ರಶ್ನಿಸಲಾಗದ ರೀತಿಯಲ್ಲಿ ಮಾತುಗಳನ್ನಾಡಿ, ನಿಮ್ಮ ಗೌರವ ಹಾಗೂ ಸ್ವಾಭಿಮಾನವನ್ನು ಕಾಪಾಡಿಕೊಳ್ಳುವಿರಿ.

ಮಕರ: ಮನೆಯಲ್ಲಿ ಅಲಂಕಾರಿಕ ವಸ್ತುಗಳ ಖರೀದಿಯಿಂದ ಅಧಿಕ ಖರ್ಚು ಬಂದೀತು. ಸಗಟು ವ್ಯಾಪಾರಿಗಳಿಗೆ ಖರ್ಚು-ವೆಚ್ಚಗಳು ಆದಾಯದ ಮಿತಿಯೊಳಗಿರಲಿದೆ. ವ್ಯವಹಾರದಲ್ಲಿ ನಷ್ಟವಾಗಬಹುದು. ಜಾಗ್ರತೆ ವಹಿಸಿ.

ಕುಂಭ: ನಿಮ್ಮನ್ನು ಪ್ರೀತಿಸುವವರ ಮಾರ್ಗದರ್ಶನ ಈ ದಿನ ದೊರೆಯಲಿದ್ದು, ಹೊಸ ಚೈತನ್ಯ ಬರಲಿದೆ. ನಿಮ್ಮ ನಾಜೂಕಿನ ಕೆಲಸಗಳಿಂದಾಗಿ ವಿಶೇಷ ಮನ್ನಣೆ ಗಳಿಸುವಿರಿ. ನಿಮ್ಮ ಅಭಿಪ್ರಾಯಗಳನ್ನು ಪ್ರತಿಪಾದಿಸಲು ಅಂಜಿಕೆ ಬೇಡ.

ಮೀನ: ಅಧಿಕಾರಿ ಹಾಗೂ ಹಿರಿಯರಿಂದ ಸಹಾಯ ಸಹಕಾರ ಅಪೇಕ್ಷಿಸುವ ದಿನ. ಸಣ್ಣ ಸಣ್ಣ ವಿಚಾರದಲ್ಲಿ ಅಶಾಂತಿ ತೋರಿ ಬಂದು ದಾಂಪತ್ಯದಲ್ಲಿ ಕಿರಿಕಿರಿ ಎನಿಸುವುದು. ಪಾಲುದಾರಿಕೆ ವ್ಯವಹಾರಗಳು ಲಾಭ ತರಲಿವೆ.

ಪದಬಂಧ 5685


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮೈನಾ ಹಕ್ಕಿ ಇಲ್ಲಿದೆ (4)
3.ಅದೇ ತಾನೆ ಮೂಡುತ್ತಿರುವ ಸೂರ್ಯ (4)
5.ಕೊನೆಗೆ ಫಲವಿದ್ದರೂ ಇದು ಸೋಲು! (3)
6.ಮಣ್ಣು ಕಲೆಸಿದ ನೀರು (3)
8.ಸಾಮರ್ಥ್ಯ ಇಲ್ಲಿ ಕಾಣುತ್ತಿದೆ (3)
9.ಅರ್ಚನೆ ಮಾಡುತ್ತಿರುವ ಪೂಜಾರಿ (3)
10.ರೀತಿಯೊಡಗೂಡುವ ಜೋಡು ನುಡಿ (3)
12.ಜಗಳಕ್ಕೊಂದು ಪರ್ಯಾಯ ಪದ (3)
14.ದಿಕ್ಕು ತೋಚದಿರುವುದು (4)
15.ನೆರೆಮನೆ ಹತ್ತಿರವಿರುವ ಕಾರಾಗೃಹ (4)

ಮೇಲಿಂದ ಕೆಳಕ್ಕೆ

1. 1.ನಿದ್ರಿಸುವಾಗ ಉಸಿರಾಟದಿಂದ ಆಗುವ ಶಬ್ದ (3)
2.ಈತ ಕವಿತೆ ಬರೆಯುವವನು (2)
3.ಬಾಲಕನಿಗೆ ಮೂಡಿದ ಲಾಂಗೂಲ (2)
4.ತೊಂದರೆ ಹೀಗೆ ಬಂದಿದೆ (3)
7.ದುಃಖಾಂತವಾದ ಪ್ರಹಸನ (5)
8.ಅನುಪಸ್ಥಿತಿಯನ್ನು ಹೀಗೆನ್ನಿ (5)
9.ಎಂಟು ಭಾಗಗಳುಳ್ಳದ್ದು (3)
11.ತಪ್ಪಿಗಾಗಿ ತೆರಬೇಕಾದ ದಂಡ (3)
12.ಉತ್ತರದವರ ಚಿಕ್ಕಮ್ಮ (2)
13.ಹಾವಸೆಯಿರುವ ಜಾಗದಲ್ಲಿನ ರಂಗೋಲಿ (2)



5684ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1. ಛಾಯಾಗ್ರಾಹಿ 3. ಪರಿತ್ಯಾಗ
5. ಷಿಕಾರಿ 6. ಜ್ಞಾತಿ
7. ನೆಪ 9. ಯತಿ
11. ವಾರ 12. ಮಾರ್ದವ
14. ಸುಶಿಕ್ಷಿತ 15. ನಕ್ತಂಚರ.

ಮೇಲಿಂದ ಕೆಳಕ್ಕೆ:
1. ಛಾಪಾಖಾನೆ 2. ಹಿತೈಷಿ
3. ಪರಾರಿ 4. ಗರತಿ
6. ಜ್ಞಾನೇಂದ್ರಿಯ 8. ಪರಿಕರ
10. ತಿರಸ್ಕಾರ 11. ವಾರಸು
12. ಮಾರುತ 13. ವಸನ

ಸುಡೊಕು 6070

		1		7		6		2
		5	2		9			
2	8			1			9	5
	5		7			8		
	2			8		5		9
8		6		9				
6				5		9		7
		8					5	
5		3		6		1		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6069 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹರಿಯಾಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಚುನಾವಣಾ ಪ್ರಚಾರ • ಕಾಂಗ್ರೆಸ್ ವಿರುದ್ಧ ವಾಗ್ದಾಳಿ

‘370ನೇ ವಿಧಿ ಖಬರಸ್ತಾನ್‌ನಲ್ಲಿ ಸಮಾಧಿ’

ಅಂಬಾಲಾ/ಸೋನಿಪತ್ (ಪಿಟಿಐ): ಕಾಂಗ್ರೆಸ್ ಪಕ್ಷವು 370ನೇ ವಿಧಿಯನ್ನು ಮರಳಿ ಜಾರಿಗೆ ತರುವ ಕನಸನ್ನು ಮರೆಯಬೇಕು. ಅದನ್ನು ಖಬರಸ್ತಾನ್‌ನಲ್ಲಿ (ಸ್ಮಶಾನ) ಸಮಾಧಿ ಮಾಡಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದರು.

ಹರಿಯಾಣದ ಗೋಹಾನಾದಲ್ಲಿ ಚುನಾವಣಾ ರ‍್ಯಾಲಿ ನಡೆಸಿದ ಅವರು, ‘ಕಾಂಗ್ರೆಸ್‌ನ ದೇಶದ್ರೋಹಿ ಕಾರ್ಯಸೂಚಿ ಈಗ ಗುಟ್ಟಾಗಿ ಉಳಿದಿಲ್ಲ. ಮೋದಿ 10 ವರ್ಷದಲ್ಲಿ ಏನು ಮಾಡಿದ್ದಾರೋ ನಾವು ಅಧಿಕಾರಕ್ಕೆ ಬಂದ ನಂತರ ಅದನ್ನು ಬದಲಿಸುತ್ತೇವೆ ಎಂದು ಅವರು ಬಹಿರಂಗವಾಗಿಯೇ ಹೇಳುತ್ತಿದ್ದಾರೆ’ ಎಂದು ನುಡಿದರು.

370ನೇ ವಿಧಿಯನ್ನು ಮತ್ತೆ ಜಾರಿಗೆ ತರುವ ಅವರ ಕನಸು ಎಂದೂ ಈಡೇರುವುದಿಲ್ಲ ಎಂದು ಪ್ರತಿಪಾದಿಸಿದರು.

ಹರಿಯಾಣದಲ್ಲಿ ತಮ್ಮ ಮೊದಲ ಚುನಾವಣಾ ರ‍್ಯಾಲಿ ನಡೆಸಿದ ಅವರು, ‘ಹಿಂದಿನ ಕಾಂಗ್ರೆಸ್ ಸರ್ಕಾರ ದುರ್ಬಲ ಸರ್ಕಾರವಾಗಿತ್ತು. ಮೋದಿ ಅವರ ಬಲಿಷ್ಠ ಸರ್ಕಾರವು 370ನೇ ವಿಧಿಯ ಗೋಡೆಯನ್ನು ಕೆಡವಿತು ಮತ್ತು ಅದರಿಂದ ಜಮ್ಮು ಕಾಶ್ಮೀರವು ಅಭಿವೃದ್ಧಿಯ ಮಾರ್ಗದಲ್ಲಿ ಮುನ್ನಡೆಯುತ್ತಿದೆ’ ಎಂದು ಹೇಳಿದರು.

‘ಕಾಂಗ್ರೆಸ್ ಚರಿತ್ರೆ ಎಂದರೆ, ಅದು ಭಾರತದ ಸೈನ್ಯ ಮತ್ತು ಸೈನಿಕರಿಗೆ ವಿಶ್ವಾಸದ್ರೋಹವೆಸಗಿದ ಕಥೆ. ‘ಜೀಪ್ ಹಗರಣ’ ಕಾಂಗ್ರೆಸ್ ಅವಧಿಯ ಮೊದಲ ಹಗರಣವಾಗಿತ್ತು’ ಎಂದು ಆರೋಪಿಸಿದರು.

‘ಕಾಂಗ್ರೆಸ್ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿರುವವರೆಗೆ ಹೊಸ ಹೊಸ ಹಗರಣಗಳಿಗೆ ಕಾರಣವಾಯಿತು. ಬೊಫೋರ್ಸ್ ಹಗರಣ, ಸಬ್‌ಮರಿನ್ ಹಗರಣ, ಹೆಲಿಕಾಪ್ಟರ್ ಹಗರಣ.. ಹೀಗೆ ಕಾಂಗ್ರೆಸ್, ಸೇನೆಯನ್ನು ದುರ್ಬಲವಾಗಿ ಇಟ್ಟಿತ್ತು. ಯಾಕೆ ಗೊತ್ತಾ? ವಿದೇಶಗಳಿಂದ ಶಸ್ತ್ರಾಸ್ತ್ರಗಳನ್ನು ಖರೀದಿಸುವ ನೆಪದಲ್ಲಿ ಬೃಹತ್ ಮೊತ್ತ ಗಳಿಸಬಹುದಲ್ಲ’ ಎಂದು ಆರೋಪಿಸಿದರು.



ಹರಿಯಾಣದ ಅಂಬಾಲಾದಲ್ಲಿ ನಡೆದ ಲೋಕಸಭಾ ಚುನಾವಣಾ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡರು–ಪಿಟಿಐ ಚಿತ್ರ

‘ಅಗ್ನಿಪಥ’ ಯೋಜನೆ ಕಸದ ಬುಟ್ಟಿಗೆ: ರಾಹುಲ್

ನವದೆಹಲಿ (ಪಿಟಿಐ): ‘ಇಂಡಿಯಾ’ ಕೂಟವು ಅಧಿಕಾರಕ್ಕೆ ಬಂದರೆ, ‘ಅಗ್ನಿಪಥ’ ಯೋಜನೆಯನ್ನು ಕಸದ ಬುಟ್ಟಿಗೆ ಎಸೆಯುತ್ತೇವೆ. ಜಿಎಸ್‌ಟಿ ಅನ್ನು ಸರಳೀಕರಣಗೊಳಿಸುತ್ತೇವೆ ಮತ್ತು ಬೃಹತ್ ಉದ್ದಿಮೆದಾರರ ಬದಲಿಗೆ ಸಣ್ಣ ಉದ್ದಿಮೆದಾರರಿಗೆ ನೆರವು ನೀಡುತ್ತೇವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶನಿವಾರ ಹೇಳಿದರು.

ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಈ ಚುನಾವಣೆಯಲ್ಲಿ ಆಸಕ್ತಿಕರ ವಿಚಾರ ಏನೆಂದರೆ, ನಾನು ಎಎಪಿಗೆ ಮತ ಹಾಕುತ್ತೇನೆ, ಅರವಿಂದ ಕೇಜ್ರಿವಾಲ್ ಅವರು ಕಾಂಗ್ರೆಸ್‌ಗೆ ಮತ ಹಾಕುತ್ತಾರೆ’ ಎಂದು ಹೇಳಿದರು.

‘ಪ್ರಧಾನಿ ನರೇಂದ್ರ ಮೋದಿ ಅವರು ನನ್ನೊಂದಿಗೆ ಚರ್ಚೆಗೆ ಸಿದ್ಧರಿಲ್ಲ. ಏಕೆಂದರೆ, ಅದಾನಿ ಅವರಂತಹ ಉದ್ಯಮಪತಿಗಳೊಂದಿಗಿನ ನಂಟಿನ ಬಗ್ಗೆ ಮತ್ತು ಚುನಾವಣಾ ಬಾಂಡ್‌ಗಳನ್ನು ದುರುಪಯೋಗಪಡಿಸಿಕೊಂಡ ಬಗ್ಗೆ ಉತ್ತರಿಸಲು ಅವರಿಗೆ ಸಾಧ್ಯವಿಲ್ಲ’ ಎಂದರು.

ಪ್ರಧಾನಿ ಹೇಳಿದ್ದು...

- ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರವು ಎಂಎಸ್‌ಪಿಗಾಗಿ 10 ವರ್ಷಗಳಲ್ಲಿ ₹7.5 ಲಕ್ಷ ಕೋಟಿ ಖರ್ಚು ಮಾಡಿದರೆ, ಬಿಜೆಪಿ ಸರ್ಕಾರವು ಎಂಎಸ್‌ಪಿಗಾಗಿ ₹20 ಲಕ್ಷ ಕೋಟಿ ಖರ್ಚು ಮಾಡಿದೆ.
- ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಕಬ್ಬು ಬೆಳೆಗಾರರ ಬಾಕಿ ಮೊತ್ತವು ₹60 ಸಾವಿರ ಕೋಟಿವರೆಗೆ ಇತ್ತು. ಪ್ರಸಕ್ತ ವರ್ಷದಲ್ಲಿಯೇ ನಾವು ₹1.14 ಲಕ್ಷ ಕೋಟಿ ಬಾಕಿ ಪಾವತಿಸಿದ್ದೇವೆ.
- ಪಾಕಿಸ್ತಾನದ ಕೈಯಲ್ಲಿ ಹಿಂದೆ ಬಾಂಬ್‌ಗಳಿದ್ದವು. ಈಗ ಭಿಕ್ಷಾ ಪಾತ್ರೆ ಇದೆ.
- ಕಾಂಗ್ರೆಸ್ ಅವಧಿಯಲ್ಲಿ ನಮ್ಮ ಸೈನಿಕರ ಬಳಿ ಉತ್ತಮ ಬಟ್ಟೆ, ಶೂ, ಬುಲೆಟ್ ಪ್ರೂಫ್ ಜಾಕೆಟ್, ರೈಫಲ್‌ಗಳು ಇರಲಿಲ್ಲ. ಅವರ ಕೈಗೆ ಲಾಠಿ ಕೊಟ್ಟು, ಅವುಗಳೊಂದಿಗೆ ಉಗ್ರರ ಗುಂಡುಗಳನ್ನು ಎದುರಿಸಲು ಹೇಳಲಾಯಿತು. ಮೋದಿ ಅಧಿಕಾರಕ್ಕೆ ಬಂದ ನಂತರ, ನಮ್ಮ ಸೈನಿಕರನ್ನು ಸ್ವಾವಲಂಬಿಗಳನ್ನಾಗಿಸಲು ಆಂದೋಲನ ಆರಂಭಿಸಲಾಯಿತು. ಇಂದು ಅವರಿಗೆ ಭಾರತದಲ್ಲಿ ತಯಾರಾದ ಶಸ್ತ್ರಾಸ್ತ್ರಗಳನ್ನು ಪೂರೈಸಲಾಗುತ್ತಿದೆ.
- ನಿವೃತ್ತ ಸೈನಿಕರಿಗೆ ವಿಶ್ವಾಸಘಾತುಕತನ ಮಾಡಿದ ಕಾಂಗ್ರೆಸ್, ‘ಒಂದು ಶ್ರೇಣಿ, ಒಂದು ಪಿಂಚಣಿ’ ವಿಚಾರವನ್ನು ದಶಕಗಳ ಕಾಲ ಹಾಗೆಯೇ ಇಟ್ಟುಕೊಂಡಿತ್ತು. 2013ರಲ್ಲಿ, ಇನ್ನೇನು ಮೋದಿ ತಮಗೆ ದೊಡ್ಡ ಸವಾಲಾಗಿದ್ದಾರೆ ಎಂದು ಅನಿಸಿದಾಗ, ಬಜೆಟ್‌ನಲ್ಲಿ ₹500 ಕೋಟಿ ಮೀಸಲಿಟ್ಟರು.
- ‘ಒಂದು ಶ್ರೇಣಿ, ಒಂದು ಪಿಂಚಣಿ’ ಭರವಸೆಯನ್ನು ಈಡೇರಿಸಿದ ಮೋದಿ ಸರ್ಕಾರ, ಅದರ ಅಡಿಯಲ್ಲಿ ₹1.2 ಲಕ್ಷ ಕೋಟಿ ವಿನಿಯೋಗಿಸಿತು.
- ಲೋಕಸಭಾ ಚುನಾವಣೆ ಕುರುಕ್ಷೇತ್ರ ಯುದ್ಧವಿದ್ದಂತೆ. 2024ರ ಕುರುಕ್ಷೇತ್ರದಲ್ಲಿ ಒಂದು ಕಡೆ ಅಭಿವೃದ್ಧಿ ಇದ್ದರೆ, ಮತ್ತೊಂದು ಕಡೆ ವೋಟ್ ಜಿಹಾದ್ ಇದೆ.
- ಹೆಸರು ಬದಲಾಯಿಸುವುದರಿಂದ ವಾಸ್ತವ ಬದಲಾಗುವುದಿಲ್ಲ. ‘ಇಂಡಿ’ ಕೂಟವು ಭ್ರಷ್ಟರ ಗುಂಪಾಗಿದೆ.



₹ 8,889 ಕೋಟಿ ಆಯೋಗದ ವಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ಮತದಾರರ ಮೇಲೆ ಪ್ರಭಾವ ಬೀರುವ ಉದ್ದೇಶದಿಂದ ಸಾಗಿಸುತ್ತಿದ್ದ ನಗದು, ಮಾದಕದ್ರವ್ಯ, ಬೆಲೆಬಾಳುವ ಲೋಹ ಮತ್ತು ಉಡುಗೊರೆಗಳು ಸೇರಿದಂತೆ ಇದುವರೆಗೆ ಒಟ್ಟು ₹8,889 ಕೋಟಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಚುನಾವಣಾ ಆಯೋಗ ಶನಿವಾರ ತಿಳಿಸಿದೆ.

ವಶಪಡಿಸಿಕೊಂಡ ವಸ್ತುಗಳ ಮೊತ್ತದಲ್ಲಿ ಮಾದಕ ದ್ರವ್ಯದ ಪಾಲು ಶೇ 45ರಷ್ಟು (₹3,959) ಇದೆ ಎಂದು ಆಯೋಗವು ಮಾಹಿತಿ ನೀಡಿದೆ. ಗುಜರಾತ್ ಎಟಿಎಸ್ ಮತ್ತು ಕರಾವಳಿ ಕಾವಲು ಪಡೆ ಈಚೆಗೆ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಮೂರು ದಿನಗಳ ಅವಧಿಯಲ್ಲಿ ₹892 ಕೋಟಿ ಮೊತ್ತದ ಮಾದಕ ದ್ರವ್ಯ ವಶಪಡಿಸಿಕೊಳ್ಳಲಾಗಿತ್ತು.

ಆಯೋಗವು ಅತಿಹೆಚ್ಚು ನಗದನ್ನು ತೆಲಂಗಾಣದಲ್ಲಿ (₹114.41 ಕೋಟಿ) ವಶಪಡಿಸಿಕೊಂಡಿದೆ. ಕರ್ನಾಟಕ (₹92.55 ಕೋಟಿ), ದೆಹಲಿ (₹90.79 ಕೋಟಿ) ಹಾಗೂ ಆಂಧ್ರ ಪ್ರದೇಶ (₹85.32 ಕೋಟಿ) ಬಳಿಕದ ಸ್ಥಾನಗಳಲ್ಲಿವೆ.

ಅತಿಹೆಚ್ಚು ಮೊತ್ತದ ಮದ್ಯವನ್ನು ಕರ್ನಾಟಕದಲ್ಲಿ ವಶಪಡಿಸಿಕೊಳ್ಳಲಾಗಿದೆ. ಅಧಿಕಾರಿಗಳು ₹175.36 ಕೋಟಿ ಮೌಲ್ಯದ 1.46 ಕೋಟಿ ಲೀ. ಮದ್ಯ ವಶಕ್ಕೆ ತೆಗೆದುಕೊಂಡಿದ್ದಾರೆ. ತೆಲಂಗಾಣ (30 ಲಕ್ಷ ಲೀ., ₹76.26 ಕೋಟಿ ಮೌಲ್ಯ) ಎರಡನೇ ಸ್ಥಾನದಲ್ಲಿದೆ.

ಹೆಚ್ಚು ವಶ: ರಾಜ್ಯವಾರು ಮಾಹಿತಿ (ಕೋಟಿಗಳಲ್ಲಿ)

ರಾಜ್ಯ	ಮೊತ್ತ
ಗುಜರಾತ್	₹1,461
ರಾಜಸ್ಥಾನ	₹1,133
ಮಹಾರಾಷ್ಟ್ರ	₹685
ದೆಹಲಿ	₹653
ಕರ್ನಾಟಕ	₹554

₹849 ಕೋಟಿ ವಶಕ್ಕೆ ಪಡೆದ ನಗದು

₹1,260 ಕೋಟಿ ಬೆಲೆಬಾಳುವ ಲೋಹದ ಮೊತ್ತ



₹814 ಕೋಟಿ ವಶಕ್ಕೆ ಪಡೆದ ಮದ್ಯದ ಮೌಲ್ಯ

₹2,006 ಕೋಟಿ ಉಡುಗೊರೆಗಳ ಮೌಲ್ಯ

₹3,958 ಕೋಟಿ ಮಾದಕ ದ್ರವ್ಯದ ಮೌಲ್ಯ



‘ಬುಲ್ಡೋಜರ್ ಬಿಜೆಪಿ ಸರ್ಕಾರದ್ದು’

ಪ್ರಧಾನಿ ಮೋದಿ ಹೇಳಿಕೆಗೆ ವಿಪಕ್ಷಗಳ ಖಂಡನೆ; ಕ್ರಮ ಜರುಗಿಸಲು ಆಗ್ರಹ

ಮುಂಬೈ (ಪಿಟಿಐ): ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ರಾಮಮಂದಿರವನ್ನು ಬುಲ್ಡೋಜ್ ಮಾಡಲಾಗುತ್ತದೆ ಎನ್ನುವ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ‘ಇಂಡಿಯಾ’ ಕೂಟದ ನಾಯಕರು ತೀವ್ರವಾಗಿ ಖಂಡಿಸಿದ್ದಾರೆ.

ಎಲ್ಲ ಪ್ರಜೆಗಳ ಧಾರ್ಮಿಕ ಸ್ವಾತಂತ್ರ್ಯವನ್ನು ರಕ್ಷಿಸಲು ತಾವು ಬದ್ಧವಾಗಿದ್ದು, ದೇಶವು ಸಂವಿಧಾನದ ಪ್ರಕಾರ ನಡೆಯುವ ಬಗ್ಗೆ ಖಾತರಿ ನೀಡಲಾಗುವುದು ಎಂದು ತಿಳಿಸಿದ್ದಾರೆ. ಪ್ರಧಾನಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಚುನಾವಣಾ ಆಯೋಗಕ್ಕೆ ಆಗ್ರಹಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ, ಶಿವಸೇನಾ (ಯುಬಿಟಿ) ಅಧ್ಯಕ್ಷ ಉದ್ಧವ್ ಠಾಕ್ರೆ ಮತ್ತು ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಅವರು ಮುಂಬೈನಲ್ಲಿ ಶನಿವಾರ ಜಂಟಿ ಪತ್ರಿಕಾಗೋಷ್ಠಿ ನಡೆಸಿದರು.

‘ನಾವು ಎಂದೂ ಯಾರ ಮೇಲೆಯೂ ಬುಲ್ಡೋಜರ್ ಬಳಸಿಲ್ಲ. ಬುಲ್ಡೋಜರ್ ಅವರ ಸರ್ಕಾರದ್ದು. ಮೋದಿ ಅವರಿಗೆ ಸುಳ್ಳು ಹೇಳುವ ಚಾಳಿ ಇದೆ ಮತ್ತು ಅವರು ಕಾಂಗ್ರೆಸ್ ಎಂದೂ ಮಾಡದೇ ಇರುವಂತಹ, ಮಾಡಲಾಗದ ಕೆಲಸಗಳ ಬಗ್ಗೆ ಮಾತನಾಡುವ ಮೂಲಕ ಜನರನ್ನು ಪ್ರಚೋದಿಸುತ್ತಿದ್ದಾರೆ’ ಎಂದು ಖರ್ಗೆ ವಾಗ್ದಾಳಿ ನಡೆಸಿದರು.

‘ಪ್ರಧಾನಿ ಜನರನ್ನು ಪ್ರಚೋದಿಸಲು ಹಾಗೆ ಹೇಳಿದ್ದು, ಅದರ ವಿರುದ್ಧ ಚುನಾವಣಾ ಆಯೋಗವು ಕ್ರಮ ಜರುಗಿಸಬೇಕು. ನಮ್ಮ ಸರ್ಕಾರ ಸಂವಿಧಾನದ ಪ್ರಕಾರ ಕೆಲಸ ಮಾಡುತ್ತದೆ. ನಾವು ಎಲ್ಲವನ್ನೂ ರಕ್ಷಿಸುತ್ತೇವೆ’ ಎಂದು ಹೇಳಿದರು.

‘ಅವರು ಎಲ್ಲಿ ಹೋದರೂ ವಿಭಜನೆ ಮಾಡಲು ಪ್ರಯತ್ನಿಸುತ್ತಾರೆ, ಸಮಾಜವನ್ನು ವಿಭಜಿಸುವ ಮಾತು ಆಡುತ್ತಾರೆ’ ಎಂದು ಆರೋಪಿಸಿದರು.

‘ಇಂಡಿಯಾ ಕೂಟದ ಸರ್ಕಾರವು ಅಯೋಧ್ಯೆ ರಾಮಮಂದಿರದ ನಿರ್ಮಾಣವನ್ನು ಪೂರ್ಣಗೊಳಿಸುತ್ತದೆ’ ಎಂದು ಉದ್ಧವ್ ಠಾಕ್ರೆ ಹೇಳಿದರೆ, ದೇವಸ್ಥಾನಗಳನ್ನಷ್ಟೇ ಅಲ್ಲ, ಎಲ್ಲ ಧರ್ಮಗಳ ಪ್ರಾರ್ಥನಾ ಮಂದಿರಗಳನ್ನೂ ರಕ್ಷಿಸುವುದು ಸರ್ಕಾರದ ಜವಾಬ್ದಾರಿ’ ಎಂದು ಶರದ್ ಪವಾರ್ ಹೇಳಿದರು.

ತಾವು ಹಿಂದೂ ಎನ್ನುವ ಪದದ ಬದಲಿಗೆ ದೇಶಭಕ್ತ ಎನ್ನುವ ಪದ ಬಳಸುವುದಕ್ಕೆ ಬಿಜೆಪಿ ಲೇವಡಿ ಮಾಡುವ ಬಗ್ಗೆ ಮಾತನಾಡಿದ ಉದ್ಧವ್, ‘ಹಿಂದೂಗಳು ದೇಶಭಕ್ತರಲ್ಲವೇ? ದೇಶಭಕ್ತರನ್ನು ವಿರೋಧಿಸುವವರು ರಾಷ್ಟ್ರ ವಿರೋಧಿಗಳು’ ಎಂದರು.

‘ಪಾಕಿಸ್ತಾನ ಇರುವುದು ಬಿಜೆಪಿಯ ತಲೆಯಲ್ಲಿ. ಬಹುಶಃ ಮೋದಿ ಅವರು ನವಾಜ್ ಷರೀಫ್ ಅವರ ಹುಟ್ಟುಹಬ್ಬದ ಕೇಕ್‌ಅನ್ನು ಈಗಲೂ ಇಷ್ಟಪಡುತ್ತಾರೆ’ ಎಂದು ವ್ಯಂಗ್ಯವಾಡಿದರು.



‘ಇಂಡಿಯಾ’ ಕೂಟದ ನಾಯಕರಾದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್, ಉದ್ಧವ್ ಠಾಕ್ರೆ ಮುಂಬೈನಲ್ಲಿ ಜಂಟಿ ಪತ್ರಿಕಾಗೋಷ್ಠಿ ನಡೆಸಿದರು–ಪಿಟಿಐ ಚಿತ್ರ

‘ಆರ್‌ಎಸ್‌ಎಸ್ ನಿಷೇಧಕ್ಕೆ ಚಿಂತನೆ’

ಬಿಜೆಪಿಯು ಮೂರನೇ ಬಾರಿ ಅಧಿಕಾರಕ್ಕೆ ಬಂದ ನಂತರ ಆರ್‌ಎಸ್‌ಎಸ್ ಅನ್ನು ನಿಷೇಧಿಸಲು ಚಿಂತನೆ ನಡೆಸಿದೆ ಎಂದು ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಶನಿವಾರ ಹೇಳಿದರು.

ಮುಂಬೈನಲ್ಲಿ ರ‍್ಯಾಲಿ ನಡೆಸಿದ ಅವರು, ‘ಶಿವಸೇನಾವನ್ನು ಬಳಸಿ, ಬಿಸಾಡಲು ಯತ್ನಿಸಿದ ರೀತಿಯ ಆಟವನ್ನು ನರೇಂದ್ರ ಮೋದಿ ಅವರು ಭವಿಷ್ಯದಲ್ಲಿ ಆರ್‌ಎಸ್‌ಎಸ್ ಜತೆಗೂ ಆಡಲಿದ್ದಾರೆ. ಅದರ ಬಗ್ಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಿಂದೊಮ್ಮೆ ಹೇಳಿದ್ದರು’ ಎಂದು ತಿಳಿಸಿದರು.

‘ಆರ್‌ಎಸ್‌ಎಸ್ ಅಗತ್ಯ ಇಲ್ಲಿಯವರೆಗೂ ಇತ್ತು. ಆದರೆ, ಈಗ ನಾವು ಸಮರ್ಥರಾಗಿದ್ದೇವೆ, ನಮಗೆ ಆರ್‌ಎಸ್‌ಎಸ್ ಅಗತ್ಯವಿಲ್ಲ ಎಂದು ನಡ್ಡಾ ಹೇಳಿದ್ದರು. ಬಿಜೆಪಿ ಅಧಿಕಾರಕ್ಕೆ ಬಂದರೆ, ಅದು ಆರ್‌ಎಸ್‌ಎಸ್ ಕಾರ್ಯಕರ್ತರಿಗೆ ದೊಡ್ಡ ಅಪಾಯ. ಏಕೆಂದರೆ, ಅವರು ಆರ್‌ಎಸ್‌ಎಸ್‌ಅನ್ನು ನಿಷೇಧಿಸುತ್ತಾರೆ’ ಎಂದರು.

ಈ ಹಿಂದೆ ಕೇಂದ್ರ ಗೃಹ ಸಚಿವರಾಗಿದ್ದ ಸರ್ದಾರ್ ವಲ್ಲಭ ಭಾಯ್ ಪಟೇಲ್ ಅವರು ಆರ್‌ಎಸ್‌ಎಸ್ ಅನ್ನು ನಿಷೇಧಿಸಿದ್ದರು ಎಂದು ನೆನಪಿಸಿದರು.



ಪ್ರಚಾರ

ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯ ಶ್ರೀರಾಂಪುರ ಲೋಕಸಭಾ ಕ್ಷೇತ್ರದ ಸಿಪಿಎಂ ಅಭ್ಯರ್ಥಿ ದೀಪ್ಸಿತಾ ಧಾರ್ ಅವರು ಶನಿವಾರ ಮನೆ ಮನೆ ಪ್ರಚಾರ ಕೈಗೊಂಡರು

–ಪಿಟಿಐ ಚಿತ್ರ

ಸಂಸದ –ಶಾಸಕ ನಡುವೆ ವಾಗ್ವಾದ

ನರ್ಮದಾ (ಪಿಟಿಐ): ಗುಜರಾತ್‌ನ ಭರೂಚ್ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿರುವ ಬಿಜೆಪಿ ಸಂಸದ ಮನ್ಸುಖ್ ವಾಸವ ಮತ್ತು ಎಎಪಿ ಶಾಸಕ ಚೈತರ್ ವಾಸವ ಅವರು ಈ ತಿಂಗಳ ಆರಂಭದಲ್ಲಿ ಇಲ್ಲಿನ ದೇದಿಯಾಪಾಡದಲ್ಲಿ ಸಾರ್ವಜನಿಕವಾಗಿ ಮಾತಿನ ಚಕಮಕಿ ನಡೆಸಿದ್ದ ದೃಶ್ಯವಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

ಇಬ್ಬರು ನಾಯಕರು ಮತ್ತು ಅವರ ಬೆಂಬಲಿಗರು ಪರಸ್ಪರ ವಾಗ್ವಾದ ನಡೆಸಿರುವ ದೃಶ್ಯವು ವಿಡಿಯೊದಲ್ಲಿ ದಾಖಲಾಗಿದೆ.

ವಾಗ್ವಾದ ತಾರಕ್ಕೇರಿದಾಗ ಪೊಲೀಸರು ಮಧ್ಯಪ್ರವೇಶಿಸಿ ಪರಿಸ್ಥಿತಿ ಶಾಂತಗೊಳಿಸಿದ್ದಾರೆ. ಇಬ್ಬರು ಮುಖಂಡರ ಬೆಂಬಲಿಗರು ದೂರು-ಪ್ರತಿದೂರು ನೀಡಿದ್ದಾರೆ ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ಲೋಕೇಶ್ ಯಾದವ್ ತಿಳಿಸಿದರು.

ಶಾಸಕ ಚೈತರ್ ಅವರು ತಾಲ್ಲೂಕು ಅಭಿವೃದ್ಧಿ ಅಧಿಕಾರಿಗೆ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ಮನ್ಸುಖ್ ಅವರು ಎಕ್ಸ್ ಮಾಧ್ಯಮದಲ್ಲಿ ಪೋಸ್ಟ್ ಹಾಕಿರುವುದೇ ಈ ವಾಗ್ವಾದಕ್ಕೆ ಕಾರಣ ಎಂದು ವಿವರಿಸಿದರು.

5ನೇ ಹಂತ: ಬಹಿರಂಗ ಪ್ರಚಾರ ಅಂತ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ಮತ್ತು ‘ಇಂಡಿಯಾ’ ಒಕ್ಕೂಟದ ಅಬ್ಬರದ ಘೋಷಣೆ, ವಾಗ್ದಾಳಿಗಳ ನಡುವೆಯೇ 5ನೇ ಹಂತದ ಮತದಾನದ ಬಹಿರಂಗ ಪ್ರಚಾರ ಶನಿವಾರ ಅಂತ್ಯಗೊಂಡಿದೆ. ಈ ಹಂತದಲ್ಲಿ ಸೋಮವಾರ ಎಂಟು ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ 49 ಕ್ಷೇತ್ರಗಳ ಚುನಾವಣೆ ನಡೆಯಲಿದೆ.

ಐದನೇ ಹಂತದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ (ರಾಯ್‌ಬರೇಲಿ), ಬಿಜೆಪಿಯ ಸ್ಮೃತಿ ಇರಾನಿ (ಅಮೇಠಿ), ಕೇಂದ್ರ ಸಚಿವರಾದ ರಾಜನಾಥ ಸಿಂಗ್ (ಲಖನೌ), ಪೀಯೂಷ್ ಗೋಯಲ್ (ಮುಂಬೈ ಉತ್ತರ), ಒಮರ್ ಅಬ್ದುಲ್ಲಾ (ಬಾರಾಮುಲ್ಲಾ) ಅವರಂತಹ ಪ್ರತಿಷ್ಠಿತರ ಕ್ಷೇತ್ರಗಳಲ್ಲಿ ಮತದಾನವು ನಡೆಯಲಿದೆ.

2019ರ ಲೋಕಸಭಾ ಚುನಾವಣೆಯಲ್ಲಿ ಈ 49 ಕ್ಷೇತ್ರಗಳ ಪೈಕಿ 32ರಲ್ಲಿ ಬಿಜೆಪಿ ಗೆದ್ದಿತ್ತು. ಕಾಂಗ್ರೆಸ್ ರಾಯ್‌ಬರೇಲಿಯಲ್ಲಿ ಮಾತ್ರ ಗೆಲುವು ಸಾಧಿಸಿತ್ತು. ’ಇಂಡಿಯಾ’ ಕೂಟವು ಕೇವಲ 6 ಕ್ಷೇತ್ರಗಳಲ್ಲಿ ಗೆದ್ದಿತ್ತು. ಬಿಜೆಡಿ ಎರಡು ಹಾಗೂ ಎನ್‌ಡಿಎ 41 ಕ್ಷೇತ್ರಗಳಲ್ಲಿ ಜಯ ಸಾಧಿಸಿತ್ತು. ಈ ಬಾರಿ, ಬಿಜೆಪಿ 40 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದರೆ, ಕಾಂಗ್ರೆಸ್ ಕೇವಲ 18 ಕ್ಷೇತ್ರಗಳಲ್ಲಿ ಅಖಾಡಕ್ಕಿಳಿದಿದೆ. ಉತ್ತರ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಜಾರ್ಖಂಡ್, ಪಶ್ಚಿಮ ಬಂಗಾಳ ಮತ್ತು ಬಿಹಾರದ ಉಳಿದ ಕ್ಷೇತ್ರಗಳನ್ನು ‘ಇಂಡಿಯಾ’ ಕೂಟದ ತನ್ನ ಮಿತ್ರಪಕ್ಷಗಳಿಗೆ ಬಿಟ್ಟುಕೊಟ್ಟಿದೆ.

ರಾಯ್‌ಬರೇಲಿ: ರಾಹುಲ್ ಗಾಂಧಿಗೆ ಸವಾಲೊಡ್ಡಿರುವ ದಿನೇಶ್ ಪ್ರತಾಪ್

‘ಕೈ’ ಭದ್ರಕೋಟೆ ವಶಕ್ಕೆ ಬಿಜೆಪಿ ಹರಸಾಹಸ

ಅಯೋಧ್ಯೆ ರಾಮಮಂದಿರ ನಿರ್ಮಾಣವು ಬಿಜೆಪಿಗೆ ಮತಗಳನ್ನು ತಂದುಕೊಡಲಿದೆ ಎಂದು ರಾಯ್‌ಬರೇಲಿಯ ಬಿಜೆಪಿ ಕಾರ್ಯಕರ್ತರು ನಂಬಿದ್ದಾರೆ. ಆದರೂ ಗೆಲುವು ಸಾಧಿಸಬೇಕಾದರೆ ದಿನೇಶ್ ಪ್ರತಾಪ್ ಸಿಂಗ್ ಅವರು ಭಗೀರಥ ಪ್ರಯತ್ನ ನಡೆಸಬೇಕು ಎಂಬುದನ್ನು ಒಪ್ಪಿಕೊಳ್ಳುತ್ತಾರೆ

ರಾಯ್‌ಬರೇಲಿ (ಪಿಟಿಐ): ಅಯೋಧ್ಯೆ ರಾಮಮಂದಿರ, ಪ್ರಧಾನಿ ನರೇಂದ್ರ ಮೋದಿ ವರ್ಚಸ್ಸು, ಸರ್ಕಾರದ ಉಚಿತ ಪಡಿತರ, ಬಡವರಿಗೆ ಮನೆ, ಬೀಡಾಡಿ ದನಗಳ ಹಾವಳಿ, ಬಿಜೆಪಿ ಅಧಿಕಾರಕ್ಕೆ ಬಂದರೆ ಸಂವಿಧಾನ ಬದಲಿಸುತ್ತದೆ ಎಂಬ ಕಾಂಗ್ರೆಸ್‌ನ ಆರೋಪ... ಉತ್ತರ ಪ್ರದೇಶದ ಚುನಾವಣಾ ಕಣದಲ್ಲಿ ಚರ್ಚೆಯಲ್ಲಿರುವ ವಿಚಾರಗಳು ಇವು. ಆದರೆ ರಾಯ್‌ಬರೇಲಿಯಲ್ಲಿ ಮಾತ್ರ ‘ಗಾಂಧಿ ಕುಟುಂಬ’ದ ಕುರಿತ ಚರ್ಚೆ ಈ ಎಲ್ಲ ವಿಷಯಗಳನ್ನೂ ಮೀರಿಸಿದೆ.



ರಾಹುಲ್ ಗಾಂಧಿ



ದಿನೇಶ್ ಪ್ರತಾಪ್

ರಾಯ್‌ಬರೇಲಿ ಲೋಕಸಭಾ ಕ್ಷೇತ್ರದ ಮೇಲೆ ಕಾಂಗ್ರೆಸ್ ಹೊಂದಿರುವ ಪ್ರಾಬಲ್ಯವನ್ನು ಇದು ಸೂಚಿಸುತ್ತದೆ. ಇದುವರೆಗೆ ಕಾಂಗ್ರೆಸ್ ಇಲ್ಲಿ ಮೂರು ಬಾರಿ ಮಾತ್ರ (1977, 1996 ಮತ್ತು 1998) ಸೋಲು ಅನುಭವಿಸಿದೆ. 2004 ರಿಂದ ಸತತ ನಾಲ್ಕು ಸಲ ಈ ಕ್ಷೇತ್ರವನ್ನು ಪ್ರತಿನಿಧಿಸಿರುವ ಸೋನಿಯಾ ಗಾಂಧಿ ಅವರು ಇದೀಗ ಬ್ಯಾಟನ್‌ಅನ್ನು ಪುತ್ರ ರಾಹುಲ್ ಗಾಂಧಿಗೆ ಹಸ್ತಾಂತರಿಸಿದ್ದಾರೆ.

ಕಳೆದ ಬಾರಿ ಅಮೇಠಿಯಲ್ಲಿ ಸ್ಮೃತಿ ಇರಾನಿ ಎದುರು ಸೋತಿದ್ದ ರಾಹುಲ್ ಈ ಸಲ ರಾಯ್‌ಬರೇಲಿಯಲ್ಲಿ ಬಿಜೆಪಿಯ ದಿನೇಶ್ ಪ್ರತಾಪ್ ಸಿಂಗ್ ಎದುರು ಪೈಪೋಟಿಗಿಳಿದಿದ್ದಾರೆ. ಗಾಂಧಿ ಕುಟುಂಬದ ಭದ್ರಕೋಟೆ ಎನಿಸಿರುವ ಕ್ಷೇತ್ರವನ್ನು ತನ್ನದಾಗಿಸಿಕೊಳ್ಳಲು ಬಿಜೆಪಿ ಈ ಬಾರಿ ಇನ್ನಿಲ್ಲದ ಪ್ರಯತ್ನ ನಡೆಸಿದೆ. ಆದ್ದರಿಂದ ಈ ಕ್ಷೇತ್ರ ಇಡೀ ದೇಶದ ಕುತೂಹಲ ಕೆರಳಿಸಿದೆ.

‘ಯಹಾ ತೋ ಪಂಜಾ ಹೈ, ಯೆ ಗಾಂಧಿ ಫ್ಯಾಮಿಲಿ ಕಾ ಘರ್ ಹೈ. ಕೋಯಿ ಬಿ ಕ್ಯಾಂಡಿಡೇಟ್ ಹೊ, ಗಾಂಧಿ ಪರಿವಾರ್ ಜೀತೇಗಾ. ಯಹಾ ಸಿರ್ಫ್ ಮಾರ್ಜಿನ್ ಕಾ ಬಾತ್ ಹೈ’ (ಗಾಂಧಿ ಕುಟುಂಬದ ಭದ್ರಕೋಟೆಯಾಗಿರುವ ಕಾರಣ ಇಲ್ಲಿ ಕಾಂಗ್ರೆಸ್‌ನ ‘ಹಸ್ತ’ ಗುರುತು ಚಾಲ್ತಿಯಲ್ಲಿದೆ. ಯಾರೇ ಅಭ್ಯರ್ಥಿಯಾದರೂ, ಗಾಂಧಿ ಕುಟುಂಬದವರು ಗೆಲ್ಲುತ್ತಾರೆ. ಇಲ್ಲಿ ಪ್ರಶ್ನೆಯಿರುವುದು ಗೆಲುವಿನ ಅಂತರದ ವಿಷಯದಲ್ಲಿ ಮಾತ್ರ) ಎಂಬುದು ಸೈಕಲ್ ರಿಕ್ಷಾ ಚಾಲಕ ಸೋನು ಪಾಂಡೆ ಅವರ ಹೇಳಿಕೆ.

ಆಟಿಕೆಗಳ ಅಂಗಡಿ ಇಟ್ಟುಕೊಂಡಿರುವ ರವೀಂದ್ರ ಸಿಂಗ್ ಈ ಮಾತಿಗೆ ಒಪ್ಪಿಗೆ ಸೂಚಿಸಿ, ರಾಹುಲ್ ಗಾಂಧಿ ಗೆಲುವಿನ ನಗು ಬೀರುವರು ಎನ್ನುತ್ತಾರೆ. ‘ಕಳೆದ ಬಾರಿ ಇಡೀ ದೇಶದಲ್ಲಿ ಬಿಜೆಪಿ ಪರ ಅಲೆ ಇದ್ದರೂ, ಸೋನಿಯಾ ಗಾಂಧಿ ಅವರು 1,67,000 ಕ್ಕೂ ಅಧಿಕ ಮತಗಳ ಅಂತರದಿಂದ ಗೆದ್ದಿದ್ದರು. ಈ ಬಾರಿ ರಾಹುಲ್ ಕೂಡಾ ಸುಲಭ ಗೆಲುವು ಸಾಧಿಸುವರು’ ಎಂದು ವಿಶ್ವಾಸ ವ್ಯಕ್ತಪಡಿಸುವರು.

ಆದರೆ ರಾಮಮಂದಿರ ನಿರ್ಮಾಣವು ಬಿಜೆಪಿಗೆ ಮತಗಳನ್ನು ತಂದುಕೊಡಲಿದೆ ಎಂದು ಬಿಜೆಪಿ ಕಾರ್ಯಕರ್ತರು ನಂಬಿದ್ದಾರೆ. ಆದರೂ ಗೆಲುವು ಸಾಧಿಸಬೇಕಾದರೆ ದಿನೇಶ್ ಪ್ರತಾಪ್ ಅವರು ಭಗೀರಥ ಪ್ರಯತ್ನ ನಡೆಸಬೇಕು ಎಂಬುದನ್ನು ಒಪ್ಪಿಕೊಳ್ಳುತ್ತಾರೆ.

‘ಮೋದಿ ಅವರ ಆಡಳಿತದಲ್ಲಿ ರಾಮಮಂದಿರ ನಿರ್ಮಾಣ ಆಗಿದೆ. ಆದ್ದರಿಂದ ನನ್ನ ಮತ ಬಿಜೆಪಿಗೆ’ ಎಂದು ಟ್ಯಾಕ್ಸಿ ಚಾಲಕ ಅಲೋಕ್ ಸಿಂಗ್ ನೇರವಾಗಿ ಹೇಳಿದರು. ‘ನಾನು ಬಿಜೆಪಿ ಬೆಂಬಲಿಗ. ಗಾಂಧಿ ಕುಟುಂಬ ಈ ಕ್ಷೇತ್ರವನ್ನು ಸುದೀರ್ಘ ಕಾಲ ಪ್ರತಿನಿಧಿಸಿದೆಯಾದರೂ ಆಗಬೇಕಾದ ಅಭಿವೃದ್ಧಿ ಆಗಿಲ್ಲ. ಆದರೂ ರಾಹುಲ್ ಗೆಲುವಿನ ಸಾಧ್ಯತೆ ಶೇ 99 ರಷ್ಟಿದೆ’ ಎನ್ನುವರು.

‘ಉಚಿತ ಪಡಿತರ ಸಿಗುತ್ತಿದೆ. ಸರ್ಕಾರ ಗಟ್ಟಿಮುಟ್ಟಾದ ಮನೆ ಕೂಡಾ ನಿರ್ಮಿಸಿಕೊಟ್ಟಿದೆ. ಯಾರು ಗೆಲ್ಲುತ್ತಾರೋ ಗೊತ್ತಿಲ್ಲ. ಆದರೆ ನನ್ನ ಮತ ಬಿಜೆಪಿಗೆ’ ಎಂಬುದು ಸ್ಥಳೀಯ ನಿವಾಸಿ ಹರಿಲಾಲ್ ಅವರ ಮಾತು. ರಾಯ್‌ಬರೇಲಿ, ಅಮೇಠಿಯಲ್ಲಿ ನಾಳೆ ಮತದಾನ ನಡೆಯಲಿದೆ.


ಚುಟುಕು



ಮನೆಯಿಂದಲೇ ಮತದಾನ ಮಾಡಿದ (ಎಡದಿಂದ) ಹಮೀದ್ ಅನ್ಸಾರಿ, ಮನಮೋಹನ್ ಸಿಂಗ್ ಮತ್ತು ಮುರಳಿ ಮನೋಹರ ಜೋಷಿ –ಪಿಟಿಐ ಚಿತ್ರ

ಗಣ್ಯರಿಂದ ಮನೆಯಲ್ಲಿಯೇ ಮತದಾನ

ನವದೆಹಲಿ (ಪಿಟಿಐ): ಮಾಜಿ ಉಪ ರಾಷ್ಟ್ರಪತಿ ಮೊಹಮ್ಮದ್ ಹಮೀದ್ ಅನ್ಸಾರಿ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್, ಮಾಜಿ ಉಪ ಪ್ರಧಾನಿ ಎಲ್.ಕೆ. ಅಡ್ವಾಣಿ ಮತ್ತು ಕೇಂದ್ರದ ಮಾಜಿ ಸಚಿವ ಮುರಳಿ ಮನೋಹರ ಜೋಷಿ ಅವರು ಮನೆಯಲ್ಲಿಯೇ ಮತದಾನ ಮಾಡಿದರು.



ಎಲ್‌.ಕೆ.ಅಡ್ವಾಣಿ

ಹಿರಿಯರಿಗೆ ಮತ್ತು ಅಂಗವಿಕಲರಿಗೆ ಮನೆಯಲ್ಲಿಯೇ ಮತದಾನ ಮಾಡಲು ದೆಹಲಿಯ ಮುಖ್ಯ ಚುನಾವಣಾ ಅಧಿಕಾರಿ ನೇತೃತ್ವದಲ್ಲಿ ವ್ಯವಸ್ಥೆ ಮಾಡಲಾಗಿದೆ. ಮೇ 24ರವರೆಗೂ ಈ ಸೌಲಭ್ಯ ಮುಂದುವರಿಯಲಿದೆ.

ದೆಹಲಿಯ ಏಳು ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಇದುವರೆಗೆ 2,956 ಮಂದಿ ಹಕ್ಕು ಚಲಾಯಿಸಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಮನೆಯಿಂದಲೇ ಮತದಾನ ಮಾಡುವ ಸೌಲಭ್ಯದಡಿ ಪಶ್ಚಿಮ ದೆಹಲಿ ಕ್ಷೇತ್ರದಲ್ಲಿ ಅತೀ ಹೆಚ್ಚು ಮಂದಿ (348 ಮಂದಿ) ಮತದಾನ ಮಾಡಿದ್ದಾರೆ ಎಂದು ವಿವರಿಸಿದ್ದಾರೆ.

ರಾಮಪುರ ಕ್ಷೇತ್ರ: ‘ಇವಿಎಂ ವಿಡಿಯೊಗಳ ರಕ್ಷಣೆ ಭರವಸೆ’

ನವದೆಹಲಿ (ಪಿಟಿಐ): ಉತ್ತರಪ್ರದೇಶದ ರಾಮಪುರ ಲೋಕಸಭಾ ಕ್ಷೇತ್ರದ ವಿದ್ಯುನ್ಮಾನ ಮತಯಂತ್ರಗಳಿಗೆ ಸಂಬಂಧಿಸಿದ ವಿಡಿಯೊ ತುಣುಕುಗಳನ್ನು ನಿಯಮಗಳ ಅನುಸಾರ ಕಾಯ್ದಿಡಲಾಗುವುದು ಎಂದು ಚುನಾವಣಾ ಆಯೋಗವು ದೆಹಲಿ ಹೈಕೋರ್ಟ್‌ಗೆ ಹೇಳಿದೆ.

ಕ್ಷೇತ್ರದ ಅಭ್ಯರ್ಥಿ, ವಕೀಲ ಮೆಹಮೂದ್ ಪ್ರಾಚಾ ಅವರು ಈ ಕುರಿತಂತೆ ಸಲ್ಲಿಸಿದ್ದ ಅರ್ಜಿಗೆ ಪ್ರತಿಕ್ರಿಯಿಸಿ, ಆಯೋಗ ಈ ಮಾತು ಹೇಳಿದೆ.

ಆಯೋಗವನ್ನು ಪ್ರತಿನಿಧಿಸಿದ್ದ ವಕೀಲ ಸಿದ್ಧಾಂತ್ ಕುಮಾರ್ ಅವರು, ಯಾವುದೇ ಸಂದರ್ಭದಲ್ಲಿ ವಿಡಿಯೊ ಅಥವಾ ಸಿ.ಸಿ.ಟಿ.ವಿ ದೃಶ್ಯಾವಳಿಗಳ ರಕ್ಷಣೆಗೆ ಚುನಾವಣಾ ಆಯೋಗವು ಬದ್ಧವಾಗಿರಲಿದೆ ಎಂದು ತಿಳಿಸಿದರು.

ಆಯೋಗದ ಹೇಳಿಕೆಯನ್ನು ದಾಖಲಿಸಿಕೊಂಡ ನ್ಯಾಯಮೂರ್ತಿ ಸಚಿನ್ ದತ್ತಾ ಅವರು, ‘ಅರ್ಜಿದಾರರು ಮತ್ತಾವುದೇ ಬೇಡಿಕೆ ಮಂಡಿಸುವಂತಿಲ್ಲ. ಆಯೋಗದ ಹೇಳಿಕೆ ಪರಿಗಣಿಸಿ ಈ ಅರ್ಜಿ ವಿಲೇವಾರಿ ಮಾಡಲಾಗಿದೆ’ ಎಂದು ತಿಳಿಸಿದರು.

ಹಲ್ಲೆಗೆ ತಿವಾರಿ ಪ್ರಚೋದನೆ ಕನ್ಹಯ್ಯ ಕುಮಾರ್ ಆರೋಪ

ನವದೆಹಲಿ (ಪಿಟಿಐ): ‘ಮತದಾರರು ತಿರಸ್ಕರಿಸುತ್ತಿದ್ದಾರೆ ಎಂಬುದು ಮನದಟ್ಟಾದ್ದರಿಂದ ಹಾಲಿ ಸಂಸದ, ಬಿಜೆಪಿಯ ಮನೋಜ್ ತಿವಾರಿ ನನ್ನ ಮೇಲೆ ಹಲ್ಲೆಗೆ ಉತ್ತೇಜನ ನೀಡುತ್ತಿದ್ದಾರೆ’ ಎಂದು ದೆಹಲಿ ಈಶಾನ್ಯ ಕ್ಷೇತ್ರದ ‘ಇಂಡಿಯಾ’ ಮೈತ್ರಿ ಅಭ್ಯರ್ಥಿ ಕನ್ಹಯ್ಯ ಕುಮಾರ್ ಟೀಕಿಸಿದ್ದಾರೆ.

ಕನ್ಹಯ್ಯ ಕುಮಾರ್ ಅವರ ಮೇಲೆ ಶುಕ್ರವಾರ ಕೆಲವರು ಶಾಯಿ ಎರಚಿದ್ದು, ಹಲ್ಲೆಗೆ ಯತ್ನಿಸಿದ್ದರು. ದೆಹಲಿಯ ನ್ಯೂ ಉಸ್ಮಾನ್‌ಪುರದಲ್ಲಿ ಸ್ಥಳೀಯ ಕಾರ್ಪೊರೇಟರ್ ಛಾಯಾ ಶರ್ಮಾ ಅವರ ಭೇಟಿ ಬಳಿಕ ಎಎಪಿ ಕಚೇರಿಯಿಂದ ನಿರ್ಗಮಿಸುವಾಗ ಈ ಕೃತ್ಯ ನಡೆದಿತ್ತು.



ಶನಿವಾರ ಸುದ್ದಿಗೋಷ್ಠಿಯಲ್ಲಿ ಈ ಘಟನೆಗೆ ಪ್ರತಿಕ್ರಿಯಿಸಿದ ಕನ್ಹಯ್ಯ ಕುಮಾರ್, ‘ಮನೋಜ್ ತಿವಾರಿ ಅವರು ತಿರುಚಲಾದ ವಿಡಿಯೊಗಳನ್ನು ಬಳಸುವ ಮೂಲಕ ನನ್ನ ವಿರುದ್ಧ ಜನರನ್ನು ಎತ್ತಿಕಟ್ಟಲು ಯತ್ನಿಸುತ್ತಿದ್ದಾರೆ’ ಎಂದು ಆರೋಪಿಸಿದರು.

‘ಮನೋಜ್ ತಿವಾರಿ ಅವರು ತಮ್ಮ ಸಾಧನೆಗಳನ್ನು ಹೇಳದೆ, ನಾನು ಕ್ಷೇತ್ರದ ಅಭ್ಯರ್ಥಿಯಾಗಿ ಆಯ್ಕೆ ಆದಾಗಿನಿಂದಲೂ ನಿರಂತರವಾಗಿ ಸುಳ್ಳು ಹೇಳುತ್ತಿದ್ದಾರೆ. ವದಂತಿಗಳನ್ನು ಹಬ್ಬಿಸುತ್ತಿದ್ದಾರೆ. ಅವರಿಗೆ ಕಳೆದ 10 ವರ್ಷಗಳ ಸಾಧನೆ ಎಂದು ಹೇಳಿಕೊಳ್ಳಲು ಕನಿಷ್ಠ 10 ಯೋಜನೆಗಳು ಇಲ್ಲವಾಗಿವೆ’ ಎಂದು ಅವರು ವಾಗ್ದಾಳಿ ನಡೆಸಿದರು.

ಇನ್ನೊಂದೆಡೆ, ಬಿಜೆಪಿಯ ದೆಹಲಿ ವಕ್ತಾರ ಪ್ರವೀಣ್ ಶಂಕರ್ ಕಪೂರ್, ಕನ್ಹಯ್ಯ ಕುಮಾರ್ ಅವರು ತುಕ್ಡೆ–ತುಕ್ಡೆ ಸಿದ್ಧಾಂತದ ಪ್ರಚಾರ ಮಾಡುತ್ತಿದ್ದಾರೆ. ಅವರು ಅಭ್ಯರ್ಥಿಯಾದ ದಿನವೇ ಸಾರ್ವಜನಿಕರ ವಿರೋಧ ಎದುರಿಸುತ್ತಾರೆ ಎಂಬುದು ಸ್ಪಷ್ಟವಾಗಿತ್ತು ಎಂದು ಹೇಳಿದರು.

ಎಂಥಾ ಮಾತು!



ಬಡವರ ಉನ್ನತಿಗಾಗಿ ಮೀಸಲಿಟ್ಟಿರುವ ಅನುದಾನವನ್ನು ತಡೆಹಿಡಿಯುವುದು ಪಾಪದ ಕೆಲಸ. ಆದರೆ ಅಪಪ್ರಚಾರಕ್ಕಾಗಿ ಹಣವನ್ನು ದುಂದು ವೆಚ್ಚ ಮಾಡಲಾಗುತ್ತಿದೆ. ಬಿಜೆಪಿ ಮಾಡಿರುವ ಅನ್ಯಾಯಕ್ಕೆ ಬಂಗಾಳವು ಸೇಡು ತೀರಿಸಿಕೊಳ್ಳಲಿದೆ. ಈ ಚುನಾವಣೆಯಲ್ಲಿ ಬಿಜೆಪಿಯವರು ಮತ್ತು ಬಂಗಾಳ ವಿರೋಧಿಗಳು ಕೊಚ್ಚಿ ಹೋಗಲಿದ್ದಾರೆ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ




ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ವಿರೋಧ ಪಕ್ಷಗಳ ಮುಖಂಡರನ್ನು ಜೈಲಿಗಟ್ಟಿರುವ ಇತಿಹಾಸ ಹೊಂದಿರುವ ಕಾಂಗ್ರೆಸ್ ಜತೆಗೆ ಅರವಿಂದ ಕೇಜ್ರಿವಾಲ್ ಮುಖ್ಯಸ್ಥರಾಗಿರುವ ಎಎಪಿಯು ಮೈತ್ರಿ ಮಾಡಿಕೊಂಡಿದೆ. ರಾಮನ ಅಸ್ತಿತ್ವವನ್ನು ಕಾಂಗ್ರೆಸ್ ಒಪ್ಪುವುದಿಲ್ಲ ಮತ್ತು ಆ ಪಕ್ಷದ ಮುಖಂಡರು ಅಯೋಧ್ಯೆಗೆ ಭೇಟಿ ನೀಡಿಲ್ಲ.

ಮೋಹನ್ ಯಾದವ್, ಮಧ್ಯಪ್ರದೇಶ ಮುಖ್ಯಮಂತ್ರಿ

ಕ್ಷೇತ್ರ ಮಹಾತ್ಮೆ


ಝೂನ್ಸಿ (ಉತ್ತರ ಪ್ರದೇಶ)



ಉತ್ತರ ಪ್ರದೇಶದ ಝೂನ್ಸಿ ಲೋಕಸಭಾ ಕ್ಷೇತ್ರದಲ್ಲಿ ಚುನಾವಣಾ ಕಾವು ಏರಿಕೆಯಾಗಿದ್ದು, ಕದನ ಕಲಿಗಳ ಹೋರಾಟಕ್ಕೆ ವೇದಿಕೆ ಸಿದ್ಧಗೊಂಡಿದೆ. ಕಳೆದ ಬಾರಿ ಇಲ್ಲಿಂದ ಗೆದ್ದಿದ್ದ ಅನುರಾಗ್ ಶರ್ಮಾ ಅವರನ್ನೇ ಬಿಜೆಪಿಯು ಮತ್ತೆ ಕಣಕ್ಕಿಳಿಸಿದೆ. ಕಾಂಗ್ರೆಸ್ ಪಕ್ಷವು ಮಾಜಿ ಕೇಂದ್ರ ಸಚಿವ ಪ್ರದೀಪ್ ಜೈನ್ ಅವರನ್ನು ಅಖಾಡಕ್ಕಿಳಿಸಿದೆ. 2019ರ ಚುನಾವಣೆಯಲ್ಲಿ ಅನುರಾಗ್ ಶರ್ಮಾ ಅವರು 3,65,683 ಮತಗಳ ಅಂತರದಿಂದ ಸಮಾಜವಾದಿ ಪಕ್ಷದ ಶ್ಯಾಮ್ ಸುಂದರ್ ಸಿಂಗ್ ಯಾದವ್ ಅವರನ್ನು ಪರಾಭವಗೊಳಿಸಿದ್ದರು. ‘ಇಂಡಿಯಾ’ ಒಕ್ಕೂಟದ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವುದು ಪ್ರದೀಪ್ ಅವರ ಗೆಲುವಿನ ವಿಶ್ವಾಸವನ್ನು ಹೆಚ್ಚಿಸಿದೆ. ಸಮಾಜವಾದಿ ಪಕ್ಷವು ಕಳೆದ ಬಾರಿ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟಿತ್ತು. ಈ ಬಾರಿ ಆ ಮತಗಳು ಕಾಂಗ್ರೆಸ್ ಅಭ್ಯರ್ಥಿಯ ಪಾಲಾಗುವ ಸಾಧ್ಯತೆ ಇದೆ ಎಂದು ಚುನಾವಣಾ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ರಾಮಮಂದಿರ ನಿರ್ಮಾಣ ಹಾಗೂ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಜನಪ್ರಿಯ ಯೋಜನೆಗಳನ್ನು ಜನರ ಮುಂದಿರಿಸಿ ಅನುರಾಗ್ ಶರ್ಮಾ ಅವರು ಮತ ಯಾಚಿಸುತ್ತಿದ್ದಾರೆ. ನಿರುದ್ಯೋಗ, ಬೆಲೆ ಏರಿಕೆ ಮೊದಲಾದ ಜ್ವಲಂತ ಸಮಸ್ಯೆಗಳನ್ನು ಹಾಗೂ ಕೇಂದ್ರ ಸರ್ಕಾರದ ವೈಫಲ್ಯಗಳನ್ನೇ ಪ್ರದೀಪ್ ಅವರು ಮುಖ್ಯ ಚುನಾವಣಾ ವಿಷಯವಾಗಿಸಿದ್ದಾರೆ. ಇಬ್ಬರು ಪ್ರಬಲ ಅಭ್ಯರ್ಥಿಗಳು ಕಣಕ್ಕಿಳಿದಿರುವ ಈ ಕ್ಷೇತ್ರದಲ್ಲಿ ಮತದಾರರು ಯಾರ ಕೈ ಹಿಡಿಯಲಿದ್ದಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

ಷೇರುಪೇಟೆ ವಹಿವಾಟು


88



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,403
ಇಂದಿನ ಅಂತ್ಯ	22,502
▲	99
ದಿನದ ಕನಿಷ್ಠ	22,502

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹625
12 ಕ್ಕೆ	₹82
ಮೈಸೂರು	
100ಕ್ಕೆ	₹625

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ನಿನ್ನೆಯ ದರ)

ಶೇಂಗಾ (ರಿಫೈನ್ಡ್)	₹1520 (1530)
ಸೋಯಾ (ರಿಫೈನ್ಡ್)	₹935 (920)
ಸೂರ್ಯಕಾಂತಿ (ರಿಫೈನ್ಡ್)	₹925 (920)
ಪಾಮೋಲಿನ್	₹897 (882)

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹178
ಆರ್‌ಎಸ್‌ಎಸ್-5	₹171
ಗುಡ್ ಲಾಟ್	₹161

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹290-490
ದ್ವಿತಳಿ (ಬಿ.ವಿ)	₹322-800

ಜಾಗತಿಕ ಆಟೊಮೊಬೈಲ್ ಕಂಪನಿಗಳಿಂದ ಉತ್ತಮ ಪ್ರತಿಕ್ರಿಯೆ ನಿರೀಕ್ಷೆ

ಇ.ವಿ ನೀತಿ ಸದೃಢ: ಕೇಂದ್ರ

ನವದೆಹಲಿ (ಪಿಟಿಐ): 'ಮಾರ್ಚ್‌ನಲ್ಲಿ ಕೇಂದ್ರ ಸರ್ಕಾರವು ರೂಪಿಸಿರುವ ಹೊಸ ಎಲೆಕ್ಟ್ರಿಕ್ ವಾಹನ ನೀತಿಗೆ ವಿಶ್ವದ ಹಲವು ಆಟೊಮೊಬೈಲ್ ಕಂಪನಿಗಳಿಂದ ಉತ್ತಮ ಪ್ರತಿಕ್ರಿಯೆಯನ್ನು ನಿರೀಕ್ಷಿಸಲಾಗುತ್ತಿದೆ' ಎಂದು ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯ (ಡಿಪಿಐಐಟಿ) ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಹೇಳಿದ್ದಾರೆ.

ಇಲ್ಲಿ ನಡೆಯುತ್ತಿರುವ ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ವಾರ್ಷಿಕ ವ್ಯಾಪಾರ ಶೃಂಗದಲ್ಲಿ ಶನಿವಾರ ಮಾತನಾಡಿದ ಅವರು, 'ದೇಶದಲ್ಲಿ ಬಂಡವಾಳ ಹೂಡಿಕೆ ಮಾಡಿ ಇ.ವಿ ತಯಾರಿಕಾ ಘಟಕ ಸ್ಥಾಪಿಸುವ ಕಂಪನಿಗಳಿಗೆ ಆಮದು ಸುಂಕದಲ್ಲಿ ರಿಯಾಯಿತಿ ಪ್ರಕಟಿಸಲಾಗಿದೆ' ಎಂದು ಹೇಳಿದರು.

'ಪ್ರತಿಯೊಬ್ಬರು ಒಂದೇ ಕಂಪನಿ (ಅಮೆರಿಕದ ಟೆಸ್ಲಾ) ಬಗ್ಗೆಯಷ್ಟೇ ಮಾತನಾಡುತ್ತಾರೆ. ಕೇಂದ್ರದ ನೀತಿಯು ಸದೃಢವಾಗಿದ್ದು, ಕಂಪನಿಗಳಿಗೆ ಪೂರಕವಾಗಿದೆ. ಹಾಗಾಗಿ, ಹಲವು ಕಂಪನಿಗಳು ಸ್ಪಂದಿಸುವುದನ್ನು ನಾವು ಎದುರು ನೋಡುತ್ತಿದ್ದೇವೆ' ಎಂದರು.

ಹೊಸ ನೀತಿ ಅನ್ವಯ ಆಮದು ಸುಂಕದ ಪ್ರಯೋಜನ ಪಡೆಯಲು ಕಂಪನಿಗಳು ದೇಶದಲ್ಲಿ ಕನಿಷ್ಠ ₹4,150 ಕೋಟಿ ಬಂಡವಾಳ ಹೂಡಿಕೆ ಮಾಡಿ ಇ.ವಿ ತಯಾರಿಕಾ ಘಟಕ ಸ್ಥಾಪಿಸಬೇಕಿದೆ. ಟೆಸ್ಲಾದಂತಹ ಕಂಪನಿಗಳನ್ನು ಭಾರತದತ್ತ ಸೆಳೆಯಲು ಈ ನೀತಿ ನೆರವಾಗಲಿದೆ ಎಂದು ಹೇಳಲಾಗಿದೆ.

'ಸರ್ಕಾರವು ಈಗಾಗಲೇ ಟೈರ್ ಉತ್ಪಾದಿಸುವ ಎರಡು ಬಹುರಾಷ್ಟ್ರೀಯ ಕಂಪನಿಗಳ ಜೊತೆಗೆ ಚರ್ಚಿಸಿದೆ. ಟೈರ್ ತಯಾರಿಕೆಗೆ ಸಂಬಂಧಿಸಿದ ಸರಕುಗಳ ಆಮದಿಗೆ ವಿಧಿಸುವ ನಿರ್ಬಂಧ ಹಿಂಪಡೆಯಲು ಕೋರಿವೆ. ಇದಕ್ಕೆ ಸರ್ಕಾರವು ಒಪ್ಪಿಗೆ ನೀಡಿದ್ದು, ಭಾರತದಲ್ಲಿ ತಯಾರಿಕೆಗೆ ಒತ್ತು ನೀಡುವಂತೆ ಸೂಚಿಸಿದೆ. ಇದಕ್ಕೆ ಕಂಪನಿಗಳು ಸಮ್ಮತಿಸಿದರೆ ನಿರ್ಬಂಧ ತೆರವುಗೊಳಿಸುತ್ತೇವೆ' ಎಂದರು.



ಭಾರತಕ್ಕೆ ಮಾಹಿತಿ ನೀಡದ ಟೆಸ್ಲಾ

ನವದೆಹಲಿ (ಪಿಟಿಐ): 'ಭಾರತದಲ್ಲಿ ತನ್ನ ಘಟಕ ಸ್ಥಾಪನೆಗೆ ಸಂಬಂಧಿಸಿದಂತೆ ಉದ್ಯಮಿ ಇಲಾನ್ ಮಸ್ಕ್ ಒಡೆತನದ ಟೆಸ್ಲಾ ಕಂಪನಿಯು ಇಲ್ಲಿಯವರೆಗೂ ಕೇಂದ್ರಕ್ಕೆ ಯಾವುದೇ ಮಾಹಿತಿ ನೀಡಿಲ್ಲ' ಎಂದು ಸರ್ಕಾರದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಅವರು (ಟೆಸ್ಲಾ) ಸದ್ಯ ಮೌನವಾಗಿದ್ದಾರೆ. ಎಲ್ಲ ಆಟೊಮೊಬೈಲ್ ಕಂಪನಿಗಳಿಗೆ ಅನುಕೂಲವಾಗುವಂತೆಯೇ ಇ.ವಿ ನೀತಿ ರೂಪಿಸಲಾಗಿದೆ. ವಾಣಿಜ್ಯ ನಿರ್ಧಾರಗಳನ್ನು ಆಯಾ ಕಂಪನಿಗಳೇ ತೆಗೆದುಕೊಳ್ಳಬೇಕಿದೆ' ಎಂದು ಹೇಳಿದ್ದಾರೆ.

ಏಪ್ರಿಲ್ ಕೊನೆಯ ವಾರದಲ್ಲಿ ಮಸ್ಕ್ ಅವರು, ಭಾರತದ ಪ್ರವಾಸವನ್ನು ಏಕಾಏಕಿ ರದ್ದುಪಡಿಸಿದ್ದು ಸುದ್ದಿಯಾಗಿತ್ತು.

ವಿಶೇಷ ವಹಿವಾಟು: ಸೆನ್ಸೆಕ್ಸ್ ಏರಿಕೆ



ಮುಂಬೈ (ಪಿಟಿಐ): ವಿದೇಶಿ ಸಾಂಸ್ಥಿಕ ಬಂಡವಾಳದ ಒಳಹರಿವಿನ ಹೆಚ್ಚಳದಿಂದಾಗಿ ಶನಿವಾರ ನಡೆದ ವಿಶೇಷ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಸತತ ಮೂರನೇ ದಿನವೂ ಏರಿಕೆ ದಾಖಲಿಸಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 88 ಅಂಶ (ಶೇ 0.12ರಷ್ಟು) ಏರಿಕೆ ಕಂಡು, 74,005 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 245 ಅಂಶ ಏರಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 99 ಅಂಶ ಏರಿಕೆ (ಶೇ 0.16ರಷ್ಟು) ಕಂಡು, 22,502 ಅಂಶಗಳಲ್ಲಿ ವಹಿವಾಟು ಸ್ಥಿರಗೊಂಡಿತು.

ಈಕ್ವಿಟಿ ಹಾಗೂ ಈಕ್ವಿಟಿ ಉತ್ಪನ್ನ ವಿಭಾಗದಲ್ಲಿ ಎದುರಾಗಬಹುದಾದ ಅಡಚಣೆ ಅಥವಾ ವೈಫಲ್ಯಗಳನ್ನು ಎದುರಿಸಲು ಸಿದ್ಧತಾಗಿರುವಿಕೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಷೇರು ವಿನಿಮಯ ಕೇಂದ್ರ ಮತ್ತು ಬಿಎಸ್‌ಇಯಿಂದ ವಿಶೇಷ ವಹಿವಾಟು ನಡೆಯಿತು.

ಈ ವಿಶೇಷ ವಹಿವಾಟಿನಲ್ಲಿ ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳ ಮಾರುಕಟ್ಟೆ ಮೌಲ್ಯವು ₹4.12 ಲಕ್ಷ ಕೋಟಿ ಹೆಚ್ಚಳವಾಗಿದ್ದು, ಸಾರ್ವಕಾಲಿಕ ದಾಖಲೆಯಾಗಿದೆ.

ಸೆನ್ಸೆಕ್ಸ್ ಗುಚ್ಛದಲ್ಲಿ ಸನ್ ಫಾರ್ಮಾ, ಇಂಡಸ್‌ಇಂಡ್ ಬ್ಯಾಂಕ್, ಏಷ್ಯನ್ ಪೇಂಟ್ಸ್, ಟೈಟನ್, ಆಕ್ಸಿಸ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಪವರ್ ಗ್ರಿಡ್, ಟಾಟಾ ಮೋಟರ್ಸ್, ಟೈಟನ್, ಎಚ್‌ಸಿಎಲ್ ಟೆಕ್ನಾಲಜೀಸ್, ಹಿಂದುಸ್ತಾನ್ ಯೂನಿಲಿವರ್ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಜೆಎಸ್‌ಡಬ್ಲ್ಯು ಸ್ಟೀಲ್, ಮಹೀಂದ್ರ ಆ್ಯಂಡ್ ಮಹೀಂದ್ರ, ಮಾರುತಿ ಸುಜುಕಿ ಮತ್ತು ಕೋಟಕ್ ಮಹೀಂದ್ರ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಶುಕ್ರವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹1,616 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ ಎಂದು ಷೇರುಪೇಟೆಯ ಅಂಕಿ-ಅಂಶಗಳು ತಿಳಿಸಿವೆ.

ಮುಂಬೈ ಧಾರಣೆ

ಶೇಂಗಾ

18-5-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1620)
ಒಂದು ವಾರದ ಡೆಲಿವರಿ	1525 (1615)
ಸೋಯಾ ಕಚ್ಚಾ	885 (1440)
ಪಾಮ್ ವಾರದ ಡೆಲಿವರಿ	895 (1455)
ಸೂರ್ಯಕಾಂತಿ ಎಣ್ಣೆ ಕಚ್ಚಾ	865 (1625)

ಚಿನ್ನ - ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹73,800 (73,000)

ಬೆಳ್ಳಿ ಕೆ.ಜಿ ₹90,800 (89,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7800-10000
ತಿಪಟೂರು	₹8100-9000

ಸುದ್ದಿ 2 ನಿಮಿಷ


ಕೋವಿಡ್–19 ಹೊಸ ಅಲೆ ಮಾಸ್ಕ್ ಧರಿಸಲು ಸೂಚನೆ

ಸಿಂಗಪುರ (ಪಿಟಿಐ): ಸಿಂಗಪುರದಲ್ಲಿ ಈಗ ಕೋವಿಡ್–19ರ ಹೊಸ ಅಲೆ ಕಾಣಿಸಿದ್ದು, ಮೇ 5ರಿಂದ 11ರವರೆಗೆ 25,900ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಜನರು ಮತ್ತೆ ಮಾಸ್ಕ್ ಧರಿಸಬೇಕು ಎಂದು ಆರೋಗ್ಯ ಸಚಿವ ಓಂಗ್ ಯೆ ಕುಂಗ್ ಶನಿವಾರ ಸಲಹೆ ನೀಡಿದರು.

'ನಾವು ಕೋವಿಡ್ ಹೊಸ ಅಲೆಯ ಆರಂಭಿಕ ಹಂತದಲ್ಲಿದ್ದೇವೆ. ಈ ಅಲೆಯು ಏರಿಕೆಯಾಗುತ್ತಿದೆ. ಮುಂದಿನ ಎರಡರಿಂದ ನಾಲ್ಕು ವಾರಗಳಲ್ಲಿ ಅಂದರೆ ಜೂನ್ ಮಧ್ಯ ಅಥವಾ ಕೊನೆಯ ವೇಳೆಗೆ ಅಲೆಯು ವ್ಯಾಪಕವಾಗಲಿದೆ' ಎಂದು ಸಚಿವರು ನೀಡಿರುವ ಹೇಳಿಕೆಯನ್ನು 'ದಿ ಸ್ಟ್ರೈಟ್ಸ್ ಟೈಮ್ಸ್' ಪತ್ರಿಕೆ ವರದಿ ಮಾಡಿದೆ.

ತೀವ್ರ ನಿಗಾಘಟಕಕ್ಕೆ (ಐಸಿಯು) ದಿನಂಪ್ರತಿ ಮೂರು ಪ್ರಕರಣಗಳು ದಾಖಲಾಗುತ್ತಿದ್ದು, ಇದರ ಹಿಂದಿನ ವಾರದಲ್ಲಿ ದಿನಕ್ಕೆ ಸರಾಸರಿ ಇಬ್ಬರು ಕೋವಿಡ್ ಬಾಧಿತರು ಐಸಿಯುಗೆ ದಾಖಲಾಗುತ್ತಿದ್ದರು ಎಂದು ಆರೋಗ್ಯ ಸಚಿವಾಲಯ ಹೇಳಿದೆ.

ಸಿಂಗಪುರದಲ್ಲಿ ವರದಿ ಆಗುತ್ತಿರುವ ಕೋವಿಡ್ ಪ್ರಕರಣಗಳಲ್ಲಿ ಶೇ 2ರಷ್ಟು ಪ್ರಕರಣಗಳು ಕೆಪಿ.1 ಮತ್ತು ಕೆಪಿ.2 ಉಪ ತಳಿಯ ಪ್ರಕರಣಗಳಾಗಿವೆ. 'ಇವು ಹೆಚ್ಚು ರೂಪಾಂತರಗೊಂಡು ಹರಡುವ ಅಥವಾ ಹೆಚ್ಚು ತೀವ್ರವಾದ ರೋಗವನ್ನು ಉಂಟುಮಾಡುವ ಯಾವುದೇ ಸೂಚನೆಗಳಿಲ್ಲ' ಎಂದೂ ಅದು ತಿಳಿಸಿದೆ.



ಅಮೆರಿಕ: ನಾಲ್ವರು ಭಾರತೀಯರಿಗೆ ಯು-ವೀಸಾಕ್ಕೆ ಅವಕಾಶ

ವಾಷಿಂಗ್ಟನ್ (ಪಿಟಿಐ): ಷಿಕಾಗೊ ಮತ್ತು ಇತರ ನಗರಗಳಲ್ಲಿ ಶಸ್ತ್ರಾಸ್ತ್ರಗಳನ್ನು ಬಳಸಿ ದರೋಡೆ ಮಾಡಿದ ಆರೋಪದಡಿ ಬಂಧಿತರಾಗಿರುವ ನಾಲ್ವರು ಭಾರತೀಯರು ಸೇರಿದಂತೆ ಆರು ಜನರಿಗೆ ಫೆಡರಲ್ ನ್ಯಾಯಾಲಯವು ಯು-ವೀಸಾಕ್ಕೆ ಅರ್ಜಿ ಸಲ್ಲಿಸಲು ಶುಕ್ರವಾರ ಅವಕಾಶ ಕಲ್ಪಿಸಿದೆ.

ಭಾರತೀಯರಾದ ಭೀಖಾಭಾಯಿ ಪಟೇಲ್(51), ನೀಲೇಶ್ ಪಟೇಲ್ (32), ರವಿನಾಬೆನ್ ಪಟೇಲ್ (23) ಮತ್ತು ರಜನಿ ಕುಮಾರ್ ಪಟೇಲ್ (32) ಜೊತೆಯಲ್ಲಿ ವಿದೇಶೀಯರಾದ ಪಾರ್ಥ ನಯೀ (26) ಮತ್ತು ಕೆವಾಂಗ್ ಯಂಗ್ (31) ಅವರ ಮೇಲೆ ವೀಸಾ ವಂಚನೆಗೆ ಸಂಚು ರೂಪಿಸಿದ ಆರೋಪ ಇತ್ತು. ಇವರಿಗೆ ಯು-ವೀಸಾವನ್ನು ಸಲ್ಲಿಸಬಹುದು ಎಂದು ಫೆಡರಲ್ ನ್ಯಾಯಾಲಯ ಹೇಳಿದೆ.

'ಅಮೆರಿಕ ಆಯೋಗ: ಹಿಂದೂಗಿಲ್ಲ ಪ್ರಾತಿನಿಧ್ಯ'

ವಾಷಿಂಗ್ಟನ್ (ಪಿಟಿಐ): 'ಅಮೆರಿಕದ ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಆಯೋಗದಲ್ಲಿ (ಯುಎಸ್‌ಸಿಐಆರ್‌ಎಫ್) ಹಿಂದೂಗಳಿಗೆ ಪ್ರಾತಿನಿಧ್ಯವೇ ಇಲ್ಲ. ಜೊತೆಗೆ ಭಾರತ ಮತ್ತು ಹಿಂದೂಗಳ ಕುರಿತು ಅದು ಪ್ರಕಟಿಸುವ ವರದಿಗಳು ಪಕ್ಷಪಾತವಾಗಿಯೂ, ಅಜ್ಞಾನದಿಂದ ಕೂಡಿರುವಂತೆಯೂ ಇರುತ್ತವೆ' ಎಂದು ಅನಿವಾಸಿ ಭಾರತದ ಚಿಂತಕರ ಚಾವಡಿಯೊಂದು ಶುಕ್ರವಾರ ಆರೋಪಿಸಿದೆ.

ಎಂಡಿಎಚ್, ಎವರೆಸ್ಟ್ ಪದಾರ್ಥದಲ್ಲಿ ಕೀಟನಾಶಕ ಪತ್ತೆ ಪ್ರಕರಣ

ನೇಪಾಳದಲ್ಲೂ ನಿಷೇಧದ ಬಿಸಿ

ಕಠ್ಮಂಡು (ಪಿಟಿಐ): ಎಂಡಿಎಚ್ ಹಾಗೂ ಎವರೆಸ್ಟ್‌ನ ಸಂಬಾರ ಪದಾರ್ಥಗಳಲ್ಲಿ ಕ್ಯಾನ್ಸರ್‌ಕಾರಕ ಎಥಿಲೀನ್ ಆಕ್ಸೈಡ್ ಅಂಶ ಪತ್ತೆಯಾಗಿರುವುರಿಂದ ನೆರೆಯ ನೇಪಾಳದಲ್ಲಿಯೂ ಈ ಕಂಪನಿಗಳ ಉತ್ಪನ್ನಗಳಿಗೆ ನಿಷೇಧ ಹೇರಲಾಗಿದೆ.

ಎಂಡಿಎಚ್‌ನ ಮದ್ರಾಸ್ ಕರಿ ಪೌಡರ್, ಸಂಬಾರ್ ಮಿಕ್ಸ್ಡ್ ಮಸಾಲ ಪೌಡರ್, ಮಿಕ್ಸ್ಡ್ ಮಸಾಲ ಕರಿ ಪೌಡರ್ ಹಾಗೂ ಎವರೆಸ್ಟ್‌ನ ಫಿಶ್ ಕರಿ ಮಸಾಲದಲ್ಲಿ ಕೀಟನಾಶಕ ಅಂಶವಿದೆ ಎಂದು ಹೇಳಲಾಗಿದೆ. ಹಾಗಾಗಿ, ಅವುಗಳ ಖರೀದಿ ಮತ್ತು ಮಾರಾಟಕ್ಕೆ ನಿಷೇಧ ಹೇರಲಾಗಿದೆ ಎಂದು ನೇಪಾಳದ ಆಹಾರ ತಂತ್ರಜ್ಞಾನ ಮತ್ತು ಗುಣಮಟ್ಟ ನಿಯಂತ್ರಣ ಇಲಾಖೆ ತಿಳಿಸಿದೆ.

ಸಂಬಾರ ಪದಾರ್ಥಗಳಲ್ಲಿ ಕೀಟನಾಶಕ ಅವಶೇಷವು ನಿಗದಿತ ಮಾನದಂಡದ ಮಿತಿಗಿಂತಲೂ ಹೆಚ್ಚಿದೆ. ಮಾಧ್ಯಮಗಳಲ್ಲಿ ಈ ಕುರಿತು ವರದಿ ಪ್ರಕಟವಾಗಿದೆ. ಮಾನವನ ದೇಹಕ್ಕೆ ಈ ಉತ್ಪನ್ನಗಳ ಬಳಕೆಯಿಂದ ಅಪಾಯ ಹೆಚ್ಚಿದೆ. ಆಮದುದಾರರು ಮತ್ತು ವ್ಯಾಪಾರಿಗಳು ಕೂಡಲೇ ಮಾರುಕಟ್ಟೆಯಿಂದ ಈ ಪದಾರ್ಥಗಳನ್ನು ಹಿಂಪಡೆಯಬೇಕು ಎಂದು ಸೂಚಿಸಿದೆ.

ಕಳೆದ ತಿಂಗಳು ಹಾಂಗ್‌ಕಾಂಗ್ ಮತ್ತು ಸಿಂಗಪುರದಲ್ಲಿ ಈ ಪದಾರ್ಥಗಳಿಗೆ ನಿಷೇಧ ಹೇರಲಾಗಿದೆ.

ಭಾರತೀಯ ಸಂಬಾರ ಪದಾರ್ಥಗಳ ಮಂಡಳಿಯ ವರದಿ ಪ್ರಕಾರ, ಭಾರತವು ಜಾಗತಿಕ ಮಟ್ಟದಲ್ಲಿ ಸಂಬಾರ ಪದಾರ್ಥಗಳ ಉತ್ಪಾದನೆ ಮತ್ತು ರಫ್ತಿನಲ್ಲಿ ಮುಂಚೂಣಿಯಲ್ಲಿದೆ. 200ಕ್ಕೂ ಹೆಚ್ಚು ಪದಾರ್ಥಗಳು ಹಾಗೂ ಅದರ ಮೌಲ್ಯವರ್ಧಿತ ಉತ್ಪನ್ನಗಳನ್ನು 180 ದೇಶಗಳಿಗೆ ರವಾನಿಸುತ್ತದೆ.

ರಫ್ತು ಶೇ 40ರಷ್ಟು ಇಳಿಕೆ: ಆತಂಕ

ಅಹಮದಾಬಾದ್ (ಪಿಟಿಐ): ಕೇಂದ್ರ ಸರ್ಕಾರವು ಎಥಿಲೀನ್ ಆಕ್ಸೈಡ್ ಪ್ರಕರಣವನ್ನು ತ್ವರಿತವಾಗಿ ಇತ್ಯರ್ಥಪಡಿಸಬೇಕಿದೆ. ಇಲ್ಲವಾದರೆ 2024–25ನೇ ಆರ್ಥಿಕ ವರ್ಷದಲ್ಲಿ ದೇಶದ ಸಂಬಾರ ಪದಾರ್ಥಗಳ ರಫ್ತಿನಲ್ಲಿ ಶೇ 40ರಷ್ಟು ಇಳಿಕೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಸಂಬಾರ ಪದಾರ್ಥಗಳ ಪಾಲುದಾರರ ಒಕ್ಕೂಟ (ಎಫ್‌ಐಎಸ್‌ಎಸ್) ಆತಂಕ ವ್ಯಕ್ತಪಡಿಸಿದೆ.

'ರಫ್ತುದಾರರ ಕೈಯಲ್ಲಿ ಸಾಕಷ್ಟು ಹೊಸ ಆರ್ಡರ್‌ಗಳಿವೆ. ಆದರೆ, ಎಂಡಿಎಚ್ ಹಾಗೂ ಎವರೆಸ್ಟ್ ಕಂಪನಿಯ ಪದಾರ್ಥಗಳಲ್ಲಿ ಪತ್ತೆಯಾದ ಕೀಟನಾಶಕ ಅಂಶದಿಂದಾಗಿ ಉತ್ಪನ್ನಗಳ ರವಾನೆಯನ್ನು ಸ್ಥಗಿತಗೊಳಿಸಿದ್ದಾರೆ' ಎಂದು ಒಕ್ಕೂಟದ ಕಾರ್ಯದರ್ಶಿ ತೇಜಸ್ ಗಾಂಧಿ ತಿಳಿಸಿದ್ದಾರೆ.

'ಸಂಬಾರ ಪದಾರ್ಥಗಳಲ್ಲಿರುವ ಎಥಿಲೀನ್ ಆಕ್ಸೈಡ್ ಅಂಶಕ್ಕೆ ಸಂಬಂಧಿಸಿದಂತೆ ಸುಳ್ಳು ಸುದ್ದಿ ಹಬ್ಬಿಸಲಾಗುತ್ತಿದೆ. ಈ ಕೀಟನಾಶಕ ಅವಶೇಷದ ಪ್ರಮಾಣವನ್ನು ತಗ್ಗಿಸಿ ಅಂತರರಾಷ್ಟ್ರೀಯ ಮಾನದಂಡಕ್ಕೆ ಅನುಸಾರವಾಗಿಯೇ ಕಳೆದ ನಾಲ್ಕು ದಶಕಗಳಿಂದ ಅಮೆರಿಕಕ್ಕೆ ರವಾನಿಸಲಾಗುತ್ತಿದೆ' ಎಂದು ಒಕ್ಕೂಟದ ಅಧ್ಯಕ್ಷ ಅಶ್ವಿನ್ ನಾಯಕ್ ತಿಳಿಸಿದ್ದಾರೆ.

2023–24ರಲ್ಲಿ ಭಾರತವು ₹35 ಸಾವಿರ ಕೋಟಿ ಮೌಲ್ಯದ ಸಂಬಾರ ಪದಾರ್ಥಗಳನ್ನು ರಫ್ತು ಮಾಡಿದೆ. ಇದು ಜಾಗತಿಕ ಮಟ್ಟದಲ್ಲಿ ಸಂಬಾರ ಪದಾರ್ಥಗಳ ಒಟ್ಟು ರಫ್ತಿನಲ್ಲಿ ಶೇ 12ರಷ್ಟು ಆಗಿದೆ.

ಮುಕ್ತ ವ್ಯಾಪಾರ ಒಪ್ಪಂದ: ಭಾರತ–ಬ್ರಿಟನ್ ಸಮ್ಮತಿ

ಲಂಡನ್ (ಪಿಟಿಐ): ಪರಸ್ಪರ ದೇಶಗಳಿಗೆ ಲಾಭದಾಯಕವಾದ ಮುಕ್ತ ವ್ಯಾಪಾರ ಒಪ್ಪಂದವನ್ನು (ಎಫ್‌ಟಿಎ) ನಿಶ್ಚಿತಗೊಳಿಸುವ ಬದ್ಧತೆಯನ್ನು ಭಾರತ ಮತ್ತು ಬ್ರಿಟನ್ ದೃಢೀಕರಿಸಿವೆ.

ಬ್ರಿಟನ್ ಪ್ರವಾಸ ಕೈಗೊಂಡಿರುವ ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾತ್ರಾ ಅವರು ಶುಕ್ರವಾರ ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಸರ್ ಫಿಲಿಪ್ ಬಾರ್ಟನ್ ಅವರನ್ನು ಭೇಟಿ ಮಾಡಿ, ಈ ಕುರಿತು ಚರ್ಚೆ ಮಾಡಿದರು.

ಕಳೆದ ವರ್ಷದ ಜನವರಿಯಲ್ಲಿ ಈ ಒಪ್ಪಂದ ಏರ್ಪಟ್ಟಿತ್ತು. ಆಗಿನಿಂದ ಈವರೆಗೆ ಏನೆಲ್ಲಾ ಬೆಳವಣಿಗೆಗಳಾಗಿದೆ ಎಂಬುದರ ಬಗ್ಗೆ ಉಭಯ ನಾಯಕರು ಪರಿಶೀಲನೆ ನಡೆಸಿದರು. 2030ರ ದೃಷ್ಟಿಕೋನದ ಈ ಯೋಜನೆಯು ಉತ್ತಮ ಅಭಿವೃದ್ಧಿ ಸಾಧಿಸಿದೆ ಎಂಬುದನ್ನು ಉಭಯ ನಾಯಕರು ಮನಗಂಡಿದ್ದಾರೆ. ವಿಶ್ವದ ಅತಿ ದೊಡ್ಡ ಸವಾಲುಗಳನ್ನು ನಿಭಾಯಿಸಲು ಭಾರತ ಮತ್ತು ಬ್ರಿಟನ್ ಕಾರ್ಯನಿರ್ವಹಿಸಿವೆ ಎಂದು ವಿದೇಶಾಂಗ, ಕಾಮನ್‌ವೆಲ್ತ್ ಮತ್ತು ಅಭಿವೃದ್ಧಿ ಕಾರ್ಯಾಲಯ ಹೇಳಿಕೆ ಬಿಡುಗಡೆ ಮಾಡಿದೆ.

ಈ ಪೈಕಿ ಮಲೇರಿಯಾಕ್ಕೆ ವಿಶ್ವದ ಮೊದಲ ಚುಚ್ಚುಮದ್ದು, ಜಿ–20 ರಾಷ್ಟ್ರಗಳಿಗೆ ಭಾರತದ ಯಶಸ್ವಿ ನಾಯಕತ್ವ, ವಿದ್ಯಾರ್ಥಿಗಳು ಮತ್ತು ಉದ್ಯಮಿಗಳಿಗೆ ಅವಕಾಶಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಉಭಯ ದೇಶಗಳು ಪರಸ್ಪರ ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಐಸಿಐಸಿಐ ಬ್ಯಾಂಕ್ ನಿರ್ಮಾತೃ ನಾರಾಯಣನ್ ವಘುಲ್ ಇನ್ನಿಲ್ಲ



ನಾರಾಯಣನ್ ವಘುಲ್

ಮುಂಬೈ (ಪಿಟಿಐ): ಐಸಿಐಸಿಐ ಬ್ಯಾಂಕ್‌ನ ನಿರ್ಮಾತೃ ನಾರಾಯಣನ್ ವಘುಲ್ (88) ಶನಿವಾರ ಚೆನ್ನೈನಲ್ಲಿ ನಿಧನರಾದರು.

ಕೆಲವು ದಿನಗಳ ಹಿಂದೆ ಮನೆಯಲ್ಲಿ ಕುಸಿದು ಬಿದ್ದು, ಪ್ರಜ್ಞೆ ಕಳೆದುಕೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಿ ಕೃತಕ ಉಸಿರಾಟದ ವ್ಯವಸ್ಥೆ ಕಲ್ಪಿಸಲಾಗಿತ್ತು.

ಮೃತರಿಗೆ ಪತ್ನಿ ಪದ್ಮಾ, ಪುತ್ರ ಮೋಹನ್ ಹಾಗೂ ಪುತ್ರಿ ಸುಧಾ ಇದ್ದಾರೆ. ಭಾನುವಾರ ಚೆನ್ನೈನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗ್ರಾಮೀಣ ಕುಟುಂಬದ ಹಿನ್ನೆಲೆಯಿಂದ ಬಂದಿದ್ದ ಅವರು, ಮದ್ರಾಸ್ ವಿಶ್ವವಿದ್ಯಾಲಯದಿಂದ ಪದವಿ ಪಡೆದಿದ್ದರು. 2010ರಲ್ಲಿ ಕೇಂದ್ರ ಸರ್ಕಾರವು ಅವರಿಗೆ ಪದ್ಮಭೂಷಣ ನೀಡಿ ಗೌರವಿಸಿತ್ತು ಎಂದು ಮೂಲಗಳು ತಿಳಿಸಿವೆ.

1960ರಲ್ಲಿ ವಘುಲ್ ಅವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕಾರಿಯಾಗಿ ಬ್ಯಾಂಕಿಂಗ್ ಕ್ಷೇತ್ರಕ್ಕೆ ಪ್ರವೇಶಿಸಿದರು. ಈ ಹುದ್ದೆ ತ್ಯಜಿಸಿದ ಅವರು, ಪುಣೆಯಲ್ಲಿ ಇರುವ ರಾಷ್ಟ್ರೀಯ ಬ್ಯಾಂಕಿಂಗ್ ನಿರ್ವಹಣಾ ಸಂಸ್ಥೆಯಲ್ಲಿ ಬೋಧಕ ಹುದ್ದೆಗೆ ಸೇರ್ಪಡೆಯಾದರು. ಎರಡೇ ವರ್ಷಗಳಲ್ಲಿ ಆ ಸಂಸ್ಥೆಯ ನಿರ್ದೇಶಕ ಸ್ಥಾನಕ್ಕೇರಿದರು.

ಬಳಿಕ ಸರ್ಕಾರಿ ಸ್ವಾಮ್ಯದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಕಾರ್ಯ ನಿರ್ವಾಹಕ ನಿರ್ದೇಶಕರಾಗಿ ನೇಮಕವಾಗುವ ಮೂಲಕ ಮತ್ತೆ ಬ್ಯಾಂಕಿಂಗ್ ಕ್ಷೇತ್ರಕ್ಕೆ ಮರಳಿದರು.

1981ರಲ್ಲಿ ಬ್ಯಾಂಕ್ ಆಫ್ ಇಂಡಿಯಾದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಕವಾದರು. ಆಗ ಅವರಿಗೆ 44ರ ಹರೆಯ. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಇತಿಹಾಸದಲ್ಲಿಯೇ ಉನ್ನತ ಹುದ್ದೆ ಅಲಂಕರಿಸಿದ ಕಿರಿಯ ಅಧಿಕಾರಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

1985ರಲ್ಲಿ ಸಾರ್ವಜನಿಕ ಹಣಕಾಸು ಸಂಸ್ಥೆಯಾಗಿದ್ದ ಐಸಿಐಸಿಐನ ಚುಕ್ಕಾಣಿ ಹಿಡಿದರು. 11 ವರ್ಷಗಳ ಅವಿರತ ಸೇವೆಯಲ್ಲಿ ಐಸಿಐಸಿಐ ಖಾಸಗಿ ವಲಯದ ಪ್ರಮುಖ ಬ್ಯಾಂಕ್ ಆಗಿ ರೂಪುಗೊಳ್ಳುವಲ್ಲಿ ಶ್ರಮಿಸಿದರು. ಹಲವು ಕಾರ್ಪೊರೇಟ್ ಕಂಪನಿಗಳ ಆಡಳಿತ ಮಂಡಳಿಯಲ್ಲಿ ಸೇವೆ ಸಲ್ಲಿಸಿದ ಹಿರಿಮೆಯನ್ನೂ ಅವರು ಹೊಂದಿದ್ದಾರೆ.

ಭೀಷ್ಮ ಪಿತಾಮಹ: ಮಹೀಂದ್ರ ಸಮೂಹದ ಅಧ್ಯಕ್ಷ ಆನಂದ್ ಮಹೀಂದ್ರ ಅವರು, ವಘುಲ್ ಅವರನ್ನು 'ಭೀಷ್ಮ ಪಿತಾಮಹ' ಎಂದು ಕರೆಯುತ್ತಿದ್ದರು. ಅಲ್ಲದೆ, ಅವರೇ ನನಗೆ ಮಾರ್ಗದರ್ಶಕ ಎಂದು ಹೇಳಿದ್ದಾರೆ.

ದೇಶದ ಶಿಕ್ಷಣದ ಗುಣಮಟ್ಟ ಸುಧಾರಿಸಲು ರಚಿಸಲಾದ 'ಪ್ರಥಮ್'ನಂತಹ ನವೀನ ಕಲಿಕಾ ಸಂಸ್ಥೆ ಜೊತೆಗೂ ವಘುಲ್ ಒಡನಾಟ ಹೊಂದಿದ್ದರು.



ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಅಫ್ಗಾನಿಸ್ತಾನದ ಘೋರ್ ಪ್ರಾಂತ್ಯದ ಫಿರೋಜ್‌ಕೊಹ್‌ನಲ್ಲಿ ಮನೆಗಳು ಕುಸಿದಿದ್ದು, ನಿವಾಸಿಗಳು ನೆಲೆ ಕಳೆದುಕೊಂಡಿದ್ದಾರೆ – ಎಎಫ್‌ಪಿ ಚಿತ್ರ

ಅಫ್ಗಾನಿಸ್ತಾನದಲ್ಲಿ ಪ್ರವಾಹ: 50 ಜನ ಸಾವು

ಇಸ್ಲಾಮಾಬಾದ್ (ಎಪಿ): ಪಶ್ಚಿಮ ಅಫ್ಗಾನಿಸ್ತಾನದ ಘೋರ್ ಪ್ರಾಂತ್ಯದಲ್ಲಿ ಭಾರಿ ಮಳೆಯಿಂದ ಹಠಾತ್ ಪ್ರವಾಹ ಉಂಟಾಗಿ 50 ಜನರು ಮೃತಪಟ್ಟಿದ್ದಾರೆ ಎಂದು ತಾಲಿಬಾನ್ ಸರ್ಕಾರದ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದರು.

ಈ ಸಾವಿನ ಸಂಖ್ಯೆ ಪ್ರಾಥಮಿಕ ವರದಿಯನ್ನು ಆಧರಿಸಿದೆ. ಹಲವು ಜನರು ಕಣ್ಮರೆಯಾಗಿದ್ದು, ಮೃತರ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ ಎಂದು ಘೋರ್ ಪ್ರಾಂತೀಯ ಗವರ್ನರ್ ವಕ್ತಾರ ಅಬ್ದುಲ್ ವಾಹಿದ್ ಹಮಾಸ್ ತಿಳಿಸಿದರು.

ಶುಕ್ರವಾರ ಉಂಟಾದ ಈ ಪ್ರವಾಹದ ನಂತರ ರಾಜಧಾನಿ ಫಿರೋಜ್ ಕೋಹ್ ಸೇರಿದಂತೆ ಹಲವು ಕಡೆ ಸಾವಿರಾರು ಮನೆಗಳು ಮತ್ತು ಆಸ್ತಿಗಳಿಗೆ ಹಾನಿ ಉಂಟಾಗಿದೆ. ನೂರಾರು ಹೆಕ್ಟೇರ್ ಕೃಷಿ ಭೂಮಿ ನಾಶವಾಗಿದ್ದು, ಈ ಪ್ರಾಂತ್ಯದಲ್ಲಿ ಅಪಾರ ನಷ್ಟ ಆಗಿದೆ ಎಂದು ಅವರು ಹೇಳಿದರು.

ಸ್ಲೊವಾಕಿಯಾ ಪ್ರಧಾನಿ ಸ್ಥಿತಿ ಗಂಭೀರ

ಪೆಝಿನೊಕ್ (ಎಪಿ): ಸ್ಲೊವಾಕಿಯಾ ಪ್ರಧಾನಿ ರಾಬರ್ಟ್ ಫಿಕೊ ಅವರ ಆರೋಗ್ಯ ಸ್ಥಿತಿಯು ಗಂಭೀರವಾಗಿದ್ದು, ಅವರ ಮೇಲೆ ದಾಳಿ ಮಾಡಿರುವ ಆರೋಪಿಯನ್ನು ನ್ಯಾಯಾಂಗದ ಮುಂದೆ ಹಾಜರುಪಡಿಸಲಾಗಿದೆ.

'ಗುಂಡಿನ ದಾಳಿಯಿಂದ ಗಾಯಗೊಂಡ ಫಿಕೋ ಅವರಿಗೆ ಶುಕ್ರವಾರ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಬುಧವಾರ ಹ್ಯಾಂಡ್ಲೋವದಲ್ಲಿ ಬೆಂಬಲಿಗರ ಸಭೆಯಲ್ಲಿ ಭಾಗಿಯಾಗಿದ್ದ ಫಿಕೋ ಅವರ ಮೇಲೆ ಗುಂಡಿನ ದಾಳಿ ನಡೆದಿತ್ತು. ಘಟನೆ ನಡೆದ ಸ್ಥಳದಲ್ಲಿದ್ದ ಶಂಕಿತನೊಬ್ಬನನ್ನು ಬಂಧಿಸಲಾಗಿತ್ತು. ಬಂಧನದ ಬಳಿಕ ಮೊದಲ ಬಾರಿಗೆ ನ್ಯಾಯಾಂಗದ ಮುಂದೆ ಹಾಜರಾಗಿರುವ ಆರೋಪಿಯ ಕುರಿತು ಮಾಹಿತಿಯನ್ನು ಬಹಿರಂಗಪಡಿಸದಂತೆ ಪ್ರಾಸಿಕ್ಯೂಷನ್ ಸೂಚನೆ ನೀಡಿದೆ. ಆದರೆ, '71 ವರ್ಷ ವಯಸ್ಸಿನ ಆರೋಪಿಯು ಈ ಹಿಂದೆ ಮಾಲ್ ಒಂದರಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ' ಎಂದು ಕೆಲ ಮಾಧ್ಯಮಗಳ ವರದಿಗಳು ತಿಳಿಸಿವೆ.

ಹರಿದಾಡಿದ ಮತ್ತೊಂದು ವಿಡಿಯೊದಲ್ಲಿ ಸ್ವಾತಿ ಮಾಲಿವಾಲ್ ಸಲೀಸಾಗಿ ನಡೆದು ಸಾಗಿದ ದೃಶ್ಯ

ಬಿಜೆಪಿಯಿಂದ ಸ್ವಾತಿಗೆ ಬ್ಲ್ಯಾಕ್‌ಮೇಲ್: ಆತಿಶಿ


ಆತಿಶಿ


ಸ್ವಾತಿ ಮಾಲಿವಾಲ್


ಬಿಭವ್ ಕುಮಾರ್

ನವದೆಹಲಿ (ಪಿಟಿಐ): ದೆಹಲಿ ಮಹಿಳಾ ಆಯೋಗದ ಅಧ್ಯಕ್ಷೆ ಸ್ವಾತಿ ಮಾಲಿವಾಲ್ ಅವರು ಅಕ್ರಮ ನೇಮಕಾತಿ ಪ್ರಕರಣದಲ್ಲಿ ಬಂಧನದ ಭೀತಿ ಎದುರಿಸುತ್ತಿದ್ದಾರೆ. ಹೀಗಾಗಿಯೇ ಇದನ್ನು ದಾಳವಾಗಿ ಬಳಸಿ, ಕೇಜ್ರಿವಾಲ್ ವಿರುದ್ಧದ ಪಿತೂರಿಯಲ್ಲಿ ಭಾಗಿಯಾಗಲು ಬಿಜೆಪಿ ಅವರಿಗೆ 'ಬ್ಲ್ಯಾಕ್‌ಮೇಲ್' ಮಾಡಿದೆ ಎಂದು ದೆಹಲಿ ಸಚಿವೆ ಆತಿಶಿ ಆರೋಪಿಸಿದರು.

ಮುಖ್ಯಮಂತ್ರಿ ಭೇಟಿಗೆ ಯಾವುದೇ ಸಮಯ ನಿಗದಿಯಾಗದಿದ್ದರೂ ಸ್ವಾತಿ ಅವರು, ಮುಖ್ಯಮಂತ್ರಿ ಅವರ ಅಧಿಕೃತ ನಿವಾಸಕ್ಕೆ ಮೇ 13ರಂದು ಏಕೆ ಹೋಗಿದ್ದರು ಎಂದು ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

'ಅಂದು ಕೇಜ್ರಿವಾಲ್ ಅವರು ಸ್ವಾತಿ ಅವರನ್ನು ಭೇಟಿಯಾಗಲಿಲ್ಲ. ಒಂದು ವೇಳೆ ಭೇಟಿಯಾಗಿದ್ದಲ್ಲಿ, ಬಿಭವ್ ವಿರುದ್ಧ ಈಗ ಇರುವ ಆರೋಪಗಳು ಅವರ ಮೇಲೆ ಬರುತ್ತಿದ್ದವು' ಎಂದು ಅವರು ಹೇಳಿದರು.

'ಬಿಜೆಪಿಯವರು ಮೊದಲು ಪ್ರಕರಣಗಳನ್ನು ದಾಖಲಿಸುತ್ತಾರೆ. ನಂತರ ನಾಯಕರನ್ನು ಜೈಲಿಗೆ ಕಳುಹಿಸುವ ಬೆದರಿಕೆ ಹಾಕುತ್ತಾರೆ. ಸ್ವಾತಿ ಅವರ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳ ಅಕ್ರಮ ನೇಮಕಾತಿ ಪ್ರಕರಣ ದಾಖಲಿಸಿದ್ದು, ಅವರನ್ನು ಬಂಧಿಸುವ ಸಾಧ್ಯತೆ ಇದೆ' ಎಂದು ಅವರು ವಿವರಿಸಿದರು.

ಸ್ವಾತಿ ಅವರ ಮೊಬೈಲ್ ಕರೆಗಳ ದಾಖಲೆಗಳನ್ನು ಪರಿಶೀಲಿಸಿದರೆ, ಅವರು ಯಾವ ಬಿಜೆಪಿ ನಾಯಕರ ಜತೆ ಸಂಪರ್ಕದಲ್ಲಿದ್ದಾರೆ ಎಂಬುದು ಗೊತ್ತಾಗುತ್ತದೆ ಎಂದು ಅವರು ತಿಳಿಸಿದರು.

ಮತ್ತೊಂದು ವಿಡಿಯೊ: ಘಟನೆಯ ದಿನದ (ಮೇ 13) ಮತ್ತೊಂದು ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಈ ವಿಡಿಯೊದಲ್ಲಿ, ಮಹಿಳಾ ಭದ್ರತಾ ಸಿಬ್ಬಂದಿಯು ಮಾಲಿವಾಲ್ ಅವರ ತೋಳನ್ನು ಹಿಡಿದುಕೊಂಡು ಕೇಜ್ರಿವಾಲ್ ಅವರ ನಿವಾಸದಿಂದ ಹೊರಗೆ ಕರೆದೊಯ್ಯುತ್ತಿರುವ ದೃಶ್ಯ ಹಾಗೂ ಮುಖ್ಯ ದ್ವಾರದ ಹೊರಗೆ ಮಾಲಿವಾಲ್ ಅವರು ಭದ್ರತಾ ಸಿಬ್ಬಂದಿಯ ಕೈಯನ್ನು ಬಿಡಿಸಿಕೊಂಡ ದೃಶ್ಯ ದಾಖಲಾಗಿದೆ.

ಇದಕ್ಕೆ ಪ್ರತಿಕ್ರಿಯಿಸಿರುವ ಸಚಿವೆ ಆತಿಶಿ, 'ಸ್ವಾತಿ ಅವರು ನೀಡಿದ ದೂರಿನಲ್ಲಿ, ಹಲ್ಲೆಯ ಬಳಿಕ ತನಗೆ ನಡೆಯಲೂ ಆಗುತ್ತಿಲ್ಲ ಎಂದಿದ್ದರು. ಅಲ್ಲದೆ ಬಿಭವ್ ತನ್ನ ತಲೆಯನ್ನು ಮೇಜಿಗೆ ಬಡಿದಿದ್ದರಿಂದ ಗಾಯವಾಗಿದೆ ಎಂದೂ ದಾಖಲಿಸಿದ್ದರು. ಆದರೆ ಬಿಡುಗಡೆಯಾಗಿರುವ ಎರಡನೇ ವಿಡಿಯೊ (ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ) ಗಮನಿಸಿದರೆ ಅವರು ಕುಂಟದೆ, ಸಲೀಸಾಗಿ ನಡೆದುಕೊಂಡು ಹೋಗುತ್ತಿರುವುದನ್ನು ಮತ್ತು ಭದ್ರತಾ ಸಿಬ್ಬಂದಿಯಿಂದ ತನ್ನ ಕೈಯನ್ನು ಬಿಡಿಸಿಕೊಂಡಿದ್ದನ್ನು ಕಾಣಬಹುದು. ಅಲ್ಲದೆ ಅವರ ಬಟ್ಟೆಯೂ ಹರಿದಿಲ್ಲ' ಎಂದು ಹೇಳಿದರು.

ಎಡಿಟ್ ಮಾಡಿದ ವಿಡಿಯೊ– ಬಿಜೆಪಿ: ಎಎಪಿ ನಾಯಕರು 'ಎಡಿಟ್' ಮಾಡಿದ ವಿಡಿಯೊಗಳನ್ನು ಪ್ರಸಾರ ಮಾಡುವ ಮೂಲಕ ಸ್ವಾತಿ ಅವರಿಗೆ ಕಳಂಕ ತಂದಿದ್ದಾರೆ ಎಂದು ಬಿಜೆಪಿಯ ದೆಹಲಿ ಘಟಕದ ಅಧ್ಯಕ್ಷ ವೀರೇಂದ್ರ ಸಚ್‌ದೇವ್ ಶನಿವಾರ ಆರೋಪಿಸಿದ್ದಾರೆ.

ಎಎಪಿಯು ಮಾಲಿವಾಲ್ ಅವರ ಮಾನಹಾನಿ ಮಾಡುವ ಉದ್ದೇಶದಿಂದಲೇ ಸಾಮಾಜಿಕ ಮಾಧ್ಯಮಗಳಲ್ಲಿ ಈ ರೀತಿಯ ವಿಡಿಯೊಗಳನ್ನು ಹಂಚಿಕೊಳ್ಳುತ್ತಿದೆ. ಇದು ಸರಿಯಲ್ಲ ಎಂದು ಅವರು ಹೇಳಿದ್ದಾರೆ.

ಎಎಪಿ ಮಹಿಳಾ ವಿರೋಧಿ: ಬಿಜೆಪಿ

ನವದೆಹಲಿ (ಪಿಟಿಐ): ಸ್ವಾತಿ ಮಾಲಿವಾಲ್ ಮೇಲಿನ ಹಲ್ಲೆ ಪ್ರಕರಣದಲ್ಲಿ ಮುಖ್ಯಮಂತ್ರಿ ಅವರ ಆಪ್ತ ಸಹಾಯಕನನ್ನು ಸಮರ್ಥಿಸಿಕೊಳ್ಳಲು ಸಂತ್ರಸ್ತೆಯನ್ನೇ ಅವಮಾನಿಸುವುದರಲ್ಲಿ ತೊಡಗಿರುವ ಎಎಪಿ ಮಹಿಳಾ ವಿರೋಧಿ ಪಕ್ಷವಾಗಿದೆ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ ಆರೋಪಿಸಿದ್ದಾರೆ.

ಮುಖ್ಯಮಂತ್ರಿಯವರಿಗೆ ಹಾನಿ ಉಂಟುಮಾಡಬಹುದಾದ ರಹಸ್ಯಗಳನ್ನು ಬಿಭವ್ ಬಹಿರಂಗಪಡಿಸಬಹುದು ಎಂಬ ಆತಂಕದಲ್ಲಿ ಎಎಪಿ ಆತನ ರಕ್ಷಣೆಗೆ ನಿಂತಿದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ವೈದ್ಯಕೀಯ ಪರೀಕ್ಷೆ

ದೆಹಲಿಯ ಏಮ್ಸ್‌ನಲ್ಲಿ ಶುಕ್ರವಾರ ಮಾಲಿವಾಲ್ ಅವರ ವೈದ್ಯಕೀಯ ಪರೀಕ್ಷೆ ನಡೆಸಲಾಯಿತು. ಅವರ ಎಡಕಾಲು ಮತ್ತು ಬಲಗಣ್ಣಿನ ಕೆಳಗೆ (ಬಲಕೆನ್ನೆ ಮೇಲೆ) ಗಾಯ ಆಗಿರುವುದಾಗಿ ವೈದ್ಯಕೀಯ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಬಿಜೆಪಿ ಕಚೇರಿಗೆ ಇಂದು ಎಎಪಿ ನಡಿಗೆ: ಕೇಜ್ರಿವಾಲ್

ನವದೆಹಲಿ (ಪಿಟಿಐ): 'ನಾನು ಮತ್ತು ಎಎಪಿಯ ಇತರ ನಾಯಕರು ಇದೇ 19ರಂದು ಬಿಜೆಪಿಯ ಪ್ರಧಾನ ಕಚೇರಿಗೆ ನಡಿಗೆ ಮೂಲಕ ಸಾಗುತ್ತೇವೆ. ಆಗ ಪ್ರಧಾನಿ ಅವರು ನಮ್ಮಲ್ಲಿ ಯಾರನ್ನಾದರೂ ಜೈಲಿಗೆ ಕಳುಹಿಸುವ ಧೈರ್ಯ ತೋರಲಿ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಶನಿವಾರ ಸವಾಲು ಹಾಕಿದರು.

ಎಎಪಿ ಸಂಸದ ರಾಘವ್ ಚಡ್ಡಾ, ದೆಹಲಿ ಸಚಿವರಾದ ಆತಿಶಿ, ಸೌರಭ್ ಭಾರದ್ವಾಜ್ ಅವರನ್ನು ಜೈಲಿಗೆ ಕಳುಹಿಸುವುದಾಗಿ ಬಿಜೆಪಿ ಬೆದರಿಸುತ್ತಿದೆ ಎಂದ ಅವರು, 'ನಮ್ಮ ನಾಯಕರನ್ನು ಜೈಲಿಗೆ ಕಳುಹಿಸುವ ಮೂಲಕ ಪಕ್ಷವನ್ನು ಹತ್ತಿಕ್ಕಬಹುದು ಎಂದು ಭಾವಿಸಿದ್ದೀರಾ? ಪ್ರಯತ್ನಿಸಿ ನೋಡಿ' ಎಂದು ಹೇಳಿದರು.

ಎಎಪಿ ಸಂಸದೆ ಸ್ವಾತಿ ಮಾಲಿವಾಲ್ ಮೇಲಿನ ಹಲ್ಲೆ ಪ್ರಕರಣದಲ್ಲಿ ತನ್ನ ಆಪ್ತ ಸಹಾಯಕ ಬಿಭವ್ ಕುಮಾರ್ ಬಂಧನವಾದ ಕೆಲವೇ ಗಂಟೆಗಳಲ್ಲಿ ಕೇಜ್ರಿವಾಲ್ ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಎಎಪಿ ನಾಯಕರಾದ ಮನೀಶ್ ಸಿಸೋಡಿಯಾ, ಸತ್ಯೇಂದ್ರ ಜೈನ್, ಸಂಜಯ್ ಸಿಂಗ್ ಅವರನ್ನು ಜೈಲಿಗೆ ಕಳುಹಿಸುವ ಆಟವಾಡುತ್ತಿದ್ದೀರಿ ಎಂದ ಅವರು, 'ನಾನು, ನನ್ನ ಶಾಸಕರು ಮತ್ತು ಸಂಸದರೊಂದಿಗೆ ಭಾನುವಾರ ಮಧ್ಯಾಹ್ನ ಬಿಜೆಪಿ ಕಚೇರಿಗೆ ಬರುತ್ತೇನೆ. ನಮ್ಮಲ್ಲಿ ಯಾರನ್ನಾದರೂ ನೀವು ಜೈಲಿಗೆ ಕಳುಹಿಸಬಹುದು' ಎಂದು ಅವರು ಪ್ರಧಾನಿಯನ್ನು ಉದ್ದೇಶಿಸಿ ಹೇಳಿದರು.

'ನೀವು ಎಎಪಿಯ ಎಷ್ಟು ನಾಯಕರನ್ನು ಜೈಲಿಗೆ ಅಟ್ಟಿದರೂ ದೇಶದಲ್ಲಿ ನೂರಾರು ಪಟ್ಟು ನಾಯಕರು ಹುಟ್ಟು ಪಡೆಯುತ್ತಾರೆ' ಎಂದರು.

ಬಿಜೆಪಿ ಮಾಡದ ಕಾರ್ಯಗಳನ್ನು ಎಎಪಿ ಮಾಡಿದೆ. ಎಎಪಿ ಸರ್ಕಾರ ಉತ್ತಮ ಶಾಲೆಗಳನ್ನು ನಿರ್ಮಿಸಿದೆ. ಮೊಹಲ್ಲಾ ಚಿಕಿತ್ಸಾಲಯಗಳನ್ನು ಸ್ಥಾಪಿಸಿ, ಉಚಿತ ಚಿಕಿತ್ಸೆ ಒದಗಿಸುತ್ತಿದೆ. ನಗರದಲ್ಲಿ 24 ಗಂಟೆಯೂ ಉಚಿತ ವಿದ್ಯುತ್ ಪೂರೈಕೆಯನ್ನು ಖಾತರಿಪಡಿಸಲಾಗಿದೆ. ಇವೆಲ್ಲ ಬಿಜೆಪಿಗೆ ಸಹಿಸಲಾಗುತ್ತಿಲ್ಲ ಎಂದು ಅವರು ದೂರಿದರು.

ಅನುಮತಿಯಿಲ್ಲದೆ ನಟ ಜಾಕಿಶ್ರಾಫ್ ಹೆಸರು, ಧ್ವನಿ ಬಳಕೆ ವಿರುದ್ಧ ಆದೇಶ

'ಪೂರ್ವಾನುಮತಿ ಇಲ್ಲದೇ ಬಳಸುವಂತಿಲ್ಲ'


ಜಾಕಿಶ್ರಾಫ್

ನವದೆಹಲಿ (ಪಿಟಿಐ): ಬಾಲಿವುಡ್ ನಟ ಜಾಕಿ ಶ್ರಾಫ್ ಅವರ ಹೆಸರು, ಅವರನ್ನು ಗುರುತಿಸಲು ಬಳಸುವ 'ಜಾಕಿ', 'ಜಗ್ಗುದಾದಾ' ವಿಶೇಷಣಗಳು, ಅವರ ಧ್ವನಿ, ಭಾವಚಿತ್ರವನ್ನು ಪೂರ್ವಾನುಮತಿ ಇಲ್ಲದೆ ವಾಣಿಜ್ಯ ಉದ್ದೇಶಕ್ಕೆ ಬಳಸಬಾರದು ಎಂದು ದೆಹಲಿ ಹೈಕೋರ್ಟ್ ನಿರ್ಬಂಧ ಹೇರಿದೆ.

ನ್ಯಾಯಮೂರ್ತಿ ಸಂಜೀವ್ ನಾರುಲಾ ಈ ಸಂಬಂಧ ಮೇ 15ರಂದು ಮಧ್ಯಂತರ ಆದೇಶ ನೀಡಿದ್ದಾರೆ. ವಾಲ್‌ಪೇಪರ್‌ಗಳು, ಟಿ–ಶರ್ಟ್ಸ್, ಪೋಸ್ಟರ್ ಮಾರಾಟ ಮಾಡುವ ಸಂಸ್ಥೆಗಳು, ಕೃತಕ ಬುದ್ಧಿಮತ್ತೆ ಚಾಟ್‌ಬಾಟ್ ವೇದಿಕೆ ಬಳಸುವ ಇ–ಕಾಮರ್ಸ್ ವೆಬ್‌ಸೈಟ್‌ಗಳು ಮೇಲ್ನೋಟಕ್ಕೆ ನಟನ ವ್ಯಕ್ತಿತ್ವ ಮತ್ತು ಪ್ರಚಾರದ ಹಕ್ಕುಗಳನ್ನು ಉಲ್ಲಂಘಿಸುತ್ತಿರುವುದು ಕಂಡುಬರುತ್ತಿದೆ ಎಂದು ಆದೇಶದಲ್ಲಿ ಹೇಳಿದ್ದಾರೆ.

ಅಗೌರವ ಮತ್ತು ನಿಂದನಾತ್ಮಕ ಪದಗಳನ್ನು ಬಳಸಿ ಜಾಕಿಶ್ರಾಫ್ ಅವರ ವಿಡಿಯೊ ಪ್ರಸಾರ ಮಾಡಿದ್ದ ಇಬ್ಬರು ಕಂಟೆಂಟ್ ಕ್ರಿಯೆಟರ್‌ಗಳಿಗೂ ಕೋರ್ಟ್ ಈ ಸಂಬಂಧ ಸ್ಪಷ್ಟ ನಿರ್ದೇಶನ ನೀಡಿದೆ.

ಅಲ್ಲದೆ, ಮಾನಹಾನಿ ವಿಡಿಯೊ ಪೋಸ್ಟ್ ಮಾಡಿದ್ದ ಯೂಟ್ಯೂಬ್ ಕಂಟೆಂಟ್ ಕ್ರಿಯೇಟರ್ ಹಾಗೂ ತನ್ನ ಮಳಿಗೆಗೆ ನೋಂದಣಿಯಾಗಿದ್ದ ಟ್ರೇಡ್‌ಮಾರ್ಕ್ 'ಭಿಡು' ಬಳಕೆ ಮಾಡಿಕೊಂಡಿದ್ದ ರೆಸ್ಟೋರೆಂಟ್ ಮಾಲೀಕರೊಬ್ಬರಿಗೂ ಕೋರ್ಟ್ ನೋಟಿಸ್ ಜಾರಿ ಮಾಡಿತು.

ಪ್ರಕರಣದ ವಿಚಾರಣೆಯನ್ನು ಅಕ್ಟೋಬರ್ 15ಕ್ಕೆ ಮುಂದೂಡಿದ ಕೋರ್ಟ್, ದೂರಸಂಪರ್ಕ ಇಲಾಖೆ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯಕ್ಕೆ ನೋಟಿಸ್ ಜಾರಿ ಮಾಡಿದ್ದು, ಸಂಬಂಧಿತ ಟೆಲಿಕಾಂ ಸೇವಾದಾರರ ಮೇಲೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿತು.

'ಅನುಮತಿಯಿಲ್ಲದೆ ನನ್ನ ಹೆಸರು, ವ್ಯಕ್ತಿತ್ವ ಬಿಂಬಿಸುವ ವಿಶೇಷಣಗಳನ್ನು ಹಲವು ಸಂಸ್ಥೆಗಳು ವಾಣಿಜ್ಯ ಉದ್ದೇಶದ ಲಾಭಕ್ಕಾಗಿ ದುರ್ಬಳಕೆ ಮಾಡಿಕೊಳ್ಳುತ್ತಿವೆ' ಎಂದು ಜಾಕಿಶ್ರಾಫ್ ಅವರು ಈ ತಿಂಗಳ ಆರಂಭದಲ್ಲಿ ಕೋರ್ಟ್ ಮೆಟ್ಟಿಲೇರಿದ್ದರು. ಸ್ನೇಹದ ಅಭಿವ್ಯಕ್ತಿಗೆ ಮರಾಠಿ ಭಾಷೆಯಲ್ಲಿ ವಾಚ್ಯವಾಗಿ ಬಳಸುವ 'ಭಿಡು' ಪದದ ಮೇಲಿನ ಹಕ್ಕಿನ ಉಲ್ಲಂಘನೆಯೂ ಆಗುತ್ತಿದೆ ಎಂದು ಆರೋಪಿಸಿದ್ದರು.

ಶ್ರಾಫ್ ಅವರ ಪರವಾಗಿ ವಕೀಲ ಪ್ರವೀಣ್ ಆನಂದ್ ವಾದ ಮಂಡಿಸಿದರು. 'ನನ್ನ ಕಕ್ಷಿದಾರರರು 200ಕ್ಕೂ ಅಧಿಕ ಚಿತ್ರಗಳಲ್ಲಿ ನಟಿಸಿದ್ದು, ಅವರ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ' ಎಂದು ಪ್ರತಿಪಾದಿಸಿದರು. ಪೂರಕವಾಗಿ ಇಂಥದ್ದೇ ಪ್ರಕರಣದಲ್ಲಿ ನಟರಾದ ಅಮಿತಾಭ್ ಬಚ್ಚನ್ ಮತ್ತು ಅನಿಲ್ ಕಪೂರ್ ಅವರು ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿ ಕೋರ್ಟ್ ಹೊರಡಿಸಿರುವ ಆದೇಶಗಳನ್ನು ಉಲ್ಲೇಖಿಸಿದರು.

'ನಿಂದನೆ ಸಾರ್ವಜನಿಕವಾಗಿ ನಡೆದಿರಬೇಕು'

ಕೋರ್ಟ್ ಸುದ್ದಿಗಳು

ನವದೆಹಲಿ: ಉದ್ದೇಶಪೂರ್ವಕ ನಿಂದನೆ ಹಾಗೂ ಅವಮಾನವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯ ಅಡಿಯಲ್ಲಿ ಅಪರಾಧ ಅನ್ನಿಸಿಕೊಳ್ಳಬೇಕಿದ್ದರೆ, ಆ ಕೃತ್ಯವು ಇತರರಿಗೆ ಕಾಣಿಸುವಂತಹ ಸ್ಥಳದಲ್ಲಿ ನಡೆದಿರಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಈ ಕಾಯ್ದೆಯ ಅಡಿಯಲ್ಲಿ ಮಾಡುವ ಯಾವುದೇ ಆರೋಪವು, ಅಪರಾಧಿಕ ಅಂಶಗಳನ್ನು ಹೊಂದಿದೆಯೇ ಎಂಬುದನ್ನು ತೀರ್ಮಾನಿಸುವಾಗ 'ಸಾರ್ವಜನಿಕರಿಗೆ ಕಾಣಿಸುವ ಯಾವುದೇ ಸ್ಥಳದಲ್ಲಿ' ಎಂದು ಕಾಯ್ದೆಯಲ್ಲಿ ಹೇಳಿರುವ ಮಾತು ಬಹಳ ಮುಖ್ಯವಾದ ಪಾತ್ರವಹಿಸುತ್ತದೆ ಎಂದು ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ಎಸ್.ವಿ.ಎನ್. ಭಟ್ಟಿ ಅವರು ಇದ್ದ ವಿಭಾಗೀಯ ಪೀಠವು ಹೇಳಿದೆ.

'ಸಾರ್ವಜನಿಕರಿಗೆ ಕಾಣಿಸುವಂತಹ ಸ್ಥಳದಲ್ಲಿ' ಎಂಬ ವಿವರಣೆಯ ಅನ್ವಯ, ದೂರುದಾರರ ಹೊರತಾಗಿ ಇತರ ವ್ಯಕ್ತಿಗಳಿಗೆ ಕಾಣಿಸುವಂತೆ ಆ ಕೃತ್ಯ ನಡೆದಿರಬೇಕು ಎಂದು ಪೀಠವು ಶುಕ್ರವಾರ ನೀಡಿರುವ ತೀರ್ಪಿನಲ್ಲಿ ಹೇಳಿದೆ. ಈ ಕಾಯ್ದೆಯ ಅಡಿಯಲ್ಲಿ ತಮ್ಮ ವಿರುದ್ಧ ಎಫ್‌ಐಆರ್ ದಾಖಲಿಸಲು ನೀಡಿದ್ದ ಆದೇಶವನ್ನು ಪ್ರಶ್ನಿಸಿ ಪ್ರೀತಿ ಅಗರ್ವಾಲ್ ಮತ್ತು ಇತರರು ಸಲ್ಲಿಸಿದ್ದ ಮೇಲ್ಮನವಿಯನ್ನು ಮಾನ್ಯ ಮಾಡಿರುವ ಪೀಠವು ಈ ವಿವರಣೆ ನೀಡಿದೆ.

ಮೇಲ್ಮನವಿದಾರರ ಪರವಾಗಿ ವಾದ ಮಂಡಿಸಿದ್ದ ಹಿರಿಯ ವಕೀಲ ಸಿದ್ಧಾರ್ಥ ಲೂಥ್ರಾ ಅವರು, ಒಆರ್‌ಇಎ (ಒಲಿಂಪಿಕ್ ರೈಡಿಂಗ್ ಆ್ಯಂಡ್ ಈಕ್ವೆಸ್ಟ್ರಿಯನ್ ಅಕಾಡೆಮಿ) ಆಡಳಿತಾಧಿಕಾರಿಯ ಚಿತಾವಣೆಯ ಕಾರಣದಿಂದಾಗಿ ದೂರುದಾರರು ಈ ದೂರು ನೀಡಿದ್ದಾರೆ ಎಂದು ಹೇಳಿದ್ದರು. ವಾಟ್ಸ್‌ಆ್ಯಪ್ ಮೂಲಕ ನಡೆದಿರುವ ಮಾತುಕತೆಗಳು ಕಾಯ್ದೆಯ ಅಡಿಯಲ್ಲಿ ಅಪರಾಧಿಕ ಅಂಶಗಳನ್ನು ಹೊಂದಿರುವುದು ಮೇಲ್ನೋಟಕ್ಕೆ ಕಾಣುವುದಿಲ್ಲ ಎಂದೂ ಅವರು ಹೇಳಿದ್ದರು.


ಒಂಟೆ ಸವಾರಿ ತಮಿಳುನಾಡಿನ ನಾಗಪಟ್ಟಣಂ ಜಿಲ್ಲೆಯ ವೇಲಂಕಣಿಯಲ್ಲಿ ಶನಿವಾರ ಸಮುದ್ರತೀರದಲ್ಲಿ ಕುಟುಂಬವೊಂದು ಒಂಟೆ ಸವಾರಿ ನಡೆಸಿತು –ಪಿಟಿಐ ಚಿತ್ರ

ಮಣಿಪುರ: 34 ಬಂಡುಕೋರರ ಶರಣಾಗತಿ

ಪ್ರಜಾವಾಣಿ ವಾರ್ತೆ

ಗುವಾಹಟಿ: 'ಯುನೈಟೆಡ್ ನ್ಯಾಷನಲ್ ಲಿಬರೇಷನ್ ಫ್ರಂಟ್' (ಯುಎನ್‌ಎಲ್‌ಎಫ್) ಸಂಘಟನೆಯ ಪಾಂಬೆಯಿ ಬಣದ 34 ಸದಸ್ಯರು ಶುಕ್ರವಾರ ಅಸ್ಸಾಂ ರೈಫಲ್ಸ್ ಮುಂದೆ ಶರಣಾಗಿದ್ದಾರೆ.

ಬಂಡುಕೋರರು ಮ್ಯಾನ್ಮಾರ್‌ನಿಂದ ಮಣಿಪುರಕ್ಕೆ ನುಸುಳಲು ಯತ್ನಿಸುತ್ತಿದ್ದ ವೇಳೆ ತೆಂಗನೌಪಲ್ ಜಿಲ್ಲೆಯ ಬಳಿ ಭದ್ರತಾ ಸಿಬ್ಬಂದಿ ಗುಂಡಿನ ದಾಳಿ ನಡೆಸಿದರು. ತೀವ್ರವಾದ ಗುಂಡಿನ ಚಕಮಕಿ ನಡೆದ ಬಳಿಕ ಬಂಡುಕೋರರು ಸ್ವಯಂಚಾಲಿತ ಶಸ್ತ್ರಾಸ್ತ್ರಗಳೊಂದಿಗೆ ಶರಣಾಗಿದ್ದಾರೆ.

'ಮ್ಯಾನ್ಮಾರ್‌ನ ಮತ್ತೊಂದು ಸಂಘಟನೆ ಪೀಪಲ್ಸ್ ಡಿಫೆನ್ಸ್ ಫೋರ್ಸ್ (ಪಿಡಿಎಫ್) ಮತ್ತು ಯುಎನ್‌ಎಲ್‌ಎಫ್ ಸಂಘಟನೆ ನಡುವೆ ಕೆಲ ದಿನಗಳಿಂದ ಕದನ ನಡೆಯುತ್ತಿದೆ. ಈ ಕಾರಣಕ್ಕೆ ಸುರಕ್ಷತೆಯ ಉದ್ದೇಶದಿಂದ ಬಂಡುಕೋರರು ಮಣಿಪುರಕ್ಕೆ ನುಸುಳಲು ಯತ್ನಿಸುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಪಾಂಬೆಯಿ ಬಣವು ಕಳೆದ ವರ್ಷ ನವೆಂಬರ್‌ನಲ್ಲಿ ಕೇಂದ್ರ ಮತ್ತು ಮಣಿಪುರ ರಾಜ್ಯ ಸರ್ಕಾರದೊಂದಿಗೆ ಕದನ ವಿರಾಮ ಒಪ್ಪಂದಕ್ಕೆ ಸಹಿ ಮಾಡಿದೆ.

ವಾಯುವ್ಯ ಭಾರತ: 22ರ ವರೆಗೆ ಬಿಸಿಗಾಳಿ

ನವದೆಹಲಿ (ಪಿಟಿಐ): ದೆಹಲಿ, ಹರಿಯಾಣ, ಪಂಜಾಬ್, ರಾಜಸ್ಥಾನ ಮತ್ತು ಉತ್ತರಪ್ರದೇಶ ಒಳಗೊಂಡಂತೆ ವಾಯುವ್ಯ ಭಾರತದಲ್ಲಿ ಇನ್ನೂ 5 ದಿನ ಬಿಸಿಗಾಳಿ ಸಮಸ್ಯೆ ಇರಲಿದೆ. ಹೀಗೆಂದು ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಶನಿವಾರ ಮುನ್ಸೂಚನೆ ನೀಡಿದೆ.

ಬಿಸಿಗಾಳಿ ಬೀಸಲಿರುವ ಕಾರಣ ಮೇ 22ರವರೆಗೆ ದೆಹಲಿ, ಹರಿಯಾಣ, ಪಂಜಾಬ್ ಮತ್ತು ಪಶ್ಚಿಮ ರಾಜಸ್ಥಾನ ಪ್ರಾಂತ್ಯಗಳಿಗೆ ಐಎಂಡಿ 'ರೆಡ್ ಅಲರ್ಟ್' ಘೋಷಿಸಿದೆ. ದೀರ್ಘಕಾಲೀನ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವವರು ಒಳಗೊಂಡಂತೆ ಮಕ್ಕಳು ಮತ್ತು ಹಿರಿಯರ ಬಗ್ಗೆ ತೀವ್ರ ಕಾಳಜಿ ವಹಿಸುವಂತೆ ಒತ್ತಾಯಿಸಿದೆ.

ಪೂರ್ವ ಹಾಗೂ ಕೇಂದ್ರೀಯ ಭಾರತ ವಲಯದಲ್ಲಿ ಇನ್ನೂ 3 ದಿನಗಳವರೆಗೆ ಬಿಸಿಗಾಳಿ ಬೀಸಲಿದೆ. ಈ ಸಂಬಂಧ ಪೂರ್ವ ರಾಜಸ್ಥಾನ, ಉತ್ತರ ಪ್ರದೇಶ ಮತ್ತು ಬಿಹಾರ ಪ್ರಾಂತ್ಯಗಳಿಗೆ ಮೇ 20ರವರೆಗೆ ಐಎಂಡಿ 'ಆರೆಂಜ್ ಅಲರ್ಟ್' ಘೋಷಣೆ ಮಾಡಿದೆ.

ಬಿಸಿಗಾಳಿ ಕಾರಣ ರಾಜಸ್ಥಾನದಾದ್ಯಂತ ತೀವ್ರ ತಾಪಮಾನ ವರದಿಯಾಗಿದ್ದು, ಬಹುತೇಕ ಭಾಗಗಳಲ್ಲಿ ಇದೇ ಪರಿಸ್ಥಿತಿ ಇನ್ನೂ ಒಂದು ವಾರ ಮುಂದುವರೆಯುವ ಸಾಧ್ಯತೆ ಇದೆ ಎಂದು ಜೈಪುರದ ಹವಾಮಾನ ಕೇಂದ್ರ ತಿಳಿಸಿದೆ. ಅಲ್ಲದೆ, ಬಾಡಮೇರ್‌ನಲ್ಲಿ 46.9 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿರುವುದಾಗಿ ಮಾಹಿತಿ ನೀಡಿದೆ.

ಗರಿಷ್ಠ ತಾಪಮಾನ ದಾಖಲು: ಉತ್ತರ ಭಾರತದ ರಾಜ್ಯಗಳು ಬಿಸಿಲಿನ ಬೇಗೆಯಿಂದ ತಲ್ಲಣಗೊಂಡಿರುವ ನಡುವೆಯೇ, ಶುಕ್ರವಾರ ಪಶ್ಚಿಮ ದೆಹಲಿಯ ನಜಫ್‌ಗಢದಲ್ಲಿ 47.4 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ. ಇದು ದೇಶದಲ್ಲಿ ದಾಖಲಾದ ಈ ವರ್ಷದ ಅತ್ಯಂತ ಗರಿಷ್ಠ ಪ್ರಮಾಣದ ತಾಪಮಾನವಾಗಿದೆ.

ಹಿಂದೆಯೂ ಬೀಸಿದೆ ಬಿಸಿಗಾಳಿ: ಹವಾಮಾನ ವೈಪರೀತ್ಯದಿಂದಾಗಿ ಪ್ರತಿ 30 ವರ್ಷಗಳಿಗೊಮ್ಮೆ ಬಿಸಿಗಾಳಿ ಸಮಸ್ಯೆ ತಲೆದೋರಲಿದೆ. ಈ ಹಿಂದೆಯೂ ಸುಮಾರು 45 ಬಾರಿ ಇದೇ ರೀತಿಯ ಬಿಸಿಗಾಳಿ ಬೀಸಿದೆ ಎಂದು ಹವಾಮಾನ ತಜ್ಞರ ತಂಡವೊಂದು ವಿವರಿಸಿದೆ.

ಬಸ್‌ಗೆ ಬೆಂಕಿ– 9 ಮಂದಿ ದಹನ


ಹರಿಯಾಣಾದ ತಾವ್ಡು ಬಳಿ ಬೆಂಕಿಗೀಡಾದ ಬಸ್ ಸಂಪೂರ್ಣವಾಗಿ ಸುಟ್ಟುಕರಕಲಾಗಿರುವುದು

ಗುರುಗ್ರಾಮ (ಪಿಟಿಐ): ಹರಿಯಾಣದ ನೂಹ್ ಜಿಲ್ಲೆಯ ತಾವ್ಡು ಪಟ್ಟಣದ ಬಳಿ ಸಂಚರಿಸುತ್ತಿದ್ದ ಬಸ್‌ನಲ್ಲಿ ಬೆಂಕಿ ಹೊತ್ತಿಕೊಂಡು 9 ಜನರು ಸಜೀವ ದಹನವಾಗಿ, 15 ಜನರು ಗಾಯಗೊಂಡಿರುವ ಘಟನೆ ಶನಿವಾರ ಮಧ್ಯರಾತ್ರಿ 2 ಗಂಟೆಗೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕುಂಡ್ಲಿ– ಮಾನೇಸರ್– ಪಲ್ವಾಲ್ (ಕೆಎಂಪಿ) ಎಕ್ಸ್‌ಪ್ರೆಸ್ ವೇನಲ್ಲಿ ಈ ದುರಂತ ಸಂಭವಿಸಿದೆ. ಬಸ್‌ನಲ್ಲಿ ಸುಮಾರು 60 ಜನರಿದ್ದರು. ಎಲ್ಲರೂ ಪಂಜಾಬ್‌ನ ಹೋಷಿಯಾಪುರ್ ಮತ್ತು ಲೂಧಿಯಾನಕ್ಕೆ ಸೇರಿದವರು ಮತ್ತು ಎಲ್ಲರೂ ಸಂಬಂಧಿಕರು. ಮಥುರಾ ಮತ್ತು ವೃಂದಾವನ ತೀರ್ಥಕ್ಷೇತ್ರಕ್ಕೆ ಭೇಟಿ ನೀಡಿ ಹಿಂದಿರುಗುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಮೃತರಲ್ಲಿ ಆರು ಮಂದಿ ಮಹಿಳೆಯರು ಮತ್ತು ಮೂರು ಮಂದಿ ಪುರುಷರಿದ್ದಾರೆ. ಗಾಯಗೊಂಡಿರುವವರ ಆರೋಗ್ಯ ಸ್ಥಿರವಾಗಿದೆ. ಬೆಂಕಿ ಹೊತ್ತಿಕೊಳ್ಳಲು ಕಾರಣವೇನೆಂಬುದು ಇನ್ನೂ ತಿಳಿದುಬಂದಿಲ್ಲ. ತನಿಖೆ ಪ್ರಗತಿಯಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಕಿ ಹೊತ್ತಿಕೊಂಡಿದ್ದು ಕಂಡ ಕೂಡಲೇ, ಬಸ್ಸನ್ನು ಹಿಂಬಾಲಿಸಿದ ಬೈಕ್ ಸವಾರರು ಬಸ್ ನಿಲ್ಲಿಸುವಂತೆ ಚಾಲಕನಿಗೆ ತಿಳಿಸಿದರು ಎಂದು ಸ್ಥಳೀಯರು ತಿಳಿಸಿದ್ದಾರೆ.

ನಕ್ಸಲ್ ನಾಯಕ ಹತ್ಯೆ

ಸುಕ್ಮಾ, ಛತ್ತೀಸಗಢ (ಪಿಟಿಐ): ಜಿಲ್ಲೆಯ ಬಂಜಾರ್ಪರಾ ಗ್ರಾಮದ ಅರಣ್ಯ ಪ್ರದೇಶದಲ್ಲಿ ಶನಿವಾರ ಬೆಳಗಿನ ಜಾವ ನಕ್ಸಲ್ ವಿರೋಧಿ ಕಾರ್ಯಾಚರಣೆ ಸಂದರ್ಭದಲ್ಲಿ ನಡೆದ ಗುಂಡಿನ ಚಕಮಕಿಯಲ್ಲಿ ನಕ್ಸಲೀಯ ಮುಖಂಡರೊಬ್ಬರು ಹತರಾಗಿದ್ದಾರೆ.

ಮೃತ ನಕ್ಸಲೀಯನನ್ನು ದುಧಿ ಹೂಂಗಾ (35) ಎಂದು ಗುರುತಿಸಲಾಗಿದೆ. ಈತ ಮಾವೋವಾದಿಗಳ ಕೊಂಟಾ ವಲಯ ಸಮಿತಿಯ ಕಮಾಂಡರ್ ಆಗಿ ಸಕ್ರಿಯನಾಗಿದ್ದನು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಈತ 16 ಪ್ರಕರಣಗಳಲ್ಲಿ ಬೇಕಾಗಿದ್ದನು. ಈತನ ಸುಳಿವು ನೀಡಿದರೆ ₹ 1 ಲಕ್ಷ ಬಹುಮಾನ ನೀಡುವುದಾಗಿ ಘೋಷಿಸಲಾಗಿತ್ತು' ಎಂದರು.

'ಸಿಸಿಟಿವಿ ದೃಶ್ಯಾವಳಿ ಕಣ್ಮರೆ'

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿಯ ನಿವಾಸದಲ್ಲಿ ತಮ್ಮ ಮೇಲೆ ಹಲ್ಲೆ ನಡೆದ ದಿನದ ಸಿಸಿಟಿವಿ ದೃಶ್ಯಾವಳಿಗಳು 'ಕಣ್ಮರೆಯಾಗಿವೆ', ತಿರುಚಿದ ವಿಡಿಯೊಗಳನ್ನು ಬಿಡುಗಡೆ ಮಾಡಲಾಗುತ್ತಿದೆ ಎಂದು ರಾಜ್ಯಸಭಾ ಸದಸ್ಯೆ ಸ್ವಾತಿ ಮಾಲಿವಾಲ್ ಆರೋಪಿಸಿದ್ದಾರೆ.

'ಬಿಭವ್ ಅವರು ನನಗೆ ಒದ್ದಿದ್ದಾರೆ, ಹೊಡೆದಿದ್ದಾರೆ. ನಾನು ಪೊಲೀಸರಿಗೆ ಕರೆ ಮಾಡಿದಾಗ ಬಿಭವ್ ಹೊರಗೆ ಹೋಗಿ, ಭದ್ರತಾ ಸಿಬ್ಬಂದಿಯನ್ನು ಕರೆದು ಚಿತ್ರೀಕರಣ ನಡೆಸಲು ಶುರುಮಾಡಿದರು. ನನಗೆ ಬಿಭವ್ ಅವರು ಹೊಡೆದಿದ್ದಾರೆ ಎಂದು ನಾನು ಭದ್ರತಾ ಸಿಬ್ಬಂದಿಗೆ ಹೇಳುತ್ತಿದ್ದೆ' ಎಂದು ಸ್ವಾತಿ ಹೇಳಿದ್ದಾರೆ.

'ಆದರೆ ಆ ಸುದೀರ್ಘ ವಿಡಿಯೊವನ್ನು ಎಡಿಟ್ ಮಾಡಲಾಗಿದೆ. ಭದ್ರತಾ ಸಿಬ್ಬಂದಿಗೆ ಹೇಳಿ ಹೇಳಿ ಸಾಕಾಗಿಹೋಗಿದ್ದ ನನ್ನ ಸ್ಥಿತಿಯ ವಿಡಿಯೊವನ್ನು ಮಾತ್ರ ಬಿಡುಗಡೆ ಮಾಡಲಾಗಿದೆ' ಎಂದು ಅವರು ಹೇಳಿದ್ದಾರೆ. ಈಗ ಸಿಸಿಟಿವಿ ದೃಶ್ಯಾವಳಿಗಳು ಕೂಡ ಕಣ್ಮರೆಯಾಗಿವೆ ಎಂದು ಅವರು ಆರೋಪಿಸಿದ್ದಾರೆ.

ಅಪರಾಧ ಮರುಸೃಷ್ಟಿ: ಅಪರಾಧ ಘಟನೆಯ ಮರುಸೃಷ್ಟಿಗೆ ಬಿಭವ್ ಅವರನ್ನು ದೆಹಲಿ ಮುಖ್ಯಮಂತ್ರಿಯ ನಿವಾಸಕ್ಕೆ ಭಾನುವಾರ ಕರೆದೊಯ್ಯುವ ಸಾಧ್ಯತೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ. ಅವರ ಮೊಬೈಲ್ ಫೋನ್ ವಶಕ್ಕೆ ಪಡೆದು, ಸ್ವಾತಿ ಜೊತೆ ಬಿಭವ್ ಏನು ಮಾತುಕತೆ ನಡೆಸಿದ್ದಾರೆ ಎಂಬುದನ್ನು ತಿಳಿಯಲು ಪೊಲೀಸರು ಯತ್ನಿಸುತ್ತಿದ್ದಾರೆ.

ಸಂಕ್ಷಿಪ್ತ ಸುದ್ದಿ

ಜಾರ್ಖಂಡ್‌ನಲ್ಲಿ ಬಾಲಕಿ ಮೇಲೆ ಅತ್ಯಾಚಾರ: ನಾಲ್ವರ ಬಂಧನ

ಮೇದಿನಿನಗರ (ಪಿಟಿಐ): ಜಾರ್ಖಂಡ್‌ನ ಪಲಾಮು ಜಿಲ್ಲೆಯಲ್ಲಿ 16 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಗುರುವಾರ ಬೆಳಿಗ್ಗೆ ರಾಮಘಡದಲ್ಲಿ ಈ ಘಟನೆ ನಡೆದಿದೆ. ನಾಲ್ವರು ಆರೋಪಿಗಳನ್ನು ಶುಕ್ರವಾರ ಬಂಧಿಸಲಾಗಿದ್ದು, ನ್ಯಾಯಾಲಯ ಅವರನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಿದೆ ಮತ್ತ ತಲೆಮರೆಸಿಕೊಂಡಿರುವ ಇಬ್ಬರು ಆರೋಪಿಗಳ ಪತ್ತೆಗೆ ಶೋಧ ಕಾರ್ಯ ನಡೆಸಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿ ಮಣಿಭೂಷಣ್ ಪ್ರಸಾದ್ ತಿಳಿಸಿದ್ದಾರೆ.

ಬಿಷ್ಕೆಕ್ ಗಲಭೆ: ಸುರಕ್ಷಿತ ಸ್ಥಳದಲ್ಲಿರುವಂತೆ ಭಾರತದ ವಿದ್ಯಾರ್ಥಿಗಳಿಗೆ ಸೂಚನೆ

ನವದೆಹಲಿ (ಪಿಟಿಐ): ಕಿರ್ಗಿಸ್ತಾನದ ರಾಜಧಾನಿ ಬಿಷ್ಕೆಕ್‌ನಲ್ಲಿ ಸ್ಥಳೀಯರು ಮತ್ತು ವಿದೇಶೀಯರ ನಡುವೆ ಗಲಭೆ ನಡೆದಿರುವ ಕಾರಣ ಅಲ್ಲಿರುವ ಭಾರತೀಯ ಮೂಲದ ವಿದ್ಯಾರ್ಥಿಗಳು ತಮ್ಮ ವಾಸಸ್ಥಳದಿಂದ ಹೊರಬರದಂತೆ ಭಾರತದ ವಿದೇಶಾಂಗ ಇಲಾಖೆ ಶನಿವಾರ ಸೂಚನೆ ನೀಡಿದೆ.

'ಭಾರತೀಯ ಮೂಲದ ವಿದ್ಯಾರ್ಥಿಗಳೊಂದಿಗೆ ಸಂಪರ್ದಲ್ಲಿದ್ದೇವೆ. ಪ್ರಸ್ತುತ ಪರಿಸ್ಥಿತಿ ಶಾಂತವಾಗಿದೆ' ಎಂದು ಕಿರ್ಗಿಸ್ತಾನದಲ್ಲಿರುವ ಭಾರತೀಯ ರಾಯಭಾರ ಕಚೇರಿ ಮಾಹಿತಿ ನೀಡಿದೆ.

'ಭಾರತೀಯ ಮೂಲದ ವಿದ್ಯಾರ್ಥಿಗಳ ಸುರಕ್ಷತೆ ಬಗ್ಗೆ ಗಮನಹರಿಸಲಾಗಿದೆ. ರಾಯಭಾರ ಕಚೇರಿಯೊಂದಿಗೆ ನಿರಂತರ ಸಂಪರ್ಕದಲ್ಲಿರುವಂತೆ ಅವರಿಗೆ ಸೂಚಿಸಲಾಗಿದೆ' ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ತಿಳಿಸಿದ್ದಾರೆ.

ಕಿರ್ಗಿಸ್ತಾನ ದೇಶದಲ್ಲಿ ಭಾರತೀಯ ಮೂಲದ 15 ಸಾವಿರ ವಿದ್ಯಾರ್ಥಿಗಳಿದ್ದು, ಅದರಲ್ಲಿ ಬಿಷ್ಕೆಕ್ ನಗರದಲ್ಲಿ ಎಷ್ಟು ವಿದ್ಯಾರ್ಥಿಗಳಿದ್ದಾರೆ ಎಂಬ ಬಗ್ಗೆ ಮಾಹಿತಿಗಳಿಲ್ಲ.

ಬಿಷ್ಕೆಕ್‌ನಲ್ಲಿ ಸ್ಥಳೀಯರು ಮತ್ತು ವಿದೇಶೀಯರ ನಡುವೆ ಪರಸ್ಪರ ವಾಗ್ವಾದ

ನಡೆದಿದ್ದು, ಶುಕ್ರವಾರ ರಾತ್ರಿ ಪರಿಸ್ಥಿತಿ ವಿಕೋಪಕ್ಕೆ ತಿರುಗಿತ್ತು

ಅತ್ಯಾಚಾರ ಎಸಗಿ ಬಾಲಕಿ ಕೊಲೆ: ಇಬ್ಬರು ದೋಷಿಗಳು

ಜೈಪುರ: 14 ವರ್ಷದ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ ಕೊಲೆಗೈದ ಪ್ರಕರಣ ಸಂಬಂಧ ರಾಜಸ್ಥಾನದ ಪೋಕ್ಸೊ ನ್ಯಾಯಾಲಯ ಶನಿವಾರ ಇಬ್ಬರು ಆರೋಪಿಗಳನ್ನು ದೋಷಿಗಳೆಂದು ಘೋಷಿಸಿದೆ.

'ಪ್ರಕರಣ ಸಂಬಂಧ ಭಿಲ್‌ವಾಡಾ ಪೋಕ್ಸೊ ನ್ಯಾಯಾಲಯವು ಕಾಲು ಮತ್ತು ಕಾನ್ಹಾ ಎಂಬುವವರನ್ನು ದೋಷಿಗಳೆಂದು ನಿರ್ಣಯಿಸಿದ್ದು, ಸೋಮವಾರ ಶಿಕ್ಷೆ ಪ್ರಕಟಿಸಲಿದೆ. ಅಲ್ಲದೆ, ಸಾಕ್ಷ್ಯಗಳನ್ನು ನಾಶಪಡಿಸಿದ ಆರೋಪ ಹೊತ್ತಿದ್ದ ಮೂವರು ಮಹಿಳೆಯರು ಒಳಗೊಂಡಂತೆ 7 ಜನ ಆರೋಪಿಗಳನ್ನು ಪ್ರಕರಣದಿಂದ ಖುಲಾಸೆಗೊಳಿಸಿದೆ' ಎಂದು ಸರ್ಕಾರಿ ವಿಶೇಷ ವಕೀಲ(ಎಸ್‌ಪಿಪಿ) ಮಹಾವೀರ್ ಸಿಂಗ್ ಕಿಶ್ನಾವತ್ ತಿಳಿಸಿದ್ದಾರೆ.

ರಾಜಸ್ಥಾನದ ಭಿಲ್‌ವಾಡಾ ಜಿಲ್ಲೆಯಲ್ಲಿ ಕಳೆದ ವರ್ಷ ಆಗಸ್ಟ್ 2ರಂದು ಹಸು ಮೇಯಿಸಲು ಹೋಗಿದ್ದ 14 ವರ್ಷದ ಬಾಲಕಿಯನ್ನು ಅಪಹರಿಸಿ ಆರೋಪಿಗಳು ಸಾಮೂಹಿಕ ಅತ್ಯಾಚಾರ ಎಸಗಿದ್ದರು. ಬಳಿಕ ಆಕೆ ಮೃತಪಟ್ಟಿರುವುದಾಗಿ ಭಾವಿಸಿ ಕಲ್ಲಿದ್ದಲ ಕುಲುಮೆಗೆ ಎಸೆದು ಸುಟ್ಟು ಹಾಕಿದ್ದರು. 'ಕುಲುಮೆಗೆ ಎಸೆಯುವ ಮೊದಲು ಬಾಲಕಿಯು ಮೃತಪಟ್ಟಿರಲಿಲ್ಲ. ಬೆಂಕಿಯಲ್ಲಿ ಸುಟ್ಟು ಆಕೆ ಅಸು ನೀಗಿರುವುದಾಗಿ ವಿಧಿ ವಿಜ್ಞಾನ ವರದಿಯಿಂದ ತಿಳಿದುಬಂತು' ಎಂಬುದಾಗಿ ಪೊಲೀಸರು ತಿಳಿಸಿದ್ದಾರೆ.

ಸಂದೇಶ್‌ಖಾಲಿ: ಬಿಜೆಪಿ ಕಾರ್ಯಕರ್ತೆಗೆ ಜಾಮೀನು.

ಕೋಲ್ಕತ್ತಾ (ಪಿಟಿಐ): ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಜೈಲಿನಲ್ಲಿದ್ದ ಸಂದೇಶ್‌ಖಾಲಿ ಬಿಜೆಪಿ ಕಾರ್ಯಕರ್ತೆ ಪಿಯಾಲಿ ದಾಸ್ ಶನಿವಾರ ಬಿಡುಗಡೆಯಾಗಿದ್ದಾರೆ. ಕ್ರಿಮಿನಲ್ ಪ್ರಕರಣದಲ್ಲಿ ಕಲ್ಕತ್ತಾ ಹೈಕೋರ್ಟ್ ಇವರಿಗೆ ಜಾಮೀನು ನೀಡಿದ್ದು, ವೈಯಕ್ತಿಕ ಬಾಂಡ್‌ನ ಮೇಲೆ ಬಿಡುಗಡೆ ಮಾಡುವಂತೆ ಆದೇಶಿಸಿತ್ತು.

ಸಂದೇಶ್‌ಖಾಲಿಯ ಮಹಿಳೆಯೊಬ್ಬರಿಂದ ಖಾಲಿ ಹಾಳೆಯ ಮೇಲೆ ಸಹಿ ಪಡೆದು, ಟಿಎಂಸಿ ನಾಯಕರು ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಬರೆದಿದ್ದಾರೆ ಎಂದು ಪಿಯಾಲಿ ದಾಸ್ ಅವರ ವಿರುದ್ಧ ದೂರು ದಾಖಲಾಗಿತ್ತು.

ಮಹಾರಾಷ್ಟ್ರ: ಕಳೆದ ಏಳು ತಿಂಗಳ ಅವಧಿಯಲ್ಲಿ ದಾಳಿ ನಡೆಸಿದ್ದ ಹುಲಿ

ಮೂವರನ್ನು ಕೊಂದಿದ್ದ ಹುಲಿ ಸೆರೆ

ಚಂದ್ರಪುರ/ನಾಗ್ಪುರ (ಪಿಟಿಐ): ಮಹಾರಾಷ್ಟ್ರದ ಚಂದ್ರಪುರ ಜಿಲ್ಲೆಯ ಹಳ್ಳಿಗಳಲ್ಲಿ ಮೂವರನ್ನು ಕೊಂದಿದ್ದ ಹುಲಿಯನ್ನು ಸೆರೆ ಹಿಡಿಯಲಾಗಿದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಕಳೆದ ಏಳು ತಿಂಗಳ ಅವಧಿಯಲ್ಲಿ ನಿಮ್ಢೇಲಾ ಸುತ್ತಮುತ್ತಲಿನ ಗ್ರಾಮಗಳಲ್ಲಿ ದಾಳಿ ನಡೆಸಿದ್ದ ಈ ಹುಲಿಯು ಮೂವರನ್ನು ಕೊಂದಿತ್ತು.

ತಾಡೋಬಾ ಅಂಧಾರಿ ಹುಲಿ ಸಂರಕ್ಷಿತ (ಟಿಎಟಿಆರ್) ಯೋಜನೆಯ ಕ್ಷೇತ್ರ ನಿರ್ದೇಶಕ ಡಾ. ಜಿತೇಂದ್ರ ರಾಮ್‌ಗಾಂವ್ಕರ್ ಮೇಲ್ವಿಚಾರಣೆಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ, ಖಡ್ಸಂಗಿ ಅರಣ್ಯ ವಲಯ 59ರಲ್ಲಿ ಹುಲಿಯನ್ನು ಸೆರೆ ಹಿಡಿದು, ನಾಗ್ಪುರದ ಗೋರೆವಾಡ ವನ್ಯಜೀವಿ ರಕ್ಷಣಾ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಖಡ್ಸಂಗಿ ಅರಣ್ಯ ವಲಯ–59ರಲ್ಲಿ ಹುಲಿ ಸೆರೆ
- ನಾಗ್ಪುರದ ಗೋರೆವಾಡ ವನ್ಯಜೀವಿ ರಕ್ಷಣಾ ಕೇಂದ್ರಕ್ಕೆ ಸ್ಥಳಾಂತರ

ಗಾಯಗೊಂಡಿದ್ದ ಹುಲಿಗೆ ಚಿಕಿತ್ಸೆ: ಪೆಂಚ್ ಹುಲಿ ಸಂರಕ್ಷಿತ (ಪಿಟಿಆರ್) ಯೋಜನೆಯ ದೇವಲಾಪುರ (ವನ್ಯಜೀವಿ) ವ್ಯಾಪ್ತಿಯ ಟಿ–53 ಅರಣ್ಯದಿಂದ ಕಾದಾಟದಲ್ಲಿ ಗಾಯಗೊಂಡಿದ್ದ ಹುಲಿಯೊಂದನ್ನು ಶುಕ್ರವಾರ ರಕ್ಷಿಸಲಾಗಿದ್ದು, ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಮತ್ತೊಬ್ಬ ಅಧಿಕಾರಿ ತಿಳಿಸಿದ್ದಾರೆ. ಹುಲಿಯ ಗಾಯವು ಸ್ವಾಭಾವಿಕವಾಗಿ ಗುಣವಾಗದಿದ್ದರಿಂದ ರಕ್ಷಿಸಲು ಇಲಾಖೆಯು ನಿರ್ಧರಿಸಿತು ಎಂದು ಪಿಟಿಆರ್‌ನ ಉಪ ನಿರ್ದೇಶಕ ಡಾ. ಪ್ರಭುನಾಥ್ ಶುಕ್ಲಾ ಹೇಳಿದ್ದಾರೆ.

ಎರಡೂ ಕಣ್ಣುಗಳ ಮಧ್ಯ ಭಾಗದಲ್ಲಿ ಗಾಯಗೊಂಡಿರುವ ಹುಲಿಗೆ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದ್ದು, ತಪಾಸಣೆಗಾಗಿ ಪಂಜರದೊಳಗಿರಿಸಲಾಗಿದೆ ಎಂದಿದ್ದಾರೆ.


ಮೂವರನ್ನು ಕೊಂದಿದ್ದ ಹುಲಿಯನ್ನು ಮಹಾರಾಷ್ಟ್ರದ ತಾಡೋಬಾ ಅಂಧಾರಿ ಹುಲಿ ಸಂರಕ್ಷಿತ (ಟಿಎಟಿಆರ್) ಅರಣ್ಯದಲ್ಲಿ ಶನಿವಾರ ಸೆರೆ ಹಿಡಿದ ಅರಣ್ಯ ಇಲಾಖೆಯ ಸಿಬ್ಬಂದಿ –ಪಿಟಿಐ ಚಿತ್ರ

ನಕಲಿ ವಿದ್ಯಾರ್ಥಿ ಪೂರೈಸಲು ₹20–25 ಲಕ್ಷ ಪಡೆಯುತ್ತಿದ್ದರು ಎಂಬ ಆರೋಪ

ನೀಟ್ ಪರೀಕ್ಷಾ ಅಕ್ರಮ: ಬಂಧನ


ನವದೆಹಲಿ (ಪಿಟಿಐ): ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷಾ (ನೀಟ್) ಅಕ್ರಮದಲ್ಲಿ ತೊಡಗಿದ್ದ ಗುಂಪನ್ನು ಭೇದಿಸಿರುವ ಪೊಲೀಸರು, ಎಂಬಿಬಿಎಸ್‌ನ ಇಬ್ಬರು ವಿದ್ಯಾರ್ಥಿಗಳು ಸೇರಿದಂತೆ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ಅವರ ಬಳಿಯಿದ್ದ ನಾಲ್ಕು ಮೊಬೈಲ್‌ಗಳು ಮತ್ತು ಕಾರನ್ನೂ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ತಿಲಕ್ ಮಾರ್ಗ ಪ್ರದೇಶದಲ್ಲಿರುವ ಭಾರತೀಯ ವಿದ್ಯಾ ಭವನ ಮೆಹತಾ ವಿದ್ಯಾಲಯದಲ್ಲಿ ಮೇ 5ರಂದು ನೀಟ್ ಪರೀಕ್ಷೆ ನಡೆದಿತ್ತು. ಆದರೆ, ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಬಯೋಮೆಟ್ರಿಕ್, ನೀಟ್ ವೆಬ್‌ಸೈಟ್‌ನಲ್ಲಿ ಈಗಾಗಲೇ ದಾಖಲಾದ ಬಯೋಮೆಟ್ರಿಕ್ ನೊಂದಿಗೆ ಹೊಂದಾಣಿಕೆಯಾಗಿರಲಿಲ್ಲ. ಈ ಬಗ್ಗೆ ತನಿಖೆ ಕೈಗೊಂಡಾಗ, ಪರೀಕ್ಷಾ ಕೇಂದ್ರದ ಬಳಿಯಿದ್ದ ನಕಲಿ ವಿದ್ಯಾರ್ಥಿಗಳಾದ ಸುಮಿತ್ ಮಾಂಡೊಲಿಯಾ ಮತ್ತು ಕೃಷ್ಣನ್ ಕೇಸರವಾನಿ ಅವರು ಪೊಲೀಸರ ಬಲೆಗೆ ಬಿದ್ದಿದ್ದರು' ಎಂದು ಶನಿವಾರ ದೆಹಲಿಯ ಪೊಲೀಸ್ ಉಪ ಆಯುಕ್ತ ದೇವೇಶ್ ಕುಮಾರ್ ಮಹ್ಲಾ ತಿಳಿಸಿದ್ದಾರೆ.

ಮುಖ್ಯಾಂಶಗಳು

- ನಕಲಿ, ಅಸಲಿ ವಿದ್ಯಾರ್ಥಿಗಳ ಭಾವಚಿತ್ರ ಸಂಯೋಜನೆ
- ಪರೀಕ್ಷಕರ ದಿಕ್ಕು ತಪ್ಪಿಸುತ್ತಿದ್ದ ಆರೋಪಿಗಳು
- ಆರೋಪಿಗಳ ಬಳಿಯಿದ್ದ 4 ಮೊಬೈಲ್, ಕಾರು ವಶಕ್ಕೆ

ಈ ಇಬ್ಬರು ಆರೋಪಿಗಳು ನೀಡಿದ ಮಾಹಿತಿ ಮೇರೆಗೆ ಅವರನ್ನು ನಕಲಿ ವಿದ್ಯಾರ್ಥಿಗಳಾಗಿ ಕಳುಹಿಸಿದ್ದ ಪ್ರಭಾತ್ ಕುಮಾರ್ (27) ಮತ್ತು ಕಿಶೋರ್ ಲಾಲ್ (37) ಎಂಬುವರನ್ನು ಶುಕ್ರವಾರ ಬಂಧಿಸಲಾಗಿದೆ. ಈ ಪ್ರಕರಣದ ಗಂಭೀರತೆಯನ್ನು ಅರ್ಥೈಸಿಕೊಂಡು, ಈ ಪ್ರಕರಣವನ್ನು ದೆಹಲಿ ಜಿಲ್ಲಾ ವಿಶೇಷ ಸಿಬ್ಬಂದಿ ಹಾಗೂ ಇನ್‌ಸ್ಪೆಕ್ಟರ್ ಸಂಜಯ್ ಕುಮಾರ್ ಗುಪ್ತಾ ನೇತೃತ್ವದ ತನಿಖೆಗೆ ವಹಿಸಲಾಗಿದೆ ಎಂದು ಡಿಸಿಪಿ ತಿಳಿಸಿದರು.




ಕುಮಾರ್ ಮತ್ತು ಲಾಲ್ ಕ್ರಮವಾಗಿ ರಾಜಸ್ಥಾನ ಮತ್ತು ಬಿಹಾರದ ಮೂದವರಾಗಿದ್ದು, ವೈದ್ಯಕೀಯ ಕಾಲೇಜಿಗೆ ವಿದ್ಯಾರ್ಥಿಗಳ ಪ್ರವೇಶಾತಿ ಸಮಾಲೋಚಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಇಬ್ಬರು ನೀಟ್ ಪರೀಕ್ಷೆಗೆ ಅಭ್ಯರ್ಥಿಯ ಪರವಾಗಿ ನಕಲಿ ವಿದ್ಯಾರ್ಥಿ ಕೈಯಲ್ಲಿ ಪರೀಕ್ಷೆ ಬರೆಸಲು ಒಬ್ಬರಿಂದ ತಲಾ ₹20 ಲಕ್ಷದಿಂದ ₹25 ಲಕ್ಷ ಪಡೆಯುತ್ತಿದ್ದರು. ಜತೆಗೆ, ನೀಟ್ ಪರೀಕ್ಷೆ ಬರೆಯುವ ವಿದ್ಯಾರ್ಥಿಯ ಭಾವಚಿತ್ರದೊಂದಿಗೆ ನಕಲಿ ವಿದ್ಯಾರ್ಥಿಯ ಭಾವಚಿತ್ರವನ್ನು ಸಂಯೋಜಿಸುವ ಮೂಲಕ ಮತ್ತೊಂದು ಹೊಸ ಭಾವಚಿತ್ರವನ್ನು ಬಿಡಿಸಿ, ಅದನ್ನು ನೀಟ್ ಪರೀಕ್ಷೆಯ ಅರ್ಜಿ ಮೇಲೆ ಅಂಟಿಸುತ್ತಿದ್ದರು. ಈ ಮೂಲಕ ಪರೀಕ್ಷಕರ ದಿಕ್ಕು ತಪ್ಪಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಮಾಂಡೊಲಿಯಾ ಮತ್ತು ಕೇಸರವಾನಿಯು ಕ್ರಮವಾಗಿ ರಾಜಸ್ಥಾನ ಮತ್ತು ಉತ್ತರಪ್ರದೇಶದವರಾಗಿದ್ದು, ಅನ್ಯ ರಾಜ್ಯಗಳಲ್ಲಿರುವ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳಾಗಿದ್ದಾರೆ. ಈ ಆರೋಪಿಗಳು ಈ ಹಿಂದೆ ನಡೆದ ಪರೀಕ್ಷೆಗಳಲ್ಲೂ ಭಾಗಿಯಾಗಿದ್ದರೆ, ಎಂಬುದರ ಕುರಿತು ಮಾಹಿತಿ ಬಯಲಿಗೆಳೆಯಲು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.





ಮಕ್ಕಳ ಕೈಲಿ ಮೈಸೂರು ಶೈಲಿ 11



ಕಾಮಳ್ಳಿ

ಝರಿ ಜಿನುಗಿ ಕಾಮಳ್ಳಿಗಳು ಹಾಡಿದಾಗ...



ಭದ್ರಾ ಕಾಡು



ಕೆಂದಳಿಲು

ಚಿತ್ರ-ಲೇಖನ: ಕೃಪಾಕರ ಸೇನಾನಿ

'ನಿಮ್ಮ ಹೆಸರು?'
'ರಂಗಮ್ಮ'
'ವಯಸ್ಸು...?'
'ನೀವೇ ಹೇಳ್ಬೇಕು'
'ಒಂದು ಎಪ್ಪತ್ತೈದು...?'
'ಇಲ್ಲ, ಜಾಸ್ತಿಯಾಗಿದೆ...'

'ನಾನು ಮದ್ವೆಯಾಗಿ ಬಂದಾಗ ಇನ್ನೂ ಸಣ್ಣವಳು. ಆಗ ಕಲ್ಲಿದ್ದಲು ಸುಡಕ್ಕೆ ಬಂದಿದ್ದು. ಮರಗಳನ್ನು ಕಡಿದು ಸುಟ್ಟು ಕಲ್ಲಿದ್ದಲು ಮಾಡ್ತಿದ್ವಿ. ಆಗ ಇಲ್ಲಿಗೆ ರೈಲ್ ಬರೋದು. ನಾವು ಸುಟ್ಟಿದ್ದ ಕಲ್ಲಿದ್ದಲು ತುಂಬ್ಕೊಂಡು ಹೋಗೋದು.

ಇದು ಕೊಂಪೆ ತರ ಇತ್ತು. ಬದಕಕ್ಕೆ ಬಹಳ ಕಷ್ಟ ಇತ್ತು. ಎಲ್ ನೋಡೂದ್ರೂ ಕಾಡು. ಲೆಕ್ಕವಿಲ್ಲದಷ್ಟು ಕಡವೆಗಳು, ಕಾಡೆಮ್ಮೆಗಳು... ಮುಸ್ಸಂಜೆ ಆಗ್ತಿದಂಗೆ ಓಡಾಡಕ್ಕೆ ಆಗ್ತಿರಲಿಲ್ಲ.

ಆಗ ಇಲ್ಲಿ ಆನೆಗಳೇ ಇರಲಿಲ್ಲ. ಅವು ಇಲ್ಲಿಗೆ ಬಂದಿದ್ ಆಮೇಲೆ. ಮೊದಲು ನಮ್ಮ ಗದ್ದೆಗೆ ಬಂದು ಹೋಗಿದ್ದಾಗ ಬಹಳ ಆನಂದಪಟ್ವಿ, ಗದ್ದೆ ಮಣ್ಣಿನಲ್ಲಿತ್ತಲ್ಲ... ಅದರ ಹೆಜ್ಜೆ ಗುರುತನ್ನ ಅಚ್ಚು ಮಾಡ್ಕೊಂಡು ಮನೇಲ್ಲಿಟ್ಕಂಡು ಪೂಜೆ ಮಾಡಿದ್ವೀ. ದೇವರು ಊರಿಗೆ ಬಂದವ್ನೆ, ಎಲ್ಲರಿಗೂ ಒಳ್ಳೆಯದಾಗತ್ತೇ ಅಂತ ಖುಷಿಪಟ್ವಿ. ಆದ್ರೆ ಬರ್ತಾ ಬರ್ತಾ ಆನೆಗಳು ಮನುಷ್ಯರನ್ನು ಕೊಲೆ ಮಾಡೋಕೆ ಶುರು ಮಾಡ್ಬಿಟ್ವು...' ರಂಗಮ್ಮನ ಕಥೆ ಹೀಗೆ ಸಾಗಿತ್ತು.

ರಂಗಮ್ಮನನ್ನು ಭೇಟಿಯಾಗಿದ್ದ ಕಾರಣವಿಷ್ಟೇ. 1999ರ ಇಸವಿ. ಆಗಷ್ಟೇ ಭದ್ರಾ ಅರಣ್ಯದೊಳಗೆ ನೆಲೆಸಿದ್ದ ಹಳ್ಳಿಗಳ ಸ್ಥಳಾಂತರ ಯೋಜನೆ ಆರಂಭಗೊಂಡಿತ್ತು. 1976 ರಲ್ಲಿ ರೂಪುಗೊಂಡಿದ್ದ ಈ ಯೋಜನೆ ಬಹಳ ಕಾಲ ಫೈಲ್‌ಗಳಲ್ಲಿ ನಿದ್ರಿಸಿಬಿಟ್ಟಿತ್ತು. ಮೂಲಸೌಕರ್ಯಗಳಿಲ್ಲದ ಹಳ್ಳಿಗರು ಸೌಲಭ್ಯ ಕೊಡಿ ಇಲ್ಲವೇ ಸ್ಥಳಾಂತರಿಸಿ ಎಂದು ಬೇಡಿಕೆ ಇಟ್ಟು ಹೋರಾಟ ನಡೆಸಿದ್ದರು. ಕಾಡಿಗೆ ಬೆಂಕಿ ಇಟ್ಟು ಗಮನ ಸೆಳೆಯಲು ಯತ್ನಿಸಿದ್ದರು. ಕೋರ್ಟ್‌ನಲ್ಲಿ ದಾವೆ ಹೂಡಿದ್ದರು. ಯಾವುದೂ ಉಪಯೋಗಕ್ಕೆ ಬರಲಿಲ್ಲ. ಕ್ರಮೇಣ ಜನ ಭರವಸೆ ಕಳೆದುಕೊಂಡು ರೋಸಿಹೋಗಿದ್ದರು.



ಕಾಡೆಮ್ಮೆ

> 25 ವರ್ಷಗಳ ಹಿಂದೆ ಚಿಕ್ಕಮಗಳೂರಿನ ಭದ್ರಾ ಅರಣ್ಯದಿಂದ ಸ್ಥಳಾಂತರಗೊಂಡ 16 ಹಳ್ಳಿಗಳ ಜನರ ಬದುಕು ಈಗ ಏನಾಗಿದೆ? ಅವರು ಕಾಡನ್ನು ತೊರೆದ ಬಳಿಕ ಕಾಡು ಪುನಶ್ಚೇತನಗೊಂಡಿದೆಯೇ? ಕಾಡಿನೊಳಗಿದ್ದ ಆ ಹಳ್ಳಿ, ಮನೆ ಮತ್ತು ಹೊಲಗದ್ದೆಗಳ ಚಿತ್ರಣ ಇಲ್ಲಿದೆ...

1999 ರಲ್ಲಿ ಯತೀಶ್ ಕುಮಾರ್ ಎಂಬ ಯುವ ಅಧಿಕಾರಿಯೊಬ್ಬರು ಭದ್ರಾ ಅರಣ್ಯದ ನಿರ್ದೇಶಕರಾಗಿ ಬಂದರು. ನೊಂದಿದ್ದ ಜನ ಮತ್ತೆ ಹೊಸದಾಗಿ ಅರ್ಜಿಗಳನ್ನು ನೀಡಿದರು. ಧೂಳಿನಲ್ಲಿ ಅಡಗಿದ್ದ ಫೈಲ್‌ಗಳನ್ನು ಈ ಅಧಿಕಾರಿ ಪರಿಶೀಲಿಸಿ, ಜನರ ಬೇಡಿಕೆ ನ್ಯಾಯಸಮ್ಮತವೆಂದು ಮನವರಿಕೆಯಾದ ನಂತರ ಯೋಜನೆಗೆ ಹೊಸ ರೂಪುರೇಷೆ ನೀಡಿದರು. ಆಗಿನ ಜಿಲ್ಲಾಧಿಕಾರಿ ಗೋಪಾಲಕೃಷ್ಣೇಗೌಡ ಇವರ ಬೆನ್ನಿಗೆ ನಿಂತರು. ಯೋಜನೆ ಮರುಜೀವ ಪಡೆಯಿತು.

ಒಟ್ಟಾರೆ ಸ್ಥಳಾಂತರ ಅಥವಾ ಪುನರ್ವಸತಿ ಯೋಜನೆಗಳ ಬಗೆಗೆ ನಮಗೆ ಆತಂಕವಿತ್ತು. ಏಕೆಂದರೆ, ಇವುಗಳನ್ನು ಅನುಷ್ಠಾನಗೊಳಿಸುವವರಲ್ಲಿ ಬದ್ಧತೆ, ಪ್ರಾಮಾಣಿಕತೆ ಮತ್ತು ಮಾನವೀಯತೆ ಇಲ್ಲದಿದ್ದಾಗ ಅವು ಹೇಗೆ ಅಂತ್ಯಗೊಳ್ಳುತ್ತವೆ ಎಂಬುದಕ್ಕೆ ನಮ್ಮ ಮುಂದೆ ಬಹಳ ಉದಾಹರಣೆಗಳಿದ್ದವು.

1960 ರ ಅವಧಿಯಲ್ಲಿ ಜರುಗಿದ ಶರಾವತಿ ವಿದ್ಯುತ್ ಯೋಜನೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅಣೆಕಟ್ಟಿನಿಂದ ಮುಳುಗಡೆಯಾಗಲಿದ್ದ ಹಳ್ಳಿಗಳನ್ನು ಬೇರೆಡೆಗೆ ಸ್ಥಳಾಂತರಿಸಲಾಯಿತು. ನೂರಾರು ವರ್ಷಗಳ ಮಣ್ಣಿನ ನೆನಪುಗಳನ್ನು ತ್ಯಜಿಸಿ, ಜನ ಹೊರಬರಬೇಕಾಯಿತು. ಕಳೆದುಕೊಂಡ ಆಸ್ತಿಗೆ ತಕ್ಕ ಪರಿಹಾರ ದೊರಕಲಿಲ್ಲ. ಪರ್ಯಾಯವಾಗಿ ನೀಡಿದ್ದ ಭೂಮಿಗೆ ದಾಖಲಾತಿ ಇರಲಿಲ್ಲ. ಎಲ್ಲವೂ ಗೋಜಲು. ತಲುಪಿದ ಸಣ್ಣಪುಟ್ಟ ಹಣವೆಲ್ಲ ಅರ್ಜಿ ಬರೆಯುವುದಕ್ಕೆ, ಮಂತ್ರಿಗಳಿಗೆ ಅಹವಾಲು ನೀಡಲು, ಕೋರ್ಟುಗಳ ಮೊರೆ ಹೋಗಲು ಖರ್ಚಾಗಿ ಹೋಯಿತು. ಕಳೆದ ತಿಂಗಳು ಶಿವಮೊಗ್ಗಕ್ಕೆ ಹೋಗಿದ್ದಾಗ ಕೂಡ ಹತ್ತಾರು ರೈತರು ಅದೇ ಸಂಕಷ್ಟಗಳ ಬಗೆಗೆ ಮಾತನಾಡುತ್ತಿದ್ದರು. ನಾವೇ ಆಯ್ಕೆ ಮಾಡುವ ಸರ್ಕಾರಗಳು ಮಾನವೀಯತೆ ಕಳೆದುಕೊಂಡು ವೈರಿಗಳಾಗಿ ಎದುರು ನಿಂತಾಗ ನ್ಯಾಯಕ್ಕಾಗಿ ಯಾರ ಮೊರೆ ಹೋಗಬೇಕು?

ಜೊತೆಗೆ ಇಂತಹ ಹೆಚ್ಚಿನ ಯೋಜನೆಗಳ ಮೂಲ ಉದ್ದೇಶಗಳೇ ಸಂಶಯಾಸ್ಪದವಾಗಿರುತ್ತವೆ. ಛತ್ತೀಸ್‌ಗಢದ ಇಂದ್ರಾವತಿ ಅರಣ್ಯದಲ್ಲಿ ಐದು ವರ್ಷಗಳ ಹಿಂದೆ ಜರುಗಿದ ಬುಡಕಟ್ಟು ಜನಾಂಗದ ಸ್ಥಳಾಂತರದ ಒಳಸಂಚನ್ನೇ ನೋಡಿ. ಕಾಡು ಸಂರಕ್ಷಣೆಯ ನೆಪದಲ್ಲಿ ಕೇಂದ್ರ ಸರ್ಕಾರ ಜನರನ್ನು ಎತ್ತಂಗಡಿ ಮಾಡಿತ್ತು. ಬಳಿಕ ಕೆಲವೇ ಸಮಯದಲ್ಲಿ ಆ ಅಡವಿಯನ್ನು ಗಣಿಗಾರಿಕೆಗೆ ಖಾಸಗಿ ಸಂಸ್ಥೆಯೊಂದಕ್ಕೆ ಗುತ್ತಿಗೆ ನೀಡಿತ್ತು. ಇತ್ತ ಕಾಡೂ ಉಳಿಯಲಿಲ್ಲ, ಅತ್ತ ಬುಡಕಟ್ಟು ಜನರು ಬೀದಿ ಪಾಲಾದರು.

ಭದ್ರಾ ಯೋಜನೆ ಹೀಗಾಗಬಹುದು ಎಂದು ನಮಗೆ ಭಯ ಮಿಶ್ರಿತ ಕುತೂಹಲವಿತ್ತು. ಹಾಗಾಗಿ ಮುಂದಿನ ಹಲವು ವರ್ಷಗಳು ಅಲ್ಲಿ ಏನಾಗುತ್ತಿದೆ ಎಂಬುದನ್ನು ನಾವು ನಿರಂತರವಾಗಿ ಗಮನಿಸುತ್ತಲೇ ಇದ್ದೆವು. ಯೋಜನೆ ಮುಗಿದ ಕೆಲವೇ ವರ್ಷಗಳಲ್ಲಿ ಆದ ಬದಲಾವಣೆಗಳು ನಮ್ಮ ಊಹೆಗೂ ನಿಲುಕಲಿಲ್ಲ. ಹಳ್ಳಿ ತೊರೆದ ಹೆಚ್ಚಿನ ಮಂದಿ ಪರ್ಯಾಯ ನೆಲದಲ್ಲಿ ಏಳಿಗೆ ಕಂಡಿದ್ದರು. ಜಮೀನಿನ ಮಾಲೀಕರಾಗಿದ್ದರು, ಕಾಫಿ, ಅಡಿಕೆ ತೋಟಗಳ ಒಡೆಯರಾಗಿದ್ದರು. ಅವರ ಮಕ್ಕಳು ಒಳ್ಳೆಯ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದರು. ನಮಗೆ ಇದೆಲ್ಲಾ ವಿಸ್ಮಯದಂತೆ ಕಂಡಿತು.

ಅತ್ತ ಇಪ್ಪತ್ತೈದು ವರ್ಷಗಳ ಬಳಿಕ ಜನ ಬಿಟ್ಟು ಹೋದ ಹಳ್ಳಿಗಳ ಕಥೆ ಏನು? ಭತ್ತ ಬೆಳೆಯುತ್ತಿದ್ದ ಗದ್ದೆಗಳೇನಾಗಿವೆ? ಮಾನವ ಹಸ್ತಕ್ಷೇಪದಿಂದ ಮುಕ್ತಗೊಂಡ ಆ ಪ್ರದೇಶದ ಕಾಡುಗಳ ಪರಿಸ್ಥಿತಿ ಏನಾಗಿರಬಹುದು? ಹಾಗೆಯೇ ಜೀವಸಂಕುಲಗಳ ಸ್ಥಿತಿಗತಿಗಳನ್ನರಿಯಲು ಮತ್ತೆ ಭದ್ರೆಯ ಅಡವಿಗೆ ಹೋದೆವು. ಜನ ನೆಲೆಸಿದ್ದ ಹಳ್ಳಿಗಳಲ್ಲಿ ಸುತ್ತಾಡಿದೆವು. ಜನರಿಲ್ಲದ, ಜಾನುವಾರುಗಳಿಲ್ಲದ ಕಾಡು ಹಕ್ಕಿಗಳ ಕಲರವಗಳಿಂದ, ಓಡುವ ಝರಿಗಳ ನಿನಾದದಲ್ಲಿ ಧ್ಯಾನಿಸುತ್ತಿತ್ತು. ಹಳ್ಳಿಗಳ ನಡುವಿನಲ್ಲಿದ್ದ ಹಲಸಿನಮರದಲ್ಲಿ ತುಂಬಿಕೊಂಡಿದ್ದ ಹಣ್ಣುಗಳನ್ನು ಕೆಂದಳಿಲುಗಳು, ಕೋತಿಗಳು ತಿನ್ನುತ್ತಿದ್ದವು. ಕೈ, ಬಾಯಿಗಳಿಗೆ ಮೆತ್ತಿಕೊಂಡಿದ್ದ ಹಾಲಿನ ಅಂಟನ್ನು ರೆಂಬೆ ಕೊಂಬೆಗಳಿಗೆ ಉಜ್ಜುತ್ತಿದ್ದವು.

ಅಲ್ಲಿದ್ದ ಮನೆಗಳು ಈಗ ಇರಲಿಲ್ಲ. ಕೆಲವು ಮನೆಗಳ ಅಡಿಪಾಯಗಳಷ್ಟೇ ಉಳಿದಿದ್ದವು. ರಂಗಮ್ಮನ ಮಣ್ಣಿನ ಮನೆಯ ಅಡಿಪಾಯ ಇನ್ನೂ ಉಳಿದಿತ್ತು. ಅಡಿಪಾಯದ ನಡುಭಾಗದಲ್ಲಿ 50 ಅಡಿ ಎತ್ತರಕ್ಕೆ ನಾಲ್ಕಾರು ಮರಗಳು ಚಿಮ್ಮಿದ್ದವು. ರಂಗಮ್ಮ ತೀರಿಕೊಂಡು ಹಲವು ವರ್ಷಗಳೇ ಕಳೆದಿತ್ತು.

ಕಾಡಿನ ನಡುವೆ ಹಾದು ಹೋಗಿದ್ದ ರೈಲು ಹಳಿಗಳು ಹಾಗೇ ಇದ್ದವು. ರಂಗಮ್ಮನನ್ನು ಅಲ್ಲಿಗೆ ಕರೆತಂದಿದ್ದ ರೈಲು ಹಳಿಗಳು. ಆದರೆ ಮರಗಳನ್ನು ಸುಟ್ಟು ಮಾಡುತ್ತಿದ್ದ ಕಲ್ಲಿದ್ದಲನ್ನು ಒಯ್ಯುತ್ತಿದ್ದ ರೈಲು ಬಂಡಿಗಳಿರಲಿಲ್ಲ. ಮಲಗಿದ್ದ ಹಳಿಗಳನ್ನು ಆಲದಮರದ ಬೇರುಗಳು ಕುಸ್ತಿಪಟುಗಳು ಪಟ್ಟು ಹಾಕಿದಂತೆ ಬಿಗಿಯಾಗಿ ಹಿಡಿದಿದ್ದವು, ರೈಲು ಬಂಡಿಗಳು ಮತ್ತೆ ಅಲ್ಲಿಗೆ ಬಾರದಂತೆ. ಬಗೆ ಬಗೆಯ ಬಳ್ಳಿಗಳು ಉಳಿದಿದ್ದ ರೈಲು ಹಳಿಗಳ ಅವಶೇಷಗಳು ಕಾಣದಂತೆ ಆವರಿಸಿಕೊಂಡಿದ್ದವು.

11ನೇ ಪುಟಕ್ಕೆ...

ಪ್ರತಿಕ್ರಿಯೆಗಾಗಿ
bhanuvara@prajavani.co.in

ಮೊಸಳೆಗಳಿವೆ ಎಚ್ಚರಿಕೆ!

ಸಂತೋಷ ಈ. ಚಿನಗುಡಿ

ನದಿಯಿಂದ ದಡಕ್ಕೆ ಮೊಸಳೆ ಬಂದಿದೆ ಎನ್ನುವ ಸುದ್ದಿ ಹರಡುತ್ತಿದ್ದಂತೆ ದೊಡ್ಡ ಗುಂಪೇ ಸೇರುತ್ತದೆ. ಹೊರ ಬಂದ ಮೊಸಳೆಯನ್ನು ಭಯದಿಂದಾಗಿ ಕಲ್ಲು, ಬಡಿಗೆಗಳಿಂದ ಹೊಡೆದು ಇಲ್ಲವೆ ಟ್ರ್ಯಾಕ್ಟರ್ ಹಾಯಿಸಿ ಕೊಂದ ಉದಾಹರಣೆಗಳು ಇವೆ. ಆದರೆ, ಈಗ ಪರಿಸ್ಥಿತಿ ಸುಧಾರಿಸಿದೆ. ಮೊಸಳೆ ಕಾಣುತ್ತಿದ್ದಂತೆಯೇ ಅದನ್ನು ಹಗ್ಗದಿಂದ ಕಟ್ಟಿಹಾಕಿ ಅರಣ್ಯ ಇಲಾಖೆ ಇಲ್ಲವೇ ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡುವಷ್ಟು ಜನ ಕಕ್ಕುಲತೆ ಬೆಳೆಸಿಕೊಂಡಿದ್ದಾರೆ.

ಇಂತಹ ಚಿತ್ರಣಗಳನ್ನು ಬೆಳಗಾವಿ, ಬಾಗಲಕೋಟೆ ಜಿಲ್ಲೆಗಳ ಕೃಷ್ಣಾ ನದಿ ತೀರದಲ್ಲಿ ಬೇಸಿಗೆ ಸಂದರ್ಭದಲ್ಲಿ ಹೆಚ್ಚಾಗಿ ಕಾಣಬಹುದು. ನೆರೆಯೋ, ಬರವೋ; ಏನೇ ಬಂದರೂ ಮೊಸಳೆಗಳು ನದಿಯಿಂದ ಹೊರಬರುವುದು ಗ್ಯಾರಂಟಿ.

ಚಿಕ್ಕೋಡಿ ತಾಲ್ಲೂಕಿನ ಸದಲಗಾ ಬಳಿ ಈಚೆಗೆ ದೂದ್‌ಗಂಗಾ (ಕೃಷ್ಣೆಯ ಉಪನದಿ) ನದಿಗೆ ಸ್ನಾನಕ್ಕೆ ತೆರಳಿದ್ದ ರೈತನನ್ನು ಮೊಸಳೆಯು ಕಚ್ಚಿ ಸಾಯಿಸಿತು. ಇದೇ ಫೆಬ್ರುವರಿಯಿಂದ ಏಪ್ರಿಲ್‌ವರೆಗೆ ನಾಲ್ಕು ಮೊಸಳೆಗಳನ್ನು ಜನರೇ ಹಿಡಿದು ನದಿಗೆ ಬಿಟ್ಟಿದ್ದಾರೆ.

ಮಹಾರಾಷ್ಟ್ರದ ಮಹಾಬಲೇಶ್ವರದಲ್ಲಿ ಉಗಮವಾಗುವ ಕೃಷ್ಣಾ ನದಿ ಚಿಕ್ಕೋಡಿ ಮೂಲಕ ಕರ್ನಾಟಕ ಪ್ರವೇಶಿಸುತ್ತದೆ. ನದಿ ಉಗಮ ಸ್ಥಳ ಘಟ್ಟ ಪ್ರದೇಶದಲ್ಲಿ ಮೊಸಳೆಗಳ ಸಂತಾನೋತ್ಪತ್ತಿ ಹೆಚ್ಚು. ಕೃಷ್ಣಾ ನದಿಗೆ ಪ್ರವಾಹ ಬಂದಾಗ ಮರಿಗಳು ಹರಿದುಬರುತ್ತವೆ. ಬೆಳಗಾವಿ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಕೃಷ್ಣೆಯ ಹರಿವು ಜಾಸ್ತಿ. ಮೊಸಳೆಗಳಿಗೆ ಸಮೃದ್ಧ ಆಹಾರ ದೊರೆಯುತ್ತದೆ. ಹೀಗಾಗಿ ಈ ಪ್ರದೇಶದಲ್ಲೇ ಮೊಸಳೆಗಳು ಹೆಚ್ಚು.

'ಮಾನವನ ವಾಸಸ್ಥಳಕ್ಕೆ ಯಾವುದೇ ವನ್ಯಜೀವಿ ಲಗ್ಗೆ ಇಡಲು ಆಹಾರದ ಕೊರತೆಯೇ ಕಾರಣ. ಹೊಟ್ಟೆಪಾಡಿಗಾಗಿ ಮನುಷ್ಯ ಗುಳೆ ಹೋಗುವ ರೀತಿ ಇದು ಕೂಡ ಮೊಸಳೆಗಳ ಗುಳೆ' ಎನ್ನುತ್ತಾರೆ ಗೋಕಾಕ ಉಪ ಅರಣ್ಯ ಸಂರಕ್ಷಣಾಧಿಕಾರಿ ಶಿವಾನಂದ ನಾಯಕವಾಡಿ.

ಈ ಬಾರಿ ಬರಗಾಲದಿಂದಾಗಿ ನದಿಯಲ್ಲಿ ನೀರಿನ ಪ್ರಮಾಣ ಗಣನೀಯವಾಗಿ ಇಳಿದಿದೆ. ಜಲಚರಗಳು ಸತ್ತಿವೆ. ಮೊಸಳೆಗಳ ವಲಸೆ ದೊಡ್ಡ ಪ್ರಮಾಣದಲ್ಲಿ ನಡೆದಿದೆ.



ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಅರ್ಜುನವಾಡ ಬಳಿ ಗ್ರಾಮಸ್ಥರು ಸೆರೆ ಹಿಡಿದ ಮೊಸಳೆ (ಸಂಗ್ರಹ ಚಿತ್ರ)

ಮೊಸಳೆ– ಮಾನವ ಸಂಘರ್ಷ ಏಕೆ, ಹೇಗೆ?

ಕೃಷ್ಣಾ ನದಿ ಹರಿಯುವ ಮಹಾರಾಷ್ಟ್ರ ಹಾಗೂ ಕರ್ನಾಟಕದ ಉದ್ದಕ್ಕೂ ಕಬ್ಬನ್ನು ಹೆಚ್ಚಾಗಿ ಬೆಳೆಯುತ್ತಾರೆ. ಕಬ್ಬು ಬೆಳೆಗೆ ಅಪಾರ ಪ್ರಮಾಣದ ನೀರು ಬೇಕು. ಅದರಲ್ಲೂ ಬೇಸಿಗೆಯಲ್ಲಿ ನದಿ ನೀರನ್ನು ವಿಪರೀತ ಬಳಸಲಾಗುತ್ತದೆ. ಏತ ನೀರಾವರಿ ಮೂಲಕ ಕೆರೆಕಟ್ಟೆಗಳನ್ನು ತುಂಬಿಸಲಾಗುತ್ತದೆ. ಕಬ್ಬು ಬೆಳೆಗೆ ತಕ್ಕಂತೆ ಸಕ್ಕರೆ ಕಾರ್ಖಾನೆಗಳು ಸಂಖ್ಯೆಯೂ ಹೆಚ್ಚಿವೆ. ಬೆಳಗಾವಿ ಜಿಲ್ಲೆಯಲ್ಲಿ ಕೃಷ್ಣಾ ನದಿ ನೀರು ಅವಲಂಬಿಸಿದ 17 ಸಕ್ಕರೆ ಕಾರ್ಖಾನೆಗಳಿವೆ. ಹಿಂದಕ್ಕೆ ಸಾಗಿದರೆ ಮಹಾರಾಷ್ಟ್ರ, ಮುಂದಕ್ಕೆ ಸಾಗಿದರೆ ಬಾಗಲಕೋಟೆ ಜಿಲ್ಲೆಯಲ್ಲಿ ಕೂಡ ಸಕ್ಕರೆ ಕಾರ್ಖಾನೆಗಳು ಹೆಚ್ಚು. ಕಾರ್ಖಾನೆಗಳಿಗೆ ವರ್ಷವಿಡೀ ಅಪಾರ ಪ್ರಮಾಣದ ನೀರು ಬಳಸಲಾಗುತ್ತದೆ.

ಕಾರ್ಖಾನೆಗಳಿಂದ, ಕೃಷಿ ಭೂಮಿಯಿಂದ ಉತ್ಪತ್ತಿಯಾಗುವ ಕಲ್ಮಷ ನೇರವಾಗಿ ಕೃಷ್ಣೆಯ ಒಡಲು ಸೇರುತ್ತದೆ. ಜಲಚರಗಳ ಸಾವಿಗೆ ಇದು ಕೂಡ ಕಾರಣ. ನದಿತೀರದಲ್ಲಿ ಮರಳುಗಾರಿಕೆ ಕೂಡ ನಿರಂತರ ನಡೆದೇ ಇದೆ. ಈ ಎಲ್ಲ ಕಾರಣಗಳಿಂದ ಪ್ರತಿ ಬೇಸಿಗೆಯಲ್ಲಿ ನದಿ ನೀರಿನ ಪ್ರಮಾಣ ಕುಸಿಯುತ್ತದೆ. ಜಲಚರಗಳು ಸಾಯುತ್ತವೆ. ಮೊಸಳೆಗಳು ಹಸಿವಿನಿಂದ ಬಳಲುತ್ತವೆ.

ನದಿ ತೀರಕ್ಕೆ ತಾಗಿಕೊಂಡು ಸುಮಾರು 200 ಹಳ್ಳಿಗಳಿವೆ. ಊರು ವಿಸ್ತಾರವಾಗುತ್ತ, ನದಿ ಒಡಲು ಕಡಿಮೆಯಾಗುತ್ತಿದೆ. ಬೇಸಿಗೆಯಲ್ಲಿ ನೀರು ಕೆಳಗಿಳಿದ ತಕ್ಷಣ ನದಿ ಬಯಲಲ್ಲೇ ರೈತರು ಉಳುಮೆ ಮಾಡುತ್ತಾರೆ. ಇದನ್ನೇ ಜಲಚರಗಳ ಪ್ರದೇಶದ ಅತಿಕ್ರಮಣ ಎನ್ನುತ್ತಾರೆ ಪರಿಸರ ತಜ್ಞರು.

ಮೊಸಳೆ ನೀರೊಳಗಿದ್ದರೆ ಮೀನು, ಏಡಿ ಸೇರಿದಂತೆ ಜಲಚರಗಳನ್ನು ತಿನ್ನುತ್ತದೆ. ಹೊರಬಂದಾಗ ಆಡು, ಕುರಿ, ಹಸು, ಎತ್ತು, ಎಮ್ಮೆ, ನಾಯಿ, ಕುದುರೆ ಹೀಗೆ ಪ್ರಾಣಿಗಳನ್ನೂ ಬೇಟೆಯಾಡುತ್ತದೆ.

ಸಂಘರ್ಷಕ್ಕೆ ಕೊನೆಯಿಲ್ಲ

ಮಾನವ-ವನ್ಯಮೃಗಗಳ ಸಂಘರ್ಷ ಜಗತ್ತಿನ ಎಲ್ಲೆಡೆಯೂ ನಡೆದಿದೆ. ಹುಲಿ, ಚಿರತೆ, ಆನೆಗಳಿಂದ ಉಪಟಳ ತಪ್ಪಿಸಲು ವಿದ್ಯುತ್ ತಂತಿಬೇಲಿ, ಕಂದಕ, ಗೋಡೆ ನಿರ್ಮಾಣ ಮುಂತಾದ ಕ್ರಮಗಳು ಇವೆ. ಆದರೆ ಮೊಸಳೆಗಳನ್ನು ನಿಯಂತ್ರಣ ಮಾಡಲು ಯಾವುದೇ ಉಪಾಯವಿಲ್ಲ. ಏಕೆಂದರೆ; ಮೊಸಳೆಗೆ ನಿರ್ದಿಷ್ಟ ಆವಾಸ ಸ್ಥಾನವಿಲ್ಲ. ಅದು ಆಹಾರಕ್ಕಾಗಿ ವಲಸೆ ಹೋಗುತ್ತಲೇ ಇರುತ್ತದೆ. 'ಇಲ್ಲಿ ಮೊಸಳೆಗಳಿವೆ ಎಚ್ಚರಿಕೆ' ಎಂಬ ಫಲಕ ಹಾಕುವುದು ಮಾತ್ರ ಈಗಿರುವ ಮಾರ್ಗ.

ಮೊಸಳೆ 'ಮಿಲನ' ಮತ್ತ 'ಬಾಣಂತನ'ದ ಅವಧಿಯಲ್ಲೇ ಸಂಘರ್ಷ ಹೆಚ್ಚಾಗಿ ನಡೆಯುತ್ತದೆ. ಸಾಮಾನ್ಯವಾಗಿ ದಕ್ಷಿಣ ಭಾರತದ ಮೊಸಳೆಗಳು ನವೆಂಬರ್– ಡಿಸೆಂಬರ್ ಮಧ್ಯದಲ್ಲಿ ಮಿಲನ ಕ್ರಿಯೆ ನಡೆಸುತ್ತವೆ. ಫೆಬ್ರುವರಿ– ಮಾರ್ಚ್‌ನಲ್ಲಿ ಮೊಟ್ಟೆ ಇಡುತ್ತವೆ. ಮೊಸಳೆ ಬಾಣಂತನಕ್ಕೆ ನದಿ ದಡದ ಮರಳು, ಪೊದೆಯೇ ಬೇಕು. ಬಾಣಂತಿಗೆ ಮತ್ತು ಮರಿಗಳಿಗೆ ಬೇಕಾದ ಹಸಿ-ಬಿಸಿ ಎರಡೂ ಈ ಮರಳಿನಲ್ಲಿ ಮಾತ್ರ ಸಿಗುತ್ತದೆ.

ಮೂರು ದಶಕಗಳ ಹಿಂದೆ ಬೇಸಿಗೆಯಲ್ಲಿ ಕೃಷ್ಣಾ ನದಿ ಸಂಪೂರ್ಣ ಒಣಗುತ್ತಿತ್ತು. ಮೊಸಳೆಗಳೂ ಸಾಯುತ್ತಿದ್ದವು. ಆದರೆ, ಈಗ ಮಹಾರಾಷ್ಟ್ರದ ಅಣೆಕಟ್ಟೆಗಳಿಂದ ಆಗಾಗ ನೀರು ಹರಿಯುತ್ತಲೇ ಇರುತ್ತದೆ. ಹೀಗಾಗಿ ಬೆಳಗಾವಿ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲೂ ಮೊಸಳೆಗಳು ಸಂತಾನೋತ್ಪತ್ತಿ ಮಾಡುತ್ತಿವೆ. ಒಂದು ಮೊಸಳೆ ಒಂದು ಬಾರಿಗೆ 40 ರಿಂದ 100 ಮೊಟ್ಟೆಗಳನ್ನು ಇಡುತ್ತದೆ. ಉಡ, ಹಾವು, ಹಕ್ಕಿಗಳು ಈ ಮೊಟ್ಟೆಗಳನ್ನು ತಿನ್ನಲು ಬರುತ್ತವೆ. ಹೆಣ್ಣು ಹಾಗೂ ಗಂಡು ಮೊಸಳೆ ಜೋಡಿ ಪಾಳಿ ಪ್ರಕಾರ ತಮ್ಮ ಮೊಟ್ಟೆಗಳನ್ನು ಕಾಯುತ್ತವೆ. ಇಂಥ ಅವಧಿಯಲ್ಲಿ ನದಿತೀರಕ್ಕೆ ಯಾರೇ ಸುಳಿದರೂ ಅಪಾಯ ಕಟ್ಟಿಟ್ಟ ಬುತ್ತಿ.

ಮೊಸಳೆ ಪೀಡಣೆಗೆ ಒರಿಸ್ಸಾದ ಕೇಂದ್ರಪಾರ್ ಜಿಲ್ಲೆಯ ನ್ಯಾಷನಲ್ ಪಾರ್ಕ್ ಜ್ವಲಂತ ಸಾಕ್ಷಿ. ಮೊಸಳೆಗಳ ಸಂತತಿ ರಕ್ಷಣೆಗಾಗಿ ಅಲ್ಲಿನ ಸರ್ಕಾರ 'ಕ್ರೊಕೊಡೈಲ್ ಪ್ರಾಜೆಕ್ಟ್' ಘೋಷಣೆ ಮಾಡಿತು. ಒಂದೇ ದಶಕದಲ್ಲಿ ಮೊಸಳೆಗಳ ಸಂಖ್ಯೆ ಮಿತಿಮೀರಿತು. ಆದರೆ, ಆವಾಸಸ್ಥಳ ಮಾತ್ರ ಅಷ್ಟೇ ಉಳಿಯಿತು. ಕಿರಿದಾದ ಆವಾಸಸ್ಥಾನ ಬಿಟ್ಟು ಮೊಸಳೆಗಳು ಹೊರಬಂದು ಮನುಷ್ಯರ ಮೇಲೆ ದಾಳಿ ಇಡಲು ಶುರು ಮಾಡಿದವು. ದಶಕಗಳಿಂದಲೂ ಅಲ್ಲಿ ಮಾನವ– ಮೊಸಳೆ ಸಂಘರ್ಷ ನಿಂತಿಲ್ಲ. ಮೊಸಳೆ ಪ್ರದೇಶವನ್ನು ಅತಿಕ್ರಮಣ ಮಾಡುತ್ತ ಹೋದರೆ ಅಂಥದ್ದೇ ಪರಿಸ್ಥಿತಿ ಕೃಷ್ಣಾತೀರಕ್ಕೂ ಬರಬಹುದು ಎಂಬ ಅಂದಾಜು ತಜ್ಞರದು.

12ನೇ ಪುಟಕ್ಕೆ...

ಒಡಿಶಾ ರಾಜ್ಯದಲ್ಲಿ ರಜಾ ಪರ್ಬ ಎನ್ನುವ ವಿಶಿಷ್ಟ ಆಚರಣೆ ಇದೆ. ಇಲ್ಲಿನ ಜನರು ವರ್ಷಕ್ಕೊಮ್ಮೆ ಭೂಮಿಗೆ ಮುಟ್ಟಿನ ರಜೆ ಕೊಟ್ಟು ಸಂಭ್ರಮಿಸುತ್ತಾರೆ....

ಭೂಮ್ತಾಯಿಗೆ ಮುಟ್ಟಿನ ರಜೆ



ಡಾ. ಕೆ.ಎಸ್.ಚೈತ್ರಾ

ಒಡಿಶಾದ ಮನೆಗಳ ಮುಂದೆಲ್ಲ ಸಿಂಗಾರಗೊಂಡ ಉಯ್ಯಾಲೆಗಳು ಇಡೀ ವಾತಾವರಣಕ್ಕೆ ಹೊಸ ಕಳೆ ತಂದಿದ್ದವು. ಭುವನೇಶ್ವರದ ಪಾರ್ಕ್‌ಗಳಲ್ಲೂ ಮತ್ತದೇ ಉಯ್ಯಾಲೆ-ಅಲಂಕಾರ ಕಂಡಾಗ ಕುತೂಹಲ ಹೆಚ್ಚಾಯಿತು. ಕಾರು ಚಾಲಕ ರಂಜಿತ್‌ನನ್ನು ಕೇಳಿದಾಗ 'ರಜಾ ಪರ್ಬದ ತಯಾರಿ ನಡೆಯುತ್ತಿದೆ' ಎಂದು ಹೇಳಿದ.

ಸಕಲ ಜೀವರಾಶಿಗಳಿಗೆ ಆಧಾರವಾಗಿರುವ, ಪೊರೆಯುವ ಭೂಮಿತಾಯಿಯನ್ನು ಹೆಣ್ಣು ಎಂದೇ ಪರಿಗಣಿಸಿ ಗೌರವಿಸಲಾಗುತ್ತದೆ. ಭೂಮಿಯಂತೆಯೇ ಮಹಿಳೆಯೂ ಜೀವದಾಯಿನಿ; ಹುಡುಗಿ ಹೆಣ್ಣಾಗುವ ನಂತರ ತಾಯಿಯಾಗುವ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುವುದು ಋತುಚಕ್ರ. ಮೊಗ್ಗು ಅರಳಿ ಹೂವಾಗುವಷ್ಟೇ ಸಹಜ ನೈಸರ್ಗಿಕ ಕ್ರಿಯೆ ಮುಟ್ಟು. ಹಾಗಾಗಿಯೇ ಮುಟ್ಟು ಫಲವತ್ತತೆ-ಜೀವಂತಿಕೆಯ ಸಂಕೇತ. ಆದರೆ ಮುಟ್ಟು ಎಂದೊಡನೆ ಅಪವಿತ್ರ-ಮೈಲಿಗೆ ಎನ್ನುವ ನಂಬಿಕೆ, ಆಚರಣೆಗಳು ಭಾರತದಲ್ಲಿ ಬಲವಾಗಿ ಬೇರೂರಿವೆ. ಹೀಗಿರುವಾಗ ಮುಟ್ಟು ಮತ್ತು ಹೆಣ್ತನವನ್ನು ಸಂಭ್ರಮಿಸುವ ಒಡಿಶಾದ ಈ ಹಬ್ಬ ಅಪರೂಪದ್ದು!

ಮೂರು ದಿನಗಳ ಈ ಹಬ್ಬವನ್ನು ಭೂದೇವಿಯ ವಾರ್ಷಿಕ ಮುಟ್ಟಿನ ಅವಧಿ ಎಂದು ಪರಿಗಣಿಸಲಾಗುತ್ತದೆ. ಹಾಗಾಗಿ ಈ ಸಂದರ್ಭದಲ್ಲಿ ಕೃಷಿ ಚಟುವಟಿಕೆಗಳನ್ನು ಮಾಡುವುದಿಲ್ಲ. ಸತತವಾಗಿ ಬಿತ್ತನೆಗೆ ತನ್ನನ್ನು ತಾನು ತೊಡಗಿಸಿಕೊಂಡ ಭೂಮಿಗೆ ವಿಶ್ರಾಂತಿಯನ್ನು ನೀಡುವುದು ಇದರ ಉದ್ದೇಶ. ಈ ದಿನಗಳಲ್ಲಿ ಭೂಮಿಯನ್ನು ಉಳುಮೆ ಮಾಡುವುದು, ಹದಗೊಳಿಸುವುದನ್ನು ಮಾಡಲಾಗುವುದಿಲ್ಲ. ನಾಲ್ಕನೇ ದಿನ ಭೂಮಿತಾಯಿ ಸ್ನಾನ ಮಾಡುತ್ತಾಳೆ. ಅಂದರೆ ವಾರ್ಷಿಕ ಋತುಚಕ್ರ ಮುಗಿದು ಕ್ಷೇತ್ರ ಹದವಾಗುತ್ತದೆ. ಮಳೆರಾಯನ ಆಗಮನದೊಂದಿಗೆ ಮುಂಬರುವ ಕೃಷಿ ಚಟುವಟಿಕೆಗಳಿಗೆ ಆಕೆ ಸಿದ್ಧವಾಗುತ್ತಾಳೆ. ಆ ಸಿದ್ಧತೆಯನ್ನು ಸಡಗರದೊಂದಿಗೆ ಆಚರಿಸುವ ಕೃಷಿ ಸಂಸ್ಕೃತಿಯ ಹಬ್ಬವಿದು.

ಅದರೊಂದಿಗೆ ಒಡಿಶಾದ ಜನರ ಪಾಲಿಗೆ ಭೂದೇವಿಯು ಜಗದ್‌ರಕ್ಷಕನಾದ ಪುರಿಯ ಜಗನ್ನಾಥನ ಪತ್ನಿ. ಹಾಗಾಗಿ ಧಾರ್ಮಿಕ ಆಯಾಮವನ್ನೂ ಇದು ಹೊಂದಿದೆ.

ಆ ಮೂರು ದಿನಗಳು!

ರಜಾ ಪರ್ಬವನ್ನು ಆಷಾಢ ಮಾಸದ ಆರಂಭದಲ್ಲಿ ಜೂನ್ ತಿಂಗಳಲ್ಲಿ (ಈ ವರ್ಷ ಜೂನ್ 14 ರಿಂದ) ಮೂರುದಿನ ಆಚರಿಸಲಾಗುತ್ತದೆ. ಹಬ್ಬ ಆರಂಭವಾಗುವ ಮುನ್ನಾ ಪೂರ್ವ ತಯಾರಿ ದಿನ. ಅಂದು, ಇಡೀ ಮನೆಯನ್ನು ವಿಶೇಷವಾಗಿ ಅಡುಗೆ ಮನೆಯನ್ನು ಶುಚಿಯಾಗಿರಿಸಲಾಗುತ್ತದೆ. ಮುಂದಿನ ಮೂರು ದಿನಗಳವರೆಗೆ ಮನೆಯಲ್ಲಿ ಅಡುಗೆ ಕೆಲಸವನ್ನು ಮಹಿಳೆಯರು ಮಾಡುವಂತಿಲ್ಲ. ಹಾಗಾಗಿ ಬೇಕಾದ ಮಸಾಲೆಗಳನ್ನು ಮೊದಲೇ ಪುಡಿ ಮಾಡಿ ಹುರಿದು ಸಿದ್ಧಗೊಳಿಸುತ್ತಾರೆ. ಮೊದಲ ದಿನ ಪಹಿಲಿ ರಜಾ. ಅಂದು ನಸುಕಿನಲ್ಲೇ ಹೆಣ್ಣುಮಕ್ಕಳು ಎದ್ದು ಮೈಗೆ ಅರಿಸಿನ-ಎಣ್ಣೆ ಹಚ್ಚಿ ನಂತರ ನದಿಯಲ್ಲಿ ಶುದ್ಧೀಕರಣ ಸ್ನಾನ ಮಾಡುತ್ತಾರೆ. ನಂತರದ ಎರಡು ದಿನಗಳು ಸ್ನಾನ ಮಾಡುವಂತಿಲ್ಲ. ಎರಡನೇ ದಿನ ಮಿಥುನ ಸಂಕ್ರಾಂತಿ, ಮೂರನೇ ದಿನ ಬಸಿ ರಜಾ. ಈ ಮೂರು ದಿನಗಳ ಕಾಲ ಹುಡುಗಿಯರು ಮತ್ತು ಮಹಿಳೆಯರಿಗೆ ಸಂಪೂರ್ಣ ವಿಶ್ರಾಂತಿ. ಈ ಸಮಯದಲ್ಲಿ ನೀರು ಹೊರುವ, ಮನೆಗಳನ್ನು ಗುಡಿಸಿ ಒರೆಸುವ, ತರಕಾರಿ ಕತ್ತರಿಸುವ, ಧಾನ್ಯವನ್ನು ಪುಡಿ ಮಾಡುವ, ಬಟ್ಟೆ ತೊಳೆಯುವ ಹೀಗೆ ಯಾವುದೇ ಕೆಲಸ ಮಾಡುವುದಿಲ್ಲ. ಬರಿಗಾಲಿನಲ್ಲಿ ನಡೆಯುವಂತೆಯೂ ಇಲ್ಲ. ನಾಲ್ಕನೇ ದಿನ ಬಸುಮತಿ ಸ್ನಾನ.

12ನೇ ಪುಟಕ್ಕೆ...

ಮಕ್ಕಳಲ್ಲಿ ಮೈಸೂರು ಶೈಲಿ ಕುರಿತು ಅಭಿಮಾನ ಮೂಡಿಸಲು ಆಯೋಜಿಸಿದ್ದ ಕಲಾಶಿಬಿರ ಹೊಸ ಪೀಳಿಗೆಗೆ ಪಾರಂಪರಿಕ ಜ್ಞಾನವನ್ನು ದಾಟಿಸಿತು.







ಮಕ್ಕಳ ಕೈಲಿ ಮೈಸೂರು ಶೈಲಿ

ರಶ್ಮಿ ಎಸ್

ಹದಿಹರೆಯದ ಎಳೆಯ ಕೈಗಳು, ಇಷ್ಟು ದಿನ ಬಿಡುವಿಲ್ಲದೆ ಮೊಬೈಲ್ ಸ್ಕ್ರೀನ್ ಮೇಲ್ಮುದಿಯತ್ತ ಜರುಗುತ್ತಿದ್ದ ಬೆರಳು, ತನ್ಮಯತೆಯಿಂದ ಪೆನ್ಸಿಲ್ ಹಿಡಿದಿದ್ದವು. ಆ ಕಂಗಳೂ ಅಷ್ಟೇನೆ.. ಸ್ಕ್ರೀನ್ ಮೇಲೆ ಮಾತ್ರ ಸರಿದಾಡಿ ಅಭ್ಯಾಸವಿದ್ದರೂ ಚಾಂಚಲ್ಯ ಮರೆತು, ಕ್ಯಾನ್ವಾಸ್ ಮೇಲೆ ದೃಷ್ಟಿ ನೆಟ್ಟಿದ್ದವು.

ಒಂದು ವಾರದ ಶಿಬಿರದಲ್ಲಿ ಮೈಸೂರು ಶೈಲಿಯಲ್ಲಿ ಬರುವ ಎಂಬೊಸಿಂಗ್ ಮತ್ತು ಪದರಗಳಂತೆ ಚಿನ್ನದ ಲೇಪನವನ್ನು ಎದ್ದು ಕೂರಿಸುವುದು, ಇವನ್ನು ಕಲಿಸಬೇಕಾಗಿತ್ತು. ಪುಟ್ಟ ಪುಟ್ಟ ಕೈಗಳು ಅದಕ್ಕೂ ತಯಾರಾದವು. ಕೊನೆಕೊನೆಗೆ ಕಲಾಕೃತಿ ಮುಗಿಸಬೇಕು ಎನ್ನುವ ಹಟಕ್ಕಿಂತಲೂ, ಅದಿನ್ನೆಷ್ಟು ಚಂದ ಕಂಡೀತು ಎಂಬ ಕುತೂಹಲವೇ ಗೆದ್ದಿತು. ಕೆಲ ಮಕ್ಕಳು ಬೆಳಿಗ್ಗೆ ಒಂಬತ್ತು ಗಂಟೆಗೆ ಬಂದರೆ ರಾತ್ರಿಯವರೆಗೂ ಶಿಬಿರದಲ್ಲಿ ತಮ್ಮ ಕಲಾಕೃತಿಯ ತಯಾರಿಯಲ್ಲಿ ಮೈಮರೆಯುತ್ತಿದ್ದರು.



ಪರಿಣಾಮ, ಒಂದು ವಾರದಲ್ಲಿಯೇ ಗಣೇಶ, ಕಮಲದೊಳು ಸ್ಥಾಪಿತಳಾದ ಲಕ್ಷ್ಮಿ, ಗಜಲಕ್ಷ್ಮಿ, ಗಜ ಸಂಸಾರ, ನಂದಿ, ಗೃಹಲಕ್ಷ್ಮಿ–ಹೀಗೆ ಹಲವಾರು ದೇವದೇವತೆಯರು ಈ ಮಕ್ಕಳ ಕೈಗಳಲ್ಲಿ ರೂಪು ತಳೆದರು.

ಹಾಸನ ಜಿಲ್ಲೆಯಲ್ಲಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಹಾಗೂ ಚಿತ್ರಕಲಾ ಶಿಕ್ಷಕರೂ ಸೇರಿ 30 ಜನ ಈ ವಿಶೇಷ ಕಲಾ ಶಿಬಿರದಲ್ಲಿ ಪಾಲ್ಗೊಂಡಿದ್ದರು. ಇಡೀ ದಿನ ಕತ್ತು ತಗ್ಗಿಸಿ ದೇವರನ್ನು ಸೃಷ್ಟಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ವರ್ಷಾನುಗಟ್ಟಲೆ ಬೇಕಾಗುವ ಸಾಧನೆಗೆ ಮುನ್ನುಡಿಯಂತಿತ್ತು ಶಿಬಿರ.

ಒಂಬತ್ತನೇ ತರಗತಿಯ ಚಿರಂತನ್ ಎಚ್, 'ಹಂಸವಾಹಿನಿ–ವೀಣಾಪಾಣಿನಿ ಸರಸ್ವತಿಯ ಚಿತ್ರ ಬಿಡಿಸತೊಡಗಿದಾಗಲೇ ಮೈಸೂರು ಪರಂಪರೆಯ ವೈಭವ ಅರ್ಥವಾಯಿತು' ಎಂದು ಹೇಳಿದ. 'ಇಡೀ ವಾರ ಫೋನು, ಟೀವಿಯಿಂದ ದೂರ ಇದ್ದೆ. ಬೋರಾದರೆ ತಾನೆ ಅದೆಲ್ಲ ನೋಡಬೇಕು ಅಂತನಿಸೋದು... ನಮಗೆ ಬೇಜಾರು ಆಗಲೇ ಇಲ್ಲ. ಚಿತ್ರ ಬಿಡಿಸ್ತಾ, ಎಂಬೋಸಿಂಗ್ ಮಾಡುತ್ತ, ಸಮಯ ಹೋಗಿದ್ದೇ ಗೊತ್ತಾಗ್ತಿರಲಿಲ್ಲ. ಈಗ ಇನ್ನೊಂದು ಕಲಾಕೃತಿ ಆರಂಭಿಸಿರುವೆ' ಎಂದು ಖುಷಿಯಿಂದಲೇ ಹೇಳಿದರು.



ಕಲಾಕೃತಿ ರಚನೆಯಲ್ಲಿ ತೊಡಗಿರುವ ಶಿಬಿರಾರ್ಥಿಗಳು...

ಶಿಬಿರದ ಅವಧಿಯಲ್ಲಿ ಚಿತ್ರಕಲೆಯಲ್ಲಿ ಗಣಿತೀಯ ರೇಖೆಗಳನ್ನು ಎಳೆಯುವ ಕುರಿತು ಚಿಣ್ಣರು ಹೆಚ್ಚಿನ ಆಸಕ್ತಿ ತೋರಿದರು. ಅರ್ಧ ಕಲಿಕೆ ಅಲ್ಲಿಯೇ ಪೂರ್ಣವಾದಂತೆ ಇತ್ತು. ಕಲೆಯಲ್ಲಿ ಆಸಕ್ತಿ ತೋರುವುದೇ ಮೊದಲ ಹಂತ. ಅದನ್ನು ಗೆದ್ದಿದ್ದಾಗಿತ್ತು. ವರ್ಣವೈವಿಧ್ಯಮಯ ಈ ಕಲೆಯ ಇತಿಹಾಸ ಹೇಳಿದಂತೆಲ್ಲ ಅವರಿಗೆ ಹೆಮ್ಮೆಯೂ ಆಗತೊಡಗಿತು. ಮೊದಲೆಲ್ಲ ಚಿನ್ನದ ರೇಕುಗಳಿಂದ ಚಿತ್ರಿಸುತ್ತಿದ್ದರು ಎಂಬ ಸತ್ಯ ಅರಿವಾಗುತಲ್ಲೇ ರೋಮಾಂಚಿತರಾದ ಮಕ್ಕಳು, ಆ ಕಲೆಯ ಅನನ್ಯತೆಯನ್ನು ತಾವೂ ಕಲಿಯುವತ್ತ ಮನಸ್ಸು ಮಾಡಿದರು.

ಅದ್ಹೆಂಗೆ ಅಷ್ಟು ಪರಿಶ್ರಮಕ್ಕೆ ಈ ಪುಟ್ಟ ಜೀವಗಳು ತಯಾರಾದವು? ಸ್ಕ್ರೀನ್ ಮತ್ತು ಆಟಗಳನ್ನು ಬಿಟ್ಟು ಮೈಮರೆತರು? ಈ ಪ್ರಶ್ನೆಗಳನ್ನು ಬೆನ್ನಟ್ಟಿದಾಗ, ಹಾಸನದ ವಿದ್ಯಾಶಾಲೆಯ ತನಿಷಾ ಎಚ್.ಟಿ ಇದಕ್ಕೆ ಉತ್ತರವಾದಳು. 'ಮೈಸೂರು ಶೈಲಿ ಎಂದರೇನೆ ಗೊತ್ತಿರದ ದಿನಗಳಿಂದ, ನಾವೂ ಕಲಾಕೃತಿ ರಚಿಸುವವರೆಗೂ ಶಿಬಿರದಲ್ಲಿದ್ದ ಶಿಕ್ಷಕರು ಹಲವಾರು ವಿಷಯಗಳನ್ನು ತಿಳಿಸಿಕೊಟ್ಟರು. ಚಿನ್ನ ಬಳಸಿ ಮಾಡಿರುವ ಕಲಾಕೃತಿಗಳನ್ನು ನೋಡಬೇಕೆಂಬ ಆಸೆ ಇದೆ. ಈ ಕಲೆಯನ್ನು ಮುಂದುವರಿಸುವ ಆಸಕ್ತಿಯೂ ಹುಟ್ಟಿದೆ' ಎಂದಳು.

ಮಕ್ಕಳನ್ನು ಬೇಸಿಗೆ ಶಿಬಿರದಲ್ಲಿ ಚಿತ್ರಕಲೆ ಕಲಿಸುವುದಕ್ಕೂ, ಸಾಂಪ್ರದಾಯಿಕ ಶೈಲಿಯನ್ನು ಕಲಿಸುವುದಕ್ಕೂ ಅಗಾಧವಾದ ವ್ಯತ್ಯಾಸವಿದೆ. ಒಂದೇ ಚಿತ್ರದೊಳಗೆ ಚಿತ್ತ ಚಾಂಚಲ್ಯ ಇರುವ ಮಕ್ಕಳನ್ನು ತೊಡಗಿಸಬಹುದೆ? ಅತಿ ನಯ ನಾಜೂಕಿನ ರೇಕುಗಳನ್ನು ಚಿತ್ರಿಸುವಾಗ ಸಹನೆ ಕೆಡಲಿಲ್ಲವೇ? ಆಸಕ್ತಿ ಮೂಡಿಸುವ ಭರದಲ್ಲಿ... ಇದ್ಯಾವುದಿದು ಇಷ್ಟು ಸಮಯ ಬಯಸುತ್ತದೆ ಎಂಬ ರೇಜಿಗೆ ಹುಟ್ಟಲಿಲ್ಲವೇ ಇಂಥ ಪ್ರಶ್ನೆಗಳೂ ಮನಸಿನಲ್ಲಿ ಮೂಡಿದ್ದವು. ಇವಕ್ಕೆಲ್ಲ ಕಲಾಶಿಬಿರ ಏರ್ಪಡಿಸಿದ್ದ ಚಿತ್ರಕಲಾವಿದರೂ, ಶಿಕ್ಷಕರೂ ಆಗಿರುವ ಬಿ.ಎಸ್. ದೇಸಾಯಿ ಅವರು ಉತ್ತರಿಸಿದರು.

'ನಮ್ಮ ಪರಂಪರೆ, ನಮ್ಮ ಶೈಲಿ, ನಮ್ಮ ಸಂಸ್ಕೃತಿ ಇವೆಲ್ಲ ಮುಂದಿನ ಪೀಳಿಗೆಗೆ ದಾಟಬೇಕಲ್ಲ, ದಾಟುವುದಿಲ್ಲ ಎಂಬ ಹಳಹಳಿಕೆಯೊಂದಿಗೆ, ದಾಟಬೇಕು ಎಂಬ ಕಾಳಜಿಯೂ ಹುಟ್ಟಿದಾಗ, ಇಂಥ ಶಿಬಿರ ಏರ್ಪಡಿಸಬೇಕು ಅನಿಸಿತು. ಇದಕ್ಕೆ ಒಳ್ಳೆಯ ಪ್ರತಿಕ್ರಿಯೆಯೂ ವ್ಯಕ್ತವಾಯಿತು. ವಿಜಯನಗರ ಸಾಮ್ರಾಜ್ಯದ ಮೂಲದಿಂದ ಈ ಶೈಲಿ ಹುಟ್ಟಿಕೊಂಡಿತು. ಮುಂದೆ ಹಾಳುಹಂಪೆಯಾದಾಗ ಹಲವಾರು ಕಲಾವಿದರು ದಕ್ಷಿಣಕ್ಕೆ ವಲಸೆ ಬಂದರು. ಶ್ರೀರಂಗಪಟ್ಟಣದಿಂದ ಮೈಸೂರು ಶೈಲಿಯಾಗಿ ಹೆಸರುವಾಸಿಯಾಯಿತು. ಚಿನ್ನದ ಲೇಪನದಿಂದ ಸಿದ್ಧವಾಗುತ್ತಿದ್ದ ಈ ಕುಸುರಿ ಕೆಲಸದ ಕಲಾಕೃತಿಗಳು, ನೈಜ ವರ್ಣದಿಂದ ಕಂಗೊಳಿಸುತ್ತಿದ್ದವು. ಆ ವೈಭೋಗ ಮರಳಿ ಬರದಿದ್ದರೂ ನಮ್ಮ ಶೈಲಿ ಮಾಯವಾಗಬಾರದು ಎಂಬ ಕಾಳಜಿಯಿಂದ ಈ ಶಿಬಿರ ಆರಂಭಿಸಿದೆ' ಎಂದು ಹೇಳಿದರು.

ಕಲೆಗೆ ಪ್ರೋತ್ಸಾಹದ ನೀರೆರೆಯುವವರು ಇದ್ದರೆ, ಇವು ಉಳಿಯುವುದಷ್ಟೇ ಅಲ್ಲ, ನಳನಳಿಸುತ್ತವೆ. ರಾಜಾಶ್ರಯ ದೊರೆತ ಕಾರಣಕ್ಕೇನೆ, ಶತಮಾನಗಳ ಕಾಲ ಈ ಪರಂಪರೆ ಉಳಿದುಕೊಂಡು ಬಂದಿದೆ. ಪ್ರಜಾಪ್ರಭುತ್ವದ ಈ ಕಾಲದಲ್ಲಿಯೂ ಕಲೆ ಉಳಿಸಲು ಅಗತ್ಯ ಇರುವ ಸಹಕಾರ, ಸಹಾಯ ದೊರೆತರೆ ನಮ್ಮ ಪಾರಂಪರಿಕ ಜ್ಞಾನವನ್ನು ಮುಂದಿನ ಪೀಳಿಗೆಗೆ ಸಾಗಿಸುವ ಸಾರ್ಥಕ ಕೆಲಸ ಆಗುತ್ತದೆ.


ಬೊಮ್ಮನಹಳ್ಳಿಯ ಮಣ್ಣಿನ ದಾರಿ

ಜಯಂತ ಕಾಯ್ಕಿಣಿ

ವಿದ್ಯಾಭ್ಯಾಸಕ್ಕಾಗಿ ಕುಮಟಾ, ಧಾರವಾಡ ಮತ್ತು ಉದ್ಯೋಗ ನಿಮಿತ್ತ ಮುಂಬೈ ವಲಸೆ ಇತ್ಯಾದಿಗಳಿಂದಾಗಿ ಇತ್ತ ಹಾಯದ ನನ್ನ ಮಂಚಿಕೇರಿ ಪ್ರವಾಸದ ಎರಡನೇ ಹಂತ ಒದಗಿ ಬಂದಿದ್ದು ಸೀದಾ 25 ವರ್ಷಗಳ ನಂತರ 1992ರಲ್ಲಿ! ಆಗ ಮಂಚಿಕೇರಿ ಹೈಸ್ಕೂಲಿನಲ್ಲಿ ಆಯೋಜಿತವಾಗಿದ್ದ ನೀನಾಸಂ ಸಾಹಿತ್ಯ ರಸಗ್ರಹಣ ಕಲಾಪವೊಂದಕ್ಕೆ ನಾನು ಬಂದಿದ್ದೆ. ಬಾಲ್ಯದ ಎಳೆಯ ಕಂಗಳಿಗೆ ಕಂಡಿದ್ದ ಮಂಚಿಕೇರಿ ಎಂಬ ಆವರಣಕ್ಕೆ ಒಂದು ಅದ್ಭುತವಾದ ಚಿಂತನಶೀಲ ತನ್ಮಯತೆಯ ಆಯಾಮ ಬಂದಿದ್ದು ಈ ಮರುಭೇಟಿಯಲ್ಲಿ. ಮೊದಲು ಬರೆ ಮಂಚಿಕೇರಿ-ಹಾಸಣಗಿ ಆಗಿದ್ದ ನಕ್ಷೆಯಲ್ಲಿ ಈಗ ಬೊಮ್ಮನಹಳ್ಳಿ ಎಂಬ ಹೊಸ ಆವರಣ ಸೇರಿಕೊಂಡಿತು. ಮುಂಬೈಗೆ ಹೋಗಿ ಅದಾಗಲೇ 16 ವರ್ಷಗಳಾಗಿದ್ದ ನನಗೆ ನನ್ನ ಜಿಲ್ಲೆಯ ಹೊಸ ಬರಹಗಾರರ ಜೊತೆಗೆ ನಾಡಿನ ಮುಖ್ಯ ಮನಸ್ಸುಗಳಾದ ಟಿ.ಪಿ.ಅಶೋಕ, ವಿಜಯಶಂಕರ, ಕೆ.ವಿ.ಅಕ್ಷರ ಮತ್ತು ಸು.ರಂ.ಎಕ್ಕುಂಡಿ ಇವರ ಪ್ರತ್ಯಕ್ಷ ಒಡನಾಟ ಸಿಕ್ಕಿತು. ಅಲ್ಲಿ ಉಸ್ತುವಾರಿ ನಿರ್ದೇಶಕ ಮತ್ತು ಕಾಲಾಳು ಎರಡು ಒಂದೇ ಆದ ನೀಳಕಾಯದ ವ್ಯಕ್ತಿ ಒಬ್ಬರು ಹುರುಪು ಹಂಚುತ್ತ ಓಡಾಡಿಕೊಂಡಿದ್ದರು. ಅವರೇ ಬೊಮ್ಮನಹಳ್ಳಿಯ ಜಿ.ಟಿ.ಭಟ್, ಗಣಿತ ಮತ್ತು ವಿಜ್ಞಾನದ ಮಾಸ್ತರರಾದ ಅವರು ಕನ್ನಡ, ನಾಟಕ, ಯಕ್ಷಗಾನ, ಆಧುನಿಕ ರಂಗಭೂಮಿ, ಸಂಗೀತ ಈ ಎಲ್ಲ ವಿಷಯಗಳಲ್ಲಿ 'ಗತಿ' ಹೊಂದಿದವರಾಗಿದ್ದರು. ಆದಾಗಲೇ ನೀನಾಸಂನ 'ಆಷಾಢದ ಒಂದು ದಿನ'ದಲ್ಲಿ ಪಾತ್ರ ವಹಿಸಿದವರಾಗಿದ್ದರು. 'ನನ್ನ ತಂಗಿಗೊಂದು ಗಂಡು ಕೊಡಿ', 'ಜೋಕುಮಾರಸ್ವಾಮಿ', 'ಸಾಯೋ ಆಟ' ನಾಟಕಗಳನ್ನು ನಿರ್ದೇಶಕರಾಗಿ ಆಡಿಸಿದ್ದರು. ನೇಪಥ್ಯವೇ ರಂಗದ ಮೇಲೆ ಬಂದಂತೆ ಅವರ ನಿಲುವು ಕಾಣುತ್ತಿತ್ತು. ಚಂದ್ರಕಾಂತ ಪೋಕಳೆ, ಕಮಲಾಕರ ಕಡವೆ, ಜೈರಾಮ ಹೆಗಡೆ, ಶೈಲಜಾ ಗೋರನಮನೆ ರಮಾನಂದ ಬನಕ್ಕೆ, ನಾಸು ಭರತನಹಳ್ಳಿ, ವಿಡಂಬಾರಿ, ಸುಬ್ರಾಯ ಮತ್ತಿಹಳ್ಳಿ, ನನ್ನ ಕಾಲೇಜು ದಿನಗಳ ದೋಸ್ತ್ ಯಲ್ಲಾಪುರದ ಪ್ರಮೋದ ಹೆಗಡೆ ಹೀಗೆ ಸಾಹಿತ್ಯಕ ಸಾಂಸ್ಕೃತಿಕ ಚಡಪಡಿಕೆಯ ಒಂದು 'ಗೋಲೆ'ಯೇ ಅಲ್ಲಿತ್ತು. ಕಮಲಾಕರನಂತೂ ಪುಣೆಯಿಂದಲೋ ಮೈಸೂರಿನಿಂದಲೋ ಬಂದಿದ್ದ ದುಂಡಿ ಭಟ್ಟರನ್ನು ಅಲ್ಲೇ ಕಂಡೆ. ಆ ವರುಷದ ತಿರುಗಾಟದ ನಾಟಕಗಳ ಜೊತೆಗೆ, ಪಂಡಿತ್ ಭೀಮಸೇನ್ ಜೋಶಿ ಮತ್ತು ಪಂಡಿತ್ ಹಾಸಣಗಿ ಗಣಪತಿ ಭಟ್ಟರ ಸಂಗೀತ ಕಛೇರಿಯೂ ಇತ್ತು.

ಜಿ.ಟಿ.ಭಟ್ ಮತ್ತು ನನ್ನ ಸಂಬಂಧಿ ಪದ್ಮಾಕರ್ ಫಾಯದೆ ಕೇವಲ ಸಹೋದ್ಯೋಗಿ ಅಷ್ಟೇ ಅಲ್ಲ, ಆತ್ಮೀಯ ಮಿತ್ರರು ಎಂಬುದು ಗೊತ್ತಾಯಿತು. ಜಿ.ಟಿ. ಭಟ್ ಮತ್ತು ಚಿದಂಬರರಾವ್ ಜಂಬೆ ಅವರ ದೋಸ್ತಿ ಮತ್ತು ಅವರಿಬ್ಬರೂ ಕಾಡಿನ ಕತ್ತಲೆಯಲ್ಲಿದ್ದ ಸಿದ್ದಿ ಜನಾಂಗದ ಪ್ರತಿಭಾವಂತರನ್ನು ರಂಗಭೂಮಿಯ ಸ್ಪಾಟ್ ಲೈಟಿಗೆ ತಂದ ಮಹತ್ವದ ಸಂಗತಿಯೂ ತಿಳಿಯಿತು. ಭಟ್ಟರ ಆ ಸಪೂರ ನೀಳ ನಿಲುವಿನಲ್ಲಿ ಅದೆಂಥ ಚೈತನ್ಯ, ಯಾವುದೇ ವಿಷಯದ ಚರ್ಚೆ ನಡೆಯುತ್ತಿದ್ದರೂ ಪಕ್ಕದಲ್ಲಿ ಹಾಯುತ್ತಿದ್ದ ಜಿ.ಟಿ.ಭಟ್ಟರು ಒಂದು ನಿಮಿಷ ನಿಂತು, ಆಲಿಸಿ 'ಈಗ ಪುರುಸೊತ್ತಿಲ್ಲ. ಇಲ್ಲದಿದ್ದರೆ ನಿಮ್ಮ ಈ ಚರ್ಚೆಯಲ್ಲಿ ನಿಮಗಿಂತ ಚಲೋ ವಿಷಯ ಹೇಳಿದ್ದೆ' ಎನ್ನುವ ನಮುನೆಯ ಮುಖಭಾವ ಮಾಡಿ, ಕಣ್ಣು ಬೇಳೆ ಹಿಗ್ಗಿಸಿ ಮಾಯವಾಗುತ್ತಿದ್ದರು. ಕಷಾಯದ ಲೋಟ ಹಂಚುವುದರಿಂದ ಹಿಡಿದು ಕೈ ಮೇಲೆ ಮಾಡಿ ಚಪ್ಪಾಳೆ ಹೊಡೆಯುವ ತನಕದ ವಿವಿಧ ಚಟುವಟಿಕೆಗಳಲ್ಲಿ ಪಾಲ್ಗೊಂಡ ಎಳೆಯರಲ್ಲಿ ಜಿ.ಟಿ.ಭಟ್ಟರ ಚುರುಕಾದ ಮಕ್ಕಳೂ ಇದ್ದರು. ಆ ವಾತಾವರಣ ಬೊಮ್ಮನಹಳ್ಳಿಯ ಕುಟುಂಬದ ವಿಸ್ತರಣೆಯಂತೆಯೇ ಭಾಸವಾಗುತ್ತಿತ್ತು.

ಸಾಹಿತ್ಯ, ಕಾವ್ಯ, ಸಂಗೀತ, ನಾಟಕಗಳ ಸಂಯುಕ್ತ ನಶೆಯ ಈ ಆಪ್ತ ನಾಲ್ಕೈದು ದಿನಗಳ ಸಹಯೋಗದ ಅವಿಸ್ಮರಣೀಯ ಭಾಗವೆಂದರೆ, ಒಂದು ರಾತ್ರಿಯ ಸಂಗೀತ ಬೈಠಕ್‌ನ ನಂತರ ನಡುರಾತ್ರಿಯಲ್ಲಿ ನಾವು ಕೆಲವು




ಜಿ.ಟಿ.ಭಟ್

ಉಮೇದಿಯವರು ಜಿ.ಟಿ.ಭಟ್ಟರ ಆತ್ಮೀಯ ಆಹ್ವಾನದ ಮೇರೆಗೆ ಮಲಗಲು ಅವರ ಮನೆಗೆ ಬೆಳದಿಂಗಳಲ್ಲಿ ಆ ಮಣ್ಣಿನ ದಾರಿಯಲ್ಲಿ ನಡೆದುಕೊಂಡು ಹೋಗಿದ್ದು, ಕಾಡಿನ ರಸ್ತೆಯುದ್ದಕ್ಕೂ ಹರಟೆ, ನಗೆ ಚಾಟಿಕೆ. ಅಕ್ಷರಶಃ ಕಾಡುಹರಟೆ. ನಡುನಡುವೆ ಹಠಾತ್ ಕಾಡಿನ ಮೌನ. 'ಇನ್ನೇನು ಬಂತ್ರಾ' ಎಂಬ ಆಶ್ವಾಸನೆ. ಮನೆಗೆ ಹೋದ ತಕ್ಷಣ ಎಲ್ಲರೂ ಕೈಕಾಲು ತೊಳೆದುಕೊಂಡು ಅವರ ಅಟ್ಟಕ್ಕೆ ಹೋದೆವು. ಮಲೆನಾಡಿನ ಮದುವೆ ಮನೆಯಲ್ಲಿ ಬೀಗರಿಗೆಂದು ವ್ಯವಸ್ಥೆ ಮಾಡಿದಂತೆ ಸಾಲಾಗಿ 50 ಹಾಸಿಗಳನ್ನು ಕಂಬಳಿ ದಿಂಬುಗಳೊಂದಿಗೆ ಹಾಸಲಾಗಿತ್ತು.

ಅಲ್ಲೂ ನಮ್ಮ ಕಾಡುಹರಟೆ ಮುಂದುವರೆಯಿತು. ಅಲ್ಲೊಂದು ಹಾರ್ಮೋನಿಯಂ(ಪಿಯಾನ್) ಪೆಟ್ಟಿಗೆ ಇತ್ತು. ಅದನ್ನೂ ಜಿ.ಟಿ.ಭಟ್ರೆ ನುಡಿಸಿದರು. ಜಿ.ಟಿ.ಭಟ್ಟರ ಪತ್ನಿ ಪಾರ್ವತಕ್ಕನೂ ಹುರುಪಿನಿಂದ ಹಾಡಿದರು. ರಂಗಗೀತೆ, ಗಝಲ್‌ಗಳು ಎಲ್ಲರಿಂದ ಹೊಮ್ಮಿದವು. ನಂತರ ಜಿ.ಟಿ.ಭಟ್ರೆ "ನಾಳೆ ಬೇಗ ಏಳುದದೆ ಮಲಗಿ ಮಲಗಿ" ಎಂದು ಹೇಳಿದರು. ಮಲಗಿದ ನಂತರವೂ ಕತ್ತಲಲ್ಲೇ ಹರಟೆ ಮುಂದುವರೆಯಿತು. ಹಿಂದಿನ ದಿನ ನೋಡಿದ್ದ ಬಿ.ವಿ.ಕಾರಂತರ ನಿರ್ದೇಶನದ ತಿರುಗಾಟದ ನಾಟಕ ಪುತಿನ ಅವರ 'ಗೋಕುಲ ನಿರ್ಗಮನ'ದ ಬಗ್ಗೆ ಮಾತು ಬಂತು. ಅದರಲ್ಲಿ ಪೂರ್ತಿ ಕತ್ತಲಾವರಿಸಿದ ಒಂದು ದೃಶ್ಯದಲ್ಲಿ ಗೋಪಿಕೆಯರು ಊದಿನಕಡ್ಡಿಗಳನ್ನು ಕೈಲಿ ಹಿಡಿದು ಚಕ್ರಾಕಾರವಾಗಿ ತಿರುಗಿಸುತ್ತಾ ಕತ್ತಲಲ್ಲಿ ನಾನಾ ವಿನ್ಯಾಸಗಳನ್ನು ಮೂಡಿಸಿದ್ದರು. ನನಗೇಕೋ ಅದು ನಾಟಕದ ರಂಗರೂಪದ ಒಕ್ಕಣೆಗೆ ಹೊಂದದ 'ಗಿಮಿಕ್'ನಂತೆ ಅನಿಸಿತ್ತು. ಅಳುಕಿನಿಂದಲೇ ಅದನ್ನು ಹೇಳಿದೆ. ಆಗ "ಕುರ್ತಕೋಟಿಯವರ ಪ್ರಕಾರ ಬಿ.ವಿ. ಕಾರಂತರಿಗೆ ಕತ್ತಲನ್ನು ತೋರಿಸುವುದಿತ್ತು. ಕತ್ತಲಲ್ಲಿ ಕತ್ತಲು ಕಾಣುವುದಿಲ್ಲ. ಬೆಳಕಲ್ಲಿ ಕತ್ತಲು ಇರುವುದಿಲ್ಲ. ಹೀಗಾಗಿ ಕಿಡಿ ರೇಖೆಗಳ ಮೂಲಕ ಕತ್ತಲು ಸ್ಫುಟವಾಗಿ ತೋರುತ್ತದೆ" ಎಂದು ಟಿ.ಪಿ.ಅಶೋಕ ಹೇಳಿದ್ದು ಅಷ್ಟೇ ಉಜ್ವಲವಾಗಿ ಮನಸ್ಸಲ್ಲಿ ಉಳಿದಿದೆ.

ಪೂರ್ವಾರ್ಧದ ಎಳೆಯ ದಿನಗಳ ಮುಗ್ಧ ಅಮಾಯಕ ಮಂಚಿಕೇರಿ ಮತ್ತು ಕಲೆ, ಸಾಹಿತ್ಯ, ಸಂಗೀತ, ಯಕ್ಷಗಾನಗಳ ಕಿಟಕಿಗಳ ಮೂಲಕ ಹೊಸ ವ್ಯಕ್ತಿತ್ವ ಪಡೆದ 25 ವರ್ಷಗಳ ನಂತರದ ಮಂಚಿಕೇರಿ -ಇವೆರಡೂ ನನ್ನ ಸಂವೇದನೆಯನ್ನು ಹಿಗ್ಗಿಸಿವೆ. ಪಥ್ಯ ಮತ್ತು ಪಥ್ಯೇತರಗಳ ಹದವಾದ ಎರಕದಂತಿರುವ ಜಿ.ಟಿ.ಭಟ್ಟರ ಜೀವನ ಪ್ರೇಮ ಮತ್ತು ಸಮಾಜಶೀಲತೆ ಈ ಆವರಣವನ್ನು ಪೋಷಿಸುತ್ತ ಬಂದಿದೆ. ಸಿದ್ದಿ ಪ್ರತಿಭೆಗಳನ್ನು ರಂಗಭೂಮಿಗೆ ತಂದಷ್ಟೇ ಅವರ ಇನ್ನೊಂದು ಮಹತ್ವದ ಪ್ರಯತ್ನ ಚತುರ್-ಚತುರೆಯರಾದ ತಮ್ಮ ಮಕ್ಕಳನ್ನೇ ತರಬೇತುಗೊಳಿಸಿ ಮಹಿಳಾ ಯಕ್ಷಗಾನವನ್ನು ಆ ಕಾಲದಲ್ಲಿ ರೂಪಿಸಿದ್ದು, ಹಾಲಿನ ಡೈರಿ ರೂಪುಗೊಳ್ಳಲು ಸಹ ಅವರು ಹೆಣಗಿದ್ದಾರೆ. ಶಿಕ್ಷಕನೊಬ್ಬ ಶಾಲೆಯ ಗೋಡೆಗಳಾಚೆಯೂ ಹೀಗೆ ಸಮಾಜಕ್ಕೆ, ಊರಿಗೆ ಸಲ್ಲುವುದೇ ನಿಜವಾದ ಅಧ್ಯಾತ್ಮ.



ಝರಿ ಜಿನುಗಿ ಕಾಮಳ್ಳಿಗಳು ಹಾಡಿದಾಗ...

10ನೇ ಪುಟದಿಂದ...

ಪೈರುಗಳಿಲ್ಲದ ಭತ್ತದ ಗದ್ದೆಗಳಲ್ಲಿ ಗೀಜುಗಗಳ ಸದ್ದಿರಲಿಲ್ಲ. ಗಾಳಿಯಲ್ಲಿ ಬಣ್ಣ ಚೆಲ್ಲಿ ಮಾಯವಾಗುವ ಮುನಿಯ ಹಕ್ಕಿಗಳೂ ಇರಲಿಲ್ಲ. ಗದ್ದೆಗಳಲ್ಲಿ ದಟ್ಟವಾಗಿ ಬೆಳೆದ ಹುಲ್ಲು ಆಳ್ವಿಕೆ ನಡೆಸುತ್ತಿತ್ತು. ಹುಲ್ಲಿನೊಳಗಿನಿಂದ ಲಾರ್ಕ್ ಹಕ್ಕಿಗಳು ಮುಗಿಲಿಗೆ ಜಿಗಿದು ಮತ್ತೆ ಹುಲ್ಲಿನಲ್ಲಿ ಅಂತರ್ಧಾನವಾಗುತ್ತಿದ್ದವು. ನಡುನಡುವೆ ಅಲ್ಲೊಂದು, ಇಲ್ಲೊಂದು ನೇರಳೆ ಮರಗಳು, ಈಚಲು ಗಿಡಗಳು ತಲೆಎತ್ತಿದ್ದವು. ಬಹುಶಃ ಅವು ಪುನಗುಬೆಕ್ಕು ಅಥವಾ ಕಾಮಳ್ಳಿ ಇಲ್ಲವೆ ಹಾರ್ನ್‌ಬಿಲ್ ಹಕ್ಕಿಗಳು ಬಿತ್ತಿದ ಬೀಜಗಳಿರಬಹುದು.

ಹುಲ್ಲುಗಾವಲಾದ ಗದ್ದೆಗಳ ಅಂಚಿನಲ್ಲಿ ನೂರಾರು ಸಾಂಬಾರ್ ಜಿಂಕೆಗಳು ನಿರಾತಂಕವಾಗಿದ್ದವು. ಭಯವಿಲ್ಲದೆ ಕಾಟಿಗಳು ನಮ್ಮ ಹಾದಿಗೆ ಅಡ್ಡ ನಿಂತವು. ಕದಲಲು ನಿರಾಕರಿಸಿದವು.

ಬೇಸಿಗೆಯ ತಾಪಕ್ಕೆ ಇಡೀ ನಾಡೇ ನಲುಗಿ ಕುಡಿಯುವ ನೀರಿಗೆ ಹಾತೊರೆಯುತ್ತಿದ್ದ ಬಿರುಬೇಸಿಗೆಯಲ್ಲಿ ಭದ್ರೆಯ ಸೋಮವಾಹಿನಿ ನದಿ ತನ್ನ ಝರಿ ಪರಿವಾರಗಳೊಂದಿಗೆ ಮುಕ್ತವಾಗಿ ಹರಿಯುತ್ತಿದ್ದಳು. ಊರುಕೇರಿಗಳನ್ನೆಲ್ಲ ಹಿಂಡಿದ್ದ ಬಿಸಿಲಿನ ತಾಪ ಆ ಕಾಡಿಗೆ ನುಸುಳಲು ಅಂಜಿದಂತೆ ಕಂಡಿತ್ತು.

ಭದ್ರಾ ಅಡವಿಯೊಳಗಿದ್ದ ಹದಿನಾರು ಹಳ್ಳಿಗಳ ಸ್ಥಳಾಂತರ ಯೋಜನೆಗೆ ಈಗ ಇಪ್ಪತ್ತೈದು ವರ್ಷ. ಮೊದಲೇ ಹೇಳಿದಂತೆ ನಮಗೆ ಸರ್ಕಾರಗಳು ನಿರ್ವಹಿಸುವ ಇಂತಹ ಯೋಜನೆಗಳಲ್ಲಿ ಸ್ವಲ್ಪವೂ ಭರವಸೆ ಇರಲಿಲ್ಲ. ಏಕೆಂದರೆ ವಿಶ್ವದೆಲ್ಲೆಡೆ ಇಂತಹ ಯೋಜನೆಗಳು ದಯನೀಯವಾಗಿ ಸೋತಿವೆ. ಗಂಭೀರ ಅನಾಹುತಗಳನ್ನು ಸೃಷ್ಟಿಸಿವೆ. ಕೆಲವೆಡೆ ಜನರು ಬೀದಿ ಪಾಲಾಗಿದ್ದಾರೆ. ಭಿಕ್ಷೆಯನ್ನು ವೃತ್ತಿ ಮಾಡಿಕೊಂಡಿದ್ದಾರೆ. ನೋವು ಮರೆಯಲು ಮದ್ಯಕ್ಕೆ ಶರಣಾಗಿ ಸಮಾಜಕ್ಕೆ ಹೊರೆಯಾದ ಉದಾಹರಣೆಗಳು ಎಲ್ಲೆಡೆ ಸಿಗುತ್ತವೆ. ಕೆಲವೆಡೆ ಸ್ಥಳಾಂತರದಿಂದ ತೆರವಾದ ಕಾಡು ಕಾರ್ಪೋರೇಟ್ ಮಾಲೀಕರ ಪಾಲಾದ ನಿದರ್ಶನಗಳಿಗೇನು ಕೊರತೆ ಇಲ್ಲ. ಇವು ನಮ್ಮ ದೇಶದಲ್ಲೂ ಜರುಗಿವೆ.

ಆದರೆ ಭದ್ರೆಯ ವಿಷಯದಲ್ಲಿ ಹಾಗಾಗಲಿಲ್ಲ. ಊರು ತೊರೆದ ಜನರ ಬದುಕು ಭರವಸೆ ಕಂಡಿದೆ. ಸೊರಗಿದ ಕಾಡು ಚಿಗುರಿದೆ. ಹಕ್ಕಿಗಳು ಹಾಡಿವೆ. ಝರಿಗಳು ತೊರೆಗಳಾಗಿ ಹರಿದಿವೆ.

ಮುನ್ನೋಟ 19-05-2024 ರಿಂದ 25-05-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಆದಾಯವು ಉತ್ತಮವಾಗಿರುತ್ತದೆ. ವಾಗ್ಮಿಗಳಿಗೆ ಉತ್ತಮ ವೇದಿಕೆ ದೊರೆಯುತ್ತದೆ. ಕೆಲಸಕಾರ್ಯಗಳಲ್ಲಿ ಬಹಳ ಚುರುಕುತನ ತೋರುವಿರಿ. ಭೂಮಿಯನ್ನು ಹೊಂದುವ ಯೋಗವಿದೆ. ಆಡಳಿತಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಅನುಕೂಲವಿರುತ್ತದೆ. ಶೀತ ಸಂಬಂಧಿ ವ್ಯಾಧಿಗಳು ಕೆಲವರನ್ನು ಕಾಡಬಹುದು. ಸಂಗಾತಿ ಆದಾಯದಲ್ಲಿ ಏರಿಕೆಯನ್ನು ಕಾಣಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ವ್ಯಕ್ತಿ ಗೌರವ ಹೆಚ್ಚಾಗಿರುತ್ತದೆ. ಜಾಣ್ಮೆಯಿಂದ ಮಾತನಾಡುವುದನ್ನು ಅಳವಡಿಸಿಕೊಳ್ಳಿರಿ. ಕೆಲಸ ಕಾರ್ಯಗಳನ್ನು ಶಿಸ್ತುಬದ್ಧವಾಗಿ ಮಾಡಿ ಮುಗಿಸುವಿರಿ. ಮಕ್ಕಳಿಂದ ಸಹಕಾರ ದೊರೆಯುತ್ತದೆ. ಆಭರಣ ತಯಾರಕರಿಗೆ ಹಿನ್ನಡೆಯಾಗಬಹುದು. ಸಂಗಾತಿಯ ಖರ್ಚು ವೆಚ್ಚಗಳು ಏರಿಕೆಯಾಗುತ್ತವೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಬಹಳ ಬುದ್ಧಿವಂತಿಕೆ ನಿಮ್ಮಲ್ಲಿ ಇರುತ್ತದೆ. ಆದಾಯವು ನಿರೀಕ್ಷೆಯ ಮಟ್ಟಕ್ಕಿರುತ್ತದೆ. ಆಸ್ತಿಕೊಳ್ಳುವ ವಿಚಾರದಲ್ಲಿ ಸ್ವಲ್ಪ ಮುನ್ನಡೆ ಸಾಧಿಸಬಹುದು. ಮಕ್ಕಳಿಗಾಗಿ ಹಣ ಖರ್ಚಾಗುವ ಸಾಧ್ಯತೆಗಳಿವೆ. ಕೆಲವರು ಮೂಳೆ ತೊಂದರೆಗಳಿಂದ ಶಸ್ತ್ರಚಿಕಿತ್ಸೆಗಳಾಗುವ ಸಾಧ್ಯತೆಗಳಿವೆ. ಸಂಗಾತಿ ಕಡೆಯ ಹಿರಿಯರಿಗಾಗಿ ಹಣ ಖರ್ಚು ಮಾಡಬೇಕಾದ ಸಾಧ್ಯತೆಗಳಿವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಕೆಲಸ ಕಾರ್ಯಗಳಲ್ಲಿ ಚುರುಕುತನ ತೋರುವಿರಿ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುವಷ್ಟಿರುತ್ತದೆ. ತಾಯಿಯಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಸಾಕಷ್ಟು ಸಹಕಾರ ದೊರೆಯುತ್ತದೆ. ಆಸ್ತಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಸಂಬಂಧಿಕರ ನೆರವಿನಿಂದ ವಿದೇಶಕ್ಕೆ ಹೋಗುವ ಸಾಧ್ಯತೆಗಳಿವೆ. ಹಿರಿಯ ಅಧಿಕಾರಿಗಳ ಮರ್ಜಿಯಿಂದ ವೃತ್ತಿಯಲ್ಲಿ ಸ್ಥಾನ ಬದಲಾವಣೆ ಆಗಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಆತ್ಮಭಿಮಾನ ಜಾಸ್ತಿ ಇರುತ್ತದೆ. ಆದಾಯದಷ್ಟೇ ಖರ್ಚು ಇರುತ್ತದೆ. ನಿಮ್ಮ ಹಿರಿಯರ ಶಿಫಾರಸ್ಸಿನಿಂದ ವೃತ್ತಿಯಲ್ಲಿ ಸ್ಥಾನ ಭದ್ರತೆ ಇರುತ್ತದೆ. ಆಸ್ತಿ ವ್ಯವಹಾರ ಮಾಡುವವರಿಗೆ ದಾಖಲೆಗಳ ಸಮಸ್ಯೆಗಳಾಗಬಹುದು. ಆಡಳಿತಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಬಹಳ ಅಭಿವೃದ್ಧಿ ಇರುತ್ತದೆ. ಸಂಗಾತಿಯ ಕೃಷಿ ವ್ಯವಹಾರಗಳಿಗೆ ನೀವು ಸಹಕಾರ ನೀಡುವಿರಿ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಮನಸ್ಸಿನಲ್ಲಿ ಸಂತೋಷವಿದ್ದರೂ ಒಳಗಡೆ ದುಗುಡವಿರುತ್ತದೆ. ಆದಾಯವು ನಿಮ್ಮ ಖರ್ಚನ್ನು ತೂಗುವಷ್ಟು ಇರುತ್ತದೆ. ಕೃಷಿಭೂಮಿಯನ್ನು ಪಡೆಯುವ ಯತ್ನದಲ್ಲಿ ಸ್ವಲ್ಪ ಗೊಂದಲಗಳಾಗಬಹುದು. ಸಂಗಾತಿಗೆ ಹಿರಿಯರ ಆಸ್ತಿಯಲ್ಲಿ ಪಾಲು ದೊರೆಯುತ್ತದೆ. ಮಕ್ಕಳಿಗಾಗಿ ಖರ್ಚು ಮಾಡಬೇಕಾದ ಅನಿವಾರ್ಯತೆ ಇರುತ್ತದೆ. ವಾತ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ನಿಮ್ಮ ನಡವಳಿಕೆಯಲ್ಲಿ ಬಹಳ ಜಾಣತನವಿರುತ್ತದೆ. ಮೇಧಾವಿಯಂತೆ ಮಾತನಾಡಿ ಜನರನ್ನು ಮರುಳು ಮಾಡುವಿರಿ. ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ನಿಮ್ಮ ಸ್ಥಿರಾಸ್ತಿಯನ್ನು ಉಳಿಸಿಕೊಳ್ಳಲು ಹೋರಾಟ ಮಾಡಬೇಕಾಗಬಹುದು. ಮಕ್ಕಳಿಂದ ಪ್ರತಿರೋಧದ ಮಾತುಗಳು ಬರುವ ಸಾಧ್ಯತೆ ಇದೆ. ಹರಿತವಾದ ಆಯುಧಗಳನ್ನು ಉಪಯೋಗಿಸುವಾಗ ಸಾಕಷ್ಟು ಎಚ್ಚರವಿರಲಿ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಆದಾಯವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ಬಹಳ ಶ್ರಮಪಟ್ಟು ಕೆಲಸ ಮಾಡುವಿರಿ. ಕೃಷಿ ಕೆಲಸಗಳಲ್ಲಿ ಬಹಳ ಉತ್ಸಾಹ ತೋರುವಿರಿ. ಕೃಷಿಭೂಮಿಯನ್ನು ಖರೀದಿ ಮಾಡಲು ಉತ್ಸುಕತೆ ಇರುತ್ತದೆ. ವಿದೇಶಕ್ಕೆ ಹೋಗುವವರಿಗೆ ಸ್ವಲ್ಪ ತೊಡಕುಗಳು ಎದುರಾಗುತ್ತವೆ. ಚರ್ಮವ್ಯಾಧಿಗಳು ಕೆಲವರಿಗೆ ಕಾಣಿಸಬಹುದು. ಸಂಗಾತಿಯಿಂದ ಆರ್ಥಿಕವಾಗಿ, ಮಾನಸಿಕವಾಗಿ ಸಾಕಷ್ಟು ಸಹಾಯ ದೊರೆಯುತ್ತದೆ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಬಹಳ ಗೌರವಯುತವಾಗಿ ನಡೆದುಕೊಂಡು ಸಮಾಜದಿಂದಲೂ ಗೌರವ ಪಡೆಯುವಿರಿ. ಮಾತನಾಡುವಾಗ ಬಹಳ ಎಚ್ಚರಿಕೆ ಇರಲಿ. ಯಾವುದೇ ಕೆಲಸ ಮಾಡುವಾಗ ಯೋಜನಾಬದ್ಧವಾಗಿ ಮಾಡಿರಿ. ವಿದೇಶದಲ್ಲಿ ನೆಲೆಸಿರುವವರು ಸ್ಥಿರಾಸ್ತಿಗಳನ್ನು ಮಾಡಿಕೊಳ್ಳಬಹುದು. ಅಧ್ಯಯನಶೀಲರಿಗೆ ಬಹಳ ಪ್ರಾಮುಖ್ಯತೆ ದೊರೆಯುತ್ತದೆ. ಕಣ್ಣಿನ ತೊಂದರೆ ಅಥವಾ ವಾಯು ಪ್ರಕೋಪ ಕಾಣಿಸಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಒಂದು ರೀತಿ ಆಲಸೀತನ ಇರುತ್ತದೆ. ಆದಾಯವು ಮಂದಗತಿಯಲ್ಲಿರುತ್ತದೆ. ಭೂಮಿ ವ್ಯವಹಾರ ಮಾಡುವ ಮಧ್ಯವರ್ತಿಗಳಿಗೆ ಹೆಚ್ಚು ಆದಾಯವಿರುತ್ತದೆ. ಮಕ್ಕಳ ಏಳಿಗೆಯ ಬಗ್ಗೆ ಶುಭ ವಾರ್ತೆಗಳು ಕೇಳಿ ಬರುತ್ತವೆ. ಚರ್ಮರೋಗಗಳು ಕಡಿಮೆಯಾಗುವ ಹಂತಕ್ಕೆ ಬರುತ್ತವೆ. ಸಂಗಾತಿಯ ಕಡೆಯವರಿಂದ ನಿಮಗೆ ಸಾಕಷ್ಟು ಸಹಾಯ ಸಿಗುತ್ತದೆ. ಕೆಲವರಿಗೆ ಧರ್ಮಗುರುಗಳ ಭೇಟಿಯಾಗುವ ಯೋಗವಿದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಬುದ್ಧಿವಂತಿಕೆಯಿಂದ ಕೆಲಸ ಕಾರ್ಯ ಮಾಡುವುದು ಒಳ್ಳೆಯದು. ಸರ್ಕಾರಿ ಸಂಸ್ಥೆಗಳಿಗಾಗಿ ಭೂಮಿ ಕೊಡಿಸುವವರಿಗೆ ಆದಾಯ ಹೆಚ್ಚುತ್ತದೆ. ಮಕ್ಕಳಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಸಹಕಾರ ದೊರೆಯುತ್ತದೆ. ಶ್ವಾಸಕೋಶದ ತೊಂದರೆ ಇರುವವರು ಎಚ್ಚರ ವಹಿಸಿ. ಸಂಗಾತಿಯ ಸಹಕಾರದಿಂದ ಸರ್ಕಾರಿ ಗುತ್ತಿಗೆಗಳು ಸಿಗುತ್ತವೆ ಅಥವಾ ಆದಾಯ ಲಭಿಸುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ನಿಮ್ಮ ಯೋಚನಾ ಲಹರಿ ಬಹಳ ದ್ವಂದ್ವದಿಂದ ಕೂಡಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಹಿರಿಯ ಸಹೋದ್ಯೋಗಿಗಳ ಸಹಕಾರ ಸಿಗುತ್ತದೆ. ಮಧ್ಯವರ್ತಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚು ಬರುತ್ತದೆ. ನಿಮ್ಮ ನಡವಳಿಕೆ ನಿಮ್ಮ ಹಿರಿಯರಿಗೆ ಕೋಪ ತರಿಸಬಹುದು. ತಾಯಿಯ ಜೊತೆ ಕಾವೇರಿದ ಮಾತುಗಳಾಗುವ ಸಾಧ್ಯತೆಗಳಿವೆ.

ಪದಬಂಧ 2842



ಮೇಲಿನಿಂದ ಕೆಳಕ್ಕೆ
1.ಆದಿತ್ಯನಿಗೆ ಅಂಕಿತವಾದ ಸಪ್ತಾಹದ ಮೊದಲ ದಿನ 4
2.ಮಹಾಭಾರತದಲ್ಲಿ ಎರಡು ಹೋಳಾದ ರಾಜ ಸಂಧಿಸಲೇ ಇಲ್ಲ 4
3.ಕೊಡುಗೈಗೆ ಹೆಸರಾದ ಉತ್ತರಕರ್ನಾಟಕದ ತಂದೆ 3
5. ನಾಕೂ ಕಡೆ ಮುಖ ಮಾಡಿ ನೋಡುವ ಚಾಣಾಕ್ಷ ಬ್ರಹ್ಮ 5
7. ಶ್ರೇಷ್ಠವಾದ ಬೆಳಕಿನಲ್ಲಿ ಶೂನ್ಯವಿದೆ 4
9. ಪರಿಸ್ಥಿತಿ ತೀರಾ ವಿಷಮಾವಸ್ಥೆ ಮುಟ್ಟಿದೆ 3
10. ಸಾಧಾರಣ ನಮ್ಮ ಮಂದಿಗೆ ವಿಶೇಷವೆನಿಸುವ ಪರ ರಾಷ್ಟ್ರ 3
11.ಕಾಳಸರ್ಪ ಪಡೆದ ಕನ್ನಡದ ಹೆಸರು 4
12. ಕಾಡುಮನುಷ್ಯನ ಅಪರಾವತಾರ 5
14. ಇತರರನ್ನು ಮೋಡಿ ಮಾಡುವ ತಂತ್ರ 3
16. ಶಿಲೆಯಿಂದ ಅಥವಾ ಉಪ್ಪಿನ ಹರಳಿನಿಂದ ದೃಷ್ಟಿ ನಿವಾಳಿಸುವ ಬೆಳಗು 4
17. ಹಣದೊಡತಿಯ ಗಂಡ 4
19. ಉಂಟಾಗದೇ ಇದ್ದದ್ದು ಇಹಲೋಕದ ಮನೆಯನ್ನು ಮುರಿದಿದೆ 3

ಎಡದಿಂದ ಬಲಕ್ಕೆ
1. ಹೊರೆ ಹೊತ್ತಿರುವ ಗೋತ್ರೋದ್ಭವ ಋಷಿ 4
4. ರಾಜೀ ಮಾಡುವ ಕಮಲದ ಕಣ್ಣಿನವ 6
6. ಹರಕೆ ಹೊತ್ತಾಗ ಬೆಳಗುವ ಆಜ್ಯ ಜ್ಯೋತಿ 4
8. ದ್ರವದಿಂದ ಬಂದ ಪರಿಮಳವೇ ಇದು 4
10. ವಿಶೇಷವಾದ ಕ್ರಮವನ್ನು ಅನುಸರಿಸುವ ಪರಿ 3
11. ಮುಂಜಾವಿನಲ್ಲಿ ಹಕ್ಕಿಗಳ ಚಿಲಿಪಿಲಿ, ನದಿ ಹರಿವ ನಿನಾದ ಕಿವಿಗೆ ಇಂಪು 4
13. ಹೊಸದಾಗಿ ಅನುಷ್ಠಾನಕ್ಕೆ ಬಂದ ಕಟ್ಟಳೆ ನಿಯಮ 4
15. ಹಿಂದುಮುಂದಾದ ಭವಿಷ್ಯ ನುಡಿ 3
16. ಕೆಟ್ಟಕಾಲಕ್ಕೆ ಬಳಕೆಯಲ್ಲಿರುವ ಯುಗಪುರುಷನ ಸಮಯ 4
18. ಆನೆಯ ಮುಖ ಪಡೆದ ಈಶಪುತ್ರ 4
20. ಸಂಸಾರದ ವ್ಯಾಧಿಯನ್ನು ನಿರ್ಮೂಲನ ಮಾಡುವವ 6
21. ಸುತ್ತಿ ಬರುವ ಏಳು ಬೆಟ್ಟದೊಡೆಯನ ಊರು 4

ಪದಬಂಧ ಉತ್ತರ -2841

ಮೇಲಿಂದ ಕೆಳಕ್ಕೆ
1.ಕಾಕತಾಳೀಯ 2.ನಿರ್ಮಲಾನಂದ 3.ಬಹುಮತ 4.ಗದರಿಸು 7.ವಯವಸಾ 9.ನಂದಾದೀಪ 10.ನದಿ 12.ನಭ 14.ವರಗಮನ 15.ರತಿಮದನ 16.ಒಳಗುದಿ 17.ರಸಜ್ಞಾನ

ಎಡದಿಂದ ಬಲಕ್ಕೆ
1. ಕಾಲಜ್ಞಾನಿ 3.ಬಲಪ್ರಯೋಗ 5.ಲಾಜಾಹೋಮ 6.ತಡವರಿಸು 8.ಯದುನಂದನ 11.ದಿವಾನ 13.ಭವಸಾಗರ 16.ಒಳಪದರ 18.ಸತ್ಯಯುಗ 19.ದಿನವೇತನ 20.ನಮ್ಮಜನ

ಜನಮುಖಿ ಸಂಶೋಧಕ ಪಾಲ್ತಾಡಿ

ನರೇಂದ್ರ ರೈ ದೇರ್ಲ

ಪಾಲ್ತಾಡಿ ರಾಮಕೃಷ್ಣ ಆಚಾರ್ ಜೀವನಪೂರ್ತಿ ತಮ್ಮ ಸುತ್ತು ಬದುಕು ಮತ್ತು ಜಗತ್ತನ್ನು ಕುರಿತು ಆಲೋಚಿಸಿದ್ದು ಮನುಷ್ಯತ್ವದ ನೆಲೆಯಲ್ಲಿ. ಈ ಕಾರಣಕ್ಕೇ ಅವರನ್ನು ವಿಶ್ವವಿದ್ಯಾನಿಲಯದ ಸಭೆಯಲ್ಲಿ, ಅಕಾಡೆಮಿಯ ಚಾವಡಿಯಲ್ಲಿ, ಶಾಲಾ–ಕಾಲೇಜಿನ ತರಗತಿಯಲ್ಲಿ, ದೈವದ ಮನೆಯ ಅಂಗಳದಲ್ಲಿ ಒಬ್ಬ ಸಂಶೋಧಕ, ಪ್ರಾಧ್ಯಾಪಕ, ಪ್ರಾಚಾರ್ಯ, ಅಕಾಡೆಮಿಯ ಅಧ್ಯಕ್ಷ ಎಂದು ಕಂಡವರಿಗಿಂತ ಸರಳವಾಗಿ 'ಪಾಲ್ತಾಡಿ ಮೇಷ್ಟ್ರ' ಎಂದು ಭಾವಿಸಿದವರೇ ಹೆಚ್ಚು. ಒಂದು ಇಡೀ ಊರು ಕರೆಯುವ 'ಎಡ್ಡೆ ಮಾಸ್ತ್ರ' (ಒಳ್ಳೆಯ ಮೇಷ್ಟ್ರು) ಎಷ್ಟೋ ಬಾರಿ ರಾಷ್ಟ್ರಪ್ರಶಸ್ತಿಗಿಂತ ದೊಡ್ಡದಾಗುವುದು ಇದೇ ಮಾನವೀಯ ಕಾರಣಕ್ಕೆ.

> ಊರು ಕಟ್ಟುವ ಶಿಕ್ಷಕರು ಮಾತ್ರ ಕೇವಲ ಎರಡು ತಲೆಮಾರಲ್ಲ, ಇಡೀ ಗ್ರಾಮವನ್ನು ನಿರಂತರವಾಗಿ ತಿದ್ದುತ್ತಾರೆ ಎಂಬುದಕ್ಕೆ ಸಾಕ್ಷಿಯಂತಿದ್ದರು ಇತ್ತೀಚೆಗೆ ನಿಧನರಾದ ಪಾಲ್ತಾಡಿ ಮೇಷ್ಟ್ರು...

ಸಾಮಾನ್ಯವಾಗಿ 30-40 ವರ್ಷಗಳ ಅವಧಿಯಲ್ಲಿ ಗುರುವೊಬ್ಬ ಶಾಲೆಯೊಳಗಡೆ ಅಪ್ಪ ಮತ್ತು ಮಗನನ್ನು ತಿದ್ದುವುದು ಇದ್ದೇ ಇದೆ. ಆದರೆ ಊರು ಕಟ್ಟುವ ಶಿಕ್ಷಕರು ಮಾತ್ರ ಕೇವಲ ಎರಡು ತಲೆಮಾರಲ್ಲ, ಇಡೀ ಗ್ರಾಮವನ್ನು ನಿರಂತರವಾಗಿ ತಿದ್ದುತ್ತಾರೆ, ಆಕರ್ಷಿಸುತ್ತಾರೆ. ಹೀಗೆ ಎಲ್ಲರಿಗೂ ಬೇಕಾಗುವ ಮೇಷ್ಟ್ರ ಅಲ್ಲಿ ಬರೀ ಸಂಶೋಧಕನಾಗಿ ಮಾತ್ರ ಉಳಿಯಲಾರ. ಎಲ್ಲರೊಂದಿಗೆ ಒಡಗೂಡಿ ಸರಿಪಡಿಸುವ, ಪ್ರೀತಿಯ ಸಂಬಂಧ ಸಹವಾಸ ಸಾಮಾಜಿಕ ನ್ಯಾಯದ ಪಾಯದಲ್ಲಿ ಹಳ್ಳಿಗಳನ್ನು ಕಟ್ಟುತ್ತಾನೆ. ಬರವಣಿಗೆ ಭಾಷಣ ಸಂಶೋಧನೆಯನ್ನು ಪಕ್ಕಕ್ಕಿಟ್ಟು ನೋಡಿದಾಗಲೂ ಪಾಲ್ತಾಡಿ ರಾಮಕೃಷ್ಣ ಮೇಷ್ಟ್ರ ಬಹುಮಂದಿಗೆ ಇಷ್ಟವಾಗುವುದು ಈ ಮೇಲಿನ ಕಾರಣಕ್ಕೇ.

ಹಾಗೆ ನೋಡಿದರೆ ನನಗೆ ಪಾಲ್ತಾಡಿ ಮೇಷ್ಟ್ರ ನೇರ ಗುರುಗಳಲ್ಲ. ಲೋಕ ಶಿಕ್ಷಣದ ಗ್ರಹಿಕೆಯಲ್ಲಿ ಅರಿವನ್ನು ಬದುಕುವ ಪರೀಕ್ಷೆಗೆ ಅಂಟಿಸುವ ಕ್ರಮದಲ್ಲಿ ನನ್ನ ಮತ್ತು ಅವರ ಸಂಬಂಧ ಗಾಢವಾದದ್ದು ಮತ್ತು ನಿರಂತರವಾದದ್ದು. ಪುಟ್ಟ ಹಳ್ಳಿಯೊಂದರಿಂದ ಹುಟ್ಟಿಬಂದು ತಮ್ಮ ವಲಯವನ್ನು ವಿಸ್ತರಿಸುತ್ತಲೇ ಹುಟ್ಟಿದೂರಿಗೂ ಹೆಸರು ದಕ್ಕಿಸಿದವರು. ಪ್ರಾಥಮಿಕ ಶಾಲಾ ಶಿಕ್ಷಕನಾಗಿ ಪದವಿಪೂರ್ವ ಕಾಲೇಜಿಗೆ ಏರಿ ಪ್ರಾಚಾರ್ಯರಾಗಿ ತುಳು ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್- ಅಧ್ಯಕ್ಷರಾಗಿ ಸಂಶೋಧನೆ ಮಾಡಿ ಡಾಕ್ಟರೇಟ್ ಪದವಿ ಪಡೆದವರು. ತುಳು-ಕನ್ನಡ ಸಾಹಿತ್ಯ, ಜಾನಪದ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದ ಪಾಲ್ತಾಡಿ ಅವರ ಜೀವನವೇ ಅಂತಹ ನೆಲೆಯಿಂದ ಎದ್ದು ಬರುವ ಅನಾಮಿಕ ವಿದ್ಯಾರ್ಥಿಗಳಿಗೆ ಇಂದಿಗೂ ಮಾದರಿ.

ಪಾಲ್ತಾಡಿಯವರು ತುಳುನಾಡಿನ ಬುಡಕಟ್ಟು ಜನಾಂಗ, ಆದಿವಾಸಿ ಅಥವಾ ದೈವ ನರ್ತಕರಂಥ ವೃತ್ತಿ ಬದುಕು ಮಾಡುವವರ ಜೊತೆಗೆ ನಿರಂತರ ಸಂಬಂಧ ಇಟ್ಟುಕೊಂಡವರು. ಅವರ ಹಾಡು ನೃತ್ಯ ಪಳಮೆ ನುಡಿಗಟ್ಟುಗಳನ್ನು ಅವರ ಮೂಲಕವೇ ಲೋಕಕ್ಕೇರಿಸಿದವರು. ಪ್ರದರ್ಶನ ಮತ್ತು ಪುಸ್ತಕ ಎರಡೂ ದಾರಿಯಲ್ಲೂ ಪಾಲ್ತಾಡಿ ಅಂಥ ಪರಿಧಿಯ ನಿಜ ಜನಪದರನ್ನು ಮುಖ್ಯವಾಹಿನಿಗೆ ತಂದವರು. ಪಾಲ್ತಾಡಿ ರಚಿಸಿದ ಜಾನಪದ ಕೃತಿಗಳು, ಸಂಗ್ರಹಿಸಿದ ಜನಪದ ಕಥೆಗಳು, ಆರಾಧನೆ ನಂಬಿಕೆ ವೈದ್ಯ ಪದ್ಧತಿ ಇತ್ಯಾದಿಗಳ ಕುರಿತು ಬರೆದ ಲೇಖನಗಳು, ಯೋಜಿಸಿದ ಕಮ್ಮಟಗಳು ಕಡಿಮೆಯಲ್ಲ. ಈ ಹಾದಿಯುದ್ದಕ್ಕೂ ಮೃದುನಗು, ವಿನಯ, ಕುತೂಹಲ, ಚಿಕಿತ್ಸಕ ದೃಷ್ಟಿ, ವಿದ್ಯಾರ್ಥಿ ಪ್ರೀತಿ, ಲೋಕ ಸಹವಾಸ ಪಾಲ್ತಾಡಿಯವರ ಹಿರಿಮೆ.

ಭಾಗಶಃ ನೆಲದವರ ಬಾಯಿ ಮಾತಾಗಿದ್ದ ತುಳುವನ್ನು ಶಾಲಾ ಪಠ್ಯ-ಶೈಕ್ಷಣಿಕ ಆವರಣಕ್ಕೇರಿಸಬೇಕೆನ್ನುವ, ಅದನ್ನು ಸಂವಿಧಾನದ ಎಂಟನೆಯ ಗುಂಪಿಗೆ ಸೇರಿಸಲೇಬೇಕೆನ್ನುವ ಪಾಲ್ತಾಡಿಯವರ ಹಟಕ್ಕೆ ಸ್ಥಿರ ಪಾಯ ಸಿಕ್ಕಿದ್ದು ತುಳು ಸಾಹಿತ್ಯ ಅಕಾಡೆಮಿಯ ಅವರ ಅಧ್ಯಕ್ಷ ಅವಧಿ.


ಪಾಲ್ತಾಡಿ ರಾಮಕೃಷ್ಣ ಆಚಾರ್

ನುಡಿ ನಮನ

ಈವರೆಗಿನ ಅಕಾಡೆಮಿಯ ಸ್ಥಾನಿಕ ಅಧಿಕಾರ ಪರಂಪರೆ ಮತ್ತು ತುಳುವರು ನೆನಪಿಡಲೇ ಬೇಕಾದ ಮಹತ್ವದ ಮೂರು-ನಾಲ್ಕು ಕಾರ್ಯಗಳನ್ನು ಅವರು ಸಾಧಿಸಿದ್ದರು. ಒಂದು- ತುಳು ಅಕಾಡೆಮಿಗೆ ಸ್ವತಃ ಕಚೇರಿ, ಸಭಾಭವನವಿರುವ ಸ್ವತಂತ್ರ ಕಟ್ಟಡ. ಎರಡು- ತುಳುವನ್ನು ವಿಶ್ವಕೇರಿಸುವ ವಿಶ್ವ ತುಳು ಸಮ್ಮೇಳನದ ಸಂಯೋಜನೆಯಲ್ಲಿ ಪಾಲುಗಾರಿಕೆ. ಮೂರು -ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಪಠ್ಯ ಅನುಷ್ಠಾನ. ನಾಲ್ಕನೆಯದು ಸಂವಿಧಾನದ ಎಂಟನೆಯ ಗುಂಪಿಗೆ ತುಳುವನ್ನು ಸೇರಿಸುವ ಗಂಭೀರ ಪ್ರಯತ್ನ. ಈ ನಾಲ್ಕರಲ್ಲಿ ಮೊದಲ ಮೂರರ ಅನುಷ್ಠಾನದಲ್ಲಿ ಪಾಲ್ತಾಡಿ ಪಾತ್ರ ಮಹತ್ವದ್ದು.

ಪಾಲ್ತಾಡಿಯವರು ತಮ್ಮ ಸಮಕಾಲೀನರು, ಹಿರಿಯರು ಬಹುಮುಖ್ಯವಾಗಿ ಬಿ.ಎ.ವಿವೇಕ ರೈ, ಪ್ರೊ.ಅಮೃತ ಸೋಮೇಶ್ವರ, ಚಿನ್ನಪ್ಪ ಗೌಡ, ಪುರುಷೋತ್ತಮ ಬಿಳಿಮಲೆ ಮುಂತಾದವರ ಪರಂಪರೆಯನ್ನು ಸಮರ್ಥವಾಗಿ ನಿಷ್ಠೆಯಿಂದ ಮುಂದುವರಿಸಿದವರು. ಹಾಗೆ ನೋಡಿದರೆ ಇತ್ತೀಚಿಗೆ ಅಗಲಿದ ಹಿರಿಯ ಲೇಖಕ ಕವಿ ಸಂಶೋಧಕ ಯಕ್ಷಗಾನ ಪ್ರಸಂಗಕರ್ತ ಪ್ರೊ.ಅಮೃತ ಸೋಮೇಶ್ವರ ಅವರೇ ಪಾಲ್ತಾಡಿಯವರ ನಿಜಗುರು. ಸುಮಾರು 60 ವರ್ಷಗಳ ಹಿಂದೆ ಪಾಲ್ತಾಡಿ ಮೇಷ್ಟ್ರಾಗಿದ್ದ ಕೆಯ್ಯೂರು ಶಾಲೆಗೆ ಚುನಾವಣಾಧಿಕಾರಿಯಾಗಿ ಬಂದ ಪುತ್ತೂರಿನ ವಿವೇಕಾನಂದ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ.ಅಮೃತ ಸೋಮೇಶ್ವರ, ಅಲ್ಲೇ ಶಿಕ್ಷಕರಾಗಿದ್ದ ರಾಮಕೃಷ್ಣ ಆಚಾರ್ ಅವರನ್ನು ಮಾತನಾಡಿಸಿದ್ದು; ಆ ಮೂಲಕ ಪಾಲ್ತಾಡಿ ಅವರು ಸಾಹಿತ್ಯದ ಆಸಕ್ತಿ ಬೆಳೆಸಿಕೊಂಡದ್ದು; ಮುಂದೆ ಅವರು ಸಾಂಸ್ಕೃತಿಕ ಶೈಕ್ಷಣಿಕ ಸಾಹಿತಿಕವಾಗಿ ಬಹಳಷ್ಟು ಸಾಧಿಸಿದ್ದು ಉಲ್ಲೇಖನಿಯ.

ನುಡಿ ನಡೆಯಲ್ಲಿ ಸರಳವಾಗಿ ಬಿಡುವ ಪಾಲ್ತಾಡಿ ಬಹಳಷ್ಟು ಸಂದರ್ಭದಲ್ಲಿ ಬುದ್ಧಿಜೀವಿಗಳ ಗುಂಪಿನಲ್ಲಿ ಕಳೆದುಹೋದಂತೆ ಇದ್ದವರು. ಆಚಾರ್ಯ ಎಂದಿಗೂ ಸಾಹಿತಿಕ ಪರಿಭಾಷೆಯಲ್ಲಿ ಮಾತನಾಡಿದವರಲ್ಲ. ವಿಷಯಗಳನ್ನು ಬೇರೆಯವರ ಗಮನಕ್ಕಿಂತ ಹೃದಯಕ್ಕೆ ತರಬೇಕೆಂದು ಬಯಸಿದವರು. ಅವರ ಮನಸ್ಸಿನಂತೆ ಮಾತು ಕೂಡ ಸರಳ. ಎಳೆ ಎಳೆಯಾಗಿ ಬರೆದವರು, ಮಾತನಾಡಿದವರು. ಕೆಲವೊಮ್ಮೆ ಮಾತನಾಡುವವರನ್ನು ಬರೆಯುವವರನ್ನೆಲ್ಲ ಹುಡುಕಿ ಹುಡುಕಿ ಎಳೆದು ವೇದಿಕೆ ಹತ್ತಿಸಿದವರು. ಪ್ರೊ. ಬಿ.ಎ. ವಿವೇಕ ರೈ ಅವರು ತುಳು ಅಕಾಡೆಮಿಗೆ ಅಧ್ಯಕ್ಷರಾಗಿದ್ದಾಗ ಪಾಲ್ತಾಡಿ ಅವರು ರಿಜಿಸ್ಟ್ರಾರ್ ಆಗಿ 'ರೈ- ಪಾಲ್ತಾಡಿ' ಜೋಡಿ ಮಾಡಿರುವ ಸಾಧನೆ ಇವತ್ತಿಗೂ ಮಾದರಿಯೇ. ಆಗ ಅಕಾಡೆಮಿಯು ಚಾವಡಿಯಿಂದ ಹೊರಗೆ ಬಂದು ಹಳ್ಳಿಹಳ್ಳಿಗಳಿಗೆ, ತುಳುವರು ಇರುವ ರಾಜ್ಯ-ದೇಶಗಳಿಗೆ ನುಗ್ಗಿದ್ದು ಆಗಲೇ. ಗುತ್ತು ಮನೆ ಅಂಗಳಕ್ಕೆ ಸೀಮಿತವಾಗಿದ್ದ ದೈವ ಸಂಸ್ಕೃತಿ ಕಲೆ ನೃತ್ಯಗಳನ್ನು ರಾಜ್ಯ, ರಾಷ್ಟ್ರಮಟ್ಟದ ವೇದಿಕೆಗೇರಿಸಿದ್ದು; ತುಳುನಾಡಿನ ಕೆಡ್ಡಸ ಆಟಿ ಬಿಸು ಉತ್ಸವಗಳನ್ನು ಶೈಕ್ಷಣಿಕ ಪರಿಸರದಲ್ಲಿ ಸಾರ್ವತ್ರಿಕಗೊಳಿಸಿದ್ದು-ಈ ವಿಷಯದಲ್ಲಿ ಪಾಲ್ತಾಡಿ ಅವರು ಹಿಡಿದ ದಾರಿ ಹಟ ಶಿಸ್ತು ಗಮನೀಯ.


ಬೈಲಹೊಂಗಲ ಸಮೀಪದ ಹೊಸೂರಿನಲ್ಲಿ ಸೆರೆ ಹಿಡಿದ ಮೊಸಳೆ (ಸಂಗ್ರಹ ಚಿತ್ರ)

ಮೊಸಳೆಗಳಿವೆ ಎಚ್ಚರಿಕೆ!

10ನೇ ಪುಟದಿಂದ...

'ನದಿ ದಡಗಳಲ್ಲಿರುವ ಕಟ್ಟಡಗಳಿಗೆ ಮೊಸಳೆಗಳು ನಿರಾಕ್ಷೇಪಣಾ ಪತ್ರ ಕೇಳಿದರೆ ಅರ್ಧದಷ್ಟು ಕಟ್ಟಡಗಳನ್ನು ಬೀಳಿಸಬೇಕಾಗುತ್ತದೆ. ಅಷ್ಟರಮಟ್ಟಿಗೆ ಮಾನವ ಅತಿಕ್ರಮಣ ಮಾಡಿಕೊಂಡಿದ್ದಾನೆ' ಎಂದೂ ಆತಂಕ ವ್ಯಕ್ತಪಡಿಸುತ್ತಾರೆ ಅರಣ್ಯಾಧಿಕಾರಿಗಳು.


ಗೋಕಾಕ ತಾಲ್ಲೂಕಿನ ಸಾವಳಗಿ ಗ್ರಾಮದಲ್ಲಿ ಸಿಕ್ಕ ಮೊಸಳೆ ಮರಿ ರಕ್ಷಿಸಿದ ಗ್ರಾಮಸ್ಥ (ಸಂಗ್ರಹ ಚಿತ್ರ)

'ವನ್ಯಮೃಗದ ಬದುಕಿನ ಮೇಲಿನ ಹಸ್ತಕ್ಷೇಪವೇ ಅವು ಹೊರಗೆ ಬರಲು ಕಾರಣ. ದಾಂಡೇಲಿ ಅರಣ್ಯ ಪ್ರದೇಶ ಇದಕ್ಕೆ ಸೂಕ್ತ ಉದಾಹರಣೆ. 2020ರವರೆಗೆ ಮೊಸಳೆಗಳು ಯಾರನ್ನೂ ಸಾಯಿಸಿದ ಉದಾಹರಣೆ ಇಲ್ಲ. ಈ ಎರಡು ದಶಕಗಳ ಅವಧಿಯಲ್ಲಿ ಪ್ರವಾಸೋದ್ಯಮದ ನೆಪದಲ್ಲಿ ಹೋಮ್ ಸ್ಟೇ, ಹೋಟೆಲ್, ಪ್ರವಾಸಿ ತಾಣಗಳ ನಿರ್ಮಾಣ ಮಾಡಲಾಯಿತು. ಜನಸಂದಣಿ ಹೆಚ್ಚಿತು. ಮೊಸಳೆಗಳ ಜೀವನಕ್ರಮದ ಮೇಲೆ ಪೆಟ್ಟು ಬಿತ್ತು. ಅವು ಹೊರಕ್ಕೆ ಬರಲಾರಂಭಿಸಿದವು. 2022ರಲ್ಲಿ ದಾಂಡೇಲಿ ಪ್ರದೇಶದಲ್ಲಿ ಐದು ಮಂದಿ ಮೊಸಳೆಗಳಿಗೆ ತುತ್ತಾಗಿದ್ದನ್ನು ಮರೆಯುವಂತಿಲ್ಲ' ಎಂದು ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ ಕುಲಕರ್ಣಿ ಹೇಳುತ್ತಾರೆ.

ನದಿಗಳ ನಿಜವಾದ ವಾರಸುದಾರರು ಜಲಚರಗಳು. ನದಿಗಳು ಇರುವುದು ಕೇವಲ ಮನುಷ್ಯರಿಗಾಗಿ ಅಲ್ಲ. ಇದನ್ನು ಅರಿತಾಗ ವನ್ಯಪ್ರಾಣಿ ಮತ್ತು ಮಾನವನ ನಡುವೆ ಸಹಬಾಳ್ವೆ ಸಾಧ್ಯವಾಗುತ್ತದೆ. ಇದನ್ನು ಅರ್ಥ ಮಾಡಿಕೊಳ್ಳಬೇಕು ಅಷ್ಟೆ.

ಭೂಮ್ತಾಯಿಗೆ ಮುಟ್ಟಿನ ರಜೆ

10ನೇ ಪುಟದಿಂದ...

ಅಡುಗೆ ಮನೆಯಲ್ಲಿರುವ ಅರೆಯುವ, ರುಬ್ಬುವ ಕಲ್ಲನ್ನು ಭೂದೇವಿಯ ಪ್ರತೀಕವಾಗಿ ಪೂಜಿಸುತ್ತಾರೆ. ಕಲ್ಲಿಗೆ ಅರಿಸಿನ-ಕುಂಕುಮ ಹಚ್ಚಿ ನೀರನ್ನೆರೆದು ಸ್ನಾನ ಮಾಡಿಸುತ್ತಾರೆ. ಆಯಾ ಋತುಕಾಲಕ್ಕೆ ತಕ್ಕದಾದ ಹಣ್ಣು–ತರಕಾರಿಯನ್ನು ನೈವೇದ್ಯವಾಗಿಟ್ಟು ಪೂಜಿಸುತ್ತಾರೆ. ಕೆಂಪುಬಣ್ಣದ ದಾಸವಾಳಗಳಿಂದ ಕಲ್ಲನ್ನು ಅಲಂಕರಿಸಲಾಗುತ್ತದೆ.

ಈ ಹಬ್ಬದ ಮತ್ತೊಂದು ವಿಶೇಷ ಉಯ್ಯಾಲೆ. ಮನೆ ಮುಂದೆ, ಉದ್ಯಾನಗಳಲ್ಲಿ ದೊಡ್ಡಮರಗಳಿಗೆ ವಿವಿಧ ಬಗೆಯ ಉಯ್ಯಾಲೆ ಕಟ್ಟಿ ಅದರಲ್ಲಿ ಕುಳಿತು ತೂಗುವುದು ಮುಖ್ಯ ಆಚರಣೆ.

ಪಾರ್ಕ್‌ನಲ್ಲಿ ಉಯ್ಯಾಲೆ ಸಿಂಗರಿಸುತ್ತಿದ್ದ ಸೀಮಾರಾಣಿ 'ನಮಗಿದು ದೊಡ್ಡಹಬ್ಬ. ಹೊಸಬಟ್ಟೆ ತೊಟ್ಟು, ಆಭರಣಗಳನ್ನು ಧರಿಸಿ, ಕೆಂಪಗಿನ ಅಲ್ತಾ ಬಣ್ಣವನ್ನು ಕಾಲುಗಳಿಗೆ ಹಚ್ಚಿ, ಕೂದಲನ್ನು ಬಾಚಿ ಹೂ ಮುಡಿದು ಅಲಂಕರಿಸಿಕೊಳ್ಳುತ್ತೇವೆ. ದೊಡ್ಡವರು ಬೆಳ್ಳಿಗೆಜ್ಜೆಯನ್ನು ಉಡುಗೊರೆಯಾಗಿ ಕೊಡುತ್ತಾರೆ. ಚೆಂದದ ಹುಡುಗಿಯರು ಉಯ್ಯಾಲೆಗಳಲ್ಲಿ ತೂಗುತ್ತಾ ಹಾಡುವುದೇ ಈ ಹಬ್ಬದ ಮುಖ್ಯ ಆಕರ್ಷಣೆ. ಹಬ್ಬದಲ್ಲಿ ರಜಾಗೀತೆಗಳನ್ನು ಹಾಡಲಾಗುತ್ತದೆ. ತವರು ಮನೆ-ಗಂಡನ ಮನೆಯಲ್ಲಿ ಹೇಗಿರಬೇಕು, ರೀತಿ-ನೀತಿ, ಬುದ್ಧಿಮಾತು–ಹೀಗೆ ರಜಾಗೀತೆಗಳು ಸಾಂಸಾರಿಕ ಜೀವನದ ಬಗ್ಗೆ ಹದಿಹರೆಯದ ಹುಡುಗಿಯರಿಗೆ ಪಾಠಗಳಿದ್ದಂತೆ. ಆದರೆ ಈಗಿನವರು ಅದನ್ನೆಲ್ಲಾ ಕೇಳುವುದಿಲ್ಲ..ಅಲಂಕಾರಕ್ಕಷ್ಟೇ ಸರಿ' ಎಂದು ನಕ್ಕರು.

ಹೀಗೇಕೆ?

ಭೂದೇವಿಯ ವಾರ್ಷಿಕ ಋತುಚಕ್ರವನ್ನು ಸಂಭ್ರಮಿಸಿದ್ದು ಸರಿ; ಆದರೆ ದೇವಿಯರಲ್ಲದ ಮಾಸಿಕ ಋತುಚಕ್ರ ಇರುವ ಹೆಣ್ಣಿನ ಪರಿಸ್ಥಿತಿ ಅಲ್ಲಿ ಹೇಗಿದೆ ಎಂದು ಗೆಳತಿ ಡಾ.ಅಲಕಾಳನ್ನು ಕೇಳಿದಾಗ 'ಮುಟ್ಟಾದ ಹೆಣ್ಣು ಮೂರುದಿನಗಳ ಕಾಲ ಪ್ರತ್ಯೇಕವಾಗಿ ಇರಬೇಕು, ದನಕರುಗಳನ್ನು ಮುಟ್ಟುವಂತಿಲ್ಲ, ಗಿಡಗಳಿಗೆ ನೀರೆರೆಯಬಾರದು ಎನ್ನುವ ಕಟ್ಟುಪಾಡುಗಳು ಇಂದಿಗೂ ಹಳ್ಳಿಗಳಲ್ಲಿ ಇವೆ. ಅದರೊಂದಿಗೆ ಆ ಸಂದರ್ಭದಲ್ಲಿ ವಹಿಸಬೇಕಾದ ಸ್ವಚ್ಛತಾಕ್ರಮಗಳ ಕುರಿತು ತಿಳಿವಳಿಕೆ ತೀರಾ ಕಡಿಮೆ. ಮುಟ್ಟಿನ ಬಗ್ಗೆ ಮುಕ್ತವಾಗಿ ಮಾತನಾಡುವುದೂ ನಿಷಿದ್ಧ. ವರ್ಷಕ್ಕೊಮ್ಮೆ ಭೂದೇವಿಯ ಮುಟ್ಟನ್ನು ಹಬ್ಬವನ್ನಾಗಿ ಆಚರಿಸಿ, ಸಂಭ್ರಮಿಸುವಾಗ ಆಕೆಯದ್ದೇ ಅಂಶವಾದ ಹೆಣ್ಣಿನ ಬಗ್ಗೆ ಈ ಧೋರಣೆ ನಿಜಕ್ಕೂ ಸರಿಯಲ್ಲ' ಎಂದು ಬೇಸರಿಸಿದರು.

> **ಪೋಡೊ ಪಿತಾ**
>
> ರಜಾಪರ್ಬದಲ್ಲಿ ಬೇಯಿಸಿದ ಹಾಗೂ ಪೌಷ್ಟಿಕಾಂಶ ಹೆಚ್ಚಿರುವ ಆಹಾರವನ್ನು ಸೇವಿಸುವುದು ರೂಢಿ. ಋತುಮತಿಯಾದಾಗ ನಡೆಯುವ ದೈಹಿಕ ಬದಲಾವಣೆಗೆ ತಕ್ಕಂತೆ, ಸದೃಢ ದೇಹಕ್ಕೆ ಪುಷ್ಟಿ ನೀಡುವ ಆಹಾರ ಸೇವನೆ ಇದರ ಹಿಂದಿನ ಆಶಯ. ಉದ್ದು, ತುಪ್ಪ, ಬೆಲ್ಲ ಪ್ರಮುಖವಾಗಿ ಬಳಕೆಯಾಗುತ್ತದೆ. ಈ ಹಬ್ಬದಲ್ಲಿ ಮಾಡುವ ವಿಶೇಷ ಖಾದ್ಯ ಪೊಡೋಪಿತಾ (ಪೋಡೋ-ಸುಟ್ಟಿದ್ದು, ಪಿತಾ – ದಪ್ಪ ರೊಟ್ಟಿ). ಅಕ್ಕಿ ಮತ್ತು ಉದ್ದಿನ ಬೇಳೆಯನ್ನು ನೆನೆಸಿಟ್ಟು, ನಂತರ ಅದನ್ನು ಗಟ್ಟಿ ಮಿಶ್ರಣವಾಗಿ ರುಬ್ಬಿಕೊಳ್ಳಲಾಗುತ್ತದೆ. ರಾತ್ರಿಯಿಡೀ ಅದನ್ನು ಹುದುಗು ಬರಿಸಿ, ನಂತರ ಪಾಕ ತರಿಸಿದ ಬೆಲ್ಲ, ತೆಂಗಿನಕಾಯಿ ಚೂರುಗಳನ್ನು ಸೇರಿಸಲಾಗುತ್ತದೆ. ನಂತರ ಬೆರೆಸುವ ಗೋಡಂಬಿ, ಏಲಕ್ಕಿ-ಕಾಳು ಮೆಣಸಿನ ಪುಡಿ, ದ್ರಾಕ್ಷಿ ಸ್ವಾದವನ್ನು ಹೆಚ್ಚಿಸುತ್ತದೆ. ತುಪ್ಪ ಸವರಿದ ಬಾಳೆಎಲೆಯಲ್ಲಿ ಈ ಮಿಶ್ರ ಣ ಸುರಿದು ಸುತ್ತಿ ಅದನ್ನು ಕೆಂಡದೊಲೆಯ ಮೇಲೆ ಬೇಯಿಸಿ ತುಪ್ಪದಲ್ಲಿ ಹುರಿಯಲಾಗುತ್ತದೆ. ಸಣ್ಣ ಉರಿಯಲ್ಲಿ ರಾತ್ರಿಯಿಡೀ ಹದವಾಗಿ ಬೆಂದು ಮೇಲೆ ಸುಟ್ಟ ಭಾಗ ಹೊಂದಿ ಒಳಗೆ ಸಿಹಿ ಹೂರಣ ಇರುವ ಸಾಂಪ್ರದಾಯಿಕ ಪೋಡೊಪಿತಾ ರುಚಿಕರ ಮತ್ತು ಪೌಷ್ಟಿಕ ಆಹಾರ. ಆದರೆ ಮಾಡಲು ಸಾಕಷ್ಟು ಸಮಯ, ಸಲಕರಣೆ ಮತ್ತು ಸಹನೆ ಬೇಕು. ಕಾಲ ಬದಲಾದರೂ ಮಿಕ್ಸಿ- ಕುಕ್ಕರ್ ಬಳಸಿ ಪ್ರತಿ ಮನೆಯಲ್ಲೂ ಪೊಡೋಪಿತಾ ಮಾಡುವುದು ಮುಂದುವರಿದಿದೆ. ಇದರಲ್ಲಿ ಬಿರಿ, ಲವಂಗ, ಗೋಕುಲ್, ಚುಟ್ಕಿ, ನಕ್ಷಿ, ತೇಜ್‌ಪಟ್ಟ ಎನ್ನುವ ಬೇರೆ ಬೇರೆ ವೈವಿಧ್ಯವಿದೆ.

ಹೆಣ್ತನ ಸಂಭ್ರಮಿಸುವ ರಜಾಪರಬಾ ಭೂದೇವಿ, ರೈತಾಪಿ ಜನ, ಮಳೆ–ಹೀಗೆ ನಿಸರ್ಗವನ್ನು ಪ್ರೀತಿ-ಭಕ್ತಿಯಿಂದ ಆರಾಧಿಸುವ ಹಬ್ಬ ನಿಜ; ಅದರೊಂದಿಗೆ ಮುಟ್ಟಿನ ಕುರಿತ ಮೂಢನಂಬಿಕೆಗಳನ್ನು ತೊಲಗಿಸಿ, ಸಹಜಕ್ರಿಯೆಯಾಗಿ ಅದನ್ನು ಪರಿಗಣಿಸುವ ಮನೋಭಾವ ಮೂಡಿಸಿದರೆ ನಿಜಕ್ಕೂ ಅರ್ಥಪೂರ್ಣವಾಗುತ್ತದೆ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ತರುಪಿಶಾಚಿ

'ಪ್ರೇತವೃಕ್ಷ' ಕವನದಲ್ಲಿ ಆ ಮರವನ್ನು 'ವಿರಕ್ತ ತರುಪಿಶಾಚಿ' ಎಂದು ಕರೆದಿದ್ದಾರೆ. ಆ 'ಪ್ರೇತವೃಕ್ಷ' ನಭಕ್ಕೆ ಮುಖಮಾಡಿ 'ಪ್ರೀತಿಯ ರಸಸುಖ'ವನ್ನು ಅನಂತಶಕ್ತನಲ್ಲಿ ಪ್ರಾರ್ಥಿಸುತ್ತಿರುವಂತೆ ಬಣ್ಣಿಸಿದ್ದಾರೆ.

'ಪ್ರೇತಹಸ್ತಗಳನು ಚಾಚಿ
ನಿನ್ನ ನಖ ಪ್ರಾರ್ಥನೆ,
ಓ ವಿರಕ್ತ ತರುಪಿಶಾಚಿ,
ಪರಚಿ ನಭೋಮುಖವನೆ
ಪರವನೇಕೆ ಕಾಡುತಿಹುದು?
ವರವನೇನು ಬೇಡುತಿಹುದು?
ಪ್ರೀತಿಯ ರಸಸುಖವನೆ?


ಹೂವತಿಥಿ

ಕೊಟಡಿಯ ಮುಂದೆಯೆ ಕೇಳಿತು
ಝೇಂಕೃತಿ;
ಕಿವಿಗಿಂಪೆರೆದೆದೆ ತೆರೆವಾ ಜೇನ್ ಕೃತಿ!
ಜೇನಿಂಟುತ್ತಿವೆ ಹೂವತಿಥಿ?
(ಕದರಡಕೆ)

ಕುವೆಂಪು ಅವರು ಮೈಸೂರಿನ 'ಉದಯರವಿ' ಮನೆಯ ಹೂತೋಟದಲ್ಲಿ ಕುಳಿತು ದುಂಬಿಗಳ ಝೇಂಕಾರವನ್ನು ಕೇಳುತ್ತ, ಅವು ಸೂರ್ಯಕಾಂತಿ ಹೂವಿನ ಮಕರಂದವನ್ನು ಹೀರುತ್ತಿರುವುದನ್ನು ಕಂಡು ಹಿಗ್ಗಿದ್ದಾರೆ. ಆ ಜೇನ್ದುಂಬಿಯನ್ನು 'ಹೂವತಿಥಿ' ಎಂಬ ಅನ್ವರ್ಥನಾಮಪದ ಸೃಷ್ಟಿಸಿ ಬಣ್ಣಿಸಿದ್ದಾರೆ.

ಮೊದಲ ಓದು

ಕಾವೇರಿ ವಿವಾದದ ಮೂಲ ಬೆನ್ನತ್ತಿ...



ಪು: 236 ₹400

ಕಾವೇರಿ ವಿವಾದ: ಒಂದು ಐತಿಹಾಸಿಕ ಹಿನ್ನೋಟ
ಲೇ: ಸಿ.ಚಂದ್ರಶೇಖರರ್
ಪ್ರ: ಅಭಿರುಚಿ ಪ್ರಕಾಶನ
ಸಂ: 99805 60013

ನದಿ ನೀರು ಹಂಚಿಕೆ ಈಗ ಜಾಗತಿಕ ವಿಷಯ. ಇಂಥ ವಿವಾದದಲ್ಲಿರುವ ದಕ್ಷಿಣ ಭಾರತದ ಜೀವನದಿ ಕಾವೇರಿಯ ವಿವಾದ ಇಂದು, ನಿನ್ನೆಯದಲ್ಲ. ಆ ವಿವಾದದವನ್ನೇ ಬೆನ್ನು ಹತ್ತಿರುವ ನಿವೃತ್ತ ಐಪಿಎಸ್ ಅಧಿಕಾರಿ ಸಿ.ಚಂದ್ರಶೇಖರ್ ಅವರು, 'ಕಾವೇರಿ ವಿವಾದ ಒಂದು ಐತಿಹಾಸಿಕ ಹಿನ್ನೋಟ' ಎಂಬ ಕೃತಿಯನ್ನು ರಚಿಸಿದ್ದಾರೆ.

ಅದು 1807ರ ಸಮಯ. ಅಂದರೆ ಇಂದಿಗೆ 217 ವರ್ಷಗಳ ಹಿಂದೆ ಆಗಿನ ಮೈಸೂರು ಸಂಸ್ಥಾನ ಕೈಗೊಂಡ ಕೆರೆಗಳ ದುರಸ್ತಿಗೆ ತಂಜಾವೂರಿನ ರೈತರು ಆಕ್ಷೇಪ ವ್ಯಕ್ತಪಡಿಸಿದ್ದರಂತೆ. ಕರ್ನಾಟಕದ ಕೆರೆಗಳ ಹೂಳೆತ್ತುವುದರಿಂದ, ಅದರಲ್ಲಿ ನೀರು ಸಂಗ್ರಹ ಹೆಚ್ಚಾದರೆ, ತಮಗೆ ಬರಬೇಕಾದ ಕಾವೇರಿ ನದಿ ನೀರಿನ ಪಾಲು ಕಡಿಮೆಯಾಗಲಿದೆ ಎಂಬುದು ತಮಿಳುನಾಡಿನವರ ವಾದ. ಇಂದು ಸಾಮಾಜಿಕ ಹಾಗೂ ರಾಜಕೀಯ ಸಂಘರ್ಷಕ್ಕೆ ಕಾರಣವಾಗಿರುವ ಕಾವೇರಿ ವಿವಾದದ ಮೂಲವೂ ಇದೇ ಎಂದೆನ್ನಲಾಗುತ್ತದೆ.


ತಮ್ಮ ಬದುಕಿನುದ್ದಕ್ಕೂ ನದಿಗಳೊಂದಿಗಿನ ಬಾಂಧವ್ಯ ಹಾಗೂ 1970ರಲ್ಲಿ ಮೈಸೂರಿಗೆ ಇಸ್ರೇಲಿ ವಿಜ್ಞಾನಿಗಳ ತಂಡದ ಭೇಟಿಯಲ್ಲಿ ಆದ ಅನುಭವ ಕಾವೇರಿ ಕುರಿತು ಅಧ್ಯಯನ ನಡೆಸಲು ಪ್ರೇರಣೆ ಎಂದು ಲೇಖಕರು ಬರೆದುಕೊಂಡಿದ್ದಾರೆ. ಹೀಗಾಗಿ ಕಾವೇರಿ ಕುರಿತ ಆಸಕ್ತಿಕರ ಅಧ್ಯಯನದ ಜತೆಗೆ, ಅದರ ವಿವಾದ ಸುತ್ತಲೂ ಲೇಖಕರು ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದಾರೆ. ಇದಕ್ಕಾಗಿ ಅವರು ಹಲವು ಗ್ರಂಥಗಳು, ವರದಿಗಳು, ನ್ಯಾಯಾಲಯ ಮತ್ತು ನ್ಯಾಯಮಂಡಳಿಗಳ ಆದೇಶಗಳು, ಕೇರಳ, ತಮಿಳುನಾಡು, ಪುದುಚೇರಿ ಜತೆ ಕರ್ನಾಟಕವು ಕಾವೇರಿ ನದಿ ನೀರನ್ನು ಹಂಚಿಕೊಳ್ಳಬೇಕಾದ ಪ್ರಮಾಣ, ರಾಜ್ಯದಿಂದ ವರ್ಷವಾರು ನೀರು ಹರಿದ ಪ್ರಮಾಣ ಹೀಗೆ ಎಲ್ಲಾ ಆಯಾಮಗಳಿಂದಲೂ ನೋಡುವ ಪ್ರಯತ್ನವನ್ನು ಲೇಖಕರು ನಡೆಸಿದ್ದಾರೆ.

ಕಾವೇರಿ ನದಿ ಪಾತ್ರದ ಇತಿಹಾಸದೊಂದಿಗೆ ಆರಂಭವಾಗುವ ಈ ಕೃತಿ ಭಾರತದ ಭೌಗೋಳಿಕ ರಚನೆ, ಹವಾಮಾನ ಬದಲಾವಣೆಯ ವಿಷಯಗಳ ಜತೆಗೆ, ರಾಜಕೀಯದ ಚರಿತ್ರೆಯೂ ಅಷ್ಟೇ ಸೊಗಸಾಗಿ ಮೂಡಿಬಂದಿದೆ. ಕಾವೇರಿಗಾಗಿ ಮೈಸೂರು ಅರಸರ ಯತ್ನ, 1794ರಲ್ಲಿ ಟಿಪ್ಪುವಿನಿಂದ ಕನ್ನಂಬಾಡಿ ಕಟ್ಟಡಕ್ಕೆ ಅಡಿಪಾಯ, ಬ್ರಿಟಿಷರು ಈ ವಿವಾದವನ್ನು ನೋಡಿದ ಬಗೆ, ಸರ್ ರಿಚರ್ಡ್ ಸ್ಯಾಂಕಿ ಎಂಬ ಇಂಗ್ಲಿಷ್ ಎಂಜಿನಿಯರ್ ಕರ್ನಾಟಕದಲ್ಲಿ ಉಂಟಾದ ಭೀಕರ ಬರಗಾಲಕ್ಕೆ ನೆರವಾದ ರೀತಿ, ಕಾವೇರಿಗೆ ಅಡ್ಡಲಾಗಿ ಕಟ್ಟಿರುವ ಆಣೆಕಟ್ಟೆ, ಬ್ಯಾರೇಜ್ ಮತ್ತು ಕಾಲುವೆ ಇತ್ಯಾದಿ ವಿಷಯಗಳನ್ನು ಸಿ.ಚಂದ್ರಶೇಖರ್ ಅವರು ಅತ್ಯಂತ ಪರಿಶ್ರಮ ಮತ್ತು ಶ್ರದ್ಧೆಯಿಂದ ಈ ಕೃತಿಯಲ್ಲಿ ದಾಖಲಿಸಿದ್ದಾರೆ.

ಇದರೊಂದಿಗೆ ಸ್ವಾತಂತ್ರ್ಯ ನಂತರದಲ್ಲಿ ಕಾವೇರಿ ನದಿ ನೀರು ಹಂಚಿಕೆ ಕುರಿತ ವಿವಾದ ನ್ಯಾಯಾಲಯದ ಅಂಗಳದಲ್ಲಿ ಹೇಗೆ ಮುಂದುವರಿಯಿತು ಎಂಬುದನ್ನು ದಾಖಲೆ ಸಹಿತ ವಿವರಿಸಿದ್ದಾರೆ. ಸಾಮಾನ್ಯ ವ್ಯಕ್ತಿಯ ದೃಷ್ಟಿಕೋನದಿಂದ ವಿವಾದವನ್ನು ನೋಡುವುದರ ಜತೆಗೆ, ಕಾನೂನಿನ ಚೌಕಟ್ಟಿನೊಳಗೆ ವಿವಾದ ಹೇಗೆ ಸಾಗಿದೆ ಎಂಬುದನ್ನು ತಿಳಿಸುವ ಲೇಖಕರ ಪ್ರಯತ್ನದಿಂದಾಗಿ ಕಾವೇರಿಯ ಇತಿಹಾಸ, ಹರಿಯುವ ಪ್ರದೇಶ, ವಿವಾದದ ಮೂಲ ಹಾಗೂ ಇಂದಿನ ಪರಿಸ್ಥಿತಿ ಕಣ್ಣಮುಂದೆ ಬರುತ್ತದೆ. ಹೀಗಾಗಿ ಸಂಶೋಧಕರು, ವಿದ್ಯಾರ್ಥಿಗಳು, ಆಸಕ್ತರು, ಹೋರಾಟಗಾರರು, ರಾಜಕಾರಣಿಗಳಿಗೆ ಉತ್ತಮ ಆಕರವಾಗಬಹುದು.

'ಕಾವೇರಿ ವಿವಾದ'ವನ್ನು ಬೆನ್ನುಹತ್ತುವುದಕ್ಕೂ ಮೊದಲು ಆರಂಭದಲ್ಲಿರುವ ನಿವೃತ್ತ ಐಪಿಎಸ್ ಅಧಿಕಾರಿ ಚಿರಂಜೀವಿ ಸಿಂಘ್ ಅವರ ಮುನ್ನುಡಿ ದಿಕ್ಸೂಚಿಯಂತೆ ಓದಿನುದ್ದಕ್ಕೂ ನೆರವಾಗುವಂತಿದೆ. ಹಲವು ಅಪರೂಪದ ಚಿತ್ರಗಳು ಹಾಗೂ ನಕ್ಷೆಗಳು ಕೃತಿಗೆ ಪೂರಕವಾಗಿವೆ.

ವಿರಳ ಕಾಯಿಲೆ ಪರಿಚಯಿಸುವ ಕೃತಿ



ಪು: 122 ₹120

ಗಿಲ್ಲನ್ ಬ್ಯಾರಿ ಸಿಂಡ್ರೋಮ್
ಮೂಲ: ಮಲಯಾಳಂ: ರಾಸಿತ್ ಅಶೋಕನ್
ಕನ್ನಡಕ್ಕೆ: ಕೆ. ಪ್ರಭಾಕರನ್
ಪ್ರ: ಅಸ್ಮಿತೆ ಪ್ರಕಾಶನ
ಸಂ:9986840477

ಕನ್ನಡದಲ್ಲಿ ಆರೋಗ್ಯ ಕುರಿತಾದ ಪುಸ್ತಕಗಳು ಹೆಚ್ಚಾಗಿ ಬರುತ್ತಿವೆ. ಕಾಯಿಲೆ ಬಗ್ಗೆ ಅರಿವು ಮೂಡಿಸಲು, ಜನರಿಗೆ ರೋಗದ ಬಗ್ಗೆ ಸಂಪೂರ್ಣ ಮಾಹಿತಿ ಒದಗಿಸಲು, ಆ ಮೂಲಕ ಭಯ ನಿವಾರಣೆ ಮಾಡಲು ಇಂತಹ ಪುಸ್ತಕಗಳು ಸಹಕಾರಿ.

ಗಿಲ್ಲನ್ ಬ್ಯಾರಿ ಸಿಂಡ್ರೋಮ್ ವಿರಳ ಕಾಯಿಲೆಯ ವರ್ಗಕ್ಕೆ ಸೇರಿದ್ದು, ಅನೇಕ ಜನರಿಗೆ ಈ ಕಾಯಿಲೆಯ ಹೆಸರೇ ಹೊಸತು. ವೈದ್ಯ ಸಮುದಾಯಕ್ಕೂ ಈ ವಿಚಾರ ಹೊಸದು ಹಾಗೂ ವೈದ್ಯರ ವೃತ್ತಿ ಬದುಕಿನಲ್ಲಿಯೂ ಇಂತಹ ಪ್ರಕರಣ ನೋಡಿರುವುದು ಬಹಳ ಅಪರೂಪ ಎನ್ನಬಹುದು.

ಗಿಲ್ಲನ್-ಬ್ಯಾರಿ ಸಿಂಡ್ರೋಮ್ ಎನ್ನುವುದು ನರವೈಜ್ಞಾನಿಕ ತೊಂದರೆ. ವ್ಯಕ್ತಿಯ ಸ್ವರಕ್ಷಣಾ ವ್ಯವಸ್ಥೆಯು ಬಾಹ್ಯ ನರಗಳ ಮೇಲೆ ದಾಳಿ ಮಾಡುವ ಅಸ್ವಸ್ಥತೆಯಾಗಿದೆ. ಪ್ರತಿರಕ್ಷಣಾ ವ್ಯವಸ್ಥೆಯಿಂದ ಬಾಹ್ಯ ನರಮಂಡಲಕ್ಕೆ ತೊಂದರೆಯಾಗುವಂತಹ ಪರಿಸ್ಥಿತಿ ಇದಾಗಿದೆ.

ಲೇಖಕ ರಾಸಿತ್ ಅಶೋಕನ್ ಸ್ವತಃ ಗಿಲ್ಲನ್ ಬ್ಯಾರಿ ಸಿಂಡ್ರೋಮ್‌ಗೆ ಒಳಗಾಗಿ ನಾಲ್ಕು ತಿಂಗಳು ಐಸಿಯುವಿನಲ್ಲಿದ್ದು ಚಿಕಿತ್ಸೆ ಪಡೆದು ಸಾವು ಬದುಕಿನ ಮಧ್ಯೆ ಹೋರಾಡಿದ ಅನುಭವ ಈ ಹೊತ್ತಗೆಯಲ್ಲಿದೆ. ಕಾಯಿಲೆಗೆ ತುತ್ತಾಗಿ ಅದರಲ್ಲಿಯೇ ಬೇಯುತ್ತಿದ್ದರೂ ಓದುಗರಿಗೆ ರೋಚಕವಾಗಿ ತಮ್ಮ ಹೋರಾಟದ ಕಥೆಯನ್ನು ಕಟ್ಟಿಕೊಟ್ಟಿದ್ದಾರೆ. ಯಾವುದೇ ಭಯಾನಕ ಕಾಯಿಲೆ ಬಂದಾಗ ರೋಗಿ ಮೊದಲಿಗೆ ಮಾನಸಿಕವಾಗಿ ಕುಗ್ಗುತ್ತಾನೆ. ಖಿನ್ನತೆ, ಕೀಳರಿಮೆ ಮುಂತಾದ ಮಾನಸಿಕ ವೇದನೆಗೊಳಗಾಗುತ್ತಾನೆ. ಆದರೆ ಇಲ್ಲಿ ರಾಸಿತ್ ವ್ಯಕ್ತಿತ್ವ ಭಿನ್ನ. ಎಂತಹ ವಿಷಮ ಪರಿಸ್ಥಿತಿಯಲ್ಲೂ ಮನೋಸ್ಥೈರ್ಯ ಕಳೆದುಕೊಳ್ಳದೆ, ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳುತ್ತಾ ಕಾಯಿಲೆಯನ್ನು ಧೈರ್ಯವಾಗಿ ಎದುರಿಸಿದ 'ಗಟ್ಟಿಗ'.

ಎಷ್ಟೇ ಕಷ್ಟದ ಸಂದರ್ಭ ಎದುರಾದರೂ ಅದಕ್ಕೆ ಎದೆಗುಂದದೆ ಗಿಲ್ಲನ್ ಬ್ಯಾರಿ ಸಿಂಡ್ರೋಮ್ ಅನ್ನು ಜಯಿಸಿ ಸಹಜ ಜೀವನಕ್ಕೆ ಮರಳಿದ ಕಥೆ ಮಾತ್ರ ಇತರ ರೋಗಿಗಳಿಗೆ ಚೈತನ್ಯ, ಧೈರ್ಯ ತುಂಬುವಂಥದ್ದು. ಇಡೀ ಪುಸ್ತಕದ ಸಾರ ಇದನ್ನೇ ಅನಾವರಣಗೊಳಿಸುತ್ತದೆ. ಮಲಯಾಳದಲ್ಲಿ ಬರೆದ ಪುಸ್ತಕವನ್ನು ಮೂಲ ಆಶಯಕ್ಕೆ ಕೊಂಚವೂ ಧಕ್ಕೆಯಾಗದಂತೆ ಕನ್ನಡಕ್ಕೆ ಅನುವಾದಿಸಿದ ಕೆ. ಪ್ರಭಾಕರನ್ ಅವರ ಕಾರ್ಯ ಮೆಚ್ಚುವಂತಿದೆ.

ಕಾಡಿನೊಂದಿಗೆ ಕಾಡುವ ಬರಹಗಳು



ಪು: 100 ₹130

ಕಾಡು ಕಾಡ್ತು
ಲೇ: ರೇಖಾ ಹೆಗಡೆ ಬಾಳೇಸರ
ಪ್ರ: ಬಹುರೂಪಿ
ಸಂ: 7019182729

ಲೇಖಕಿಯ ಬಾಲ್ಯದ ನೆನಪು ಕಾಡಿನೊಂದಿಗೆ ಅನಾವರಣ ಆಗುತ್ತ ಹೋಗುತ್ತದೆ. ಕಾಡು ಕಾಡುವ ಪರಿ ಕೇವಲ ಕಾಡಿಗಷ್ಟೇ ಅಲ್ಲ, ಕಾಡಿಗಂಟಿಕೊಂಡಿದ್ದ ನಾಡು ಮತ್ತು ಜೀವನಾಡಿಯಾಗಿದ್ದ ನದಿಗಳ ಸುತ್ತಲೂ ನೆನಪಿನ ಸುಳಿ ಗಿರಕಿಹೊಡೆಯುತ್ತದೆ. ಒಂದೊಂದು ಪ್ರಸಂಗವೂ ಬದುಕಿನ ಒಂದು ಮಜಲನ್ನು ತೆರೆದುಕೊಳ್ಳುತ್ತ ಹೋದಂತೆ ನಗರೀಕರಣ ಕಾಡಿನಂಚಿನ ಜೀವಿಗಳ ಜೀವಗಳ ನಡುವಿನ ಸಂಘರ್ಷವನ್ನೂ ಬಿಚ್ಚಿಡುತ್ತ ಹೋಗುತ್ತದೆ. ಪುಸ್ತಕದ ಬಲುದೊಡ್ಡ ಶಕ್ತಿ ಲೇಖಕಿಯ ಭಾಷೆ. ಪತ್ರಕರ್ತೆಯಾಗಿದ್ದ ರೇಖಾ ಪತ್ರಕರ್ತರಂತೆಯೇ ಹೇಳಬೇಕಿರುವುದನ್ನು ಚಿಕ್ಕದಾಗಿ, ಚೊಕ್ಕದಾಗಿ ಹೇಳುತ್ತ ಹೋಗುತ್ತಾರೆ. ಆದರೆ ಬರವಣಿಗೆ ಓದುಗರನ್ನು ಆರ್ದ್ರಗೊಳಿಸುವುದು ಅವರ ಭಾಷೆಯಿಂದ.

ಒಟ್ಟು ಹನ್ನೊಂದು ಅಧ್ಯಾಯಗಳಲ್ಲಿ ಚಿಗರೆ, ಜೇನು, ಕರಡಿ, ಹುಲಿ, ಹಸು, ಕರ, ಆನೆ ಜೊತೆಗೆ ಲೇಖಕಿಯ ಕುಟುಂಬದ ಬದುಕು, ಬವಣೆ ಎಲ್ಲವೂ ಬಿಚ್ಚಿಕೊಳ್ಳುತ್ತ ಹೋಗುತ್ತವೆ. ಕಾಡು ಆಕರ್ಷಿಸುತ್ತ ಹೋದರೂ ಮನದೊಳಗೆ ಆತಂಕವನ್ನೂ ಸೃಷ್ಟಿಸುತ್ತ ಹೋಗುತ್ತದೆ. ಹುಲಿಗೆ ಬಲಿಯಾಗುವ ಹಸುವಿನ ಸನ್ನಿವೇಶ ಓದುವಾಗಲಂತೂ ಭಾವುಕರಾಗುತ್ತೇವೆ. ನಮ್ಮ ಪರಿಸರ; ನಮ್ಮ ಊರು, ನಮ್ಮೊಳಗೆ ನೆನಪೂರಿ, ನೆನಪಿನ ಮರದ ಮೇಲಿನ ಮಳೆ ಹನಿ ಉದುರಿಸಿದಂತಿದೆ ಪುಸ್ತಕ. ಪ್ರತಿ ಅಧ್ಯಾಯದ ಕೊನೆಯಲ್ಲಿ ಬರುವ ಮಾತು ಚಿಂತನೆಗೆ ಹಚ್ಚುತ್ತವೆ. ಒಂದೆರಡು ಕ್ಷಣ ಪುಸ್ತಕ ಎದೆಮೇಲೆ ವಿರಮಿಸುವಂತೆ ಮಾಡುತ್ತವೆ. ಮತ್ತು ಆ ಮಾತುಗಳು ನಮ್ಮಲ್ಲಿ ಒಂದು ವಿಷಾದವನ್ನೂ, ಕೆಲವೊಮ್ಮೆ ಆಶಾಭಾವವನ್ನೂ ತುಂಬುತ್ತವೆ. ಜೊತೆಗೆ ಮುಂದಿನ ಅಧ್ಯಾಯ ಓದುವಂತೆ ಮಾಡುತ್ತದೆ.

ಪ್ರತಿಕ್ರಿಯೆ


ಹೆಗ್ಗೋಡು ಹುಟ್ಟಿನ ಸೋಜಿಗ..

ಹೆಗ್ಗೋಡು ಹುಟ್ಟಿದ ಬಗೆ.. (ಚಂದ್ರಶೇಖರ್ ಕಾಕಾಲ್, ಮೇ 12) ಲೇಖನ ಸ್ವಾರಸ್ಯಕರವಾಗಿತ್ತು. ಇಂದಿಗೂ ಅದು ಎಷ್ಟೋ ಕಲಾಸಕ್ತರನ್ನು ಪೋಷಿಸಿ ಬೆಳೆಸುವ ಪರಿ ನಾಟಕಪ್ರಿಯರು, ನನ್ನಂಥ ಅಭಿಮಾನಿಗಳಲ್ಲಿ ರೋಮಾಂಚನ ಉಂಟು ಮಾಡಿದೆ. ಚಿತ್ರದುರ್ಗದಲ್ಲಿ ತಿರುಗಾಟದ ಪ್ರದರ್ಶನವನ್ನು ನೋಡುತ್ತಿದ್ದ ದಿನಗಳು ನೆನಪಿಗೆ ಬಂದವು. ಕೆಲಸದ ಒತ್ತಡದ ನಡುವೆಯೂ ಲೇಖನ ಓದಿದೆ. ನನ್ನ ನೆನಪುಗಳು ಮತ್ತೆ ಹಸಿರಾದವು.

ಗಣೇಶ್ ಎ.ಪಿ. ಚಿತ್ರದುರ್ಗ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ




ಕೊಂಚ ತಂತ್ರ



ಈಗಿನ ದಶಮಾನ ಪದ್ಧತಿಯಲ್ಲಿ 10 ಗ್ರಾಂಗಳಿಗೆ 1 ತೊಲೆ ಎಂದು ಚಿನ್ನದ ತೂಕದಲ್ಲಿ ಪರಿಗಣಿಸುತ್ತಾರೆ. ಹಳೆಕಾಲದಲ್ಲಿ 11.66 ಗ್ರಾಂಗಳಿಗೆ 1 ತೊಲೆ ಎಂದು ಪರಿಗಣಿಸುತ್ತಿದ್ದರು. ಈ ಸಂಖ್ಯೆಯನ್ನು 11ರ ಮಗ್ಗಿ ನೆನಪಿಡುವ ಮೂಲಕ ತಿಳಿಯಬಹುದು. 11 ಆರಲೆ 66 ತಾನೆ?

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಮನ್ವಿತ್ ರಾಜ್ ಎಚ್.ಆರ್.
ರಾಯಚೂರು



ಸಂಸ್ಕೃತಿ ಎಂ.ಎಸ್.
ಮೈಸೂರು



ಸುಬ್ರಹ್ಮಣ್ಯ ಬಿ.
ಗದಗ



ಚಿರಂತನ ಆರ್.
ದಾವಣಗೆರೆ



ಅರ್ಪಣ ಬಿ.ಆರ್.
ಬಸವಾಪಟ್ಟಣ



ಹೃದ್ಧಿ
ನಾಗರಬಾವಿ

ಜಾಣಪದ ಆಟ

ಕೆಳಗೆ ಕೊಟ್ಟ 'ಕರ' ಪದಕ್ಕೆ ಸುಳಿವು ಆಧರಿಸಿ ಇನ್ನೆರಡು ಅಕ್ಷರ ತುಂಬಿ ನಾಲ್ಕಕ್ಷರದ ಪದ ಮಾಡಿ.

1	ಕ	ರ			ಒಂದು ಸಿಹಿ ತಿನಿಸು
2	ಕ	ರ			ಕೈಯಲ್ಲಿರುವ ಮುಖ ಒರೆಸುವ ಅರಿವೆ
3	ಕ	ರ			ತೆರಿಗೆ ಕಟ್ಟುವಾತ
4	ಕ	ರ			ಕಾರಕೂನ
5	ಕ	ರ			ಡಮನಕ ಪದದ ಜೊತೆಗಾರ
6	ಕ	ರ			ಸುಟ್ಟಿದ್ದು
7	ಕ	ರ			ಕೈವಶವಾದದ್ದು
8	ಕ	ರ			ಒಂದು ಜಾತಿಯ ಹಣ್ಣು
9	ಕ	ರ			ಹೆಚ್ಚಿನ ತೆರಿಗೆ

ಪ್ರಾಸಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ			
ಹೊ	ಆ	ಬ	ಕಾ
ಅ	ಚಿ	ಅ	ಚೀ
ಪ್ರ	ಹೋ	ಗ	ಪ

1

	ಕಾ	ಶ
	ಕಾ	ಶ

2

	ಳ	ಗ
	ಳ	ಗ

3

	ಗ	ಳಿ
	ಗ	ಳಿ

4

	ಣ	ತಿ
	ಣ	ತಿ

5

	ರ	ಸು
	ರ	ಸು

6

	ರಾ	ಡು
	ರಾ	ಡು

ಮೋಜಿನ ಇಂಗ್ಲಿಷ್

ಉಚ್ಚಾರ ಒಂದೇ, ಪದ ಬೇರೆ

ಇಲ್ಲಿ ಎರಡು ಪದಗಳ ಒಂದೊಂದು ಅಕ್ಷರ ಮಾತ್ರ ಕೊಡಲಾಗಿದೆ. ಅವುಗಳ ಉಚ್ಚಾರ ಒಂದೇ, ಆದರೆ ಪದ ಬೇರೆ. ನೀವು ಆ ಪದಗಳನ್ನು ಪತ್ತೆ ಹಚ್ಚಿ.

1	W		1	R	
2	O		2	A	
3	L		3	L	
4	K		4	N	
5	D		5	D	
6	T		6	T	
7	R		7	R	
8	M		8	M	
9	S		9	C	
10	H		10	H	

ಸರಿ ಉತ್ತರ ಮುಂದಿನ ವಾರ...



ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in


ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದಬಂಧ: 1.ಕಡಿತ-ಹಿಡಿತ 2.ಸಮ್ಮತ-ಒಮ್ಮತ 3.ಭರಣಿ-ಧರಣಿ 4.ನೇಮಕ-ಶಾಮಕ 5.ಅಂಗಳ-ಮಂಗಳ 6.ಸೋಮಾರಿ-ಕುಮಾರಿ
ಮೋಜಿನ ಇಂಗ್ಲಿಷ್: 1.TOWN 2.BRAIN 3.KNOW 4.NEAR 5.OPEN 6.SKILL 7.SLOW 8.BRING 9.WHEAT 10.SMART
ಜಾಣಪದ ಆಟ: 1.ಪ್ರಗತಿ 2.ಪ್ರಸ್ತುತಿ 3.ಪ್ರವಾಸ 4.ಪ್ರಮೇಹ 5.ಪ್ರಕಾರ 6.ಪ್ರಸಾರ 7.ಪ್ರಸಿದ್ಧ 8. ಪ್ರದಾನ 9.ಪ್ರವೀಣೆ 10.ಪ್ರಯತ್ನ
ಆಲ್ಫಾಬೆಟ್ ಗೇಮ್: 1-O, 2-X

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಡಣ್ಣ ಚಕ್ಕ ಕೇಶ್ರುಪ್ಪ ಕಥೆಯ | ಆಟ-ಪರದಾಟ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಗುಂಡನಿಗೊಂದು ಕನಸು ಬಿತ್ತು. ಅದರಲ್ಲಿ ಗುಂಡ ದಢೂತಿಯಾಗಿದ್ದ. ಆಟವಾಡಲು ಪಾರ್ಕ್‌ಗೆ ತೆರಳಿದ ಗುಂಡ ಮರಕ್ಕೆ ಕಟ್ಟಿದ್ದ ಜೋಕಾಲಿಯನ್ನು ನೋಡಿದ. ಅವನಿಗೆ ಅದರಲ್ಲಿ ಆಡಬೇಕೆನಿಸಿತು. ಸ್ವಲ್ಪ ಹೊತ್ತು ಯೋಚಿಸಿದ ಗುಂಡ, ಜೋಕಾಲಿ ಮೇಲೆ ಜಿಗಿದ. ಆ ರಭಸಕ್ಕೆ ಜೋಕಾಲಿ ಕಟ್ಟಿದ್ದ ಮರಗಳೇ ಬಾಗಿ ಗುಂಡ ನೆಲಕ್ಕೆ ಬಿದ್ದ. ಆ ಭಯದಲ್ಲೇ ಗುಂಡ ನಿದ್ದೆಯಿಂದ ಎದ್ದ.



ಫಫ್ ಡುಪ್ಲೆಸಿ ಅರ್ಧಶತಕ • ರಜತ್ ಪಾಟೀದಾರ್, ಕ್ಯಾಮರಾನ್ ಗ್ರೀನ್ ಅಬ್ಬರ • ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ನಿರಾಸೆ

ಪ್ಲೇ ಆಫ್ ಪ್ರವೇಶಿಸಿದ ಆರ್‌ಸಿಬಿ

• ಗಿರೀಶ ದೊಡ್ಡಮನಿ

ಬೆಂಗಳೂರು: ಶನಿವಾರ ರಾತ್ರಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು 'ಹೊಸ ಅಧ್ಯಾಯ' ಬರೆಯಿತು. ತಂಡದ ಅಪ್ಪಟ ಅಭಿಮಾನಿಗಳ ಪ್ರಾರ್ಥನೆ ಫಲಿಸಿತು.

ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಕೈಯಿಂದ ಅಕ್ಷರಶಃ ಜಯದ ಅವಕಾಶ ಕಸಿದುಕೊಂಡ ಫಫ್ ಡುಪ್ಲೆಸಿ ಬಳಗವು ಪ್ಲೇ ಆಫ್ ಪ್ರವೇಶಿಸಿತು. ಕ್ರಿಕೆಟ್ ಪ್ರಿಯರನ್ನು ತುದಿಗಾಲಿನಲ್ಲಿ ನಿಲ್ಲುವಂತೆ ಮಾಡಿದ್ದ ರೋಚಕ ಪಂದ್ಯದಲ್ಲಿ 27 ರನ್‌ಗಳಿಂದ ಗೆದ್ದು (ಪ್ಲೇ ಆಫ್ ಅರ್ಹತೆಗಾಗಿ ತಂಡಕ್ಕೆ 18 ರನ್‌ಗಳ ಅಂತರದ ಜಯದ ಅಗತ್ಯವಿತ್ತು) ಬೆಂಗಳೂರು ತಂಡವು ನಾಲ್ಕರ ಘಟ್ಟಕ್ಕೆ ಲಗ್ಗೆ ಹಾಕಿತು. ಸತತ ಆರನೇ ಪಂದ್ಯ ಗೆದ್ದು ಈ ಸಾಧನೆ ಮಾಡಿತು. ಅಲ್ಲದೆ, ಐಪಿಎಲ್‌ನಲ್ಲಿ 9ನೇ ಬಾರಿ ಪ್ಲೇಆಫ್ ಘಟ್ಟ ಪ್ರವೇಶಿಸಿತು.

ಟೂರ್ನಿಯ ಪ್ರಥಮಾರ್ಧದಲ್ಲಿ ಆಡಿದ್ದ ಎಂಟು ಪಂದ್ಯಗಳ ಪೈಕಿ ಏಳರಲ್ಲಿ ಸೋತಿತ್ತು. ನಂತರ ಪುಟಿದೆದ್ದು ಈ ಸಾಧನೆ ಮಾಡಿತು. ಆಗ ವೈಫಲ್ಯ ಅನುಭವಿಸಿದ್ದ ಯಶ್ ದಯಾಳ್, ಮೊಹಮ್ಮದ್ ಸಿರಾಜ್, ಕ್ಯಾಮರಾನ್ ಗ್ರೀನ್, ರಜತ್ ಪಾಟೀದಾರ್ ಹಾಗೂ ಗ್ಲೆನ್ ಮ್ಯಾಕ್ಸ್‌ವೆಲ್ ಅವರೇ ಇಂದು ಜಯದ ರೂವಾರಿಗಳಾದರು.

ಕಳೆದ ಅರ್ಧ ಡಜನ್ ಪಂದ್ಯಗಳಲ್ಲಿ ಆರ್‌ಸಿಬಿಯ ಅಭಿಮಾನಿಗಳು ಮಾಡಿದ್ದ ಲೆಕ್ಕಾಚಾರಗಳು ಹಾಗೂ ಪ್ರಾರ್ಥನೆಗಳು ಫಲ ನೀಡಿದವು. ತಂಡವು 14 ಅಂಕಗಳೊಂದಿಗೆ ಉತ್ತಮ ರನ್ ರೇಟ್ ಗಳಿಸಿತು. ಆದರೆ ಚೆನ್ನೈ ತಂಡದ ಆರನೇ ಪ್ರಶಸ್ತಿ ಜಯಿಸುವ ಕನಸು ಕಮರಿತು.

13 ಪಂದ್ಯಗಳಲ್ಲಿ 14 ಅಂಕ ಗಳಿಸಿದ್ದ ಚೆನ್ನೈ ತಂಡವು ಈ ಪಂದ್ಯದಲ್ಲಿ 219 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿತ್ತು. ಆದರೆ ಈ ಪಂದ್ಯದಲ್ಲಿ ಕೇವಲ 201 ರನ್ ಹೊಡೆದು ಸೋತಿದ್ದರೂ ಕೂಡ ಪ್ಲೇಆಫ್ ಪ್ರವೇಶಿಸುವ ಅವಕಾಶವಿತ್ತು. ರವೀಂದ್ರ ಜಡೇಜ ಹಾಗೂ ಮಹೇಂದ್ರಸಿಂಗ್ ಧೋನಿ 7ನೇ ವಿಕೆಟ್ ಜೊತೆಯಾಟದಲ್ಲಿ 61 ರನ್ ಸೇರಿಸಿದ್ದರಿಂದ ಆ ಸಾಧ್ಯತೆಯೂ ದಟ್ಟವಾಗಿತ್ತು.

ಆದರೆ ಕೊನೆಯ ಓವರ್‌ನಲ್ಲಿ ನಡೆದ ನಾಟಕೀಯ ಬೆಳವಣಿಗೆಯಲ್ಲಿ ಗೆಲುವು ಮತ್ತು ಪ್ಲೇ ಆಫ್ ಅವಕಾಶ ಆತಿಥೇಯರ ಮಡಿಲು ಸೇರಿತು. ಯಶ್ ದಯಾಳ್ ಹಾಕಿದ ಆ ಓವರ್‌ನಲ್ಲಿ ಚೆನ್ನೈ ತಂಡವು 17 ರನ್ ಗಳಿಸಿದ್ದರೂ ಸಾಕಿತ್ತು. 'ವಿಂಟೇಜ್ ಧೋನಿ' ಯಶ್ ದಯಾಳರ ಮೊದಲ ಎಸೆತದಲ್ಲಿಯೇ ಚೆಂಡನ್ನು ಮೈದಾನದಾಚೆ ಕಳುಹಿಸಿದರು. ನಂತರದ ಎಸೆತದಲ್ಲಿ ಮತ್ತೊಂದು ಸಿಕ್ಸರ್ ಎತ್ತುವ ಭರದಲ್ಲಿ ಸ್ವಪ್ನಿಲ್ ಸಿಂಗ್ ಪಡೆದ ಕ್ಯಾಚ್‌ಗೆ ನಿರ್ಗಮಿಸಿದರು. ಕ್ರೀಸ್‌ನಲ್ಲಿದ್ದ ಜಡೇಜ ಅವರು ಮಾಡಿದ ಪ್ರಯತ್ನಗಳು ಫಲಕೊಡಲಿಲ್ಲ.

ಚೆನ್ನೈ ತಂಡವನ್ನು ಕಟ್ಟಿಹಾಕಲು ಇನಿಂಗ್ಸ್ ಆರಂಭದಿಂದಲೇ ಅತಿಥೇಯ ಬೌಲರ್‌ಗಳು ಮಾಡಿದ್ದ ಪ್ರಯತ್ನಗಳು ಕೈಹಿಡಿದವು. ಗ್ಲೆನ್ ಮ್ಯಾಕ್ಸ್‌ವೆಲ್ ಹಾಕಿದ ಮೊದಲ ಓವರ್‌ನ ಪ್ರಥಮ ಎಸೆತದಲ್ಲಿಯೇ ಋತುರಾಜ್ ಗಾಯಕವಾಡ್ ವಿಕೆಟ್ ಗಳಿಸಿದರು. ಮೂರನೇ ಓವರ್ ಹಾಕಿದ ಯಶ್ ದಯಾಳ್ ಅವರು ಡೆರಿಲ್ ಮಿಚೆಲ್ ವಿಕೆಟ್ ಪಡೆದರು. ಈ ನಡುವೆಯೂ ರಚಿನ್ ರವೀಂದ್ರ (61 ರನ್) ಅರ್ಧಶತಕ ಹೊಡೆದರು. ಅಜಿಂಕ್ಯ ರಹಾನೆ ಹಾಗೂ ಶಿವಂ ದುಬೆ ಚೇತರಿಕೆ ನೀಡುವ ಪ್ರಯತ್ನ ಮಾಡಿದ್ದರು. ಆದರೂ ಐದು ಸಲದ ಚಾಂಪಿಯನ್ ಚೆನ್ನೈ ಸೋಲು ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಚೆನ್ನೈ ತಂಡವು ಆರ್‌ಸಿಬಿ ಬ್ಯಾಟರ್‌ಗಳು ಆರಂಭದಲ್ಲಿ ಅಬ್ಬರಿಸದಂತೆ ನೋಡಿಕೊಂಡಿದ್ದರು. ಆದರೆ ಎರಡು ಜೊತೆಯಾಟಗಳಿಂದಾಗಿ ಆರ್‌ಸಿಬಿ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 218 ರನ್ ಗಳಿಸಿತು.

ಅರ್ಧಶತಕ ಗಳಿಸಿದ ಫಫ್ ಡುಪ್ಲೆಸಿ (54; 39ಎ) ಹಾಗೂ 47 ರನ್ ಗಳಿಸಿದ ವಿರಾಟ್ ಕೊಹ್ಲಿ ಮೊದಲ ವಿಕೆಟ್ ಜೊತೆಯಾಟದಲ್ಲಿ 78 ರನ್ ಸೇರಿಸಿದ್ದು ಉತ್ತಮ ಅಡಿಪಾಯವಾಯಿತು. ಈ ಮೊತ್ತದ ಮೇಲೆ ರಜತ್ ಪಾಟೀದಾರ್ (41; 23ಎ) ಹಾಗೂ ಕ್ಯಾಮರಾನ್ ಗ್ರೀನ್ (ಅಜೇಯ 38; 17ಎ) ಮೂರನೇ ವಿಕೆಟ್ ಜೊತೆಯಾಟದಲ್ಲಿ 71 ರನ್ ಸೇರಿಸಿದರು. ನಂತರ ಬೌಲರ್‌ಗಳು ವಿಜೃಂಭಿಸಿದರು. ಕಟ್ಟಕಡೆಯದಾಗಿ ಕ್ರೀಡಾಂಗಣದಲ್ಲಿ ಸೇರಿದ್ದ 32 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರಲ್ಲಿದ್ದ ಆರ್‌ಸಿಬಿ ಬೆಂಬಲಿಗರ ಕಂಗಳಲ್ಲಿ ಆನಂದಭಾಷ್ಪವಿತ್ತು. 'ಯಲ್ಲೋ ಆರ್ಮಿ'ಯ ಅಭಿಮಾನಿಗಳಲ್ಲಿ ದುಃಖ ಕಟ್ಟೆಯೊಡೆದಿತ್ತು.

ಇದೇ 22ಕ್ಕೆ ಅಹಮದಾಬಾದಿನಲ್ಲಿ ಎಲಿಮಿನೇಟರ್‌ನಲ್ಲಿ ಆರ್‌ಸಿಬಿ ಆಡಲಿದೆ.

ಚಿನ್ನಸ್ವಾಮಿಯಲ್ಲಿ ಗೇಲ್: ಆರ್‌ಸಿಬಿಯಲ್ಲಿ ಈ ಹಿಂದೆ ಆಡಿದ್ದ ವೆಸ್ಟ್ ಇಂಡೀಸ್ ಆಟಗಾರ ಕ್ರಿಸ್ ಗೇಲ್ ಅವರು ಶನಿವಾರ ಪಂದ್ಯ ವೀಕ್ಷಿಸಿದರು. ಪಂದ್ಯಕ್ಕೂ ಮುನ್ನ ತಂಡದ ತಮ್ಮ ಹಳೆಯ ಸ್ನೇಹಿತರೊಂದಿಗೆ ಮಾತನಾಡಿದ ಅವರು ಗಣ್ಯರ ಗ್ಯಾಲರಿಯಲ್ಲಿ ಪಂದ್ಯ ವೀಕ್ಷಿಸಿದರು.

ಸಿಎಂ, ಶಿವಣ್ಣ ವೀಕ್ಷಣೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಚಿತ್ರತಾರೆಯರಾದ ಶಿವರಾಜ್ ಕುಮಾರ್ ಹಾಗೂ ರಿಷಭ್ ಶೆಟ್ಟಿ ಅವರು ಪಂದ್ಯ ವೀಕ್ಷಿಸಿದರು.



ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ಗೆದ್ದು, ಪ್ಲೇಆಫ್ ಪ್ರವೇಶಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರರ ಸಂಭ್ರಮ –ಪ್ರಜಾವಾಣಿ ಚಿತ್ರ/ರಂಜು ಪಿ

3000 ರನ್

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿರಾಟ್ ಕೊಹ್ಲಿ ಗಳಿಸಿದ ಒಟ್ಟು ರನ್‌ಗಳು. ತವರಿನಂಗಳದಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರನಾದರು. ವಾಂಖೆಡೆಯಲ್ಲಿ ರೋಹಿತ್ ಶರ್ಮಾ (2295) ಹಾಗೂ ಚಿನ್ನಸ್ವಾಮಿಯಲ್ಲಿ ಎಬಿ ಡಿವಿಲಿಯರ್ಸ್ (1960) ಅವರು ಎರಡು ಹಾಗೂ ಮೂರನೇ ಸ್ಥಾನದಲ್ಲಿದ್ದಾರೆ.

ಮಳೆಯ ಆಟ

- ರಾತ್ರಿ 7.44ಕ್ಕೆ ಮಳೆ ಆರಂಭ
- ಆರ್‌ಸಿಬಿ 3 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 33
- ವಿರಾಟ್ ಕೊಹ್ಲಿ ಬ್ಯಾಟಿಂಗ್ 19, ಫಫ್ ಡುಪ್ಲೆಸಿ ಬ್ಯಾಟಿಂಗ್ 12
- ಮಳೆ ನಿಂತ ನಂತರ ರಾತ್ರಿ 8.23ಕ್ಕೆ ಆಟ ಮರು ಆರಂಭ
- ಓವರ್‌ಗಳಲ್ಲಿ ಕಡಿತ ಆಗಿಲ್ಲ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು
5ಕ್ಕೆ 218 (20 ಓವರ್‌ಗಳಲ್ಲಿ)
ಕೊಹ್ಲಿ ಸಿ ಮಿಚೆಲ್ ಬಿ ಸ್ಯಾಂಟನರ್ 47 (29ಎ, 4X3, 6X4)
ಡುಪ್ಲೆಸಿ ರನ್‌ಔಟ್ (ಸ್ಯಾಂಟನರ್) 54 (39ಎ, 4X3, 6X3)
ಪಾಟೀದಾರ್ ಸಿ ಮಿಚೆಲ್ ಬಿ ಠಾಕೂರ್ 41 (23ಎ, 4X2, 6X4)
ಗ್ರೀನ್ ಔಟಾಗದೇ 38 (17ಎ, 4X3, 6X3)
ಕಾರ್ತಿಕ್ ಸಿ ಧೋನಿ ಬಿ ದೇಶಪಾಂಡೆ 14 (6ಎ, 4X1, 6X1)
ಮ್ಯಾಕ್ಸ್‌ವೆಲ್ ಸಿ ಧೋನಿ ಬಿ ಠಾಕೂರ್ 16 (5ಎ, 4X2, 6X1)
ಮಹಿಪಾಲ್ ಔಟಾಗದೇ 0 (1ಎ)
ಇತರೆ: 8 (ಲೆಗ್‌ಬೈ1, ವೈಡ್ 7)
ವಿಕೆಟ್ ಪತನ: 1–78 (ವಿರಾಟ್ ಕೊಹ್ಲಿ 9.4), 2–113 (ಫಫ್ ಡುಪ್ಲೆಸಿ 12.6), 3–184 (ರಜತ್ ಪಾಟೀದಾರ್ 17.4), 4–201 (ದಿನೇಶ್ ಕಾರ್ತಿಕ್ 18.5), 5–218 (ಗ್ಲೆನ್ ಮ್ಯಾಕ್ಸ್‌ವೆಲ್ 19.5)
ಬೌಲಿಂಗ್: ತುಷಾರ್ ದೇಶಪಾಂಡೆ 4–0–49–1, ಶಾರ್ದೂಲ್ ಠಾಕೂರ್ 4–0–61–2, ಮಹೀಷ ತೀಕ್ಷಣ 4–0–25–0, ಮಿಚೆಲ್ ಸ್ಯಾಂಟನರ್ 4–0–23–1, ರವೀಂದ್ರ ಜಡೇಜ 3–0–40–0, ಸಿಮ್ರನ್‌ಜಿತ್ ಸಿಂಗ್ 1–0–19–0

ಚೆನ್ನೈ ಸೂಪರ್ ಕಿಂಗ್ಸ್
7ಕ್ಕೆ 191 (20 ಓವರ್‌ಗಳಲ್ಲಿ)
ಋತುರಾಜ್ ಸಿ ಯಶ್ ಬಿ ಮಾಕ್ಸ್‌ವೆಲ್ 0 (1ಎ)
ರಚಿನ್ ರನ್‌ಔಟ್ (ಮಹಿಪಾಲ್/ ಕಾರ್ತಿಕ್) 61 (37ಎ, 4x5, 6x3)
ಡೇರಿಲ್ ಸಿ ಕೊಹ್ಲಿ ಬಿ ಯಶ್ 4 (6ಎ)
ರಹಾನೆ ಸಿ ಡುಪ್ಲೆಸಿ ಬಿ ಫರ್ಗ್ಯುಸನ್ 33 (22ಎ, 4x3, 6x1)
ಶಿವಂ ಸಿ ಫರ್ಗ್ಯುಸನ್ ಬಿ ಗ್ರೀನ್ 7 (15ಎ)
ಜಡೇಜ ಔಟಾಗದೇ 42 (22ಎ, 4x3, 6x3)
ಸ್ಯಾಂಟನರ್ ಸಿ ಡುಪ್ಲೆಸಿ ಬಿ ಸಿರಾಜ್ 3 (4ಎ)
ಧೋನಿ ಸಿ ಸ್ವಪ್ನಿಲ್ ಬಿ ಯಶ್ 25 (13ಎ, 4x3, 6x1)
ಶಾರ್ದೂಲ್ ಔಟಾಗದೇ 1 (2ಎ)
ಇತರೆ: 15 (ಬೈ 4, ಲೆಗ್‌ಬೈ 1, ನೋಬಾಲ್ 2, ವೈಡ್ 8)
ವಿಕೆಟ್ ಪತನ: 1-0 (ಋತುರಾಜ್ ಗಾಯಕವಾಡ್, 0.1), 2-19 (ಡೇರಿಲ್ ಮಿಚೆಲ್, 2.2), 3-85 (ಅಜಿಂಕ್ಯ ರಹಾನೆ, 9.1), 4-115 (ರಚಿನ್ ರವೀಂದ್ರ, 12.6), 5-119 (ಶಿವಂ ದುಬೆ, 13.4), 6-129 (ಮಿಚೆಲ್ ಸ್ಯಾಂಟನರ್, 14.6), 7-190 (ಎಂ.ಎಸ್. ಧೋನಿ, 19.2)
ಬೌಲಿಂಗ್: ಗ್ಲೆನ್ ಮ್ಯಾಕ್ಸ್‌ವೆಲ್ 4–0–25–1, ಮೊಹಮ್ಮದ್ ಸಿರಾಜ್ 4–0–35–1, ಯಶ್ ದಯಾಳ್ 4–0–42–2, ಸ್ವಪ್ನಿಲ್ ಸಿಂಗ್ 2–0–13–0, ಕರ್ಣ ಶರ್ಮಾ 1–0–14–0, ಲಾಕಿ ಫರ್ಗ್ಯುಸನ್ 3–0–39–1, ಕ್ಯಾಮರಾನ್ ಗ್ರೀನ್ 2–0–18–1
ಪಂದ್ಯದ ಆಟಗಾರ: ಫಫ್ ಡುಪ್ಲೆಸಿ

ಫಲಿತಾಂಶ: ಆರ್‌ಸಿಬಿಗೆ 27 ರನ್‌ಗಳ ಗೆಲುವು

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಕೋಲ್ಕತ್ತ ನೈಟ್ ರೈಡರ್ಸ್	13	9	3	19	1.428
ರಾಜಸ್ಥಾನ ರಾಯಲ್ಸ್	13	8	5	16	0.273
ಸನ್‌ರೈಸರ್ಸ್ ಹೈದರಾಬಾದ್	13	7	5	15	0.406
ಆರ್‌ಸಿಬಿ	14	7	7	14	0.459
ಚೆನ್ನೈ ಸೂಪರ್ ಕಿಂಗ್ಸ್	14	7	7	14	0.392
ಡೆಲ್ಲಿ ಕ್ಯಾಪಿಟಲ್ಸ್	14	7	7	14	-0.377
ಲಖನೌ ಸೂಪರ್ ಜೈಂಟ್ಸ್	14	7	7	14	-0.667
ಗುಜರಾತ್ ಟೈಟನ್ಸ್	14	5	7	12	-1.063
ಪಂಜಾಬ್ ಕಿಂಗ್ಸ್	13	5	8	10	-0.347
ಮುಂಬೈ ಇಂಡಿಯನ್ಸ್	14	4	10	8	-0.318

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (708)

ಪರ್ಪಲ್ ಕ್ಯಾಪ್: ಹರ್ಷಲ್ ಪಟೇಲ್, ಪಂಜಾಬ್ ಕಿಂಗ್ಸ್ (22 ವಿಕೆಟ್)



ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಆರ್‌ಸಿಬಿ ತಂಡದ ಆಟಗಾರರನ್ನು ಬೆಂಬಲಿಸಿದ ಅಭಿಮಾನಿಗಳು



ಚೆನ್ನೈ ಸೂಪರ್ ಕಿಂಗ್ಸ್ ತಂಡದ ಮಹೇಂದ್ರ ಸಿಂಗ್ ಧೋನಿ ಬ್ಯಾಟಿಂಗ್ –ಪ್ರಜಾವಾಣಿ ಚಿತ್ರಗಳು

ಹೈದರಾಬಾದ್ ತಂಡಕ್ಕೆ ಪಂಜಾಬ್ ಕಿಂಗ್ಸ್ ಸವಾಲು ಇಂದು

2ನೇ ಸ್ಥಾನಕ್ಕೇರುವತ್ತ ಸನ್ ಚಿತ್ತ

ಹೈದರಾಬಾದ್ (ಪಿಟಿಐ): ಈಗಾಗಲೇ ಪ್ಲೇ ಆಫ್ ಪ್ರವೇಶಿಸಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡವು ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನ ಗಳಿಸುವ ಗುರಿಯೊಂದಿಗೆ ಭಾನುವಾರ ಕಣಕ್ಕಿಳಿಯಲಿದೆ.

ಉಪ್ಪಳದ ರಾಜೀವಗಾಂಧಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಸನ್‌ರೈಸರ್ಸ್ ತಂಡವು ಪಂಜಾಬ್ ಕಿಂಗ್ಸ್ ವಿರುದ್ಧ ಆಡಲಿದೆ. ಕಳೆದ ಮೂರು ಆವೃತ್ತಿಗಳಲ್ಲಿಯೂ ಹೈದರಾಬಾದ್ ತಂಡವು ನಾಲ್ಕರ ಘಟ್ಟ ಪ್ರವೇಶಿಸಿರಲಿಲ್ಲ. ಆದರೆ ಈ ಬಾರಿ ಇಡೀ ಟೂರ್ನಿಯಲ್ಲಿ ರನ್‌ಗಳ ಹೊಳೆಯನ್ನು ಹರಿಸಿರುವ ಸನ್‌ರೈಸರ್ಸ್ ತಂಡವು ಆತ್ಮವಿಶ್ವಾಸದ ಉತ್ತುಂಗದಲ್ಲಿದೆ. ರನ್ ಗಳಿಕೆಯಲ್ಲಿ ಹಲವು ದಾಖಲೆಗಳನ್ನು ಈ ತಂಡದ ಬ್ಯಾಟರ್‌ಗಳು ಬರೆದಿದ್ದಾರೆ. ಅಧಿಕಾರಯುತ ಜಯಗಳೊಂದಿಗೆ 15 ಅಂಕಗಳನ್ನು ಸಂಪಾದಿಸಿದೆ.

ಆಸ್ಟ್ರೇಲಿಯಾದ ಯಶಸ್ವಿ ನಾಯಕ ಪ್ಯಾಟ್ ಕಮಿನ್ಸ್ ಅವರ ಮುಂದಾಳತ್ವದಲ್ಲಿ ಸನ್‌ರೈಸರ್ಸ್ ತಂಡದ ಟ್ರಾವಿಸ್ ಹೆಡ್, ಅಭಿಷೇಕ್ ಶರ್ಮಾ, ಏಡನ್ ಮರ್ಕರಂ, ಅಬ್ದುಲ್ ಸಮದ್, ನಿತೀಶ್ ರೆಡ್ಡಿ, ಹೆನ್ರಿಚ್ ಕ್ಲಾಸೆನ್ ಅವರು ಎದುರಾಳಿ ಬೌಲರ್‌ಗಳನ್ನು ಇನ್ನಿಲ್ಲದಂತೆ ಕಾಡಿದ್ದಾರೆ.



ಟ್ರಾವಿಸ್ ಹೆಡ್ –ಎಎಫ್‌ಪಿ ಚಿತ್ರ

ಬೌಲಿಂಗ್‌ಗನಲ್ಲಿ ಭುವನೇಶ್ವರ್ ಕುಮಾರ್, ಜೈದೇವ್ ಉನದ್ಕತ್ ಹಾಗೂ ಟಿ ನಟರಾಜನ್ ಉತ್ತಮ ಲಯದಲ್ಲಿದ್ದಾರೆ. ಕಳೆದ ಪಂದ್ಯದಲ್ಲಿ ಮಳೆ ಬಂದ ಕಾರಣ ತಂಡಕ್ಕೆ ಕೇವಲ ಒಂದು ಅಂಕ ಸಿಕ್ಕಿತ್ತು. ಲೀಗ್ ಹಂತದಲ್ಲಿ ಇದು ಉಭಯ ತಂಡಗಳಿಗೂ ಕೊನೆಯ ಪಂದ್ಯವಾಗಿದೆ.

10 ಅಂಕ ಗಳಿಸಿರುವ ಪಂಜಾಬ್ ತಂಡವು ಪ್ಲೇ ಆಫ್ ಹಾದಿಯಿಂದ ಈಗಾಗಲೇ ಹೊರಬಿದ್ದಿದೆ. ಟೂರ್ನಿಯ ಬಹುತೇಕ ಪಂದ್ಯಗಳಲ್ಲಿ ನಾಯಕ ಶಿಖರ್ ಧವನ್ ಅವರು ತಂಡಕ್ಕೆ ಲಭ್ಯರಾಗಿಲ್ಲ. ಅವರ ಬದಲಿಗೆ ಸ್ಯಾಮ್ ಕರನ್ ತಂಡವನ್ನು ಮುನ್ನಡೆಸಿದರು. ಇದೀಗ ಅವರೂ ತಮ್ಮ ತವರಿಗೆ ಮರಳಿದ್ದಾರೆ. ಜಿತೇಶ್ ಶರ್ಮಾ ಅವರು ಈ ಪಂದ್ಯಕ್ಕೆ ಹಂಗಾಮಿ ನಾಯಕರಾಗಿದ್ದಾರೆ.

ತಂಡದ ಆಶುತೋಷ್ ಶರ್ಮಾ, ಶಶಾಂಕ್ ಸಿಂಗ್ ಹಾಗೂ ಪ್ರಭಸಿಮ್ರನ್ ಸಿಂಗ್ ಅವರು ಉತ್ತಮವಾಗಿ ಆಡಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ಕನ್ನಡಿಗ ವಿದ್ವತ್ ಕಾವೇರಪ್ಪ ತಮಗೆ ಸಿಕ್ಕ ಅವಕಾಶದಲ್ಲಿ ಗಮನ ಸೆಳೆದಿದ್ದಾರೆ. ಹರಪ್ರೀತ್ ಬ್ರಾರ್, ಅರ್ಷದೀಪ್ ಸಿಂಗ್ ಹಾಗೂ ಹರ್ಷಲ್ ಪಟೇಲ್ ಅವರೂ ಉತ್ತಮ ಲಯದಲ್ಲಿದ್ದಾರೆ. ಸಮಾಧಾನಕರ ಜಯದೊಂದಿಗೆ ಟೂರ್ನಿಯಿಂದ ನಿರ್ಗಮಿಸುವ ಏಕೈಕ ಗುರಿ ಪಂಜಾಬ್ ತಂಡಕ್ಕಿದೆ.

ಆದರೆ ಪಂಜಾಬ್ ಗೆದ್ದರೆ ಸನ್‌ರೈಸರ್ಸ್ ತಂಡವು ದ್ವಿತೀಯ ಸ್ಥಾನಕ್ಕೇರುವ ಉದ್ದೇಶ ಈಡೇರುವುದು ಕಷ್ಟವಾಗಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

ಫೈನಲ್‌ಗೆ ಸಾತ್ವಿಕ್–ಚಿರಾಗ್

ಬ್ಯಾಂಕಾಕ್ (ಪಿಟಿಐ): ಅಗ್ರ ಶ್ರೇಯಾಂಕ ಪಡೆದಿರುವ ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಥಾಯ್ಲೆಂಡ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಶನಿವಾರ ಫೈನಲ್ ತಲುಪಿದರು.

ಸಾತ್ವಿಕ್-ಚಿರಾಗ್ ಜೋಡಿ 21–11, 21–12 ರಲ್ಲಿ ನೇರ ಗೇಮ್‌ಗಳಿಂದ ಲು ಮಿಂಗ್-ಚೆ ಮತ್ತು ಟ್ಯಾಂಗ್ ಕೈ-ವೀ (ಚೀನಾ ತೈಪೆ) ಜೋಡಿಯನ್ನು ಸೋಲಿಸಲು ಕೇವಲ 35 ನಿಮಿಷ ತೆಗೆದುಕೊಂಡಿತು.

ಭಾರತದ ಜೋಡಿ, ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಚೀನಾದ ಚೆನ್ ಬೋ ಯಾಂಗ್ ಮತ್ತು ಲಿಯು ಯಿ ವಿರುದ್ಧ ಸೆಣಸಲಿದೆ. ಚೀನಾ ಜೋಡಿಯು ಶನಿವಾರ ನಡೆದ ಮತ್ತೊಂದು ಸೆಮಿಫೈನಲ್‌ನಲ್ಲಿ ಕಿಮ್ ಜಿ ಜಂಗ್ ಮತ್ತು ಕಿಮ್ ಸಾ ರಂಗ್ (ದಕ್ಷಿಣ ಕೊರಿಯಾ) ಜೋಡಿಯನ್ನು 21-19, 21-18 ರಿಂದ ಸೋಲಿಸಿತು.

ಮಹಿಳಾ ಡಬಲ್ಸ್‌ನಲ್ಲಿ ನಾಲ್ಕನೇ ಶ್ರೇಯಾಂಕದ ತನಿಶಾ ಕ್ರಾಸ್ಟೊ ಮತ್ತು ಅಶ್ವಿನಿ ಪೊನ್ನಪ್ಪ ಜೋಡಿ ಸೆಮಿಫೈನಲ್‌ನಲ್ಲಿ ನಿರಾಸೆ ಅನುಭವಿಸಿತು. ಭಾರತದ ಆಟಗಾರ್ತಿಯರು 12–21, 20–22ರಿಂದ ಅಗ್ರ ಶ್ರೇಯಾಂಕದ ಜೊಂಗ್ಕೊಲ್ಫಾನ್ ಕಿತರಕುಲ್ ಮತ್ತು ರವಿಂದಾ ಪ್ರಜೋಂಗ್ಜೈ (ಥಾಯ್ಲೆಂಡ್) ಜೋಡಿಗೆ ಮಣಿದರು.

ಶೂಟಿಂಗ್: ಸಿಫತ್, ನೀರಜ್‌ಗೆ ಜಯ

ಭೋಪಾಲ್ (ಪಿಟಿಐ): ಏಷ್ಯನ್ ಗೇಮ್ಸ್ ಸ್ವರ್ಣ ವಿಜೇತೆ ಸಿಫತ್ ಕೌರ್ ಸಮ್ರಾ ಒಲಿಂಪಿಕ್ ಆಯ್ಕೆ ಟ್ರಯಲ್ಸ್‌ನ ಅಂತಿಮ ದಿನವಾದ ಶನಿವಾರ ಮಹಿಳೆಯರ 50 ಮೀಟರ್ ರೈಫಲ್ 3 ಪೊಸಿಷನ್ಸ್ ಸ್ಪರ್ಧೆಯಲ್ಲಿ ಗೆದ್ದರೆ, ಪುರುಷರ ಸ್ಪರ್ಧೆಯಲ್ಲಿ ನೀರಜ್ ಕುಮಾರ್ ಎರಡನೇ ಬಾರಿಗೆ ವಿಜಯಶಾಲಿಯಾದರು.

ಫೈನಲ್‌ನಲ್ಲಿ ಸಿಫತ್ 461.3 ಅಂಕಗಳನ್ನು ಗಳಿಸಿ ನಿಶ್ಚಲ್ ಅವರನ್ನು ಒಂದು ಅಂಕದಿಂದ ಸೋಲಿಸಿದರು. ಆಶಿ ಚೌಕ್ಸೆ 448.1 ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದರು.

ಪುರುಷರ 3 ಪೊಸಿಷನ್ಸ್ ವಿಭಾಗದಲ್ಲಿ ನೀರಜ್ 462.9 ಅಂಕಗಳೊಂದಿಗೆ ಅಗ್ರಸ್ಥಾನ ಪಡೆದರು. ಐಶ್ವರ್ಯಾ ತೋಮರ್ 449.8 ಅಂಕಗಳೊಂದಿಗೆ ಮೂರನೇ, ಸ್ವಪ್ನಿಲ್ ಕುಸಾಲೆ ಮತ್ತು ಅಖಿಲ್ ಶಿಯೋರನ್ ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಪಡೆದರು.

ನಾಲ್ಕು ಟ್ರಯಲ್ಸ್‌ನಲ್ಲಿ ಗಳಿಸಿದ ಅತ್ಯುತ್ತಮ ಅಂಕಗಳನ್ನು ಪರಿಗಣಿಸಿ ಸಿಫತ್ ಅಗ್ರಸ್ಥಾನ ಪಡೆದರೆ, ಅಂಜುಮ್ ಮೌದ್ಗಿಲ್ ಎರಡನೇ ಸ್ಥಾನ ಪಡೆದರು.

ಪುರುಷರ ವಿಭಾಗದಲ್ಲಿ ಐಶ್ವರಿ ತೋಮರ್ ಮತ್ತು ಸ್ವಪ್ನಿಲ್ ಕುಸಾಲೆ ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದರು.

ಹಾರ್ದಿಕ್ ಪಾಂಡ್ಯಗೆ ₹30 ಲಕ್ಷ ದಂಡ

ಮುಂಬೈ (ಪಿಟಿಐ): ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಅವರಿಗೆ ₹ 30 ಲಕ್ಷ ದಂಡ ವಿಧಿಸಲಾಗಿದೆ. ನಿಗದಿಯ ಅವಧಿಯೊಳಗೆ ಓವರ್‌ಗಳನ್ನು ಪೂರ್ಣಗೊಳಿಸದ ಮೂರನೇ ಸಂದರ್ಭವಾದ ಕಾರಣ ಐಪಿಎಲ್‌ನ ಮುಂದಿನ ಆವೃತ್ತಿಯ ಆರಂಭಿಕ ಪಂದ್ಯದಿಂದ ಹಾರ್ದಿಕ್ ಪಾಂಡ್ಯ ಅವರನ್ನು ಅಮಾನತುಗೊಳಿಸಲಾಗಿದೆ.

ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಸೋಲಿನೊಂದಿಗೆ ಮುಂಬೈ ಇಂಡಿಯನ್ಸ್ ತಂಡದ ಪ್ರಸಕ್ತ ಐಪಿಎಲ್ ಅಭಿಯಾನವು ಶುಕ್ರವಾರ ಕೊನೆಗೊಂಡಿತ್ತು. ಹಾಗಾಗಿ ಪಾಂಡ್ಯ ಅವರ ಅಮಾನತು ಮುಂದಿನ ಆವೃತ್ತಿಯಲ್ಲಿ ತಂಡದ ಆರಂಭಿಕ ಪಂದ್ಯದ ವೇಳೆ ಮಾತ್ರ ಜಾರಿಗೆ ಬರಲಿದೆ.



ಹಾರ್ದಿಕ್

'ಇಂಪ್ಯಾಕ್ಟ್ ಪ್ಲೇಯರ್ ಸೇರಿದಂತೆ ತಂಡದ ಆಟಗಾರರಿಗೆ ತಲಾ ₹12 ಲಕ್ಷ ದಂಡ ಅಥವಾ ಆಯಾ ಪಂದ್ಯದ ಶುಲ್ಕದ ಶೇ 50ರಷ್ಟು ದಂಡ ವಿಧಿಸಲಾಗಿದೆ' ಎಂದು ಐಪಿಎಲ್ ಮಾಧ್ಯಮ ಪ್ರಕಟಣೆ ತಿಳಿಸಿದೆ.

ಆಟಗಾರರೇ ದಂಡ ಪಾವತಿಸಬೇಕೆಂಬ ನಿರ್ದಿಷ್ಟ ನಿಯಮವಿಲ್ಲ. ಆದರೆ ತಂಡದ ಆಡಳಿತವು, ತನ್ನ ಆಟಗಾರರ ಪರ ಈ ಮೊತ್ತವನ್ನು ಪಾವತಿಸುತ್ತದೆ. ಹೀಗಾಗಿ ಆಟಗಾರರಿಗೆ ಆರ್ಥಿಕ ಹೊರೆಯಾಗುವುದಿಲ್ಲ.

ಟಿ20 ಕ್ರಿಕೆಟ್ ವಿಶ್ವಕಪ್: ಮೊದಲ ತಂಡ ಪಯಣ

25ಕ್ಕೆ ಭಾರತದ ಆಟಗಾರರು ನ್ಯೂಯಾರ್ಕ್‌ಗೆ

ನವದೆಹಲಿ (ಪಿಟಿಐ): ಮುಂದಿನ ತಿಂಗಳು ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್‌ಗೆ ಭಾರತ ತಂಡದ ಬಹುತೇಕ ಆಟಗಾರರು ನೆರವು ಸಿಬ್ಬಂದಿಯೊಂದಿಗೆ ಮೇ 25ರಂದು ನ್ಯೂಯಾರ್ಕ್‌ಗೆ ತೆರಳಿದ್ದಾರೆ. ಉಳಿದವರು ಮೇ 26ರ ಐಪಿಎಲ್ ಫೈನಲ್ ಬಳಿಕ ತೆರಳುವರು.

ಪ್ಲೇ ಆಫ್ ಪ್ರವೇಶಿಸಲು ವಿಫಲರಾದ ತಂಡಗಳಲ್ಲಿರುವ ಆಟಗಾರರು ಮೇ 21ರಂದು ನ್ಯೂಯಾರ್ಕ್‌ಗೆ ತೆರಳಬೇಕೆಂದು ಈ ಹಿಂದೆ ನಿಗದಿಯಾಗಿತ್ತು. ಅಂದರೆ ಅಂತಿಮ ಲೀಗ್ ಪಂದ್ಯಗಳು ಮುಗಿದ ಎರಡು ದಿನ ನಂತರ. ಆದರೆ ಈ ಯೋಜನೆ ಬದಲಾಗಿದ್ದು, ಮೇ 25ರಂದು ಮೊದಲ ಬ್ಯಾಚ್ ಅಮೆರಿಕಕ್ಕೆ ಪ್ರಯಾಣಿಸುವ ನಿರೀಕ್ಷೆಯಿದೆ ಎಂದು ಬಿಸಿಸಿಐ ಮೂಲವೊಂದು ಪಿಟಿಐಗೆ ತಿಳಿಸಿದೆ.



ರೋಹಿತ್

ನೆರವು ಸಿಬ್ಬಂದಿ ಜೊತೆ ನಾಯಕ ರೋಹಿತ್ ಶರ್ಮಾ, ಹಾರ್ದಿಕ್ ಪಾಂಡ್ಯ, ಸೂರ್ಯಕುಮಾರ್ ಯಾದವ್, ಜಸ್‌ಪ್ರೀತ್ ಬೂಮ್ರಾ, ರಿಷಭ್ ಪಂತ್, ಅರ್ಷದೀಪ್ ಸಿಂಗ್, ಅಕ್ಷರ್ ಪಟೇಲ್ ಈ ಬ್ಯಾಚ್‌ನಲ್ಲಿದ್ದಾರೆ. ಫೈನಲ್ ತಂಡಗಳಲ್ಲಿರುವ ಆಟಗಾರರು ಮಾತ್ರ ಫೈನಲ್ ನಂತರ, 27ರಂದು ನಿರ್ಗಮಿಸಲಿದ್ದಾರೆ.

ಜೂನ್ 5ರಂದು ಭಾರತ ತಂಡ ನ್ಯೂಯಾರ್ಕ್‌ನಲ್ಲಿ ಐರ್ಲೆಂಡ್ ವಿರುದ್ಧ ಅಭಿಯಾನ ಆರಂಭಿಸಲಿದ್ದು, ಜೂನ್ 9ರಂದು ಪಾಕಿಸ್ತಾನ ವಿರುದ್ಧ ಸೆಣಸಲಿದೆ.

ಭಾರತ ತಂಡ: ರೋಹಿತ್ ಶರ್ಮಾ (ನಾಯಕ), ಹಾರ್ದಿಕ್ ಪಾಂಡ್ಯ (ಉಪನಾಯಕ), ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್ (ವಿಕೆಟ್ ಕೀಪರ್), ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಶಿವಂ ದುಬೆ, ರವೀಂದ್ರ ಜಡೇಜಾ, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಯಜುವೇಂದ್ರ ಚಾಹಲ್, ಅರ್ಷದೀಪ್ ಸಿಂಗ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್ .

ಚೆಸ್: ಆರುಷಿಗೆ ಅಗ್ರಸ್ಥಾನ

ಪ್ರಜಾವಾಣಿ ವಾರ್ತೆ

ಮಂಗಳೂರು: ಸ್ಥಳೀಯ ಪ್ರತಿಭೆ ಆರುಷಿ ಸೆವೆರಿನ್ ಹೆಲೆನ್ ಡಿಸಿಲ್ವಾ ಇಲ್ಲಿನ ಮಿನಿ ಟೌನ್ ಹಾಲ್‌ನಲ್ಲಿ ನಡೆಯುತ್ತಿರುವ ಫಿಡೆ ರೇಟೆಡ್ ಚೆಸ್ ಟೂರ್ನಿಯ 17 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಅಗ್ರಸ್ಥಾನದಲ್ಲಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ಚೆಸ್ ಸಂಸ್ಥೆಯ ಆಶ್ರಯದ ಟೂರ್ನಿಯ ಎರಡನೇ ದಿನ, ಆರು ಸುತ್ತುಗಳ ಮುಕ್ತಾಯಕ್ಕೆ ಆರುಷಿ ಆರು ಪಾಯಿಂಟ್‌ಗಳೊಂದಿಗೆ ಮುನ್ನಡೆಯಲ್ಲಿದ್ದಾರೆ. ಕೊನೆಯ ಸುತ್ತಿನಲ್ಲಿ ಅಕ್ಷಯಾ ಸಾಥಿ ಅವರನ್ನು ಮಣಿಸಿ ಅವರು ಅಗ್ರಸ್ಥಾನಕ್ಕೇರಿದರು. ಶ್ರೇಯಾ ರಾಜೇಶ್, ದೃಷ್ಟಿ ಘೋಷ್ ಮತ್ತು ಶ್ರೀಯಾನಾ ಮಲ್ಯ ತಲಾ 5 ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನವನ್ನು ಹಂಚಿಕೊಂಡಿದ್ದಾರೆ.

ಮುಕ್ತ ವಿಭಾಗದಲ್ಲಿ ಪ್ರತೀತಿ ಬರ್ಡೋಲಿ ಮತ್ತು ನಾಗ ಸಾಯ್ ಸಾರ್ಥಕ್ ಕರಣಮ್ ತಲಾ 5.5 ಪಾಯಿಂಟ್‌ಗಳೊಂದಿಗೆ ಅಗ್ರ ಸ್ಥಾನ ಹಂಚಿಕೊಂಡಿದ್ದಾರೆ. ಐದನೇ ಸುತ್ತು ಮುಕ್ತಾಯಗೊಂಡಾಗ ಅಗ್ರ ಶ್ರೇಯಾಂಕದ ಸಿದ್ಧಾಂತ್ ಪೂಂಜಾ ಅವರೊಂದಿಗೆ ಹೃಷಿಕೇಶ್ ಗಣಪತಿ ಸುಬ್ರಮಣಿಯನ್, ನಾಗ ಸಾಯ್ ಸಾರ್ಥಕ್, ವೃಷಾಂಕ್, ಪ್ರತೀತಿ ಮತ್ತು ಶ್ರೀಕರ ತಲಾ 4.5 ಪಾಯಿಂಟ್‌ಗಳನ್ನು ಹೊಂದಿದ್ದರು. ಹೃಷಿಕೇಶ್ ಎದುರಿನ ಪಂದ್ಯ ಡ್ರಾ ಆದ ಕಾರಣ ಸಿದ್ಧಾಂತ್ ನಿರಾಸೆಗೆ ಒಳಗಾದರು. ಪ್ರತೀತಿ ಮತ್ತು ನಾಗಸಾಯ್ ಸಾರ್ಥಕ್ ಕ್ರಮವಾಗಿ ವೃಷಾಂಕ್ ಮತ್ತು ಶ್ರೀಕರ ಅವರನ್ನು ಮಣಿಸಿದರು.



ಆರುಷಿ ಸೆವೆರಿನ್ ಡಿಸಿಲ್ವಾ

6ನೇ ಸುತ್ತಿನ ಪ್ರಮುಖ ಫಲಿತಾಂಶಗಳು: ಬಾಲಕಿಯರು: ಅಕ್ಷಯಾ ಸಾಥಿ ವಿರುದ್ಧ ಆರುಷಿ ಸೆವೆರಿನ್ ಹೆಲೆನ್ ಡಿಸಿಲ್ವಾಗೆ ಗೆಲುವು; ಜಾಹ್ನವಿ ಎಸ್. ವಿರುದ್ಧ ಶ್ರೇಯಾ ರಾಜೇಶ್‌ಗೆ, ಶ್ರೀಖಾ ಹೆಗಡೆ ವಿರುದ್ಧ ದೃಷ್ಟಿ ಘೋಷ್‌ಗೆ, ಶ್ರದ್ಧಾ ರಾಜ್ ವಿರುದ್ಧ ಶ್ರೀಯಾನಾ ಮಲ್ಯಗೆ, ಆಕೃತಿ ತ್ರಿಪಾಠಿ ವಿರುದ್ಧ ಸಾನ್ವಿತಾ ಶೆಟ್ಟಿಗೆ ಗೆಲುವು; ಆರಾಧ್ಯಾ ಶೆಟ್ಟಿ ಮತ್ತು ಧನುಷ್ಕಾ ಎಸ್, ಪಾವನಿ ಮತ್ತು ಯಾಶಿಕಾ ಜೋಷಿ, ಅನುಷ್ಕಾ ಭಟ್ ಮತ್ತು ಆದ್ಯಾ ಕೃಷ್ಣವಜ್ಜಲ, ಲಿನ್ಸಿಯಾ ಜಾಸ್ಲಿನ್ ಮತ್ತು ಅಪೇಕ್ಷಾ ಎಸ್.ಆರ್ ನಡುವಿನ ಪಂದ್ಯ ಡ್ರಾ.

ಐಪಿಎಲ್‌ನಲ್ಲಿ 'ಇಂಪ್ಯಾಕ್ಟ್ ಪ್ಲೇಯರ್' ನಿಯಮ

'ಆಟದ ಸಮತೋಲನಕ್ಕೆ ಪೆಟ್ಟು'

ಬೆಂಗಳೂರು (ಪಿಟಿಐ): ಇಂಪ್ಯಾಕ್ಟ್ ಪ್ಲೇಯರ್ ನಿಯಮದಿಂದ 'ಆಟದ ಸಮತೋಲನ ಏರುಪೇರಾಗುತ್ತಿದೆ' ಎಂದು ಭಾರತ ತಂಡದ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಅಭಿಪ್ರಾಯಪಟ್ಟಿದ್ದಾರೆ. ಆ ಮೂಲಕ ಭಾರತ ತಂಡದ ನಾಯಕ ರೋಹಿತ್ ಶರ್ಮಾ ವ್ಯಕ್ತಪಡಿಸಿರುವ ಭಾವನೆಗಳಿಗೆ ಧ್ವನಿಯಾಗಿದ್ದಾರೆ.



ವಿರಾಟ್ ಕೊಹ್ಲಿ

ಕಳೆದ ಋತುವಿನಲ್ಲಿ ಜಾರಿಗೆ ಬಂದ ಈ ನಿಯಮದ ವಿರುದ್ಧ ರೋಹಿತ್ ಶರ್ಮಾ ಅವರು ಹೋದ ತಿಂಗಳು ಪಾಡ್‌ಕಾಸ್ಟ್ ಒಂದರಲ್ಲಿ ಅತೃಪ್ತಿ ವ್ಯಕ್ತಪಡಿಸಿದ್ದರು. ಈಗ ಈ ನಿಯಮದ ಬಗ್ಗೆ ಪುನರ್‌ಪರಿಶೀಲನೆ ನಡೆಸುವಂತೆ ಕೊಹ್ಲಿ ಸಹ ಒತ್ತಾಯಿಸಿದ್ದಾರೆ. ಐಪಿಎಲ್‌ನ ಈ ಆವೃತ್ತಿಯಲ್ಲಿ ಎಂಟು ಸಲ 250ಕ್ಕೂ ಹೆಚ್ಚು ಮೊತ್ತಗಳು ದಾಖಲಾಗಿವೆ. ಕೊಹ್ಲಿ ಅವರು ಬೌಲರ್‌ಗಳ ನೋವನ್ನು ಅರ್ಥ ಮಾಡಿಕೊಂಡಿದ್ದಾರೆ. 'ಬೌಲರ್‌ಗಳು ತಾವೇನು ಮಾಡಬೇಕೆಂದು ತೋಚದಂಥ ಸ್ಥಿತಿಯಲ್ಲಿದ್ದಾರೆ' ಎಂದಿದ್ದಾರೆ ಕೊಹ್ಲಿ.

'ಎಲ್ಲ ತಂಡಗಳಲ್ಲಿ ಬೂಮ್ರಾ (ಜಸ್‌ಪ್ರೀತ್) ಅಥವಾ ರಶೀದ್ ಖಾನ್ ಇರುವುದಿಲ್ಲ' ಎಂದು ಹೇಳಿದ್ದಾರೆ. 'ನಾವು ಉನ್ನತ ಮಟ್ಟದಲ್ಲಿ ಆಟ ಆಡುತ್ತಿದ್ದೇವೆ. ಇಲ್ಲಿ ಪ್ರತಿ ಬಾರಿ ಯಾವುದೇ ಒಂದು ವಿಭಾಗದ ಪ್ರಾಬಲ್ಯ ಇರಬಾರದು. ಬ್ಯಾಟ್ ಮತ್ತು ಚೆಂಡಿನ ನಡುವೆ ಪೈಪೋಟಿ ಇದ್ದರಷ್ಟೇ ಆಟ ಚೆಂದ' ಎಂದಿದ್ದಾರೆ.

'ಇಂಪ್ಯಾಕ್ಟ್ ಪ್ಲೇಯರ್ ನಿಯಮ ಪ್ರಾಯೋಗಿಕ ಮಾತ್ರ. ಭಾರತದ ಇಬ್ಬರು ಆಟಗಾರರಿಗೆ ಆಡುವ ಅವಕಾಶ ನೀಡುತ್ತದೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಹೇಳಿದ್ದರು. ಮುಂದಿನ ಆವೃತ್ತಿಗಳಲ್ಲಿ ಜಾರಿಗೊಳಿಸುವ ಮೊದಲು ಭಾಗೀದಾರರ ಜೊತೆ ಮಾತನಾಡುವುದಾಗಿಯೂ ಭರವಸೆ ನೀಡಿದ್ದರು.

'ಸಾಮರ್ಥ್ಯದ ಬಗ್ಗೆ ಹೇಳಿಸಿಕೊಳ್ಳಬೇಕಿಲ್ಲ'

ಬೆಂಗಳೂರು (ಪಿಟಿಐ): ತಮ್ಮ ಸಾಮರ್ಥ್ಯದ ಬಗ್ಗೆ ಬೇರೆ ಯಾರಿಂದಲೂ ಅಂಗೀಕಾರದ ಮುದ್ರೆ ಬೇಕಿಲ್ಲ ಎಂದು ಭಾರತದ ಪ್ರಮುಖ ಬ್ಯಾಟರ್ ವಿರಾಟ್ ಕೊಹ್ಲಿ ತೀಕ್ಷ್ಣ ಮಾತುಗಳಲ್ಲಿ ಹೇಳಿದ್ದಾರೆ.

ತಮ್ಮ ಸ್ಟ್ರೈಕ್‌ರೇಟ್ ಬಗ್ಗೆ ನಡೆದಿರುವ ಚರ್ಚೆ ಮತ್ತು ಟೀಕೆಗಳಿಗೆ ಖಾರವಾಗಿ ಪ್ರತಿಕ್ರಿಯಿಸಿರುವ ಕೊಹ್ಲಿ, ತಮ್ಮ ಸಾಮರ್ಥ್ಯವೇನೆಂದು ತಮಗೆ ಗೊತ್ತಿದೆ ಎಂದಿದ್ದಾರೆ.

ಪ್ರಸಕ್ತ ಐಪಿಎಲ್ ರನ್ ಗಳಿಕೆದಾರರಲ್ಲಿ ಕೊಹ್ಲಿ ಅಗ್ರಸ್ಥಾನದಲ್ಲಿದ್ದಾರೆ. ಆದರೆ ಅವರ ಸ್ಟ್ರೈಕ್‌ರೇಟ್ ಬಗ್ಗೆ ಅಪಸ್ವರ ಕೇಳಿಬಂದಿದ್ದು, ಭಾರತದ ದಿಗ್ಗಜ ಆಟಗಾರರಲ್ಲಿ ಒಬ್ಬರಾದ ಸುನೀಲ್ ಗಾವಸ್ಕರ್ ಇವರಲ್ಲಿ ಒಳಗೊಂಡಿದ್ದಾರೆ.

'ಇದಕ್ಕೆ ಪ್ರತಿಕ್ರಿಯಿಸುವ ಅಗತ್ಯವಿಲ್ಲ. ನನ್ನ ಸಾಮರ್ಥ್ಯವೇನೆಂದು ನನಗೆ ಗೊತ್ತು. ನಾನು ಯಾವ ರೀತಿಯ ಆಟಗಾರ ಅಥವಾ ನನ್ನ ಸಾಮರ್ಥ್ಯದ ಬಗ್ಗೆ ಎಂದು ಬೇರೆಯವರಿಂದ ಹೇಳಿಸಿಕೊಳ್ಳುವ ಅಗತ್ಯವಿಲ್ಲ' ಎಂದು ಅವರು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಆರ್‌ಸಿಬಿ ನಿರ್ಣಾಯಕ ಪಂದ್ಯಕ್ಕೆ ಮೊದಲು ಬಿಡುಗಡೆಯಾದ ಇತ್ತೀಚಿನ ವಿಡಿಯೊದಲ್ಲಿ ಹೇಳಿದ್ದಾರೆ.

ಪರ್ವೀನ್ ಅಮಾನತು: ಜಾಸ್ಮಿನ್ ಸ್ಪರ್ಧೆ

ನವದೆಹಲಿ (ಪಿಟಿಐ): ಮೇ 24ರಿಂದ ಥಾಯ್ಲೆಂಡ್‌ನಲ್ಲಿ ನಡೆಯಲಿರುವ ಒಲಿಂಪಿಕ್ಸ್ ಕ್ವಾಲಿಫೈಯರ್ ಮಹಿಳೆಯರ 57 ಕೆ.ಜಿ ವಿಭಾಗದಲ್ಲಿ ಕಾಮನ್‌ವೆಲ್ತ್ ಗೇಮ್ಸ್ ಪದಕ ವಿಜೇತೆ ಜಾಸ್ಮಿನ್ ಲಂಬೋರಿಯಾ ಸ್ಪರ್ಧಿಸಲಿದ್ದಾರೆ.



ಜಾಸ್ಮಿನ್

